ಶನಿವಾರ, ಫೆಬ್ರುವರಿ 17, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 48 | ಪುಟ 28

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಮುಂದುವರೆಯುತ್ತಿರುವ ಕಾಲವೂ.. ಹಿಂದಕ್ಕೆಳೆಯುತ್ತಿರುವ ಕಿರುತೆರೆಯೂ...



ಅನಂತಕುಮಾರ್‌ಗೆ ಹೈಕೋರ್ಟ್ ಎಚ್ಚರಿಕೆ 11

ಕಾಂಗ್ರೆಸ್ ಬ್ಯಾಂಕ್ ಖಾತೆ ಸ್ಥಗಿತ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,426 ▲	22,040 ▲	₹63,600 (ಬೆಂಗಳೂರು) ▲	₹73,100 (ಬೆಂಗಳೂರು) ▲	83.01 ▲

ಸರ್ವರಿಗೂ ಪಾಲು, ಪ್ರಗತಿಯೇ ಸವಾಲು

ಮೊತ್ತ ಕೋಟಿಗಳಲ್ಲಿ (ಆವರಣದಲ್ಲಿ ಇರುವುದು 2023–24ರ ಲೆಕ್ಕ)	ಬಜೆಟ್ ಗಾತ್ರ	ರಾಜಸ್ವ ವೆಚ್ಚ	ರಾಜಸ್ವ ಕೊರತೆ	ವಿತ್ತೀಯ ಕೊರತೆ	ಸಾಲ
	₹3,71,383 (₹3,27,747)	₹2,63,178 (₹2,38,410)	₹27,354 (₹12,522)	₹82,981 (₹68,505)	₹1,05,246 (₹85,818)



• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 'ಗ್ಯಾರಂಟಿ' ಯೋಜನೆಗಳ ಭಾರವನ್ನು ಹೊರಲು ಅಣಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವುಗಳಿಗೆ ಅಗತ್ಯ ಅನುದಾನ ಹೊಂದಿಸುವ ಜತೆಗೆ ಮಾನವ ಸಂಪನ್ಮೂಲದ ಬಲವರ್ಧನೆ, ಮೂಲಸೌಕರ್ಯ ಅಭಿವೃದ್ಧಿಗೂ ಒತ್ತು ನೀಡುವ ಯತ್ನವನ್ನು ಬಜೆಟ್‌ನಲ್ಲಿ ಮಾಡಿದ್ದಾರೆ.

ಲೋಕಸಭಾ ಚುನಾವಣೆ ಎದುರುಗೊಳ್ಳುವ ಹೊತ್ತಿನಲ್ಲಿ ಮಂಡನೆಯಾದ ಬಜೆಟ್‌ನಲ್ಲಿ 'ಮತ ಶಿಕಾರಿ'ಗೆ ಪೂರಕವಾದ ಜನಪ್ರಿಯ ಘೋಷಣೆಗಳನ್ನು ಮಾಡಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ಅದನ್ನು ಹುಸಿಯಾಗಿಸಿದ ಮುಖ್ಯಮಂತ್ರಿ, ಗ್ಯಾರಂಟಿಗಳಿಗೇ ಸೀಮಿತಗೊಳಿಸಿದರು. 'ಗ್ಯಾರಂಟಿ'ಗಳಿಂದಾಗಿ ರಾಜ್ಯದ ಅಭಿವೃದ್ಧಿ ಸ್ಥಗಿತವಾಗಿದೆ ಎಂಬ ಆರೋಪವನ್ನು ನಿರಾಕರಿಸುವುದಕ್ಕಾಗಿ ಅಭಿವೃದ್ಧಿ ಯೋಜನೆಗಳನ್ನೂ ಪ್ರಸ್ತಾಪಿಸಿದ್ದಾರೆ. ಭಾರಿ ನೀರಾವರಿ ಯೋಜನೆಗಳನ್ನು ಬಜೆಟ್‌ನಲ್ಲಿ ಉಲ್ಲೇಖಿಸಿದ್ದರೂ ಹೆಚ್ಚಿನ ಅನುದಾನವನ್ನು ಒದಗಿಸಿಲ್ಲ. ಮೂಲಸೌಕರ್ಯ ಯೋಜನೆಗಳ ಪ್ರಸ್ತಾಪವಿದ್ದರೂ ಬಹುತೇಕ ಯೋಜನೆಗಳಿಗೆ ಖಾಸಗಿ ಸಹಭಾಗಿತ್ವದ ಮೊರೆ ಹೋಗಲು ನಿರ್ಧರಿಸಿದ್ದಾರೆ.

ಸಂವಿಧಾನದ ಆಶಯಗಳು ಮತ್ತು ಬಸವಾದಿ ಶರಣರ ವಚನಗಳಲ್ಲಿನ ದಾಸೋಹದ ತತ್ವಗಳನ್ನು ಉಲ್ಲೇಖಿಸುತ್ತಾ ವಿಧಾನ ಸಭೆಯಲ್ಲಿ ದಾಖಲೆಯ 15ನೇ ಬಜೆಟ್ ಅನ್ನು ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿದರು. 2024–25ನೇ ಆರ್ಥಿಕ ವರ್ಷದ ಬಜೆಟ್ ಗಾತ್ರ ₹3.71 ಲಕ್ಷ ಕೋಟಿಯಷ್ಟಿದ್ದು, ₹27,354 ಕೋಟಿಯಷ್ಟು ರಾಜಸ್ವ ಕೊರತೆಯೂ ಇದೆ. ಮುಂದಿನ ಆರ್ಥಿಕ ವರ್ಷದಲ್ಲಿ ₹1.05 ಲಕ್ಷ ಕೋಟಿಯಷ್ಟು ಸಾಲ ಪಡೆಯುವ ಪ್ರಸ್ತಾವವಿದ್ದು, ಅದರೊಂದಿಗೆ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ ₹6.65 ಲಕ್ಷ ಕೋಟಿ ತಲುಪಲಿದೆ.

9ನೇ ಪುಟ ನೋಡಿ

ಸಂಪಾದಕೀಯ 8

ಒಪಿಎಸ್ ಹೊರೆ

ಹಳೆಯ ಪಿಂಚಣಿ ಯೋಜನೆ ಜಾರಿಯು ಹೊರೆಯಾಗಲಿದೆ ಎಂದು ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ಮಂಡಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆ ಹೇಳಿದೆ.

ವೇತನ ಪರಿಷ್ಕರಿಸಿದರೆ ಮೊದಲ ವರ್ಷದಲ್ಲಿಯೇ ₹15 ಸಾವಿರ ಕೋಟಿಯಿಂದ ₹20 ಸಾವಿರ ಕೋಟಿಯಷ್ಟು ಆರ್ಥಿಕ ಹೊರೆಯಾಗಲಿದ್ದು, ಜಾರಿ ಸವಾಲಾಗಲಿದೆ ಎಂದು ಉಲ್ಲೇಖಿಸಿದೆ.

ಹಳೆಯ ಪಿಂಚಣಿ ಯೋಜನೆಯನ್ನು ದೀರ್ಘಾವಧಿಯಲ್ಲಿ ಆರ್ಥಿಕವಾಗಿ ಮುಂದುವರಿಸುವುದು ಕಷ್ಟಕರವಾಗಿರುವುದರಿಂದಾಗಿ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಹಲವು ರಾಜ್ಯಗಳು ಅಳವಡಿಸಿಕೊಂಡಿವೆ. ಒಪಿಎಸ್‌ಗೆ ಮರಳಿದರೆ ಈಗ ಎನ್‌ಪಿಎಸ್‌ಗೆ ಸರ್ಕಾರ ಭರಿಸುತ್ತಿರುವ ವೆಚ್ಚದ 4-5 ಪಟ್ಟು ಹೆಚ್ಚಿನ ಆರ್ಥಿಕ ಹೊರೆಯಾಗಲಿದೆ. ಒಪಿಎಸ್ ಜಾರಿಗೊಳಿಸಿದರೆ ಹಣಕಾಸಿನ ಮೇಲೆ ಭಾರಿ ಪೆಟ್ಟು ಬೀಳಲಿದೆ ಎಂದೂ ಹೇಳಿದೆ.

ಪ್ರಮುಖ ಅಂಶಗಳು


- ಬೆಂಗಳೂರು ಸೇರಿದಂತೆ ಎಲ್ಲ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ **ರಾತ್ರಿ 1 ಗಂಟೆಯವರೆಗೂ ವ್ಯಾಪಾರ**–ವಹಿವಾಟಿಗೆ ಅವಕಾಶ
- ಗ್ರಾಮೀಣ ಪ್ರದೇಶಗಳಲ್ಲಿ ಶುಚಿ–ರುಚಿ ಆಹಾರ ಒದಗಿಸುವ **ಕೆಫೆ ಸಂಜೀವಿನಿ ಆರಂಭ**
- ಲಿಂಗತ್ವ ಅಲ್ಪಸಂಖ್ಯಾತರಿಗೆ ನೀಡುವ **ಮಾಸಾಶನ ₹800ರಿಂದ ₹1200ಕ್ಕೆ ಹೆಚ್ಚಳ**
- ಮಾಜಿ ದೇವದಾಸಿಯರ **ಮಾಸಾಶನ ₹1,500 ದಿಂದ ₹2,000ಕ್ಕೆ ಏರಿಕೆ**
- ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ **ಆಯೋಗ ರಚನೆ**
- ಶಾಲಾ ಕಾಲೇಜುಗಳಲ್ಲಿ ಸೌಹಾರ್ದತೆ ಜಾಗೃತಿಗೆ **'ನಾವು ಮನುಜರು'** ಸಂವಾದ ಕಾರ್ಯಕ್ರಮ
- ನಾರಾಯಣಗುರು, ಜ್ಯೋತಿಬಾ ಫುಲೆ, ಪೆರಿಯಾರ್, ಲೋಹಿಯಾ, ಬಾಬು ಜಗಜೀವನರಾಂ **ಬರಹಗಳು ಕನ್ನಡಕ್ಕೆ**
- ಎಲ್ಲ ಇಲಾಖೆಗಳ ನೇಮಕಾತಿಗಳಲ್ಲಿ ಕ್ರೀಡಾಪಟುಗಳಿಗೆ **ಶೇ 2ರಷ್ಟು ಉದ್ಯೋಗ ಮೀಸಲು**

ವಿಶೇಷ ಪುಟಗಳು 9, 11A, 14, 15, 16 ಮತ್ತು 17

ಪ್ರತಿಪಕ್ಷ ಸಭಾತ್ಯಾಗ, ಪ್ರತಿಭಟನೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರವನ್ನು ಟೀಕಿಸಲೆಂದೇ ಬಜೆಟ್ ಬಳಸಿಕೊಂಡಿದ್ದಾರೆ ಎಂದು ಆರೋಪಿಸಿ ಬಿಜೆಪಿ, ಜೆಡಿಎಸ್ ಶಾಸಕರು ಶುಕ್ರವಾರ ವಿಧಾನಸೌಧದ ಕೆಂಗಲ್ ಹನುಮಂತಯ್ಯ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.


ಬಜೆಟ್ ಮಂಡನೆ ಶುರುವಾದ ಕೆಲಹೊತ್ತಿನಲ್ಲೇ ಸಭಾತ್ಯಾಗ ಮಾಡಿ ಹೊರ ಬಂದ ಎರಡೂ ಪಕ್ಷಗಳ ಸದಸ್ಯರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ, ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ವಿರೋಧಪಕ್ಷದ ನಾಯಕ ಆರ್. ಅಶೋಕ, ಶಾಸಕ ಬಸವರಾಜ ಬೊಮ್ಮಾಯಿ, ಬಿಜೆಪಿ ಪ್ರಧಾನಕಾರ್ಯದರ್ಶಿ ವಿ.ಸುನಿಲ್‌ಕುಮಾರ್, ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ಇದ್ದರು.



ಮದ್ಯದ ದರ ಪರಿಷ್ಕರಣೆ


ನೆರೆಯ ರಾಜ್ಯಗಳಲ್ಲಿನ ಮದ್ಯದ ದರಗಳಿಗೆ ಅನುಗುಣವಾಗಿ ರಾಜ್ಯದಲ್ಲಿ ಭಾರತೀಯ ಮದ್ಯ ಮತ್ತು ಬಿಯರ್ ದರವನ್ನು ಪರಿಷ್ಕರಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್‌ನಲ್ಲಿ ಪ್ರಕಟಿಸಿದರು.

ಬಳಿಕ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಅವರು, 'ಮದ್ಯದ ದರ ಹೆಚ್ಚಳ ಮಾಡುತ್ತೇವೆ ಎಂದು ಹೇಳಿಲ್ಲ. ಪುನರ್ ಪರಿಶೀಲನೆ ಮಾಡುತ್ತೇವೆ. ದುಬಾರಿ ದರದ ಬ್ರ್ಯಾಂಡ್‌ಗಳ ಮದ್ಯದ ದರಗಳಲ್ಲಿ ಇಳಿಕೆ ಆಗಬಹುದು' ಎಂದರು.



ಆರ್ಥಿಕ ತಜ್ಞ ಎಂದು ಕೊಚ್ಚಿಕೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ 'ಅಡ್ಡಕಸುಬಿ ಬಜೆಟ್' ಮಂಡಿಸಿದ್ದು, ಇದರಲ್ಲಿ ಅರ್ಥಶಾಸ್ತ್ರ, ಅಭಿವೃದ್ಧಿ, ದೂರದೃಷ್ಟಿ ಯಾವುದೂ ಇಲ್ಲ

ಆರ್.ಅಶೋಕ, ವಿರೋಧ ಪಕ್ಷದ ನಾಯಕ, ವಿಧಾನಸಭೆ



₹1.75 ಲಕ್ಷ ಕೋಟಿ ತೆರಿಗೆ ಸಂಗ್ರಹ ಮಾಡುವ ಗುರಿ ಇಟ್ಟುಕೊಂಡಿದ್ದರು. ಆದರೆ, ₹1.61 ಲಕ್ಷ ಕೋಟಿ ಮಾತ್ರ ಸಂಗ್ರಹ ಆಗಿದೆ. ₹14 ಸಾವಿರ ಕೋಟಿ ತೆರಿಗೆ ಸಂಗ್ರಹ ಕಡಿಮೆ ಆಗಿದೆ

ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ

ಎಚ್‌ಎಸ್‌ಆರ್‌ಪಿ ಮೇ 31ರವರೆಗೆ ಗಡುವು ವಿಸ್ತರಣೆ

ಬೆಂಗಳೂರು: ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಎಚ್‌ಎಸ್‌ಆರ್‌ಪಿ) ಅಳವಡಿಸುವ ಅವಧಿಯನ್ನು ರಾಜ್ಯ ಸರ್ಕಾರವು ಮೇ 31ರವರೆಗೆ ವಿಸ್ತರಿಸಿ ಅಧಿಸೂಚನೆ ಹೊರಡಿಸಿದೆ.

2019ರ ಏಪ್ರಿಲ್ ನಂತರದ ವಾಹನಗಳ ನೋಂದಣಿ ಮಾಡಿಕೊಳ್ಳುವಾಗಲೇ ಎಚ್‌ಎಸ್‌ಆರ್‌ಪಿ ಅಳವಡಿಸಲಾಗಿರುತ್ತದೆ. ಅದಕ್ಕಿಂತ ಹಿಂದೆ ನೋಂದಣಿಯಾಗಿರುವ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಲು ಆದೇಶ ಹೊರಡಿಸಲಾಗಿತ್ತು. 2023ರ ಆಗಸ್ಟ್ 17ರಿಂದ ನವೆಂಬರ್ 16ರವರೆಗೆ ಮೂರು ತಿಂಗಳ ಅವಕಾಶ ನೀಡಲಾಗಿತ್ತು. ಆದರೆ, ಈ ಸಂದರ್ಭದಲ್ಲಿ ವಾಹನ ಮಾಲೀಕರಿಂದ ಸ್ಪಂದನ ದೊರೆತಿರಲಿಲ್ಲ. ಬಳಿಕ ಫೆ.17ರವರೆಗೆ ವಿಸ್ತರಿಸಲಾಗಿತ್ತು. ಶೇ 10ರಷ್ಟು ವಾಹನಗಳಷ್ಟೇ ಎಚ್‌ಎಸ್‌ಆರ್‌ಪಿ ಅಳವಡಿಸಿಕೊಂಡಿದ್ದರಿಂದ ಮತ್ತೆ ಅವಧಿ ವಿಸ್ತರಣೆ ಮಾಡುವಂತೆ ಕೂಗು ಎದ್ದಿತ್ತು.

'ಪೇಟಿಎಂನಿಂದ ಫಾಸ್ಟ್ಯಾಗ್ ಖರೀದಿ ಬೇಡ'

ನವದೆಹಲಿ (ಪಿಟಿಐ): ಪೇಟಿಎಂ ಪೇಮೆಂಟ್ ಬ್ಯಾಂಕ್‌ನಿಂದ ಫಾಸ್ಟ್ಯಾಗ್ ಖರೀದಿಸದಂತೆ ಹೆದ್ದಾರಿ ಬಳಕೆದಾರರಿಗೆ, ಭಾರತೀಯ ಹೆದ್ದಾರಿ ನಿರ್ವಹಣಾ ಕಂಪನಿಯು (ಐಎಚ್‌ಎಂಸಿಎಲ್) ಸೂಚಿಸಿದೆ.

ಅಲ್ಲದೇ, ಫಾಸ್ಟ್ಯಾಗ್‌ಗಳನ್ನು ಖರೀದಿಸುವ ಬ್ಯಾಂಕ್‌ಗಳ ಪಟ್ಟಿಯಿಂದ ಪೇಟಿಎಂ ಬ್ಯಾಂಕ್ ಅನ್ನು ಕೈಬಿಟ್ಟಿದೆ.


11ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



500 ವಿಕೆಟ್ ಕ್ಲಬ್‌ಗೆ ಅಶ್ವಿನ್



ಪ್ರಜಾವಾಣಿ ವಾರ್ತೆ

ರಾಜ್‌ಕೋಟ್: ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ 500 ವಿಕೆಟ್ ಗಳಿಸಿದರು.

ಇಲ್ಲಿ ಇಂಗ್ಲೆಂಡ್ ಎದುರು ನಡೆಯುತ್ತಿರುವ ಟೆಸ್ಟ್‌ನಲ್ಲಿ ಶುಕ್ರವಾರ ಜ್ಯಾಕ್ ಕ್ರಾಲಿ ವಿಕೆಟ್ ಪಡೆಯುವುದರೊಂದಿಗೆ ಈ ಮೈಲಿಗಲ್ಲು ಮುಟ್ಟಿದರು. ಈ ಸಾಧನೆ ಮಾಡಿದ ವಿಶ್ವದ ಒಂಬತ್ತನೇ ಮತ್ತು ಭಾರತದ ಎರಡನೇ ಬೌಲರ್ ಅದರು. ಅನಿಲ್ ಕುಂಬ್ಳೆ (619; 105 ಪಂದ್ಯ) ಮೊದಲ ಭಾರತೀಯ ಬೌಲರ್ ಆಗಿದ್ದಾರೆ.

ಅಶ್ವಿನ್ ಕಡಿಮೆ ಟೆಸ್ಟ್ (98)ಗಳಲ್ಲಿ ಈ ಸಾಧನೆ ಮಾಡಿದ ಎರಡನೇ ಆಟಗಾರ. ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ 87 ಪಂದ್ಯಗಳಲ್ಲಿ ಸಾಧಿಸಿದ್ದರು.

ವಿವರ 13



ಜಯಂತಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಸವಿತಾ ಸಮಾಜದ ಮುಖಂಡರಾದ ಎಂ.ಎಸ್.ಮುತ್ತುರಾಜ್, ಎಂ.ವಿ. ನರಸಿಂಹಯ್ಯ, ಕೊಂಚೂರು ಸವಿತಾ ಪೀಠದ ಸವಿತಾನಂದನಾಥ ಸ್ವಾಮೀಜಿ, ಕೆಪಿಸಿಸಿ ಉಪಾಧ್ಯಕ್ಷ ಎಂ.ಸಿ. ವೇಣುಗೋಪಾಲ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು ಸವಿತಾ ಮಹರ್ಷಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು -ಪ್ರಜಾವಾಣಿ ಚಿತ್ರ

ಪಿಎಫ್ಐ ಮುಖಂಡನ ಬಂಧನ

ಶಾಂತಿ ಭಂಗ ಹಾಗೂ ಕಾನೂನುಬಾಹಿರ ಚಟುವಟಿಕೆಗೆ ಸಂಚು ಆರೋಪ

ಪ್ರಜಾವಾಣಿ ವಾರ್ತೆ



ತಾಹೀರ್ ಹುಸೇನ್

ಬೆಂಗಳೂರು: ಸಾರ್ವಜನಿಕರ ಶಾಂತಿಗೆ ಭಂಗ ಹಾಗೂ ಕಾನೂನುಬಾಹಿರ ಚಟುವಟಿಕೆಗೆ ಸಂಚು ರೂಪಿಸಿದ್ದ ಆರೋಪದಡಿ ದಾಖಲಾಗಿದ್ದ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ತಾಹೀರ್ ಹುಸೇನ್‌ನನ್ನು ಕಾಡುಗೊಂಡನಹಳ್ಳಿ (ಕೆ.ಜಿ.ಹಳ್ಳಿ) ಠಾಣೆ ಪೊಲೀಸರು ಬಂಧಿಸಿದ್ದಾರೆ.

'ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ಸಂಘಟನೆಯ ದಾವಣಗೆರೆ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಆಗಿದ್ದ ತಾಹೀರ್ ಹುಸೇನ್ ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದ. ಇತ್ತೀಚೆಗೆ ಈತನನ್ನು ಹರಿಹರದಲ್ಲಿ ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮುಸ್ಲಿಂ ಸಮುದಾಯದ ಯುವಕರನ್ನು ಧಾರ್ಮಿಕವಾಗಿ ಪ್ರಚೋದಿಸಿ ಕಾನೂನು ಬಾಹಿರ ಚಟುವಟಿಕೆ ನಡೆಸುವುದು ಪಿಎಫ್ಐ ಉದ್ದೇಶವಾಗಿತ್ತು. ಇದನ್ನು ಪತ್ತೆ ಹಚ್ಚಿ ಕ್ರಿಮಿನಲ್ ಸಂಚು (ಐಪಿಸಿ 120–ಬಿ), ರಾಷ್ಟ್ರದ ವಿರುದ್ಧ ಯುದ್ಧ (ಐಪಿಸಿ 121) ಹಾಗೂ ಎರಡು ಕೋಮುಗಳ ಮಧ್ಯೆ ದ್ವೇಷ ಭಾವನೆ ಹೆಚ್ಚಿಸುವ (ಐಪಿಸಿ 153–ಎ) ಆರೋಪದಡಿ ಎಫ್ಐಆರ್ ಸಹ ದಾಖಲಿಸಿಕೊಳ್ಳಲಾಗಿತ್ತು' ಎಂದು ತಿಳಿಸಿದರು.

'ಪಿಎಫ್ಐ ರಾಜ್ಯ ಘಟಕದ ಅಧ್ಯಕ್ಷ ನಾಸೀರ್ ಪಾಷಾ ಸೇರಿದಂತೆ ಹಲವು ಆರೋಪಿಗಳನ್ನು ಬಂಧಿಸಲಾಗಿತ್ತು. ತಾಹೀರ್ ಹುಸೇನ್ ಸೇರಿ ಹಲವರು ತಲೆಮರೆಸಿಕೊಂಡಿದ್ದರು. ಇದೀಗ ತಾಹೀರ್ ಸಿಕ್ಕಿಬಿದ್ದಿದ್ದಾನೆ. ಈತನನ್ನು ಕಸ್ಟಡಿಗೆ ಪಡೆದು ಹೆಚ್ಚಿನ ವಿಚಾರಣೆ ನಡೆಸಬೇಕಿದೆ' ಎಂದು ಹೇಳಿದರು.

ನಿರ್ಮಾಪಕಿಯಿಂದ ₹ 1 ಕೋಟಿ ದೋಚಲು ಅಪಹರಣ ನಾಟಕ

ಬೆಂಗಳೂರು: ಧಾರಾವಾಹಿ ನಿರ್ಮಾಪಕಿಯೊಬ್ಬರಿಂದ ₹1 ಕೋಟಿ ದೋಚಲು ಅಪಹರಣ ನಾಟಕವಾಡಿದ್ದ ಕಾರು ಚಾಲಕ ಸೇರಿ ಐವರು ಆರೋಪಿಗಳನ್ನು ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಹೇಮಂತ್‌ಕುಮಾರ್ (34), ಶ್ರೀನಿವಾಸ್ (40), ತೇಜಸ್ (25), ಬಿ.ಸಿ.ಮೋಹನ್ (34) ಹಾಗೂ ಕುಲದೀಪ್ ಸಿಂಗ್ (22) ಬಂಧಿತರು. ಐವರು ಸೇರಿಕೊಂಡು ಸಂಚು ರೂಪಿಸಿ ಅಪಹರಣ ನಾಟಕವಾಡಿದ್ದರು. ನಿರ್ಮಾಪಕಿ ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ. ಇನ್ನೊಬ್ಬ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಧಾರಾವಾಹಿ ನಿರ್ಮಾಣ ಸಂಸ್ಥೆಯೊಂದನ್ನು ನಡೆಸುತ್ತಿರುವ ನಿರ್ಮಾಪಕಿ ಬಳಿ ಹೇಮಂತ್ ಕುಮಾರ್ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ. ಮನೆ ನಿರ್ಮಾಣ ಕೆಲಸ ಆರಂಭಿಸಿದ್ದ ನಿರ್ಮಾಪಕಿ, ಬ್ಯಾಂಕ್‌ನಿಂದ ₹ 1 ಕೋಟಿ ಸಾಲ ಪಡೆದಿದ್ದರು. ಇದು ಗೊತ್ತಾಗುತ್ತಿದ್ದಂತೆ ಹೇಮಂತ್‌ಕುಮಾರ್, ಇತರೆ ಆರೋಪಿಗಳ ಜೊತೆ ಸೇರಿ ಹಣ ದೋಚಲು ಸಂಚು ರೂಪಿಸಿದ್ದ' ಎಂದರು.

ಕರೆ ಮಾಡಿ ಬೆದರಿಕೆ: 'ಫೆ. 12ರಂದು ನಿರ್ಮಾಪಕಿಯ ಸಹಾಯಕನನ್ನು ಕರೆದುಕೊಂಡು ಹೇಮಂತ್‌ಕುಮಾರ್ ಕಾರಿನಲ್ಲಿ ಹೊರಗೆ ಹೋಗಿದ್ದ. ಅದೇ ದಿನ ರಾತ್ರಿ 9 ಗಂಟೆಗೆ ನಿರ್ಮಾಪಕಿಗೆ ಕರೆ ಮಾಡಿದ್ದ ಸಹಾಯಕ, 'ನಮ್ಮನ್ನು ಯಾರೋ ಅಪಹರಣ ಮಾಡಿದ್ದಾರೆ' ಎಂದಿದ್ದ. ನಂತರ, ಮೊಬೈಲ್ ಸ್ವಿಚ್ ಆಫ್ ಆಗಿತ್ತು' ಎಂದು ಪೊಲೀಸರು ಹೇಳಿದರು.

'ನಿರ್ಮಾಪಕಿಗೆ ಮರುದಿನ ಮತ್ತೆ ಕರೆ ಮಾಡಿದ್ದ ಆರೋಪಿಗಳು, 'ನಿಮ್ಮ ಇಬ್ಬರು ಹುಡುಗರು ನಮ್ಮ ಬಳಿ ಇದ್ದಾರೆ. ಇವರನ್ನು ಬಿಡುಗಡೆ ಮಾಡಲು ₹1 ಕೋಟಿ ನೀಡಬೇಕು. ಇಲ್ಲದಿದ್ದರೆ, ಅವರಿಬ್ಬರನ್ನು ಕೊಲೆ ಮಾಡುತ್ತೇವೆ' ಎಂದು ಬೆದರಿಸಿದ್ದರು. ಗಾಬರಿಗೊಂಡ ನಿರ್ಮಾಪಕಿ ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡಾಗ ಚಾಲಕನೇ ಆರೋಪಿ ಎಂಬುದು ತಿಳಿಯಿತು' ಎಂದರು.

ಬಿಬಿಎಂಪಿ ಚಾಲಕರ ವಿರುದ್ಧ 46 ಪ್ರಕರಣ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘಿಸಿದ್ದ ಬಿಬಿಎಂಪಿಯ ಕೆಲ ಚಾಲಕರ ವಿರುದ್ಧ 46 ಪ್ರಕರಣ ದಾಖಲಿಸಿಕೊಂಡಿರುವ ಸಂಚಾರ ಪೊಲೀಸರು, ₹22,700 ದಂಡ ವಿಧಿಸಿದ್ದಾರೆ.

'ಬಿಬಿಎಂಪಿಯ ಕಸ ಸಾಗಣೆ ಹಾಗೂ ಇತರೆ ವಾಹನಗಳ ಚಾಲಕರು ಸಂಚಾರ ನಿಯಮ ಉಲ್ಲಂಘಿಸುತ್ತಿದ್ದ ಬಗ್ಗೆ ದೂರುಗಳು ಬಂದಿದ್ದ ಹಿನ್ನೆಲೆ ಆಡುಗೋಡಿ, ಹುಳಿಮಾವು, ಮಡಿವಾಳ, ಮೈಕೊ ಲೇಔಟ್, ಬೆಳ್ಳಂದೂರು, ಎಲೆಕ್ಟ್ರಾನಿಕ್ ಸಿಟಿ, ಎಚ್‌ಎಸ್‌ಆರ್ ಲೇಔಟ್, ಬನಶಂಕರಿ, ಬಸವನಗುಡಿ, ಜಯನಗರ, ಕುಮಾರಸ್ವಾಮಿ ಲೇಔಟ್, ತಲಘಟ್ಟಪುರ ಹಾಗೂ ವಿ.ವಿ.ಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ಕಾರ್ಯಾಚರಣೆ ನಡೆಯಿತು. ನೀರಿನ ಟ್ಯಾಂಕರ್‌ಗಳ ಚಾಲಕರ ವಿರುದ್ಧವೂ 17 ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 8,500 ದಂಡ ವಿಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಅಪಘಾತ: ಟಿ–ಶರ್ಟ್‌ನಿಂದ ಸಿಕ್ಕಿಬಿದ್ದ ಆರೋಪಿ

ಬೆಂಗಳೂರು: ಹನುಮಂತನಗರ ಬಳಿ ಅಪಘಾತವನ್ನುಂಟು ಮಾಡಿ ಆಟೊ ಚಾಲಕನ ಸಾವಿಗೆ ಕಾರಣವಾಗಿದ್ದ ಆರೋಪಿ ವೇಣು (25), ತಾನು ಧರಿಸಿದ್ದ ಟಿ–ಶರ್ಟ್ ಸುಳಿವಿನಿಂದ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದಾನೆ.

'ಫೆ. 12ರಂದು ತಡರಾತ್ರಿ ಸಂಭವಿಸಿದ್ದ ಅಪಘಾತದಲ್ಲಿ ಆಟೊ ಚಾಲಕ ರಮೇಶ್ (48) ಮೃತಪಟ್ಟಿದ್ದರು. ಅಪಘಾತ ಪ್ರಕರಣ ದಾಖಲಾದ 48 ಗಂಟೆಯೊಳಗೆ ಆರೋಪಿ ವೇಣುನನ್ನು ಸೆರೆ ಹಿಡಿಯಲಾಗಿದೆ' ಎಂದು ಬಸವನಗುಡಿ ಸಂಚಾರ ಠಾಣೆ ಪೊಲೀಸರು ಹೇಳಿದರು.

70 ಕ್ಯಾಮೆರಾ ಪರಿಶೀಲನೆ: 'ಘಟನಾ ಸ್ಥಳದ ಸಮೀಪದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಅಪಘಾತ ಎಸಗಿದ ವೇಣು ಧರಿಸಿದ್ದ ಅರಿಶಿಣ ಬಣ್ಣದ ಟಿ–ಶರ್ಟ್ ಮಾತ್ರ ಕಂಡಿತ್ತು. ಟಿ–ಶರ್ಟ್ ಸುಳಿವು ಇಟ್ಟುಕೊಂಡು ನಗರದ 70 ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಯಿತು. ಅವಾಗಲೇ ಆರೋಪಿ ಸುಳಿವು ಲಭ್ಯವಾಯಿತು. ನಂತರ, ಆರೋಪಿಯನ್ನು ಬಂಧಿಸಿ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ದೇಶ ತೊರೆದ ಫ್ರೆಂಚ್ ಪತ್ರಕರ್ತೆ

ನವದೆಹಲಿ (ಪಿಟಿಐ): ಎರಡು ದಶಕಗಳಿಗೂ ಹೆಚ್ಚು ಕಾಲ ಪತ್ರಕರ್ತೆಯಾಗಿ ಕೆಲಸ ಮಾಡಿರುವ ಫ್ರಾನ್ಸ್‌ನ ವನೆಸ್ಸಾ ಡೊನಾಕ್ ಅವರು ಶುಕ್ರವಾರ ಸ್ವದೇಶಕ್ಕೆ ಮರಳಿದ್ದಾರೆ. ಕೇಂದ್ರ ಸರ್ಕಾರದ ಧೋರಣೆಯಿಂದ ಬೇಸತ್ತು ತವರಿಗೆ ಮರಳುತ್ತಿರುವುದಾಗಿ ಹೇಳಿದ್ದಾರೆ.

'ಭಾರತವನ್ನು ತೊರೆಯುವುದು ನನ್ನ ಆಯ್ಕೆಯಾಗಿರಲಿಲ್ಲ. ನಾನು ಬರೆದಿರುವ ಲೇಖನಗಳು ದೇಶದ ಸಾರ್ವಭೌಮತೆ ಮತ್ತು ಸಮಗ್ರತೆಗೆ ಧಕ್ಕೆ ಉಂಟುಮಾಡುವಂತಿವೆ ಎಂದು ಕೇಂದ್ರ ಸರ್ಕಾರ ಆರೋಪಿಸಿದೆ. ಇದರಿಂದ ಬೇಸತ್ತು ದೇಶವನ್ನು ತೊರೆಯುತ್ತಿದ್ದೇನೆ' ಎಂದು ತಿಳಿಸಿದ್ದಾರೆ.

ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿಯು (ಎಫ್ಆರ್ಆರ್ಒ) ನಿಯಮ ಉಲ್ಲಂಘನೆ ಆರೋಪದಲ್ಲಿ ವನೆಸ್ಸಾ ಅವರಿಗೆ ಕಳೆದ ತಿಂಗಳು ನೋಟಿಸ್ ಜಾರಿಗೊಳಿಸಿತ್ತು. ನಿಮ್ಮ ಸಾಗರೋತ್ತರ ಭಾರತೀಯ ನಾಗರಿಕ (ಒಸಿಐ) ಕಾರ್ಡ್ ಅನ್ನು ಏಕೆ ರದ್ದುಪಡಿಸಬಾರದು ಎಂದು ಕೇಳಿತ್ತು.

ನಗರದಲ್ಲಿ ಇಂದು

'ಸೈಬರ್ ಸೆಕ್ಯೂರಿಟಿ' ಕುರಿತು ಕಾರ್ಯಾಗಾರ: ಉದ್ಘಾಟನೆ: ಜಿ. ಪರಮೇಶ್ವರ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಐಎಎಸ್ ಅಧಿಕಾರಿಗಳ ಸಂಘ, ಇನ್ಫೆಂಟ್ರಿ ರಸ್ತೆ, ಬೆಳಿಗ್ಗೆ 9.30


ಮಸೀದಿ ದರ್ಶನ: ಆಯೋಜನೆ ಮತ್ತು ಸ್ಥಳ: ಬಿಲಾಲ್ ಮಸೀದಿ, ಬನ್ನೇರುಘಟ್ಟ ಮುಖ್ಯರಸ್ತೆ, ಜಯನಗರ, ಬೆಳಿಗ್ಗೆ 11ರಿಂದ

ಪುರಂದರದಾಸರ ಹಾಗೂ ತ್ಯಾಗರಾಜರ ಆರಾಧನಾ ಮಹೋತ್ಸವ: ಉದ್ಘಾಟನೆ: ಡಿ.ಎನ್. ಮುನಿಕೃಷ್ಣ, ಅತಿಥಿ: ಕೆ.ಜಿ. ಲಕ್ಷ್ಮೀನಾರಾಯಣಪ್ಪ, ಅಧ್ಯಕ್ಷತೆ: ಎಂ.ಆರ್. ಸತ್ಯನಾರಾಯಣ, ಕರ್ನಾಟಕ ಶಾಸ್ತ್ರೀಯ ಸಂಗೀತ: ಗಾಯನ: ವಿನಯ್ ರಾಜಮಾನ್ಯ ಮತ್ತು ತಂಡ, ಗಾಯನ: ಎನ್. ಜೆ. ನಂದಿನಿ, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಖಂಜೀರಾ: ವ್ಯಾಸವಿಠಲ, ಆಯೋಜನೆ: ಗಿರಿನಗರ ಸಂಗೀತ ಸಭಾ, ಸ್ಥಳ: ಅಕ್ಷರಂ ಸಭಾಂಗಣ, ಗಿರಿನಗರ, ಮಧ್ಯಾಹ್ನ 3.30ರಿಂದ

ಆರ್.ಪಿ.ಐ ಕಾರ್ಯಕರ್ತರ ರಾಜ್ಯಮಟ್ಟದ ಸಮಾವೇಶ: ಉದ್ಘಾಟನೆ: ರಾಮದಾಸ್ ಅಠವಳೆ, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಆಶಯ ಭಾಷಣ: ಸತೀಶ್, ಸಂವಿಧಾನ ಪೀಠಿಕೆ: ಜಿ.ಸಿ. ವೆಂಕಟರಮಣಪ್ಪ, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಸ್ಥಳ: ಭೀಮ ಮಂಟಪ, ಗಾಯಿತ್ರಿ ಗ್ರ್ಯಾಂಡ್ ವಿಹಾರ ಆವರಣ, ಅರಮನೆ ಮೈದಾನ, ಗೇಟ್–4, ಮಧ್ಯಾಹ್ನ 1

'ಮೇದಿನಿ ನಿರ್ಮಾಣ' ಯಕ್ಷಗಾನ ಪ್ರದರ್ಶನ: ಹಿಮ್ಮೇಳದ ಭಾಗವತರು: ನಂದನ್ ಹೆಗಡೆ ದಂಟಕಲ್, ಗಜಾನನ ಹೆಗಡೆ ಕಲ್ಲಬ್ಬೆ, ಮದ್ದಳೆ: ರಘು ಶರ್ಮ ಹೊನ್ನೆಕುಡಿಗೆ, ನಾರಾಯಣ ಭಟ್ಟ, ಚಂಡೆ: ಭಾವನ ಹೆಗಡೆ ಮಳಗೀಮನೆ, ಮುಮ್ಮೇಳ: ರವಿ ಐತುಮನೆ, ಚಂದನ್ ಕಲಾಹಂಸ, ಅಕ್ಷಯ್ ಹೆಗಡೆ, ಸಮರ್ಥ ಭಟ್ ಬೆಂಕಟವಳ್ಳಿ, ಸಿರಿ ಹಳ್ಳದಾಚೆ, ಅಕ್ಷಯ್, ಸ್ಥಳ: ಶ್ರೀಧರ ಆಶ್ರಮ, ವಸಂತಪುರ, ಮಧ್ಯಾಹ್ನ 2.15

ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಸ್ನೇಹಿತರ ಜತೆ ಸಂತಸ ಮಿಲನ–2024: ಭಾಗವಹಿಸುವವರು: ಡಾ.ಸಿ.ಆರ್. ಚಂದ್ರಶೇಖರ್, ಸತ್ಯನಾರಾಯಣ ಬೆಲ್ಲೇರಿ, ಪ್ರೇಮಾ ಧನರಾಜ್, ಕೆ.ಎಸ್. ರಾಜಣ್ಣ, ಎಂ.ಕೆ. ಶ್ರೀಧರ್, ಸೋಮಣ್ಣ, ಅತಿಥಿಗಳು: ಬಿ. ವೀರಪ್ಪ, ಹಂ.ಪ. ನಾಗರಾಜಯ್ಯ, ರಮೇಶ ಹಲಗಲಿ, ಕೆ.ವೈ. ವೆಂಕಟೇಶ್, ರಘುನಾಥ ಎಸ್. ಆರ್., ಉಪಸ್ಥಿತಿ: ಕೆ.ಈ. ರಾಧಾಕೃಷ್ಣ, ಎಂ. ರಾಜಕುಮಾರ್, ಕೆ.ಜಿ. ಲಕ್ಷ್ಮೀನಾರಾಯಣಪ್ಪ, ಟಿ.ಎನ್. ಕನಕರಾಜು, ಅಮರನಾಥ ಜಿಂಗಾಡೆ, ಮಲ್ಲಿಕಾರ್ಜುನ್, ಆಯೋಜನೆ: ಸಮಂಜಸ ತಂಡ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಪಾರ್ಕ್ ರಸ್ತೆ, ಬೆಳಿಗ್ಗೆ 10ರಿಂದ



ಹಂ.ಪ. ನಾಗರಾಜಯ್ಯ

ನಾದಜ್ಯೋತಿ ಸಂಗೀತ ಸಂಭ್ರಮ: ಪಿಟೀಲು: ಎಚ್.ಎನ್. ಭಾಸ್ಕರ್, ಪೃಥ್ವಿ ಭಾಸ್ಕರ್, ಮೃದಂಗ: ಬಿ.ಸಿ. ಮಂಜುನಾಥ್, ಘಟ: ಓಂಕಾರ್ ರಾವ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 4.15ರಿಂದ

'ರಾಮಾಯಣ ಅರಣ್ಯಕಾಂಡ' ಗೊಂಬೆಯಾಟ ನೋಡಬನ್ನಿ: ಆಯೋಜನೆ: ದೃಶ್ಯಕಾವ್ಯ ಪ್ರತಿಷ್ಠಾನ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 4.30

ರಂಗೋತ್ಸವ–2024: ಅತಿಥಿಗಳು: ಎಸ್.ಜಿ. ಸುಶೀಲಮ್ಮ, ಸಂದೀಪ್ ಗುಲಾಟಿ, ಉಷಾ ಅಮಿನ್, ಆಯೋಜನೆ: ರಂಗಾಭರಣ, ಸ್ಥಳ: ಚಂದ್ರಪ್ರಿಯ ರಂಗಮಂದಿರ, ಸಂಜಯನಗರ, ಸಂಜೆ 5

ಆಲ್–ನೈಟ್ ಯೂಥ್ ಸಮ್ಮಿಟ್–2024: ಸಂಗೀತೋತ್ಸವ: ಸಮೀರ್ ಕುಲಕರ್ಣಿ, ಷಡಜ್ ಗೋಡ್ಖಿಂಡಿ, ಅನಿರುದ್ಧ ಐತಾಳ್, ಸಿದ್ಧಾರ್ಥ ಬೆಳಮಣ್ಣು, ಹಿರಣ್ಮಯಿ ಎಸ್., ನಯನ್ ಯಾವಗಲ್, ಸುಮಿತ್ ನಾಯಕ್, ಗೌರವ ಗಡಿಯಾರ್, ಯೋಗೇಶ್ ಭಟ್, ತೇಜಸ್ ಕಟೋಟಿ, ರೂಪಕ್ ಕಲ್ಲೂರ್‌ಕರ್, ಸ್ಥಳ: ನಾದಶ್ರೀ ಆರ್ಟ್‌ಸ್ಪೇಸ್, ರಘುವನಹಳ್ಳಿ, ಸಂಜೆ 6ರಿಂದ

'ಲಕ್ಷ್ಮೀಶ ತೋಳ್ಪಾಡಿ' ಅವರಿಗೆ ಅಭಿನಂದನಾ ಸಮಾರಂಭ: ಅಭಿನಂದಿಸುವವರು: ವಿದ್ಯಾಭೂಷಣ, ಅಧ್ಯಕ್ಷತೆ: ರವೀಂದ್ರ ಭಟ್ಟ, ಅತಿಥಿಗಳು: ಧರಣಿದೇವಿ ಮಾಲಗತ್ತಿ, ಜಿ.ಎನ್. ಮೋಹನ್, ಆರ್.ಕೆ. ಹೆಗಡೆ, ಸಂಯೋಜನೆ: ನ. ರವಿಕುಮಾರ 'ಮಹಾಭಾರತದಲ್ಲಿ ಮಾತು ಮತ್ತು ಮೌನ' ,ದ ಕುರಿತು ಉಪನ್ಯಾಸ: ಲಕ್ಷ್ಮೀಶ ತೋಳ್ಪಾಡಿ, ಆಯೋಜನೆ: ರಂಗಚಂದಿರ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6ರಿಂದ



ಲಕ್ಷ್ಮೀಶ ತೋಳ್ಪಾಡಿ

'ಸಂಸಾರದಲ್ಲಿ ಸನಿದಪ' ನಾಟಕ ಪ್ರದರ್ಶನ: ನಿರ್ದೇಶನ: ಆಕಾಶ್ ಕಿಣಿ, ಆಯೋಜನೆ: ತದ್ರೂಪಿ, ಸ್ಥಳ: ಕೆಇಎ ಪ್ರಭಾತ ರಂಗಮಂದಿರ, ಬಸವೇಶ್ವರನಗರ, ಸಂಜೆ 6.15

'ಸ್ವಾಮಿ ವಿವೇಕಾನಂದರು ಮತ್ತು ಸಮಕಾಲೀನ ಭಾರತ' ಪ್ರವಚನ ಮಾಲೆ: **ಆಯೋಜನೆ:** ಅಮರಜ್ಯೋತಿ ನಿವಾಸಿಗಳ ಸಂಘ, ಸ್ಥಳ: ಪ್ರಸನ್ನ ಗಣಪತಿ ದೇವಸ್ಥಾನ, ವಿಜಯನಗರ, ಸಂಜೆ 6.30

ಪ್ರವಚನ ವಾಹಿನಿ: ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಸುಸ್ವರ ಲಕ್ಷ್ಮಿ ಫೌಂಡೇಶನ್ ವಿದ್ಯಾರ್ಥಿಗಳು, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ನೂತನ ಆಡಳಿತ ಮಂಡಳಿಯ ಪದಗ್ರಹಣ, ಅಂಗವಿಕಲರಿಗೆ ಗಾಲಿಕುರ್ಚಿ ವಿತರಣೆ: ಅತಿಥಿಗಳು: ದೊಡ್ಡಮನಿ ಎಲ್. ಬಿ., ಮಾಲತಿ ಕೃಷ್ಣಮೂರ್ತಿ ಹೊಳ್ಳ, ಎಚ್. ವೆಂಕಟೇಶ್, ಎನ್.ಆರ್. ಗೋಪಾಲ್, ಆಯೋಜನೆ: ಜೇಂಟ್ಸ್ ಗ್ರೂಪ್ ಆಫ್ ಗಾರ್ಡನ್ ಸಿಟಿ ಬೆಂಗಳೂರು, ಸ್ಥಳ: ಆದರ್ಶ ಭವನ, ಮಲ್ಲೇಶ್ವರ, ಸಂಜೆ 6.30

ಭಾರತ ರಂಗೋತ್ಸವಕ್ಕೆ ಚಾಲನೆ: ರಂಗ ಸಂಗೀತ: ಸುಶೀಲ್ ಶರ್ಮಾ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ರಾಷ್ಟ್ರೀಯ ನಾಟಕ ಶಾಲೆ, ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕನ್ನಡ ನಾಮಫಲಕ: ಅಂಗಡಿಗಳಿಗೆ ಬೀಗ

ಬೆಂಗಳೂರು: ಮಳಿಗೆಗಳ ನಾಮಫಲಕದಲ್ಲಿ ಶೇ 60ರಷ್ಟು ಕನ್ನಡ ಬಳಸದ 18 ಉದ್ದಿಮೆಗಳನ್ನು ತಾತ್ಕಾಲಿಕವಾಗಿ ಬಿಬಿಎಂಪಿ ವತಿಯಿಂದ ಮುಚ್ಚಿಸಲಾಗಿದೆ.

ಬ್ರಿಗೇಡ್ ರಸ್ತೆ, ಎಂ.ಜಿ ರಸ್ತೆ ಹಾಗೂ ಚರ್ಚ್ ಸ್ಟ್ರೀಟ್‌ಗಳಲ್ಲಿ ಕನ್ನಡ ನಾಮಫಲಕ ಬಳಸದ ಅಂಗಡಿಗಳಿಗೆ ಬಿಬಿಎಂಪಿ ಪೂರ್ವ ವಲಯದ ಸಿಬ್ಬಂದಿ ಎಚ್ಚರಿಕೆ ನೀಡಿದರು. ಈಗಿರುವ ನಾಮಫಲಕಗಳಲ್ಲಿ ಇಂಗ್ಲಿಷ್ ಅಕ್ಷರಗಳನ್ನು ಮುಚ್ಚಿ, ಕನ್ನಡವನ್ನು ಚಿಕ್ಕದಾಗಿ ಕಾಣುವಂತೆ ಕೆಲವು ಮಾಡಿದ್ದಾರೆ. ಇದು ಸರಿಯಲ್ಲ. ಶೇ 60ರಷ್ಟು ಕನ್ನಡ ಇರಲೇಬೇಕು ಎಂದು ಮಳಿಗೆಯವರಿಗೆ ತಾಕೀತು ಮಾಡಿದರು.

ವಲಯ ಆಯುಕ್ತೆ ಸ್ನೇಹಲ್, ವಲಯ ಜಂಟಿ ಆಯುಕ್ತೆ ಪಲ್ಲವಿ ಅವರ ನಿರ್ದೇಶನದಂತೆ ಶಾಂತಿನಗರ ಹಾಗೂ ಸಿ.ವಿ ರಾಮನ್‌ನಗರ ವ್ಯಾಪ್ತಿಯಲ್ಲಿ ವಲಯ ಆರೋಗ್ಯಾಧಿಕಾರಿ ಡಾ. ಸವಿತಾ ನೇತೃತ್ವದಲ್ಲಿ ಮಳಿಗೆಗಳ ನಾಮಫಲಕಗಳನ್ನು ಪರಿಶೀಲಿಸಿದರು.

ನಗರದ ಎಂ.ಜಿ ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ಸ್ಟ್ರೀಟ್ ಮತ್ತು ರೆಸಿಡೆನ್ಸಿ ರಸ್ತೆಯಲ್ಲಿ ಇದುವರೆಗೆ 200ಕ್ಕೂ ಹೆಚ್ಚು ವಾಣಿಜ್ಯ ಮಳಿಗಳನ್ನು ಪರಿಶೀಲಿಸಲಾಗಿದೆ. ಈ ಪೈಕಿ 170ಕ್ಕೂ ಹೆಚ್ಚು ಮಳಿಗೆಗಳಲ್ಲಿ ಈಗಾಗಲೇ ಕನ್ನಡ ನಾಮಫಲಕಗಳನ್ನು ಅಳವಡಿಸಿಕೊಂಡಿರುತ್ತಾರೆ. ಮಳಿಗೆಗಳ ಮಾಲೀಕರಿಗೆ ಅಂತಿಮ ತಿಳಿವಳಿಕೆ ಪತ್ರ ನೀಡಿ ಕೂಡಲೇ ನಾಮಫಲಕ ಬದಲಾಯಿಸಿಕೊಳ್ಳಲು ಸೂಚನೆ ನೀಡಲಾಗಿದೆ.



ಮಲ್ಲೇಶ್ವರದ ಮತಗಟ್ಟೆಯಲ್ಲಿ ಶಿಕ್ಷಕಿಯರು ಸರತಿ ಸಾಲಿನಲ್ಲಿ ನಿಂತು ಶುಕ್ರವಾರ ಮತ ಚಲಾಯಿಸಿದರು – ಪ್ರಜಾವಾಣಿ ಚಿತ್ರ

ಉಪ ಚುನಾವಣೆ: ಶೇ 86.38 ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಶುಕ್ರವಾರ ನಡೆದ ಉಪ ಚುನಾವಣೆಯಲ್ಲಿ ಶೇ 86.38ರಷ್ಟು ಮತಗಳು ಚಲಾವಣೆಗೊಂಡಿವೆ.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆ ವ್ಯಾಪ್ತಿಯ ಶಿಕ್ಷಕರು, ಮತದಾನ ಮಾಡಿದರು. ಒಟ್ಟು 19,152 ಮತಗಳ ಪೈಕಿ 16,544 ಮಂದಿ (ಪುರುಷರು 6,504, ಮಹಿಳೆಯರು 10,040) ಮತ ಚಲಾಯಿಸಿದರು.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಶೇ 83.97, ಬಿಬಿಎಂಪಿ ಕೇಂದ್ರದಲ್ಲಿ ಶೇ 83.17, ಬಿಬಿಎಂಪಿ ಉತ್ತರದಲ್ಲಿ ಶೇ 82.43, ಬಿಬಿಎಂಪಿ ದಕ್ಷಿಣದಲ್ಲಿ ಶೇ 82.51, ಬೆಂಗಳೂರು ಗ್ರಾಮಾಂತರದಲ್ಲಿ ಶೇ 96.02 ಹಾಗೂ ರಾಮನಗರದಲ್ಲಿ ಶೇ 95.77 ಮತದಾನ ಪ್ರಮಾಣ ದಾಖಲಾಗಿದೆ. ಬೆಳಿಗ್ಗೆ 8ರಿಂದ ಸಂಜೆ 4ರವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಕಾಂಗ್ರೆಸ್ ಅಭ್ಯರ್ಥಿಯಾಗಿ ಪುಟ್ಟಣ್ಣ, ಬಿಜೆಪಿ- ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಎ.ಪಿ. ರಂಗನಾಥ್ ಸೇರಿ 9 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಫೆ. 20ರಂದು ಮತ ಎಣಿಕೆ ನಡೆಯಲಿದೆ.

ಪ್ರೇಮಿಗಳ ದಿನ: 3 ಕೋಟಿ ಗುಲಾಬಿ ರಫ್ತು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಈ ಬಾರಿ ಪ್ರೇಮಿಗಳ ದಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ 2.90 ಕೋಟಿ ಗುಲಾಬಿ ಹೂವುಗಳನ್ನು ವಿದೇಶಕ್ಕೆ ರಫ್ತು ಮಾಡಲಾಗಿದೆ.

12.22 ಲಕ್ಷ ಕೆ.ಜಿ ತೂಕದ ಗುಲಾಬಿ ಹೂಗಳನ್ನು ಹೊರ ದೇಶಗಳಿಗೆ ರಫ್ತು ಮಾಡಲಾಗಿದೆ. ಕಳೆದ ಬಾರಿ 1.40 ಕೋಟಿ ಗುಲಾಬಿ ಹೂವುಗಳನ್ನು ರವಾನಿಸಲಾಗಿತ್ತು. ಈ ಬಾರಿ ಶೇ 108 ರಷ್ಟು ಹೆಚ್ಚಿನ ಗುಲಾಬಿಗಳನ್ನು ರಫ್ತು ಮಾಡಲಾಗಿದೆ.

ಕ್ವಾಲಾಲಂಪುರ, ಸಿಂಗಪುರ, ಕುವೈತ್, ಮನಿಲಾ ಮತ್ತು ಶಾರ್ಜಾ ಮತ್ತು ದೆಹಲಿ, ಕೋಲ್ಕತ್ತಾ, ಮುಂಬೈ, ಗುವಾಹಟಿ ಮತ್ತು ಜೈಪುರಗೆ ಅತಿ ಹೆಚ್ಚು ಗುಲಾಬಿ ರವಾನಿಸಲಾಗಿದೆ ಎಂದು ಬೆಂಗಳೂರು ವಿಮಾನ ನಿಲ್ದಾಣ ಪ್ರಾಧಿಕಾರ ತಿಳಿಸಿದೆ.

ಗುಲಾಬಿ ಹೂವುಗಳ ತಾಜಾತನ ಕಾಪಾಡಲು ಶೀತಲೀಕರಣ ಘಟಕಗಳಲ್ಲಿ ಇಟ್ಟು ಗುಣಮಟ್ಟದ ತಾಜಾ ಹೂವುಗಳನ್ನು ರಫ್ತು ಮಾಡಲಾಗಿದೆ ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ವಿ ಟಿ ಯು ಅಧಿನಿಯಮ 1994" ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ ರಾಜ್ಯ
ಫೋನ್:(0831)2405468 ಫ್ಯಾಕ್ಸ್ : (0831)2405467

ಉಲ್ಲೇಖ : ವಿತಾವಿ/ಆ.ಸ./2023-24/ 6367 ದಿನಾಂಕ : 5-02-2024

ಅಧಿಸೂಚನೆ

ವಿಷಯ :ವಿ.ತಾ.ವಿ.ಯ ಇಪ್ಪತ್ತ್ಮೂರನೇಯ ವಾರ್ಷಿಕ ಘಟಿಕೋತ್ಸವ (ಭಾಗ–॥) ಸಮಾರಂಭ – ಸ್ನಾತಕೋತ್ತರ(PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ

******

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಿಳಿಸುವುದೇನೆಂದರೆ, ಸ್ನಾತಕೋತ್ತರ (PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ವಿ.ತಾ.ವಿ.ಯ ಇಪ್ಪತ್ತ್ಮೂರನೇಯ ಘಟಿಕೋತ್ಸವ (ಭಾಗ–॥) ಸಮಾರಂಭವು, ಗುರುವಾರ, ದಿನಾಂಕ 07 ಮಾರ್ಚ್, 2024 ರಂದು, ಪೂರ್ವಾಹ್ನ 11–30 ಗಂಟೆಗೆ ವಿ.ತಾವಿ.ಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಪ್ರೇಕ್ಷಾ ಗೃಹ, "ಜ್ಞಾನ ಸಂಗಮ", ಬೆಳಗಾವಿಯಲ್ಲಿ ಏರ್ಪಡಿಸಲಾಗಿದೆ. ಮೇಲೆ ಉಲ್ಲೇಖಿತ ಪದವಿಗಳಿಗೆ ಅರ್ಹ ಅಭ್ಯರ್ಥಿಗಳನ್ನು ಈ ಮೂಲಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.


ಈ ಘಟಿಕೋತ್ಸವ ಸಮಾರಂಭದಲ್ಲಿ 2022–23ನೇ ಸಾಲಿನ ಸ್ನಾತಕೋತ್ತರ(PG) ವಿಭಾಗದಲ್ಲಿ ಸುವರ್ಣ ಪದಕ ವಿಜೇತರಿಗೆ ಹಾಗೂ ರ್‍ಯಾಂಕ ವಿಜೇತರಿಗೆ ಮತ್ತು ಪಿಹೆಚ್.ಡಿ. ಪದವಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ ಪದವಿ ಪ್ರದಾನ ಮಾಡಲಾಗುವುದು.

:ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಗಮನಿಸಬೇಕು:

* ವಿಶ್ವವಿದ್ಯಾಲಯದ ವೆಬ್ ಸೈಟಿನಲ್ಲಿ ತಿಳಿಸಿರುವಂತೆ ಶುಭ್ರವಾದ ಬಿಳಿಬಟ್ಟೆಗಳನ್ನು ಧರಿಸಿಕೊಂಡು ಪ್ರೇಕ್ಷಾಗೃಹದಲ್ಲಿ ಹಾಜರಿರಬೇಕು
* ಘಟಿಕೋತ್ಸವ ಸಮಾರಂಭವು ಪ್ರಾರಂಭವಾಗುವುದಕ್ಕಿಂತ ಅರ್ಧಘಂಟೆ ಮುಂಚಿತವಾಗಿ ಪ್ರೇಕ್ಷಾಗೃಹದಲ್ಲಿ ಹಾಜರಿದ್ದು ತಮ್ಮಆಸನಗಳಲ್ಲಿ ಕುಳಿತುಕೊಳ್ಳಬೇಕು
* ಶೀತ, ಕೆಮ್ಮು, ಜ್ವರ ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ಈ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳದಿರುವುದು
* ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಮತ್ತು ಇತರ ಗಣ್ಯರು ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಹಾಗೂ ಆಸೀನರಾಗುವವರೆಗೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಬೇಕು
* ಘಟಿಕೋತ್ಸವ ಸಮಾರಂಭವು ಪೂರ್ತಿ ಮುಗಿಯುವವರೆಗೆ ಶಾಂತತೆಯನ್ನು ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು
* ಸಭಾಂಗಣದಲ್ಲಿ ಮೊಬೈಲ್‌ಫೋನ್ ಚಾಲನೆಯಲ್ಲಿಡಬಾರದು
* ಘಟಿಕೋತ್ಸವ ಮುಗಿದಮೇಲೆ ಮೆರವಣಿಗೆಯು ಸಭಾಂಗಣವನ್ನು ಬಿಟ್ಟು ತೆರಳುವವರೆಗೆ ಎಲ್ಲರೂ ತಮ್ಮ ಸ್ಥಳಗಳಲ್ಲಿಯೇ ದಯವಿಟ್ಟು ಎದ್ದು ನಿಂತಿರಬೇಕು
* ಕುಲಸಚಿವರು(ಪರಿಕ್ಷಾಂಗ) ಇವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಸಂಬಂಧವಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದು

ಪದವಿ ಪ್ರಮಾಣ ಪತ್ರಗಳನ್ನು ವೈಯಕ್ತಿಕವಾಗಿ ಪಡೆಯಬಯಸುವ ಇತರ ಅಭ್ಯರ್ಥಿಗಳು ಕಛೇರಿಯ ಮಾರನೇಯ ದಿನ, ಅಂದರೆ ಶನಿವಾರ ದಿ:09–03–2024ರಂದು ಕಛೇರಿ ಸಮಯದಲ್ಲಿ, ಕಾಲೇಜಿನಿಂದ ಕೊಡಲ್ಪಟ್ಟ ಗುರುತಿನ ಚೀಟಿಯನ್ನು ತೋರಿಸಿ ಪರೀಕ್ಷಾ ವಿಭಾಗದಿಂದ ಪಡೆದುಕೊಳ್ಳಬಹುದು. ಉಳಿದವರಿಗೆ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವ್ದ ನಂತರ ಆಯಾ ಕಾಲೇಜುಗಳಿಗೆ ಕಳುಹಿಸಿಕೊಡಲಾಗುವುದು

ಆಜ್ಞೆಯ ಮೇರೆಗೆ
(ಡಾ.ಬಿ. ಈ. ರಂಗಸ್ವಾಮಿ)
ಕುಲಸಚಿವರು


ಸಕ್ಕರೆ ನಾಡು ಮಂಡ್ಯಕ್ಕೆ ಬಂಪರ್ ಗಿಫ್ಟ್
ಮೈಸೂರು ಮಹಾರಾಜರ ನಂತರ ಮಂಡ್ಯ ಜಿಲ್ಲೆಗೆ ಹೊಸ ಸಕ್ಕರೆ ಕಾರ್ಖಾನೆಯನ್ನು ಕೊಟ್ಟಂತಹ ಕರ್ನಾಟಕದ ಅಭಿವೃದ್ಧಿಯ ಹರಿಕಾರ
ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರಿಗೆ
ಅಭಿನಂದನೆಗಳು.
500 ಕೋಟಿ ರೂ.ಗಳಲ್ಲಿ ಹೊಸ ಸಕ್ಕರೆ ಕಾರ್ಖಾನೆ ನಿರ್ಮಿಸಲಾಗುವುದು.
ಅಭಿನಂದನೆ ಸಲ್ಲಿಸುವವರು
ಪಿ. ರವಿಕುಮಾರಗೌಡ ಗಣಿಗ
ಶಾಸಕರು, ಮಂಡ್ಯ ಕ್ಷೇತ್ರ

ಹಳಿ ಮೇಲೆ ಇಳಿದ ಚಾಲಕ ರಹಿತ ಮೆಟ್ರೊ ರೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಗೋಡಿ ಮೆಟ್ರೊ ಡಿಪೊಗೆ ಬಂದಿದ್ದ ಚಾಲಕ ರಹಿತ ಎಂಜಿನ್ ಅಳವಡಿಸಿರುವ ಎರಡು ಬೋಗಿಗಳೂ ಸೇರಿದಂತೆ ಒಟ್ಟು ಆರು ಬೋಗಿಗಳನ್ನು ಶುಕ್ರವಾರ ಹಳಿಗಳ ಮೇಲೆ ಯಶಸ್ವಿಯಾಗಿ ಇಳಿಸಲಾಯಿತು.

'ನಮ್ಮ ಮೆಟ್ರೊ' ಹಳದಿ ಮಾರ್ಗದ ಸಂಚಾರಕ್ಕಾಗಿ ಚೀನಾದಿಂದ ತರಲಾದ ಚಾಲಕರಹಿತ ಮೆಟ್ರೊ ರೈಲಿನ ಒಂದು ಸೆಟ್ ಬೋಗಿಗಳು ಹೆಬ್ಬಗೋಡಿ ಡಿಪೊಗೆ ಬುಧವಾರ ತಲುಪಿದ್ದವು. ಶುಕ್ರವಾರ ಕ್ರೇನ್ ಮೂಲಕ ಇಳಿಸಿ ಹಳಿ ಮೇಲೆ ಕೂರಿಸಲಾಯಿತು.

ಮೆಟ್ರೊ ಹಳದಿ ಮಾರ್ಗದ ಆರ್.ವಿ ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರ ವರೆಗಿನ ನೂತನ ಮಾರ್ಗದಲ್ಲಿ ಚಾಲಕರಹಿತ ಎಂಜಿನ್ ಇರುವ ಮೆಟ್ರೊ ರೈಲುಗಳು ಸಂಚರಿಸಲಿವೆ. 6 ಬೋಗಿಗಳ ಜೋಡಣೆಯಾದ ಮೇಲೆ ಈ ಮಾರ್ಗದಲ್ಲಿ ವಿವಿಧ ಪರೀಕ್ಷೆ ಮತ್ತು ಪರಿಶೀಲನೆಗಳು ಆರಂಭಗೊಳ್ಳಲಿವೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



ಹೆಬ್ಬಗೋಡಿ ಮೆಟ್ರೊ ಡಿಪೊಗೆ ಬಂದಿದ್ದ ಮೆಟ್ರೊ ರೈಲಿನ ಬೋಗಿಗಳನ್ನು ಶುಕ್ರವಾರ ಹಳಿಗಳ ಮೇಲೆ ಇಳಿಸಲಾಯಿತು

ಅಭಿನಂದನಾ ಸಮಾರಂಭದಲ್ಲಿ ಸಚಿವ ಸತೀಶ ಜಾರಕಿಹೊಳಿ ಭರವಸೆ

ದೂರುಗಳಿದ್ದರೆ ಪರಿಹರಿಸಲು ಸಿದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕೋಪಯೋಗಿ ಇಲಾಖೆಯನ್ನು ಮುಂದಿನ ಮೂರು ವರ್ಷಗಳಲ್ಲಿ ದೇಶದಲ್ಲೇ ಮಾದರಿ ಇಲಾಖೆಯನ್ನಾಗಿ ರೂಪಿಸುವ ಗುರಿ ಹೊಂದಿದ್ದೇನೆ. ಇಲಾಖೆಯೊಳಗೆ ಯಾವುದೇ ಸಮಸ್ಯೆ ಇದ್ದರೂ ನೇರವಾಗಿ ನನ್ನ ಗಮನಕ್ಕೆ ತನ್ನಿ. ಪರಿಹರಿಸಲು ಸಿದ್ಧನಿದ್ದೇನೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸಣ್ಣ ಗುತ್ತಿಗೆದಾರರ ಬಾಕಿ ಬಿಲ್‌ಗಳನ್ನು ಒಂದೇ ಬಾರಿಗೆ ಪಾವತಿಸಿರುವ ನಿರ್ಧಾರಕ್ಕಾಗಿ ರಾಜ್ಯ ಗುತ್ತಿಗೆದಾರರ ಸಂಘದಿಂದ ಶುಕ್ರವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, 'ಲೋಕೋಪಯೋಗಿ ಇಲಾಖೆಗೆ ಹೊಸ ರೂಪ ನೀಡುವ ಪ್ರಕ್ರಿಯೆ ಆರಂಭವಾಗಿದೆ. ಅದಕ್ಕೆ ಬೇಕಿರುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುವುದು' ಎಂದರು.

'ಸಚಿವನಾಗಿರುವ ಕಾರಣಕ್ಕೆ ನಾನು ಬೇಕಾಬಿಟ್ಟಿ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ನನ್ನ ಇತಿಮಿತಿ ಅರಿತು ನಿರ್ಧಾರ ಕೈಗೊಳ್ಳಬೇಕು. ಇಲಾಖೆಯಲ್ಲಿ ಗುತ್ತಿಗೆದಾರರಿಗೆ ಇನ್ನೂ ₹ 4,000 ಕೋಟಿಯಷ್ಟು ಬಿಲ್ ಬಾಕಿ ಇದೆ. ಈ ತಿಂಗಳ ಅಂತ್ಯದೊಳಗೆ ₹ 2,000 ಕೋಟಿ ಬಿಲ್ ಪಾವತಿಸಲಾಗುವುದು' ಎಂದರು.

ಇಲಾಖೆಯಲ್ಲಿ ಯಾವುದೇ ಸಮಸ್ಯೆ ಇದ್ದರೆ ಗುತ್ತಿಗೆದಾರರು ಮೊದಲು ತಮ್ಮ ಗಮನಕ್ಕೆ ತರಬೇಕು. ತಮ್ಮಿಂದ ಪರಿಹಾರ ದೊರಕದಿದ್ದರೆ ಎಲ್ಲಿ ಬೇಕಾದರೂ ಅಹವಾಲು ಸಲ್ಲಿಸಬಹುದು. ಇಲಾಖೆಯ ಸಮಸ್ಯೆಗಳ ಕುರಿತು ಮುಕ್ತ ಮನಸ್ಸಿನಿಂದ ಅಹವಾಲು ಆಲಿಸಿ, ಪರಿಹಾರ ಕ್ರಮ ಕೈಗೊಳ್ಳಲು ತಾವು ಸಿದ್ಧ ಎಂದು ಹೇಳಿದರು.

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಮಾತನಾಡಿ, 'ಗುತ್ತಿಗೆದಾರರಿಗೆ ಬಾಕಿ ಇರುವ ₹ 4,000 ಕೋಟಿ ಮೊತ್ತದ ಬಾಕಿ ಬಿಲ್‌ಗಳನ್ನು ಆದಷ್ಟು ಬೇಗ ಬಿಡುಗಡೆ ಮಾಡಿ' ಎಂದು ಮನವಿ ಮಾಡಿದರು.

ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಸಿ. ಸತ್ಯನಾರಾಯಣ, ಮುಖ್ಯ ಇಂಜಿನಿಯರ್ ದುರ್ಗಪ್ಪ, ಆಂತರಿಕ ಆರ್ಥಿಕ ಸಲಹೆಗಾರ ಸೋಮನಾಥ್, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಮುಖ್ಯ ಯೋಜನಾಧಿಕಾರಿ ಶಿವಯೋಗಿ ಹಿರೇಮಠ್, ಗುತ್ತಿಗೆದಾರರ ಸಂಘದ ಪದಾಧಿಕಾರಿಗಳಾದ ಜಿ. ಎಂ. ರವೀಂದ್ರ, ಆರ್, ಮಂಜುನಾಥ್, ಬಿ.ಸಿ.ದಿನೇಶ್, ಬಿ. ಎನ್ . ಕೃಷ್ಣೇಗೌಡ ಉಪಸ್ಥಿತರಿದ್ದರು.



ರಾಜ್ಯ ಗುತ್ತಿಗೆದಾರರ ಸಂಘದ ವತಿಯಿಂದ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಮಾತನಾಡಿದರು. ಸಂಘದ ಅಧ್ಯಕ್ಷ ಡಿ. ಕೆಂಪಣ್ಣ ಮತ್ತು ಪದಾಧಿಕಾರಿಗಳು ಇದ್ದರು

'ಅಭ್ಯರ್ಥಿ ಆಯ್ಕೆ: ದೆಹಲಿಗೆ ಬಿಜೆಪಿ ವರಿಷ್ಠರ ಬುಲಾವ್'

ರಾಮನಗರ: ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಜೆಡಿಎಸ್- ಬಿಜೆಪಿ ಮೈತ್ರಿಕೂಟದ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲು ಬಿಜೆಪಿ ವರಿಷ್ಠರು ದೆಹಲಿಗೆ ಕರೆದಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಬಿಜೆಪಿ ವರಿಷ್ಠರ ಜೊತೆ ಚರ್ಚಿಸಿ ಎಲ್ಲಾ 28 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಶೀಘ್ರ ಬಿಡುಗಡೆ ಮಾಡಲಾಗುತ್ತದೆ ಎಂದರು.

'ನಾನು ಮಂಡ್ಯದಿಂದ ಸ್ಪರ್ಧಿಸಬೇಕೆಂದು ಅಲ್ಲಿನ ಮುಖಂಡರು ಮತ್ತು ಕಾರ್ಯಕರ್ತರು ಒತ್ತಾಯಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಕ್ಷೇತ್ರದ ಮತದಾರರು 5 ಲಕ್ಷಕ್ಕಿಂತ ಅಧಿಕ ಮತ ಕೊಟ್ಟಿದ್ದಾರೆ. ಮತ್ತೆ ಸ್ಪರ್ಧಿಸುವ ಕುರಿತು ಮುಂದೆ ಚರ್ಚಿಸೋಣ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಮೈತ್ರಿ ಅಭ್ಯರ್ಥಿಗಳ ಗೆಲುವಿಗೆ ತಂತ್ರಗಾರಿಕೆ ರೂಪಿಸಲು ಹಳೆ ಮೈಸೂರು ಭಾಗದ ಪಕ್ಷದ ಮುಖಂಡರ ಜೊತೆ ಸಭೆ ನಡೆಸಲಾಗಿದೆ ಎಂದರು .

'ಡಿಎಚ್ ಬೆಂಗಳೂರು 2040 ಶೃಂಗ' ಇಂದು

ಸಿ.ಎಂ ಸಿದ್ದರಾಮಯ್ಯ ಉದ್ಘಾಟನೆ • ವಿಚಾರಗೋಷ್ಠಿಯಲ್ಲಿ ಡಿಸಿಎಂ ಡಿಕೆಶಿ ಭಾಗಿ

ಪ್ರಜಾವಾಣಿ ವಾರ್ತೆ

PURAVANKARA PRESENTS DH BENGALURU 2040 SUMMIT

ಬೆಂಗಳೂರು: ನಗರದ ರೂಪರೇಷೆಗಳನ್ನು ಆಳವಾಗಿ ವಿಶ್ಲೇಷಿಸುವ ಕಳಕಳಿಯೊಂದಿಗೆ 'ಪ್ರಜಾವಾಣಿ'ಯ ಸೋದರ ಪತ್ರಿಕೆಯಾದ ಡೆಕ್ಕನ್ ಹೆರಾಲ್ಡ್ 'ಡಿಎಚ್ ಬೆಂಗಳೂರು 2040 ಶೃಂಗ'ವನ್ನು ಶನಿವಾರ (ಫೆಬ್ರುವರಿ 17) ಆಯೋಜಿಸಿದೆ. ನೀತಿ ನಿರೂಪಕರು, ಕಾರ್ಪೊರೇಟ್ ವಲಯದ ದಿಗ್ಗಜರು, ಉದ್ಯಮಿಗಳು, ಕಲಾವಿದರು, ಸಾಮಾಜಿಕ ಕಾರ್ಯಕರ್ತರನ್ನು ಒಂದೇ ವೇದಿಕೆಯಲ್ಲಿ ತರುವ ಅಪರೂಪದ ಕಾರ್ಯಕ್ರಮ ಇದು.

ಐ.ಟಿ ಸಿಟಿಯಾಗಿ ಹೊರಳಿರುವ ಬೆಂಗಳೂರನ್ನು ಮುನ್ನಡೆಸಲು ಸದೃಢ, ಸುಸ್ಥಿರ ವಿಧಾನವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಈ ಶೃಂಗವನ್ನು ಡೆಕ್ಕನ್ ಹೆರಾಲ್ಡ್ ಏರ್ಪಡಿಸಿದೆ. ರೆಸಿಡೆನ್ಸಿ ರಸ್ತೆಯಲ್ಲಿರುವ ಐಟಿಸಿ ಗಾರ್ಡೇನಿಯಾದಲ್ಲಿ ಬೆಳಿಗ್ಗೆ 9.30ರಿಂದ ಸಂಜೆ 7 ಗಂಟೆ ತನಕ ವಿವಿಧ ಗೋಷ್ಠಿಗಳು ನಡೆಯಲಿವೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಮಣಿಪಾಲ್ ಆಸ್ಪತ್ರೆ ಸಮೂಹದ ಅಧ್ಯಕ್ಷ ಡಾ. ಸುದರ್ಶನ ಬಲ್ಲಾಳ್ ಪ್ರಾಸ್ತಾವಿಕವಾಗಿ ಮಾತನಾಡುವರು.

'ಬೆಂಗಳೂರು ವಿಶ್ವದ ತಂತ್ರಜ್ಞಾನ ಮತ್ತು ಉದ್ಯಮಶೀಲತಾ ಕೇಂದ್ರ' ಕುರಿತು ಗೋಷ್ಠಿಯಲ್ಲಿ ಕ್ಯೂಎನ್‌ಯು ಲ್ಯಾಬ್ಸ್‌ನ ಸಹಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುನಿಲ್ ಕುಮಾರ್ ಗುಪ್ತಾ, 1ಬ್ರಿಡ್ಜ್ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮದನ್ ಪದಕಿ, ಮರ್ಸಿಡಿಸ್ ಬೆಂಜ್ ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗದ ವ್ಯವಸ್ಥಾಪಕ ನಿರ್ದೇಶಕ ಮನು ಸಾಲೆ ಪಾಲ್ಗೊಳ್ಳಲಿದ್ದಾರೆ.

ಮುಖ್ಯಾಂಶಗಳು

- ಐಟಿಸಿ ಗಾರ್ಡೇನಿಯಾದಲ್ಲಿ ವಿವಿಧ ಗೋಷ್ಠಿಗಳ ಆಯೋಜನೆ
- ನೀತಿ ನಿರೂಪಕರು, ಕಾರ್ಪೊರೇಟ್ ದಿಗ್ಗಜರು ಉದ್ಯಮಿಗಳು ಭಾಗಿ

'ಉತ್ತಮ ಬೆಂಗಳೂರಿಗಾಗಿ ಕಲ್ಪನೆಗಳು' ಕುರಿತ ಗೋಷ್ಠಿಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ.

'ವಾಣಿಜ್ಯ ಮತ್ತು ಸಾರ್ವಜನಿಕ ಹಿತಾಸಕ್ತಿಗಳನ್ನು ಸಮತೋಲನಗೊಳಿಸಿ-ಬೆಂಗಳೂರನ್ನು ಸುಸ್ಥಿರವಾಗಿ ಅಭಿವೃದ್ಧಿಪಡಿಸುವ ತಂತ್ರಗಳು' ಕುರಿತ ಗೋಷ್ಠಿಯಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷ ಎಚ್.ಸಿ. ಕಿಶೋರ್ ಚಂದ್ರ, ರಾಜ್ಯ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ರಾಕೇಶ್ ಸಿಂಗ್, ವೆಸ್ಟ್ ರಿಜಿನ್ ಆ್ಯಂಡ್ ಕಮರ್ಷಿಯಲ್ ಅಸೆಟ್ಸ್ ಪ್ಯಾನ್ ಇಂಡಿಯಾ, 'ಪುರವಂಕರ' ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಜತ್ ರಸ್ತೋಗಿ ಪಾಲ್ಗೊಳ್ಳುವರು.

ನಂತರ ನಡೆಯುವ ವಿವಿಧ ಗೋಷ್ಠಿಗಳಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಹರಿಣಿ ನಾಗೇಂದ್ರ, ಕೊಳಲು ವಾದಕ ಪ್ರವೀಣ್ ಗೋಡ್ಖಿಂಡಿ, ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದ ಕುಲಸಚಿವ ನಿಗಮ್ ನುಗ್ಗೆಹಳ್ಳಿ ಭಾಗವಹಿಸಲಿದ್ದಾರೆ.

ಅಂತರರಾಷ್ಟ್ರೀಯ ಕ್ರೀಡಾಪಟು ಅಶ್ವಿನಿ ನಾಚಪ್ಪ, ಮಾಜಿ ಟೆನಿಸ್ ಆಟಗಾರ್ತಿ ದಿಪ್ತಿ ಬೊಪ್ಪಯ್ಯ, ನಿಮಿದಾ ಗ್ರೂಪ್‌ನ ಸಂಸ್ಥಾಪಕ ಗೌರವ್ ಮಂಚಂದ, ನಟಿ, ನಿರ್ದೇಶಕಿ ಸಿಂಧು ಶ್ರೀನಿವಾಸಮೂರ್ತಿ, ನಟಿಯರಾದ ಸಂಯುಕ್ತಾ ಹೊರನಾಡು, ಚೈತ್ರಾ ಜೆ. ಆಚಾರ್, ನಿರ್ದೇಶಕ ಹೇಮಂತ್ ಎಂ. ರಾವ್ ಪಾಲ್ಗೊಳ್ಳಲಿದ್ದಾರೆ.

ಈಶ್ವರ ದೈತೋಟ ಶಿವಣ್ಣಗೆ 'ಬಿ.ಎಂ.ಶ್ರೀ. ಪ್ರತಿಷ್ಠಾನ ಪ್ರಶಸ್ತಿ'



ಈಶ್ವರ ದೈತೋಟ



ಶಿವಣ್ಣ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 2024ನೇ ಸಾಲಿನ 'ಪ್ರೊ. ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ'ಗೆ ವಿಮರ್ಶಕ ಮೀರಾಸಾಬಿಹಳ್ಳಿ ಶಿವಣ್ಣ ಮತ್ತು 'ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ'ಗೆ ಪತ್ರಕರ್ತ ಈಶ್ವರ ದೈತೋಟ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿವೆ. ಇದೇ 19ರಂದು ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಸಾಹಿತಿ ಕೆ. ಮರುಳಸಿದ್ದಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ತಿಳಿಸಿದ್ದಾರೆ.

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಎನ್ನ ಕಾಯವ...

ಕವನ ತೀರ್ಥಹಳ್ಳಿ

ವರ್ಷದ ಹಿಂದಷ್ಟೆ ನಾನು ಸ್ನಾತಕೋತ್ತರ ಪದವಿ ಮುಗಿಸಿ ಪಿ ಯು ಕಾಲೇಜೊಂದರಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸಕ್ಕೆ ಸೇರಿದ್ದೆ. ನೆರೆಹೊರೆಯವರು ಕೆಲಸ,ಸಂಬಳದ ಕುರಿತು ಕೇಳುವ ಪ್ರಶ್ನೆಗಳು ಮತ್ತು ನಾನದಕ್ಕೆ ಉತ್ತರಿಸುವುದು ದಿನಚರಿಯಾಗಿತ್ತು. ಆದರೆ ದಿನಕಳೆದಂತೆ ವೃತ್ತಿಯ ಕುರಿತಾದ ಪ್ರಶ್ನೆಗಳು ಕೊಂಚ ಕೊಂಚವೇ ಬದಲಾಗುತ್ತ ದೈಹಿಕ ಸ್ವರೂಪದ ಬಗೆಗೆ ನಾಟಕೀಯ ನೋಟಗಳು ಪ್ರಾರಂಭವಾದವು.

ಕಾಲೇಜಿನಲ್ಲಿ ಮಕ್ಳು ನಿನ್ ಮಾತ್ ಕೇಳ್ತಾರಾ? ನಾನೆಲ್ಲೋ ನಿನ್ನ ಹೈಸ್ಕೂಲ್ ಹುಡ್ಗಿ ಅನ್ಕೊಂಡಿದ್ದೆ! ಮಕ್ಳು ನಿನ್ನನ್ನು ರೇಗ್ಸೋದಿಲ್ಲ ತಾನೆ? ಇತ್ಯಾದಿ ಸಾಲು ಸಾಲು ಟೀಕೆಗಳು ಹಾಸ್ಯಮಿಶ್ರಿತ ವ್ಯಂಗ್ಯ ಧ್ವನಿಯಲ್ಲಿ ನನ್ನನ್ನು ದಾಳಿಮಾಡಲಾರಂಭಿಸಿದವು. ಆರಂಭದಲ್ಲಿ ಎಲ್ಲದಕ್ಕೂ ನಗುನಗುತ್ತಲೇ ನಯವಾಗಿ ಉತ್ತರಿಸುತ್ತಿದ್ದ ನನಗೆ ದಿನಕಳೆದಂತೆ ಇಂತಹ ಅಸಂಬದ್ಧ ಪ್ರಶ್ನೆಗಳು ರೇಗಿ ಹೋದವು. ಅವರು ಯಾರೂ ನಾನು ಮಾಡುವ ಪಾಠ ಕೇಳಿದವರಲ್ಲ, ನನ್ನ ವಿದ್ಯಾರ್ಹತೆಯ ಬಗ್ಗೆ ಅವರಿಗೆ ಸಂಶಯವೂ ಇರಲಿಲ್ಲ, ಆದರೆ ಅವರಿಗೆ ಸಮಸ್ಯೆಯಾಗಿದ್ದು ನನ್ನ ಎತ್ತರ!

ದೇಹದ ಆಕಾರ, ತೂಕ, ಎತ್ತರ, ವಯಸ್ಸು, ಉಡುಪು, ಚರ್ಮದ ಬಣ್ಣದ ಕುರಿತ ಟೀಕೆಗಳಲ್ಲಿ ಮಹಿಳೆ ಮತ್ತು ಪುರುಷರಿಬ್ಬರೂ ನಲಗುತ್ತಿದ್ದಾರೆ. ತೆಳ್ಳಗಿದ್ದರೆ ಕಡ್ಡಿ, ಎತ್ತರವಿದ್ದರೆ ಲಂಬು, ಬೆಳ್ಳಗಿದ್ದರೆ ಬಿಳಿ ಜಿರಲೆ , ಕುಳ್ಳಗಿದ್ದರೆ ಕುಳ್ಳಿ, ದಪ್ಪಗಿದ್ದರೆ ಡುಮ್ಮಿ, ಕಪ್ಪಗಿದ್ದರೆ ಕರಿಯಮ್ಮ, ಮೊಡವೆ ತುಂಬಿದ ಮುಖ, ವಯಸ್ಸಾಗದೆ ವಯಸ್ಸಾದವರಂತೆ ಕಂಡರೆ ಆಂಟಿ/ ಅಂಕಲ್ ...ದೈಹಿಕ ಸ್ವರೂಪದ ಅವಹೇಳಿಸುವ ಮಾತುಗಳು ನೂರಾರು.

ಜಗತ್ತು ತನ್ನಷ್ಟಕ್ಕೆ ತಾನೇ ಹೆಣ್ಣು ಮತ್ತು ಗಂಡಿನ ಭೌತಿಕ ನಿಲುವಿನ ಕುರಿತು ಕೆಲವು ಕೃತಕ ಕಲ್ಪನೆಗಳನ್ನು ಸೃಷ್ಟಿಸಿಕೊಂಡಿದೆ. ದೇಹಾಕೃತಿ ಎಂಬ ತೀರಾ ವೈಯಕ್ತಿಕ ವಿಷಯವನ್ನು ಟೀಕಿಸಿ ಮಾನಸಿಕವಾಗಿ ಕುಗ್ಗುವಂತೆ ಮಾಡಲಾಗುತ್ತಿದೆ. ಸಹಿಸಲಾಗದೇ ಹತಾಶರಾಗುವವರು ಖಿನ್ನತೆಗೆ ಒಳಗಾಗುತ್ತಾರೆ. ಬಾಡಿ ಶೇಮಿಂಗ್ ಗೆ ಸಾಮಾಜಿಕ ಜಾಲತಾಣಗಳು ಮುಖ್ಯ ವೇದಿಕೆಯಯಾಗುತ್ತಿದೆ ಎಂಬುದು ವಿಚಿತ್ರ ಸತ್ಯ.

ಇಂದಿನ ನಟಿಯರು ದೇಹದ ವಿವಿಧ ಭಾಗಗಳನ್ನು ಪ್ಲಾಸ್ಟಿಕ್ ಸರ್ಜರಿಗೆ ಒಳಪಡಿಸುತ್ತಿರುವುದು ವಿಪರ್ಯಾಸ. ಅಸಲಿಗೆ ಈ ಪರಿವರ್ತನೆ ಲೋಕ ತೃಪ್ತಿಗಾಗಿಯೇ ಹೊರತು ಆತ್ಮತೃಪ್ತಿಗಾಗಿ ಅಲ್ಲ. ‘ನಾನು ಸುಂದರವಾಗಿ ಕಾಣಬೇಕು’.., ‘ನಾನು ಆಕರ್ಷಕ ಮೈಕಟ್ಟನ್ನು ಹೊಂದಿರಬೇಕು’.. ‘ಇತರರು ನನ್ನನ್ನು ನೋಡಿ ಮೆಚ್ಚಬೇಕು’ಎಂಬ ಗೀಳು ಈಗ ಸಾಂಕ್ರಾಮಿಕವಾಗಿದೆ.

ಸೌಂದರ್ಯ ಎಂಬುದರ ವ್ಯಾಖ್ಯಾನ ಬದಲಾಗಬೇಕಿದೆ. ಬರೀ ದೇಹಕ್ಕಷ್ಟೇ ಮೀಸಲಿರುವ ಈ ಪದ ಮನಸಿನ ವ್ಯಾಪ್ತಿಯನ್ನು ಮೀರಬೇಕಿದೆ. ಏಕೆಂದರೆ ಈ ಜಗತ್ತಿನಲ್ಲಿ ಯಾರೂ ಪರಿಪೂರ್ಣರಲ್ಲ.. ಪರಿಪೂರ್ಣತೆ ಎಂಬುದು ಒಂದು ಕಲ್ಪನೆಯಷ್ಟೇ.



ನಮ್ಮ ದೇಹವನ್ನು ನಾವು ಪ್ರೀತಿಸಿ, ಸಕಾರಾತ್ಮಕವಾಗಿ ಸ್ವೀಕರಿಸಬೇಕು ಅಷ್ಟೇ ಅಲ್ಲ ಒಂದಲ್ಲ ಒಂದು ರೀತಿಯಲ್ಲಿ ಅಪರಿಪೂರ್ಣರಾದ ನಾವು ಬೇರೆಯವರ ದೇಹಾಕೃತಿಯನ್ನು ಕುರಿತು ಆಡಿಕೊಳ್ಳುವ ಅನುಚಿತ ಮಾರ್ಗವನ್ನು ತುಳಿಯಬಾರದು. ಎದುರಿಗೆ ನಿಂತ ವ್ಯಕ್ತಿಯ ದೈಹಿಕ ನಿಲುವನ್ನು ನೋಡಿ ನಾವು ಏನನ್ನು ನಿರ್ಧರಿಸಲಾಗದು ಆ ವ್ಯಕ್ತಿಯ ಸ್ವಭಾವ ತಿಳಿದಾಗಲೇ ಅವನ ವ್ಯಕ್ತಿತ್ವದ ಪರಿಚಯವಾಗುವುದು.

ವ್ಯಕ್ತಿಯ ದೇಹಾಕಾರದ ಮೂಲಕ ಆತನ ಯೋಗ್ಯತೆ ಅಳೆಯುವುದಕ್ಕಿಂತ ವ್ಯಕ್ತಿತ್ವ ನೋಡುವುದು ನಿಜವಾದ ಮಾನವೀಯ ಮಾರ್ಗವಲ್ಲವೇ...?

ನಮ್ಮ ಯೋಚನಾ ಧಾಟಿಯನ್ನೇ ಬದಲಿಸಬಹುದಾದ ಪ್ರಬಲ ಮಾಧ್ಯಮವಾಗಿರುವ ಟಿ.ವಿಯಲ್ಲಿ ಮಹಿಳಾ ವಿರೋಧಿ ಧೋರಣೆಗಳನ್ನು ತೋರುವುದೇಕೆ? ಜೀವಪರವಾಗಿರಬೇಕಾದ ಮಾಧ್ಯಮ ಸಂಪ್ರದಾಯ ಮತ್ತು ಮನರಂಜನೆಯ ಹೆಸರಿನಲ್ಲಿ ಸ್ತ್ರೀಪಾತ್ರಗಳನ್ನು ಟೊಳ್ಳಾಗಿಸುತ್ತಿರುವುದು ಏಕೆ?

ಮುಂದುವರೆಯುತ್ತಿರುವ ಕಾಲವೂ.. ಹಿಂದಕ್ಕೆಳೆಯುತ್ತಿರುವ ಕಿರುತೆರೆಯೂ...



ಸಮುದ್ಯತಾ ಕಂಜರ್ಪಣೆ

ತಾಯಿಗಾದ ಅವಮಾನಕ್ಕೆ ಐಎಎಸ್ ಮಾಡಬೇಕೆಂದುಕೊಂಡ ಹುಡುಗಿ, ಮೆಕ್ಯಾನಿಕ್ ಆಗಿದ್ದವಳನ್ನ ಪೋಲೀಸ್ ಮಾಡಬೇಕೆಂದುಕೊಂಡ ಗಂಡ, ಸೊಸೆಗೆ ಎಸ್ಎಸ್ಎಲ್‌ಸಿ ಪಾಸ್ ಮಾಡಿಸೋ ಸವಾಲು ಹಾಕುವ ಅತ್ತೆ.. ಹೀಗೆ ಎಲ್ಲ ಬದಲಾಗುತ್ತಿದೆ ಎನ್ನುವುದು ಇಂದಿನ ಹಲವಷ್ಟು ಧಾರಾವಾಹಿಗಳು ಮೇಲ್ನೋಟಕ್ಕೆ ನೀಡುತ್ತಿರುವ ಚಿತ್ರಣ. ಆಳಕ್ಕಿಳಿದಂತೆ ಸಮಾಜದಲ್ಲಿ ಹಾಸುಹೊಕ್ಕಾಗಿ ಉಳಿದುಬಿಟ್ಟಿರುವ ಅನೇಕ ಸತ್ಯಗಳನ್ನು ಸಹ ಇವು ಬಿಚ್ಚಿಡುತ್ತಿವೆ ಎನ್ನುವುದು ವಾಸ್ತವ.

ಮಧ್ಯಮ ವರ್ಗದ ಮನೆಗಳಲ್ಲಿ ಹಾಗು ಗ್ರಾಮೀಣ ಭಾಗಗಳಲ್ಲಿ, ಕಿರುತೆರೆ ದಿನಚರಿಯ ಭಾಗವೇ ಆಗಿಹೋಗಿದೆ. ಸಂಜೆಯಾದಂತೆ ಅಜ್ಜ ಅಜ್ಜಿಯರು ಟಿವಿ ಮುಂದೆ ಕುಳಿತುಕೊಳ್ಳುವುದು, ಅಮ್ಮ ತರಕಾರಿ ಹೆಚ್ಚುತ್ತಾ ಧಾರಾವಾಹಿ ನೋಡುವುದು, ಊಟದ ಹೊತ್ತಿಗೆ ಮನೆಯವರೆಲ್ಲರೂ ಅಯ್ಯೋ ಅವನು ಹಾಗೆ ಮಾಡಬಾರದಿತ್ತು, ಇವಳು ಸರಿಯಾಗಿ ಹೇಳಿದಳು ಅಂತೆಲ್ಲ ರನ್ನಿಂಗ್ ಕಮೆಂಟರಿ ಕೊಡುತ್ತಾ ಧಾರವಾಹಿ ನೋಡುವುದು ಪ್ರತಿ ಮನೆಯಲ್ಲೂ ಸಾಮಾನ್ಯವಾಗಿ ಕಾಣುವ ಚಿತ್ರ. ಪ್ರತಿದಿನ ನೋಡುವ ಧಾರಾವಾಹಿಗಳು ನಮ್ಮ ಯೋಚನಾಶೈಲಿಯಲ್ಲಿ ಹಲವಾರು ಬದಲಾವಣೆ ತರುವುದು ಸಹ ಸಾಮಾನ್ಯ.

ಮೇಲ್ನೋಟಕ್ಕೆ ಮಹಿಳೆಯರ ಸಬಲೀಕರಣದ ಕುರಿತು ತೋರಿಸುವ ಎಲ್ಲಾ ಧಾರವಾಹಿಗಳಲ್ಲೂ ಪುರುಷ ಪ್ರಧಾನ ಸಮಾಜ ಮಹಿಳೆಯನ್ನು ಹೇಗೆ ನೋಡಬಯಸುತ್ತದೆ, ಮಹಿಳೆಗೆ ಕಟ್ಟುಪಾಡುಗಳ ಅಗತ್ಯ ಇದೆ ಎನ್ನುವುದನ್ನು ಇನ್ನಷ್ಟು ಆಳವಾಗಿ ಹೆಣೆಯಲಾಗುತ್ತಿದೆ.

ಪ್ರತಿ ಧಾರವಾಹಿಯಲ್ಲೂ ಹೆಣ್ಣುಮಗಳು ಸೀರೆಯುಟ್ಟು, ಕೈತುಂಬ ಬಳೆ ಹಾಕಿ, ದೇವಸ್ಥಾನದಲ್ಲಿ ತೆಂಗಿನ ಕಾಯಿ ಒಡೆದು, ಕುಂಕುಮ ಇಟ್ಟು ಕುಣಿಯುತ್ತಾ ಬರುವುದರ ಹೊರತಾಗಿ ಬೇರೆ ದೃಶ್ಯಗಳು ಕಾಣುವುದು ಅಪರೂಪ. ಕೊನೆಗೆ ಆ ಹುಡುಗಿಗೆ ತಕ್ಕ ವರ ಸಿಗುವುದು ಆಕೆಯ ಹಾಗೂ ಧಾರಾವಾಹಿಯ ಬದುಕಿನ ಏಕೈಕ ಗುರಿ. ನಂತರದ ಇಡೀ ಚಿತ್ರಣಗಳು ಸವಾಲುಗಳನ್ನು ಎದುರಿಸುವುದು, ಅವರಿವರ ಕೊಂಕಿಗೆ ಮಂದಹಾಸ ಬೀರುವುದು, ಏನೇ ಕಷ್ಟವಿದ್ದರೂ ತನ್ನೊಳಗೇ ಹುದುಗಿಸಿ ಇಡೀ ಮನೆಯ, ಕುಟುಂಬದ ಸಮಸ್ಯೆಯನ್ನು ಒಂಟಿಯಾಗಿ ಹೋರಾಡಿ ಎದುರಿಸುವುದು. ಇದಿಷ್ಟು ಸಿದ್ಧ ಮಾದರಿಯ ಕತೆಗಳ ಹೊರತಾಗಿ ಬೇರೆ ಚಿತ್ರಣಗಳೇ ಇಲ್ಲದಿರುವುದು ಮಹಿಳೆ ಇಂದಿನವರೆಗೆ ಹೋರಾಡಿ ಪಡೆದ ಮತ್ತು ಪಡೆಯುತ್ತಿರುವ ಸಮತೆಗೆ ಸೂಚಿಸುತ್ತಿರುವ ಅಗೌರವವಷ್ಟೇ.

ಕೆಲಸಕ್ಕೆ ಹೋಗಬೇಕಾದ ಮಹಿಳೆ ಮನೆಯನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತೇನೆ, ಏನೂ ತೊಂದರೆಯಾಗಲು, ಹೊರೆಯಾಗಲು ಬಿಡುವುದಿಲ್ಲ ಎಂದು ಗಂಡನ ಮನೆಯವರನ್ನು ಗೋಗರೆಯುವುದು, ಕೆಲಸಕ್ಕೆ ಹೋಗುವ ತಾಯಿ ಮಗುವನ್ನು ಜವಾಬ್ದಾರಿಯುತವಾಗಿ ನೋಡಿಕೊಳ್ಳುತ್ತಿಲ್ಲ ಎನ್ನುವುದು; ಹೆಣ್ಣನ್ನು ಬೋಲ್ಡ್ & ಬ್ಯೂಟಿಫುಲ್ ಎಂಬAತೆ ಬಿಂಬಿಸಿ ಮದುವೆಯಾದ ಮರುದಿನದಿಂದಲೇ ಸೀರೆಯುಡಿಸಿ ದೊಡ್ಡ ಗಾತ್ರದ ಕರಿಮಣಿ ಹಾಕಿ ಇಲ್ಲಿಯವರೆಗೆ ಕಟ್ಟಿಕೊಟ್ಟ ಆಕೆಯ ಪಾತ್ರದ ಚಿತ್ರಣವನ್ನೇ ಮರೆತುಬಿಡುವುದು ಇನ್ನೊಂದು ಆಯಾಮ.

ಅತ್ತೆ ಸೊಸೆಯ ಉತ್ತಮ ಸಂಬಂಧ ಇತ್ತೀಚಿನ ಟ್ರೆಂಡ್ ಆಗಿರುವ ಧಾರವಾಹಿ ವಿಷಯ. ಆದರೆ, ನೋಡುತ್ತಾ ಹೋದಂತೆ ಸೊಸೆ ಏನೆಲ್ಲ ಮಾಡುತ್ತಾಳೆ ಎಂದು ಹೊಗಳುವ ಅತ್ತೆಯ ಮಾತಿನಲ್ಲಿ ಸೊಸೆಯಾದವಳು ಏನೆಲ್ಲ ಮಾಡಬೇಕು ಎನ್ನುವ ಸೂತ್ರಗಳೇ ಇರುತ್ತವೆ.

ಗಂಡನನ್ನು ಯಜಮಾನರೇ, ಸಾಹೇಬರೇ, ಸರ್ ಮುಂತಾದ ವಿಚಿತ್ರ ಸಂಬೋಧನೆಗಳೂ ಈಗಿನ ಧಾರವಾಹಿಗಳ ವಿಶೇಷ. ಗಂಡು ಸದಾ ಶ್ರೀಮಂತರ ಮನೆಯ ದೊಡ್ಡ ಕಂಪನಿಯ ಮಾಲೀಕ. ಹೆಣ್ಣು ಬಡ ಮಧ್ಯಮ ವರ್ಗದ ಕೆಲಸದವಳು, ಅವನ ಮನೆಯ ಸೊಸೆಯಾಗುವುದೇ ಇವಳ ಜನ್ಮಾಂತರದ ಪುಣ್ಯ ಎನ್ನುವುದು ಇನ್ನಷ್ಟು ಅಸಹ್ಯಕರ. ಮೂವತ್ತಾದರೂ ಗಂಡು ಸಿಕ್ಕಿಲ್ಲ ಎನ್ನುವ ಹೀಯಾಳಿಕೆ, ವಿಧವೆಯನ್ನು ಮದುವೆಯಾಗುವ ಶ್ರೀರಾಮಚಂದ್ರ ಎನ್ನುವ ದೊಡ್ಡಸ್ತಿಕೆ ಕಥೆಗಳಲ್ಲಾದರೆ, ಕರಿಮಣಿ, ಅಂತರಪಟ, ಗಟ್ಟಿಮೇಳ, ಮುಂತಾದ ಶೀರ್ಷಿಕೆಗಳಲ್ಲೇ ಬದುಕೆಂದರೇ ಮದುವೆ ಮತ್ತದರ ಸುತ್ತುವ ಕಥೆಯಷ್ಟೇ ಎನ್ನುವುದೂ ಇದೆ.

ಹೆಣ್ಣಿಗೆ ಓದುವ, ಸಾಧಿಸುವ, ಜವಾಬ್ದಾರಿಯುವ ಪಾತ್ರ ನಿರ್ವಹಿಸುವ, ನಿರ್ಧಾರಗಳನ್ನು ತೆಗೆದುಕೊಳ್ಳುವ, ತನ್ನ ಆಯ್ಕೆಯ ಬದುಕು ಕಟ್ಟಿಕೊಳ್ಳುವ, ಯಾರ ಹಂಗಿಲ್ಲದೆಯೇ ಬದುಕುವ ಎಲ್ಲ ಶಕ್ತಿಯಿದ್ದರೂ ಅದೆಲ್ಲವನ್ನೂ ಇದು ಸಾಧ್ಯವಾಗದಿರುವುದು ಅಥವಾ ಸಾಧ್ಯವಾಗಬಾರದು ಎಂದು ತೋರಿಸುತ್ತಿರುವುದು ಇಂದಿನ ಧಾರವಾಹಿಗಳ ಹಿರಿಮೆ.

ಕೆಲ ವರ್ಷಗಳ ಹಿಂದಷ್ಟೇ ಬಂದ ಕೆಲವೇ ಕೆಲವು ಧಾರವಾಹಿಗಳು ಇಂದಿಗೂ ಪ್ರಸ್ತುತ ಎನಿಸಿವೆ. ಟಿ.ಎನ್ ಸೀತಾರಾಮ್ ಅಥವಾ ಸೇತುರಾಂ ರವರ ಧಾರವಾಹಿಗಳಲ್ಲಿ ನಾಯಕಿಯ ಪಾತ್ರಗಳನ್ನು ಕಟ್ಟಿಕೊಟ್ಟಿರುವುದು ಬಹಳಷ್ಟು ಸಮರ್ಥನೀಯವಾಗಿವೆ. ತನ್ನ ಸಿದ್ಧಾಂತಕ್ಕೆ ಬದ್ಧವಾದ ಹೆಣ್ಣುಮಗಳು, ರಾಜಕೀಯ ರಂಗದಲ್ಲಿ, ಮಾಧ್ಯಮ ರಂಗದಲ್ಲಿ, ನಾಗರೀಕ ಸೇವೆಗಳಲ್ಲಿ ಕೆಲಸ ನಿರ್ವಹಿಸುವ ಪಾತ್ರಗಳು, ಪ್ರಬುದ್ಧತೆ, ಅಂದ ಚಂದ, ಮ್ಯಾಚಿಂಗ್, ದೇವರ ಮನೆ, ಬೆಳಗಿನ ಕಾಫಿ ಇದೆಲ್ಲ ಕ್ಲೀಷೆಗಳನ್ನು ಮೀರಿದ ಅದ್ಭುತ ಪಾತ್ರಗಳನ್ನು ಕಟ್ಟಿಕೊಟ್ಟ ಹಿರಿಮೆ ಇವರದು. ಪೋಲೀಸ್ ಪಾತ್ರದಲ್ಲಿ ಮಾಳವಿಕಾ, ವಕೀಲೆಯಾಗಿ ಅಪರ್ಣಾ, ಕಾಲು ಕಳೆದುಕೊಂಡರೂ ಹೋರಾಡಿ ಐಎಎಸ್ ಅಧಿಕಾರಿಯಾದ ವೈಜಯಂತಿ ಮುಂತಾದ ಬಹಳಷ್ಟು ಪಾತ್ರಗಳು ಇಂದಿಗೂ ಮನಸ್ಸಿನಲ್ಲಿ ಉಳಿಯುವಂತಹವು. ಮಹಿಳಾ ಕೇಂದ್ರಿತ ಧಾರವಾಹಿಯಾಗಿ ಮಹಿಳೆಗಿರುವ ಹಲವಾರು ಸಾಧ್ಯತೆಗಳನ್ನು ತೋರಿಸುತ್ತಾ ಹೋದ ಇಂತಹ ಧಾರವಾಹಿಗಳು ಈಗ ಮರೆಯಾಗಿರುವುದು ವಿಷಾದನೀಯ.

ಪ್ರೇಕ್ಷಕರಿಗೆ ಹೊಸತನದ ಹೆಸರಲ್ಲಿ ಮತ್ತಷ್ಟು ಹಿಂದಕ್ಕೆಳೆಯುತ್ತಿರುವುದು, ಮತ್ತೆ ಪುರುಷ ಪ್ರಧಾನ ಸಮಾಜದ ಪ್ರಾಬಲ್ಯ ಸಾಧಿಸತೊಡಗುತ್ತಿರುವುದು ಅರಿವಿಗೆ ಬರುವ ಹೊತ್ತಿಗೆ, ಮತ್ತೆಷ್ಟೋ ಓದಬೇಕಾದ ಮಕ್ಕಳು ಮದುವೆಯಾಗಿರುತ್ತಾರೆ, ತನ್ನ ಕಾಲಮೇಲೆ ನಿಲ್ಲಬೇಕಾದ ಹುಡುಗಿಯರು ಸಂಸಾರದ ಜಂಜಾಟದಲ್ಲಿ ಹೆಣಗಿರುತ್ತಾರೆ.

ಮಹಿಳೆ ಪ್ರತಿ ಕ್ಷೇತ್ರದಲ್ಲು ತನ್ನ ಹೆಜ್ಜೆಯನ್ನು ಅಚಲವಾಗಿ ಇಡುವ ಹೊತ್ತಿನಲ್ಲಿ ಇನ್ನಷ್ಟು ವಿಶಾಲವಾಗಿ, ಅರಿವಿನಿಂದ, ಕಾಳಜಿಯಿಂದ ಜೊತೆಗೂಡಬೇಕಾಗಿರುವುದು ಮಾಧ್ಯಮದ ಜವಾಬ್ದಾರಿ.

ಇಲ್ಲಿ ಕೇವಲ ಮಹಿಳೆಯ ಪಾತ್ರ ಪೋಷಣೆಯಲ್ಲದೇ ಪುರುಷರ ಸಬಲೀಕರಣವೂ ಅಗತ್ಯವಿದೆ. ಒಬ್ಬ ಮಹಿಳೆ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವುದು, ಅವಳ ಬದುಕಿನ ಆಯ್ಕೆ ಮಾಡಿಕೊಳ್ಳುವುದು ಸಹಜವೋ, ಒಬ್ಬ ಪುರುಷ ಮಹಿಳೆಯನ್ನು ಸಮಾನವಾಗಿ ನೋಡುತ್ತಾ ಆಕೆಯ ಮೇಲೆ ಅವಲಂಬಿತನಾಗದೇ, ಅವನ ಅಧಿಪತ್ಯ ಸಾಧಿಸದೇ ಇರುವುದು ಕೂಡ ಸಹಜ ಎನ್ನುವುದು ಸಹ ತಿಳಿಯಬೇಕಾಗಿದೆ. ದುಡಿಯುವ ಮಹಿಳೆ, ಸಿಂಗಲ್ ಪೇರೆಂಟ್ ಅಥವಾ ಸ್ವಾವಲಂಬಿ ಮಹಿಳೆಯ ಪಾತ್ರ ಎಷ್ಟು ಸಹಜ ಎನ್ನುವುದನ್ನು ತಿಳಿಸುವ ಅಗತ್ಯಕ್ಕಿಂತ ಬೆಳಿಗ್ಗೆ ಎದ್ದು ತನ್ನ ಕಾಫಿ ತಾನೇ ಮಾಡಿ ತಾನೇ ಕುಡಿದು, ತನ್ನ ಲಂಚ್ ಪ್ಯಾಕ್ ಮಾಡಿ ಹೊರಡುವುದು, ಮನೆಗೆ ಬಂದು ತಾನು ತಿಂದ ತಟ್ಟೆಯನ್ನು ತಾನೇ ತೊಳೆದು, ಬಟ್ಟೆ ಮೆಷಿನ್‌ಗೆ ಹಾಕಿ ಒಣಹಾಕುವುದು ಗಂಡಿನ ಬದುಕಲ್ಲಿ ಸಹಜ ಎನ್ನುವುದನ್ನು ತಿಳಿಸುವ ಅಗತ್ಯ ಅದಕ್ಕಿಂತ ಹೆಚ್ಚಾಗಿದೆ.

ಇಂದಿನ ಸ್ಪರ್ಧಾತ್ಮಕ ಬದುಕಿನಲ್ಲಿ ವಾಸ್ತವಕ್ಕೆ ದೂರವಾದ ಚಿತ್ರಣಗಳು ಇನ್ನಷ್ಟು ತಪ್ಪು ತಿಳುವಳಿಕೆಗಳು, ಅತಿಯಾದ ನಿರೀಕ್ಷೆ - ಹತಾಶೆಗಳು, ಅತಿಯಾದ ಅವಲಂಬನೆಗೆ ದಾರಿ ಮಾಡುತ್ತಿರುವುದನ್ನು ಅರಿವಿನಲ್ಲಿಟ್ಟುಕೊಂಡು ಕಿರುತೆರೆ ಇನ್ನಾದರೂ ಬದಲಾವಣೆ ತಂದುಕೊಳ್ಳಬೇಕಿದೆ.

ಸಂಜೆಯ ಸ್ನ್ಯಾಕ್ಸ್

ರಸಸ್ವಾದ

ಎಂ.ಎಸ್.ಧರ್ಮೇಂದ್ರ, ದೊಡ್ಡಮಗ್ಗೆ

ಬಸಳೆ ಸೊಪ್ಪಿನ ಬಜ್ಜಿ

ಬೇಕಾಗುವ ಸಾಮಗ್ರಿಗಳು: ಬಸಳೆಸೊಪ್ಪು 20 ಎಲೆ, ಕಡಲೆ ಹಿಟ್ಟು 1 ಕಪ್, ಖಾರದಪುಡಿ 1 ಚಮಚ, ಅಕ್ಕಿಹಿಟ್ಟು 1/2 ಚಮಚ, ಉಪ್ಪು, ಎಣ್ಣೆ, **ತಯಾರಿಸುವ ವಿಧಾನ:** ಕಡಲೆ ಹಿಟ್ಟು, ಖಾರದಪುಡಿ, ಅಕ್ಕಿಹಿಟ್ಟು, ಉಪ್ಪನ್ನು ಮಿಕ್ಸ್ ಮಾಡಿ ನೀರು ಸೇರಿಸಿ ಗಂಟುಗಳಿಲ್ಲದಂತೆ ಪೇಸ್ಟ್ ಮಾಡಿಕೊಳ್ಳಿ. ತೊಳೆದ ಬಸಳೆಸೊಪ್ಪಿನ ಎಲೆಯನ್ನು ಹಿಟ್ಟಿನಲ್ಲಿ ಅದ್ದಿ ಕಾದ ಎಣ್ಣೆಗೆ ಹಾಕಿ ಹದ ಉರಿಯಲ್ಲಿ ಬಂಗಾರದ ಬಣ್ಣ ಬರುವವರೆಗೂ ಎರಡೂ ಕಡೆ ತಿರುಗಿಸುತ್ತಾ ಕರಿದು ತೆಗೆಯಿರಿ.





ನುಗ್ಗೆ ಸೊಪ್ಪಿನ ಬೋಂಡಾ

ಬೇಕಾಗುವ ಸಾಮಗ್ರಿಗಳು: ಈರುಳ್ಳಿ 1/4 ಕೆ.ಜಿ, ಕಡಲೆ ಹಿಟ್ಟು 1 ಕಪ್, ಹಸಿ ಮೆಣಸಿನಕಾಯಿ 10, ಕೊತ್ತಂಬರಿ ಸ್ವಲ್ಪ, ನುಗ್ಗೆ ಸೊಪ್ಪು 1 ಕಪ್, ಕಾರ್ನ್‌ಫ್ಲೋರ್ 1 ಚಮಚ, ಉಪ್ಪು, ಎಣ್ಣೆ.

ತಯಾರಿಸುವ ವಿಧಾನ: ಈರುಳ್ಳಿ, ಕೊತ್ತಂಬರಿ, ನುಗ್ಗೆಸೊಪ್ಪು, ಹಸಿಮೆಣಸಿನಕಾಯಿಯನ್ನು ಸಣ್ಣಗೆ ಕತ್ತರಿಸಿಟ್ಟುಕೊಳ್ಳಿ. ಕತ್ತರಿಸಿಟ್ಟುಕೊಂಡ ಪದಾರ್ಥಗಳು, ಕಡಲೆಹಿಟ್ಟು, ಕಾರ್ನ್‌ಫ್ಲೋರ್, ಉಪ್ಪು ಮತ್ತು ಸ್ವಲ್ಪ ನೀರನ್ನು ಹಾಕಿ ಬೋಂಡಾ ಹಿಟ್ಟಿನ ಹದಕ್ಕೆ ಕಲಸಿ, ಉಂಡೆಯಾಕಾರದಲ್ಲಿ ಮಾಡಿ ಕಾದ ಎಣ್ಣೆಗೆ ಹಾಕಿ ಹದ ಉರಿಯಲ್ಲಿ ಕರಿದು ತೆಗೆಯಿರಿ.

ಸಬ್ಬಕ್ಕಿ ಸೊಪ್ಪಿನ ಬೋಂಡಾ

ಬೇಕಾಗುವ ಸಾಮಗ್ರಿಗಳು: ಈರುಳ್ಳಿ 1/4 ಕೆ.ಜಿ, ಕಡಲೆ ಹಿಟ್ಟು 100 ಗ್ರಾಂ, ಹಸಿ ಮೆಣಸಿನಕಾಯಿ 6, ಕೊತ್ತಂಬರಿ 1 ಕಪ್, ಸಬ್ಬಕ್ಕಿ ಸೊಪ್ಪು ಅರ್ಧ ಕಪ್, ಕಾರ್ನ್‌ಫ್ಲೋರ್ ಎರಡು ಚಮಚ, ಉಪ್ಪು, ಎಣ್ಣೆ.

ತಯಾರಿಸುವ ವಿಧಾನ: ಈರುಳ್ಳಿ, ಕೊತ್ತಂಬರಿ, ಸಬ್ಬಕ್ಕಿ ಸೊಪ್ಪು, ಹಸಿಮೆಣಸಿನಕಾಯಿಯನ್ನು ಸಣ್ಣಗೆ ಕತ್ತರಿಸಿಟ್ಟುಕೊಳ್ಳಿ. ಕತ್ತರಿಸಿಟ್ಟುಕೊಂಡ ಪದಾರ್ಥಗಳು, ಕಡಲೆಹಿಟ್ಟು, ಕಾರ್ನ್‌ಫ್ಲೋರ್, ಉಪ್ಪು ಮತ್ತು ಸ್ವಲ್ಪ ನೀರನ್ನು ಹಾಕಿ ಬೋಂಡಾ ಹಿಟ್ಟಿನ ಹದಕ್ಕೆ ಕಲಸಿ, ಹುಂಡೆಯಾಕಾರದಲ್ಲಿ ಮಾಡಿ ಕಾದ ಎಣ್ಣೆಗೆ ಹಾಕಿ ಹದ ಉರಿಯಲ್ಲಿ ಕರಿದು ತೆಗೆಯಿರಿ





ಜೋಳದ ಪಕೋಡ

ಬೇಕಾಗುವ ಸಾಮಗ್ರಿಗಳು: ಈರುಳ್ಳಿ 6, ಜೋಳ 1 ಕಪ್, ಕಡಲೆ ಹಿಟ್ಟು 5 ಚಮಚ, ಕಾರ್ನ್‌ಫ್ಲೋರ್/ಅಕ್ಕಿಹಿಟ್ಟು 1/2 ಚಮಚ, ಖಾರದಪುಡಿ 2 ಚಮಚ, ಗರಂ ಮಸಾಲೆ ಸ್ವಲ್ಪ, ಹಸಿಮೆಣಸಿನ ಕಾಯಿ 4, ಜೀರಿಗೆ ಸ್ವಲ್ಪ, ಕೊತ್ತಂಬರಿಸೊಪ್ಪು ಸ್ವಲ್ಪ, ಉಪ್ಪು, ಎಣ್ಣೆ.

ತಯಾರಿಸುವ ವಿಧಾನ: ದಪ್ಪವಾಗಿ ರುಬ್ಬಿದ ಜೋಳಕ್ಕೆ, ಕತ್ತರಿಸಿದ ಈರುಳ್ಳಿ, ಹಸಿಮೆಣಸಿನಕಾಯಿ, ಕೊತ್ತಂಬರಿ, ಕಡಲೆಹಿಟ್ಟು, ಕಾರ್ನ್‌ಫ್ಲೋರ್/ಅಕ್ಕಿಹಿಟ್ಟು, ಖಾರದಪುಡಿ, ಉಪ್ಪನ್ನು ಹಾಕಿ ನೀರು ಹಾಕದೆ ಚೆನ್ನಾಗಿ ಕಲಸಿ ಈರುಳ್ಳಿ ಮತ್ತು ಜೋಳ ಅಂಟುವಂತಾಗಲಿ, ಉಂಡೆಯಾಕಾರದಲ್ಲಿ ಮಾಡಿ ಕಾದ ಎಣ್ಣೆಗೆ ಹಾಕಿ ಸಣ್ಣ ಉರಿಯಲ್ಲಿ ಕರಿದು ತೆಗೆಯಿರಿ.

ಮಸಾಲೆ ವಡೆ

ಬೇಕಾಗುವ ಸಾಮಗ್ರಿಗಳು: ಕಡ್ಲೆಬೇಳೆ 1/2 ಕೆ.ಜಿ, ಈರುಳ್ಳಿ 6, ಶುಂಠಿ 3 ಇಂಚು, ಬೆಳ್ಳುಳ್ಳಿ 4 ಉಂಡೆ, ಗರಂಮಸಾಲೆ ಸ್ವಲ್ಪ, ಹಸಿಮೆಣಸಿನ ಕಾಯಿ 7, ಒಣಮೆಣಸಿನ ಕಾಯಿ 4, ಕರಿಬೇವು 3 ಕಡ್ಡಿ, ಸಬ್ಬಕ್ಕಿ ಸೊಪ್ಪು ಸ್ವಲ್ಪ, ಪುದೀನ ಸ್ವಲ್ಪ, ಕೊತ್ತಂಬರಿಸೊಪ್ಪು ಸ್ವಲ್ಪ, ಉಪ್ಪು, ಎಣ್ಣೆ.

ತಯಾರಿಸುವ ವಿಧಾನ: ಈರುಳ್ಳಿ, 2 ಹಸಿಮೆಣಸಿನಕಾಯಿ, ಸಬ್ಬಕ್ಕಿ ಸೊಪ್ಪು, ಕರಿಬೇವು, ಕೊತ್ತಂಬರಿಸೊಪ್ಪು, ಪುದೀನಗಳನ್ನು ಸಣ್ಣಗೆ ಕತ್ತರಿಸಿಟ್ಟುಕೊಳ್ಳಿ. ಶುಂಠಿ, ಬೆಳ್ಳುಳ್ಳಿ, 5 ಹಸಿಮೆಣಸಿನಕಾಯಿ, ಒಣಮೆಣಸಿನಕಾಯಿ, ಗರಂಮಸಾಲೆ, ಕೊತ್ತಂಬರಿಸೊಪ್ಪು ಸ್ವಲ್ಪ ಮತ್ತು ಹರಳುಪ್ಪು ಹಾಕಿ ನೀರು ಹಾಕದೆ ರುಬ್ಬಿಕೊಳ್ಳಿ. 3 ಗಂಟೆಗಳ ಕಾಲ ನೆನೆಸಿ ನೀರನ್ನು ಸೋರಿಸಿ ಆರಿದ ನಂತರ ದಪ್ಪದಪ್ಪವಾಗಿ ಕಾಳುಗಳು ಇರುವಂತೆ ಕಡ್ಲೆಬೇಳೆಯನ್ನು ರುಬ್ಬಿಟ್ಟುಕೊಳ್ಳಿ. ಇದಕ್ಕೆ ರುಬ್ಬಿದ ಮತ್ತು ಕತ್ತರಿಸಿದ ಪದಾರ್ಥಗಳನ್ನು ಹಾಕಿ ನೀರು ಹಾಕದೆ ಚೆನ್ನಾಗಿ ಕಲಸಿ ಒಣ ಬಟ್ಟೆಯ ಮೇಲೆ ತಟ್ಟಿ ನಂತರ ಕಾದ ಎಣ್ಣೆಯಲ್ಲಿ ಮಧ್ಯಮ ಉರಿಯಲ್ಲಿ ಕರಿದು ತೆಗೆಯಿರಿ.



ಗರ್ಭಿಣಿಯರಿಗೆ ಮೂತ್ರಕೋಶದ ಸೋಂಕು: ಜಾಗ್ರತೆ ವಹಿಸಿ



ನಾನೀಗ ಆರು ತಿಂಗಳ ಗರ್ಭಿಣಿ. ಆಗಾಗ್ಗೆ ಕೆಳಹೊಟ್ಟೆ ಹಿಂಡಿದ ಹಾಗೆ ಆಗುತ್ತದೆ. ಒಮ್ಮೊಮ್ಮೆ ನೋವಿನ ಅನುಭವ. ಪದೇ ಪದೇ ಮೂತ್ರ ಮಾಡಬೇಕಿನಿಸುತ್ತದೆ. ವೈದ್ಯರಿಗೆ ತೋರಿಸಿದ್ದೇನೆ. ಭಯವಿಲ್ಲವೆಂದು ಹೇಳಿದ್ದಾರೆ. ಆದರೆ ಸಮಾಧಾನವಿಲ್ಲ. ಪಕ್ಕದ ಮನೆಯ ಗೆಳತಿಯೊಬ್ಬರಿಗೆ ಹೀಗೆ ಆಗಿ ಏಳು ತಿಂಗಳಿಗೆ ಹೆರಿಗೆಯಾಯಿತು. ಹಾಗಾಗಿ ಕೇಳುತ್ತಿದ್ದೇನೆ.

ಸಾವಿತ್ರಿ, ತಿಪಟೂರು.

ಸಾವಿತ್ರಿ ಅವರೇ, ನಿಮ್ಮ ವೈದ್ಯರು ಹೇಳಿದ ಹಾಗೇ ನೀವು ಭಯಪಡುವ ಅಗತ್ಯವಿಲ್ಲ. ಗರ್ಭಧಾರಣೆಯಲ್ಲಿ ಗರ್ಭಕೋಶ ಆಗಾಗ್ಗೆ ಹಿಂಡಿದ ಅನುಭವ ಆಗುವುದು ಸಹಜ. ಹೀಗೆ ಕೆಲವು ಸೆಕೆಂಡುಗಳ ಕಾಲ ಇರುತ್ತದೆ. ಒಬ್ಬರಿಗೆ ಆದ ಅನುಭವ ಮತ್ತೊಬ್ಬರಿಗೆ ಆಗಬೇಕು ಅಂಥ ಏನಿಲ್ಲ. ಇದನ್ನು ವೈದ್ಯಕೀಯ ಪರಿಭಾಷೆಯಲ್ಲಿ ಬ್ರಾಕ್ಸ್ಟನ್ ಹಿಕ್ಸ್ ಸಂಕುಚನ ಎಂದು ಕರೆಯುತ್ತಾರೆ. ಇದು ಮುಂದಾಗಲಿರುವ ಹೆರಿಗೆ ನೋವಿನ ಪೂರ್ವತಯಾರಿ. ಈ ಸಂಕುಚನ ತೀವ್ರ ಸ್ವರೂಪ ಪಡೆದು ಹೆರಿಗೆ ನೋವಾಗಿ ಕಾಣಿಸಿಕೊಳ್ಳಬಹುದೆಂಬ ಅಂದಾಜಿದೆ. ಇವುಗಳಿಂದ ಯಾವ ತೊಂದರೆಯೂ ಇಲ್ಲ. ಗರ್ಭ ಧರಿಸಿದಾಗ ನಿರ್ಜಲೀಕರಣವಾಗದಂತೆ ನೋಡಿಕೊಳ್ಳಿ. ಸಾಕಷ್ಟು ನೀರು ಕುಡಿಯುತ್ತಿರಿ. ಮೂತ್ರವನ್ನು ತುಂಬಾ ಹೊತ್ತು ತಡೆ ಹಿಡಿಯಬೇಡಿ. 6ನೇ ತಿಂಗಳಿದ್ದಾಗ ಪದೇ ಪದೇ ಮೂತ್ರಕ್ಕೆ ಹೋಗಬೇಕು ಎನಿಸುವುದು ಅಷ್ಟು ಸಹಜವಲ್ಲ. ಆರಂಭದಲ್ಲಿ ಹಾಗೂ ಕೊನೆಯ ತಿಂಗಳಲ್ಲಿ ಗರ್ಭಕೋಶ, ಮೂತ್ರಕೋಶದ ಮೇಲೆ ಒತ್ತಿದ ಹಾಗೇ ಆಗುವುದದರಿಂದ ಪದೇ ಪದೇ ಮೂತ್ರ ವಿಸರ್ಜನೆ ಸಹಜ. ಮೂತ್ರಕೋಶದ ಸೋಂಕಿದ್ದರೆ ಒಮ್ಮೆ ಪರೀಕ್ಷಿಸಿಕೊಳ್ಳಿ. ಪ್ರತಿಶತ 3 ರಿಂದ 7 ಮಂದಿ ಗರ್ಭಿಣಿಯರಲ್ಲಿ ಮೂತ್ರಕೋಶದ ಸೋಂಕು ಕಾಣಿಸಿಕೊಳ್ಳಬಹುದು. ಮೂತ್ರಸೋಂಕಿನ ಲಕ್ಷಣಗಳಾದ ಉರಿಮೂತ್ರ ಇರಬಹುದು. ಜ್ವರದ ಲಕ್ಷಣ ಕಾಣಿಸಿಕೊಳ್ಳದೇ ಇರಬಹುದು. ಆದರೂ ಬ್ಯಾಕ್ಟೀರಿಯಾಗಳು ಮೂತ್ರದಲ್ಲಿ ಇರಬಹುದು. ಮೂತ್ರವನ್ನು ಕ್ಷಾರೀಯವಾಗಿಡಲು ದಿನಕ್ಕೆ ಕನಿಷ್ಠ 4ಲೀಟರ್ ನೀರನ್ನು ಕುಡಿಯಬೇಕು. ಪದೇ ಪದೇ ಮೂತ್ರವಿಸರ್ಜನೆ ಮಾಡುತ್ತಿರಬೇಕು. ಮೂತ್ರ ತಪಾಸಣೆ ಹಾಗೂ ಅವಶ್ಯವಿದ್ದಾಗ ಕಲರ್‌ಟೆಸ್ಟ್ ಮಾಡಿಸಿ ಚಿಕಿತ್ಸೆ ಪಡೆಯಬೇಕು. ಜ್ವರ, ಪಕ್ಕೆನೋವು ಉರಿಮೂತ್ರ ಉಂಟಾದಾಗ ನಿರ್ಲಕ್ಷಿಸದೇ ತಕ್ಷಣವೇ ವೈದ್ಯರ ಸಲಹೆಯಮೇರೆಗೆ ತಪಾಸಣೆಗೊಳಗಾಗಿ ನಿರ್ದಿಷ್ಟ ಅವಧಿಯವರೆಗೆ ಸೂಕ್ತ ಆಂಟಿಬಯಾಟಿಕ್‌ಗಳಿಂದ ಚಿಕಿತ್ಸೆಪಡೆದುಕೊಳ್ಳಿ. ಬಾರ್ಲಿನೀರು, ನಿಂಬೆಹಣ್ಣಿನ ಶರಬತ್ತು ಸೇರಿ ಸಾಕಷ್ಟು ದ್ರವಾಹಾರ ಸೇವನೆ ಮಾಡಿ. ಅವಶ್ಯವಿದ್ದಲ್ಲಿ ತಜ್ಞವೈದ್ಯರ ಸಲಹೆ ಚಿಕಿತ್ಸೆ ಪಡೆಯಿರಿ.

ಸ್ಪಂದನ



ಡಾ. ವೀಣಾ ಎಸ್. ಭಟ್

ಸ್ಪಂದನ
ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಕಳುಹಿಸಬಹುದು. ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಸುಭಾಷಿತ

ಗೆದ್ದಾಗ ಅಹಂಕಾರಿಯಾದವನು ಉಳಿಯಲಾರ. ಸೋತಾಗ ಕುಸಿದುಹೋಗುವವನು ಬೆಳೆಯಲಾರ. ಗೆಲುವಿನ ಸಂಭ್ರಮ ತಲೆಗೆ ಏರದಿರಲಿ, ಸೋಲಿನ ನೋವು ಮನಸ್ಸಿಗೆ ನಾಟದಿರಲಿ.

–ಎ.ಪಿ.ಜೆ. ಅಬ್ದುಲ್ ಕಲಾಂ

ಕಲ್ಯಾಣ ಯೋಜನೆಗಳಿಗೆ ಆದ್ಯತೆ ಸಂಪನ್ಮೂಲದ್ದೇ ಕೊರತೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ₹ 3.71 ಲಕ್ಷ ಕೋಟಿ ಗಾತ್ರದ 2024–25ನೇ ಸಾಲಿನ ರಾಜ್ಯ ಬಜೆಟ್ ಅನ್ನು ಶುಕ್ರವಾರ ಮಂಡಿಸಿದ್ದಾರೆ. ಹದಿನೈದನೇ ಬಾರಿ ಬಜೆಟ್ ಮಂಡಿಸಿ ದಾಖಲೆಯನ್ನೂ ಅವರು ಬರೆದಿದ್ದಾರೆ. ಯಥಾಪ್ರಕಾರ, ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಿರುವ ಅವರು ಸಮಾಜದ ಎಲ್ಲ ವರ್ಗದವರನ್ನೂ ತಲುಪುವ ಪ್ರಯತ್ನ ಮಾಡಿದ್ದಾರೆ. ನ್ಯಾಯ, ಸಮಾನತೆ ಹಾಗೂ ಭ್ರಾತೃತ್ವದ ತಳಹದಿಯ ಮೇಲೆ 'ಕರ್ನಾಟಕ ಮಾದರಿ ಅಭಿವೃದ್ಧಿ'ಯ ಹೊಸ ದೃಷ್ಟಾಂತವನ್ನು ರೂಪಿಸುವ ಕನಸನ್ನೂ ಅವರು ಹಂಚಿಕೊಂಡಿದ್ದಾರೆ. 'ಅಹಿಂದ' ಮತ್ತು ಮಹಿಳಾ ಸಮುದಾಯದ ಮೇಲಿನ ತಮ್ಮ ಒಲವನ್ನು ಮುಖ್ಯಮಂತ್ರಿ ಢಾಳಾಗಿ ಪ್ರಕಟಿಸಿದ್ದರೂ ಇತರ ಸಮುದಾಯಗಳನ್ನೇನೂ ಕಡೆಗಣಿಸಿಲ್ಲ. ಸರ್ವರನ್ನೂ ಒಳಗೊಳ್ಳುವ ಆಶಯದ ಸಾಮಾಜಿಕ ಕಲ್ಯಾಣ ಯೋಜನೆಗಳ ಸಂಖ್ಯೆ ಹೆಚ್ಚಾಗಿರುವುದೇ ಇದಕ್ಕೆ ಸಾಕ್ಷಿ. ಲೋಕಸಭಾ ಚುನಾವಣೆಗೆ ಇನ್ನೇನು ಅಧಿಸೂಚನೆ ಹೊರಡಲಿರುವ ಈ ಹೊತ್ತಿನಲ್ಲಿ ಬಜೆಟ್ ಮಂಡನೆ ಆಗಿದ್ದರೂ ದೊಡ್ಡ ಮಟ್ಟದಲ್ಲಿ ಜನಪ್ರಿಯ ಘೋಷಣೆಗಳ ಜಾಡನ್ನು ತುಳಿಯುವ ಗೋಜಿಗೆ ಸಿದ್ದರಾಮಯ್ಯನವರು ಹೋಗಿಲ್ಲ. ಸರ್ಕಾರಿ ನೌಕರರ ಸಂಬಳ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಮತ್ತು ಸಾಲ ಮರುಪಾವತಿಯ ಬಾಬ್ತುಗಳಿಗೆ ಬಜೆಟ್‌ನ ಸಿಂಹಪಾಲು ವ್ಯಯವಾಗುತ್ತಿರುವ ಕಾರಣ ಅಭಿವೃದ್ಧಿ ಯೋಜನೆಗಳ ಅನುದಾನದ ಬರ ಎದುರಿಸುತ್ತಿರುವುದು ಮೇಲ್ನೋಟಕ್ಕೇ ವೇದ್ಯ. ಉಳಿದಿರುವುದನ್ನು ಎಲ್ಲರಿಗೂ ಹಂಚುವ ಕೆಲಸವಷ್ಟೇ ಮುಖ್ಯಮಂತ್ರಿಯವರಿಂದ ಆಗಿದೆ. ಹೀಗಾಗಿ, ಮೂಲಸೌಕರ್ಯ ವೃದ್ಧಿಗಿಂತಲೂ ಕಡಿಮೆ ಖರ್ಚಿನ ಬಯಸುವ ಮಾನವ ಸಂಪನ್ಮೂಲದ ಅಭಿವೃದ್ಧಿಯತ್ತಲೇ ಹೆಚ್ಚಿನ ಗಮನ ಹರಿಸಲಾಗಿದೆ. ತರಬೇತಿ, ಕೌಶಲಾಭಿವೃದ್ಧಿಯ ಮೂಲಕ ಮಹಿಳೆಯರು, ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತರನ್ನು ಸ್ವಾವಲಂಬಿಗಳನ್ನಾಗಿ ಮಾಡುವ ಗುರಿ ಹಾಕಿಕೊಳ್ಳಲಾಗಿದೆ. ಬರದಿಂದ ತತ್ತರಿಸಿರುವ ಕೃಷಿ ವಲಯವು ಬಜೆಟ್‌ನಿಂದ ಹೆಚ್ಚಿನದನ್ನೇ ನಿರೀಕ್ಷಿಸಿತ್ತು. ಸೋಜಿಗ ಎನ್ನುವಂತೆ, ಅನುದಾನ ಹಂಚಿಕೆಯಲ್ಲಿ ಈ ವಲಯ 'ಬರ' ಅನುಭವಿಸಿದೆ. ಮೇಕೆದಾಟು, ಭದ್ರಾ, ಕೃಷ್ಣಾ ಮೇಲ್ದಂಡೆ ಯೋಜನೆ ಸೇರಿದಂತೆ ಬೃಹತ್ ನೀರಾವರಿ ಯೋಜನೆಗಳ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಲಾಗಿದೆ. ಆದರೆ, ಅನುದಾನ ಹಂಚಿಕೆ ಕುರಿತು ಯಾವುದೇ ಸ್ಪಷ್ಟತೆ ಇಲ್ಲ. ಗ್ರಾಮ ಸರೋವರ ನಿರ್ಮಾಣ, ಕೆರೆಗಳಿಗೆ ನೀರು ತುಂಬಿಸುವುದು ಸೇರಿದಂತೆ ಏತ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಿರುವುದು ಗಮನಾರ್ಹ. ಹಾಗೆಯೇ ಎಲ್ಲ ಪ್ರದೇಶಗಳಿಗೂ ಒಂದಿಲ್ಲೊಂದು ರೀತಿಯಲ್ಲಿ ನೆರವಿನಹಸ್ತ ಚಾಚುವ ಪ್ರಯತ್ನವನ್ನು ಮಾಡಲಾಗಿದೆ.



ದೊಡ್ಡ ಘೋಷಣೆಗಳಿಲ್ಲದ ಈ ಬಜೆಟ್‌ನಲ್ಲಿ ದೂರದೃಷ್ಟಿಯ ಹಲವು ಗುರಿಗಳಿವೆ. ಆದರೆ, ಅಪೇಕ್ಷಿತ ಪ್ರಮಾಣದ ಅನುದಾನ ಇಲ್ಲದಿರುವುದೇ ಮುಖ್ಯ ಅಡ್ಡಿ

ಆಡಳಿತ ಸುಧಾರಣೆಗೂ ಒತ್ತು ನೀಡಿರುವುದು ಬಜೆಟ್‌ನ ಹೆಗ್ಗುರುತುಗಳಲ್ಲಿ ಒಂದು. ಕಟ್ಟಡಗಳನ್ನು ನೋಂದಾಯಿಸುವಾಗ ಆಯ್ದ ದಾಖಲೆಗಳ 'ಇ-ನೋಂದಣಿ'ಯನ್ನು ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ಎದುರು ಪಕ್ಷಕಾರರ ಹಾಜರಾತಿಯಿಲ್ಲದೆ ಮಾಡಲು ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ. ಯಾವುದೇ ಸಮುದಾಯದ, ಯಾವುದೇ ಸ್ಥಳದಿಂದ ನೋಂದಣಿ ಮಾಡಿಸುವ ಸೌಲಭ್ಯವನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲಾಗುತ್ತದೆ ಎಂದೂ ಪ್ರಕಟಿಸಲಾಗಿದೆ. ಗ್ರಾಮ ಪಂಚಾಯಿತಿ ಸೇವೆಗಳನ್ನು ಪಾರದರ್ಶಕಗೊಳಿಸಲು ಮತ್ತು ತ್ವರಿತವಾಗಿ ಒದಗಿಸಲು ಇ-ಆಫೀಸ್ ವ್ಯವಸ್ಥೆ ಜಾರಿಗೊಳಿಸುವುದಾಗಿ ಘೋಷಿಸಲಾಗಿದೆ. ಈ ಸೌಲಭ್ಯಗಳಿಂದ ಜನರಿಗೆ ನೇರವಾಗಿ ಪ್ರಯೋಜನ ಹಟ್ಟಲಿದೆ. ಕ್ಯಾನ್ಸರ್ ರೋಗಿಗಳಿಗೆ ಆರೈಕೆ ಹಾಗೂ ಚಿಕಿತ್ಸಾ ಸೌಲಭ್ಯ ಕಲ್ಪಿಸಲು ಪ್ರತಿ ಜಿಲ್ಲೆಯಲ್ಲಿಯೂ ಒಂದೊಂದು ಡೇ-ಕೇರ್ ಕಿಮೋಥೆರಪಿ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಆಸ್ಪತ್ರೆಗಳ ಆಗಲೀಕರಣದ ಕೆಲಸ ಇದು. ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ರಾತ್ರಿ ಒಂದು ಗಂಟೆವರೆಗೆ ವ್ಯಾಪಾರ ವಹಿವಾಟಿಗೆ ಅವಕಾಶ ಕಲ್ಪಿಸುವ ನಿರ್ಧಾರದಲ್ಲಿ ಕಾಲದ ಅಗತ್ಯಕ್ಕೆ ಸ್ಪಂದಿಸುವ ತವಕ ಇದೆ. ವಸತಿನಿಲಯಗಳು, ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಒಲವು ತೋರಲಾಗಿದ್ದು, ಶಿಕ್ಷಣದ ಮೂಲಸೌಕರ್ಯ ಹೆಚ್ಚಿಸುವ ಕೆಲಸ ನಡೆದಿದೆ. ದೊಡ್ಡ ಘೋಷಣೆಗಳಿಲ್ಲದ ಈ ಬಜೆಟ್‌ನಲ್ಲಿ ದೂರದೃಷ್ಟಿಯ ಹಲವು ಗುರಿಗಳಿವೆ. ಆದರೆ, ಅಪೇಕ್ಷಿತ ಪ್ರಮಾಣದ ಅನುದಾನ ಇಲ್ಲದಿರುವುದೇ ಮುಖ್ಯ ಅಡ್ಡಿ. ಅನುಪಯುಕ್ತ ಸರ್ಕಾರಿ ಆಸ್ತಿಗಳ ಮಾರಾಟ ಮತ್ತು ಖಾಸಗಿ ಸಹಭಾಗಿತ್ವದ ಮೂಲಕ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳುವ ಇರಾದೆಯನ್ನು ವ್ಯಕ್ತಪಡಿಸಲಾಗಿದೆ. ಆದರೆ, ಇದು ಎಷ್ಟರಮಟ್ಟಿಗೆ ಕಾರ್ಯಸಾಧು ಎಂಬ ಪ್ರಶ್ನೆ ಕಾಡುತ್ತದೆ.

ಜಿಎಸ್‌ಟಿ 'ರಾಜ್ಯಭಾರ' ಶುರುವಾದ ಮೇಲೆ ರಾಜ್ಯಗಳ ಸ್ವಂತ ವರಮಾನದ ಮೂಲಗಳು ಬಹುಪಾಲು ತಗ್ಗಿವೆ. ಖಜಾನೆಯನ್ನು ಭರ್ತಿ ಮಾಡಿಕೊಳ್ಳಲು ಕೇಂದ್ರದಿಂದ ಸಿಗುವ ತೆರಿಗೆ ಪಾಲಿಗಾಗಿ ಅವುಗಳು ಕಾಯುವುದು ಅನಿವಾರ್ಯ. ತೆರಿಗೆಯಲ್ಲಿ ರಾಜ್ಯಕ್ಕೆ ಸಿಗಬೇಕಾದ ನ್ಯಾಯಯುತ ಪಾಲು ಸಿಗುತ್ತಿಲ್ಲ ಎಂದು ಇತ್ತೀಚೆಗಷ್ಟೇ ದೆಹಲಿಗೆ ಹೋಗಿ ಪ್ರತಿಭಟನೆ ಮಾಡಿಬಂದಿದ್ದ ಸಿದ್ದರಾಮಯ್ಯ, ಕೇಂದ್ರ ಸರ್ಕಾರವನ್ನು ಟೀಕಿಸಲು ಬಜೆಟ್ ಭಾಷಣದಲ್ಲಿ ಸಿಕ್ಕ ಅವಕಾಶವನ್ನು ಬಿಟ್ಟುಕೊಟ್ಟಿಲ್ಲ. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಕೇಂದ್ರದ ವಿರುದ್ಧ ಅವರು ಧ್ವನಿ ಎತ್ತಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಿಸಲಾಗಿದೆ ಎಂದು ಮಾಹಿತಿ ನೀಡಿದ್ದ ಬಸವರಾಜ ಬೊಮ್ಮಾಯಿ ನೇತೃತ್ವದ ಈ ಹಿಂದಿನ ಸರ್ಕಾರದ ಕಾಲವನ್ನೂ ಎಳೆದಿದ್ದಾರೆ. ಆರ್ಥಿಕ ಶಿಸ್ತಿನ ಕುರಿತು ಪದೇ ಪದೇ ಪ್ರಸ್ತಾಪಿಸುವ ಸಿದ್ದರಾಮಯ್ಯ, ಯೋಜನೆಗಳ ಅನುಷ್ಠಾನಕ್ಕಾಗಿ ₹ 1.05 ಲಕ್ಷ ಕೋಟಿಯಷ್ಟು ಸಾಲ ಮಾಡಲು ಹೊರಟಿದ್ದಾರೆ. ಇದು, ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯ (ಜಿಎಸ್‌ಡಿಪಿ) ಶೇ 2.95ರಷ್ಟಾಗಲಿದೆ. ಸಾಲದ ಬಾಬ್ತು ಹೀಗೆ ಏರುತ್ತಾ ಹೋದರೆ ಹೇಗೆ ಎಂಬ ಪ್ರಶ್ನೆಯನ್ನು ಅವರು ಹಾಕಿಕೊಳ್ಳಬೇಕಿತ್ತು. ವಿತ್ತೀಯ ಕೊರತೆಯನ್ನು ತಗ್ಗಿಸುವ ಬೇರೆ ಹಾದಿಯೇ ಉಳಿದಿಲ್ಲ ಎಂಬ ಅಸಹಾಯಕತೆ ಅವರಿಂದ ಸೃಷ್ಟಿಯಾಗಿದೆ. 'ಗ್ಯಾರಂಟಿ' ಯೋಜನೆಗಳ 'ಭಾರ' ತಡೆದುಕೊಳ್ಳಲು ವರಮಾನದ ಬೇರೆ ಮೂಲಗಳ ಅವರ ಮುಂದಿದ್ದವು. ಬಜೆಟ್ ಮಂಡನೆಗೂ ಮುನ್ನವೇ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಪರಿಷ್ಕರಿಸಿರುವುದು, ಮದ್ಯದ ದರವನ್ನೂ ಹೆಚ್ಚಿಸಿರುವುದು ಮುಖ್ಯಮಂತ್ರಿಯವರ ಕೈ ಕಟ್ಟಿಹಾಕಿದೆ. ಕೇಂದ್ರದಿಂದ ಸಿಗುವ ಹೆಚ್ಚಿನ ತೆರಿಗೆ ಪಾಲಿಗಾಗಿ ಕಾಯುವುದು ಅವರಿಗೆ ಅನಿವಾರ್ಯವಾಗಿದೆ.

ದಿನದ ಟ್ವೀಟ್

'ಗ್ಯಾರಂಟಿ' ಪರೀಕ್ಷೆಗೆ ಸಕಾಲ

ಕಡಿಮೆ ಆದಾಯವಿರುವ ಜನರ ಜೇಬಿನಲ್ಲಿ ಹೆಚ್ಚು ಹಣ ಇರುವಂತಾದರೆ ಅವರು ಅದನ್ನು ಹೆಚ್ಚು ಉಪಭೋಗಿಸಲು ಬಳಸುತ್ತಾರೆ ಎನ್ನುವುದು ಅರ್ಥಶಾಸ್ತ್ರದ ತತ್ವ. ಇದು, ಆರ್ಥಿಕ ಚಟುವಟಿಕೆಗೆ ಇಂಬು ಕೊಡುವ ಮೂಲಕ ತಯಾರಿಕಾ ವಲಯದಿಂದ ಹಿಡಿದು ರಿಟೇಲ್‌ವರೆಗೆ ಎಲ್ಲ ವಲಯಗಳಲ್ಲೂ ಆರ್ಥಿಕ ಚಟುವಟಿಕೆಗೆ ಚೈತನ್ಯ ತುಂಬುತ್ತದೆ. ಉದ್ಯೋಗ ಸೃಷ್ಟಿ ಮತ್ತು ತೆರಿಗೆ ಸಂಗ್ರಹ ಹೆಚ್ಚಾಗುತ್ತದೆ. ಕರ್ನಾಟಕದಲ್ಲಿ 5 ಗ್ಯಾರಂಟಿಗಳಿಂದಾಗಿ 2024-25ನೇ ವರ್ಷವು ಈ ತತ್ವವನ್ನು ಪರೀಕ್ಷೆಗೆ ಒಳಪಡಿಸಲು ಸೂಕ್ತ ವರ್ಷವಾಗಿದೆ.

ಶ್ರೀನಿವಾಸ್ ಅಲವಿಲ್ಲಿ, ಸಹ ಸಂಸ್ಥಾಪಕ, ಸಿಟಿಜನ್ಸ್ ಫಾರ್ ಬೆಂಗಳೂರು

ಕಿಡಿನುಡಿ

ಲೋಕಸಭಾ ಚುನಾವಣೆ ಸಮೀಪಿಸು ತ್ತಿರುವ ಹೊತ್ತಿನಲ್ಲಿ ವಿರೋಧ ಪಕ್ಷದ ಬ್ಯಾಂಕ್ ಅಕೌಂಟ್‌ಗಳನ್ನು ಸ್ಥಗಿತಗೊಳಿಸುವುದು ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆಯ ಆಶಯದ ಉಲ್ಲಂಘನೆಯಲ್ಲವೇ?

ಸುಹಾಸ್ ಪಲ್‌ಶಿಕರ್, ರಾಜಕೀಯ ತಜ್ಞ

25 ವರ್ಷಗಳ ಹಿಂದೆ

ಬುಧವಾರ, 17-2-1999

ರೈಲಿನಲ್ಲಿ ಬೆಂಕಿ: 85 ಜನರಿಗೆ ಗಾಯ

ಭದ್ರಾವತಿ, ಫೆ.16– ಶಿವಮೊಗ್ಗದಿಂದ ಬೆಂಗಳೂರಿಗೆ ಹೊರಟಿದ್ದ ಎಕ್ಸ್‌ಪ್ರೆಸ್ ರೈಲಿನ ಸಾಮಾನ್ಯ ಬೋಗಿಯಲ್ಲಿ ಬೆಂಕಿ ಆಕಸ್ಮಿಕ ಸಂಭವಿಸಿ 85ಕ್ಕೂ ಹೆಚ್ಚು ಜನರು ಗಾಯಗೊಂಡ ಘಟನೆ ಇಲ್ಲಿನ ರೈಲು ನಿಲ್ದಾಣದಲ್ಲಿ ನಿನ್ನೆ ರಾತ್ರಿ ಸಂಭವಿಸಿದೆ. ಬೆಂಕಿಗೆ ನಿಖರ ಕಾರಣ ತಿಳಿದುಬಂದಿಲ್ಲ.

50 ವರ್ಷಗಳ ಹಿಂದೆ

ಭಾನುವಾರ, 17-2-1974

ಬೋಜಾ ಮಾರ್ಕ್‌ಶೀಟ್ ಜಾಲ ಪತ್ತೆ

ಬೆಂಗಳೂರು, ಫೆ. 16– ಪದವಿ ಸರ್ಟಿಫಿಕೇಟ್‌ಗಳನ್ನು ಒಳಗೊಂಡು ಬೋಜಾ ಮಾರ್ಕ್‌ಶೀಟ್, ನಾನಾ ಪರೀಕ್ಷೆಗಳ ಸರ್ಟಿಫಿಕೇಟ್‌ಗಳ ಮೊದಲಾದವನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ವಂಚಕರ ಜಾಲವೊಂದನ್ನು ನಗರ ಪೊಲೀಸರು ಪತ್ತೆಹಚ್ಚಿ ಬಯಲಿಗೆಳೆದಿದ್ದಾರೆ. ಮಕ್ಕಳು ಶ್ರಮಿಸಿದರು. ಆದರೆ, ಗವರ್ನರ್ ಜನರಲ್ ಆಗಿದ್ದ ಸಿ. ರಾಜಗೋಪಾಲಾಚಾರಿ ಮತ್ತು ಸರ್ದಾರ್ ಪಟೇಲ್ ಅವರ ಅದಕ್ಕೆ ಒಪ್ಪಲಿಲ್ಲ.

ಗೋಡ್ಸೆಗೆ ಕ್ಷಮಾದಾನ ನೀಡಲು ಗಾಂಧಿ ಪುತ್ರರಿಂದ ಮನವಿ

ನವದೆಹಲಿ, ಫೆ. 16– ಅಹಿಂಸಾ ಪ್ರವರ್ತಕ ರಾಗಿದ್ದ ಗಾಂಧೀಜಿಯವರನ್ನು ಕೊಲೆಗೈದ ನಾಥೂರಾಮ ಗೋಡ್ಸೆಗೆ ಮರಣದಂಡನೆ ವಿಧಿಸುವುದನ್ನು ತಪ್ಪಿಸಲು ಗಾಂಧೀಜಿಯವರ ಸರ್ದಾರ್ ಪಟೇಲ್ ಅವರ ಪತ್ರ ವ್ಯವಹಾರದ ಎಂಟನೆಯ ಸಂಪುಟ ಇಂದು ಬೆಳಕು ಕಂಡಿತು. ಅದರಿಂದ ಈ ಸಂಗತಿ ವ್ಯಕ್ತವಾಗಿದೆ. ಗಾಂಧೀಜಿಯವರು ಸ್ವತಃ ಮರಣ ದಂಡನೆಯನ್ನು ವಿರೋಧಿಸುತ್ತಿದ್ದುದರಿಂದ ಹಂತಕನಿಗೆ ಕ್ಷಮಾದಾನ ನೀಡಬೇಕೆಂದು ಗಾಂಧೀಜಿಯವರ ಮಕ್ಕಳಾದ ರಾಮದಾಸ್ ಗಾಂಧಿ ಮತ್ತು ಮಣಿಲಾಲ್ ಗಾಂಧಿ ಅವರು ಒತ್ತಾಯಿಸಿದ್ದುದಾಗಿ ತಿಳಿದುಬಂದಿದೆ.

ಶಾಲೆಗಳ ಮೇಲೆ ಗೂಢಚಾರಿಕೆ ನಡೆದರೆ ಅಧ್ಯಾಪಕರು ನಿರ್ಭಿಡೆಯಿಂದ ಕೆಲಸ ಮಾಡಲಾದೀತೇ?

ವೈಚಾರಿಕ ಬೋಧನೆಗೆ ಕಾರ್ಮೋಡ



ವಿಶ್ಲೇಷಣೆ

ರಂಗನಾಥ ಕಂಟನಕುಂಟೆ

ಮಂಗಳೂರಿನ ಸಂತ ಜೆರೋಸಾ ಶಾಲೆಯ ಅಧ್ಯಾಪಕಿಯೊಬ್ಬರು ಹಿಂದೂ ಧರ್ಮಕ್ಕೆ ಅಪಮಾನ ಮಾಡಿದ್ದಾರೆ ಎಂದು ಆರೋಪಿಸಿ ನಡೆದ ಪ್ರತಿಭಟನೆಯು ರೂಪದ ದೌರ್ಜನ್ಯ ಆಘಾತಕಾರಿಯಾಗಿದೆ. ಅಘಾತಕಾರಿ ಯಾಕೆಂದರೆ, ಶಾಲೆಯ ನಾಲ್ಕು ಗೋಡೆಗಳ ನಡುವೆ ನಡೆಯುವ ಪಾಠದ ವಿಚಾರಗಳು ಆ ಗೋಡೆಗಳನ್ನು ದಾಟಿ ಪೋಷಕರನ್ನು ಮುಟ್ಟಿದೆ ಮತ್ತು ಅವರನ್ನು ಕೆರಳಿಸಿವೆ. ನಂತರ ಆ ಕೆರಳಿದ ಪೋಷಕರಿಂದ ಕೆಲವು ಧಾರ್ಮಿಕ ಸಂಘಟನೆಗಳ ಮುಖಂಡರಿಗೆ ಸುದ್ದಿ ಮುಟ್ಟಿದೆ! ಆ ಸುದ್ದಿ ಅಲ್ಲಿಂದ ರಾಜಕೀಯ ಪಕ್ಷವೊಂದರ ಸದಸ್ಯರಾದ ಜನಪ್ರತಿನಿಧಿಗಳಿಗೆ ತಲುಪಿದೆ. ಸುದ್ದಿ ತಿಳಿದವರು ಶಾಲೆಗೆ ದಾಳಿ ಮಾಡಿ ಗುಡುಗಿದ್ದಾರೆ. ಪೊಲೀಸರು, ಜಿಲ್ಲಾ ಆಡಳಿತದ ಅಧಿಕಾರಿಗಳ ಎದುರಿನಲ್ಲಿಯೇ ಅಧ್ಯಾಪಕಿಯನ್ನು ಅವಮಾನಿಸಿ ಮಾಡುವಂತೆ ಆಗ್ರಹಿಸಲಾಗಿದೆ.

ಬಳಿಕ ಅದೇ ಶಾಲೆಯ ಮಕ್ಕಳನ್ನು ಒಟ್ಟುಗೂಡಿಸಿ ಕೊಂಡು 'ಹಿಂದೂ' ಧರ್ಮದ ಪರವಾಗಿ ಘೋಷಣೆ ಕೂಗಿಸಲಾಗಿದೆ. ಅದೇ ಮಕ್ಕಳು ಮಾಧ್ಯಮಗಳಿಗೆ ಸಂದರ್ಶನ ನೀಡಿ, ತಮ್ಮ ಧರ್ಮದ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ ಎಂದು ಶಿಕ್ಷಕರ ವಿರುದ್ಧ ಆರೋಪಿಸಿದ್ದಾರೆ. ಈ ಪ್ರಕರಣವು ಇನ್ನು ಮುಂದೆ ಈ ನೆಲದಲ್ಲಿ ಅಧ್ಯಾಪಕರಿಗೆ ಬೋಧನೆ ಮಾಡಲು ಸ್ವಾತಂತ್ರ್ಯ ಇಲ್ಲದನ್ನು ಮತ್ತು ಅಂತಹ ಸ್ವಾತಂತ್ರ್ಯವನ್ನು ಧರ್ಮದ ಹೆಸರಿನಲ್ಲಿ ಕಸಿದುಕೊಂಡಿರುವುದನ್ನು ಎತ್ತಿ ತೋರಿಸುತ್ತದೆ. ಅಲ್ಲದೆ, ಶಿಕ್ಷಣ ಎನ್ನುವುದು ಇನ್ನು ಮುಂದೆ ಕಂದಾಚಾರಗಳು, ಗೊಡ್ಡು ಸಂಪ್ರದಾಯಗಳ ಸ್ತುತಿಪಾಠ ಮಾತ್ರವಾಗಿರುತ್ತದೆ ಎಂಬುದನ್ನೂ ಸೂಚಿಸುತ್ತದೆ.

ಹಾಡುಹಗಲೇ ಶಾಲೆಗಳಲ್ಲಿ ಜನಾಯಾರು ರಕ್ಷಣೆಯ ಹೆಸರಿನಲ್ಲಿ ದಾಂದಲೆ ಮಾಡಿದಂತೆ ಶಾಲೆಗಳ ಮೇಲೆ ಗೂಢಚಾರಿಕೆ ಮಾಡಿಸಿ ದಾಂದಲೆ ಮಾಡಿದರೆ ಅಧ್ಯಾಪಕರು ನಿರ್ಭಿಡೆಯಿಂದ ಕೆಲಸ ಮಾಡಲು ಸಾಧ್ಯವೇ? ಅಲ್ಲಿ ಮುಕ್ತ ಚಿಂತನೆಗೆ ಮತ್ತು ಬೋಧನೆಗೆ ಅವಕಾಶವಿರಲು ಸಾಧ್ಯವೇ? ಈ ಪ್ರಶ್ನೆಗಳು ಕಾಡುತ್ತಿವೆ.

ಮಂಗಳೂರಿನ ಈ ಪ್ರಕರಣ ಹೆಚ್ಚು ಸುದ್ದಿ ಮಾಡಿದೆಯಷ್ಟೇ. ಇಂತಹ ಹಲವು ಪ್ರಕರಣಗಳು ಘಟಿಸಿವೆ ಮತ್ತು ಅವು ತಂದೊಡ್ಡುವ ಸವಾಲುಗಳನ್ನು ಅನೇಕ ಅಧ್ಯಾಪಕರು ಕಾಲೇಜುಗಳಲ್ಲಿ ನಿತ್ಯ ಒಂದಲ್ಲ ಒಂದು ಬಗೆಯಲ್ಲಿ ಎದುರಿಸುತ್ತಿದ್ದಾರೆ. ಇಲ್ಲಿ ಶಾಲೆಯ ಮಕ್ಕಳಾಗಿರುವುದರಿಂದ ಅವರು ಪೋಷಕರಿಗೆ ಸುದ್ದಿ ಮುಟ್ಟಿಸಿದ್ದಾರೆ. ಕಾಲೇಜುಗಳ ಹಂತದಲ್ಲಿ ವಿದ್ಯಾರ್ಥಿಗಳಿಂದ ಹೊರಗಿನ ಸಂಘಟನೆಗಳ ವಕ್ತಾರರಿಗೆ ನೇರವಾಗಿ ಸುದ್ದಿ ಮುಟ್ಟುತ್ತದೆ. ಆ ಮೂಲಕ ವಿದ್ಯಾರ್ಥಿಗಳ ಗುಂಪುಗೂಡಿಕೊಂಡು, ವೈಚಾರಿಕವಾಗಿ ಬೋಧನೆ ಮಾಡುವ ಅಧ್ಯಾಪಕರ ಮೇಲೆ ಮುಗಿಬೀಳುತ್ತಾರೆ. ಇಲ್ಲವೆ ಅವರ ವಿರುದ್ಧ ಅಪಪ್ರಚಾರ ಮಾಡುವುದು, ಅವರ ತರಗತಿಗಳನ್ನು ಬಹಿಷ್ಕರಿಸುವಂತಹ ಪರಿಪಾಠ ಶುರುವಾಗಿದೆ.

ಅಂದರೆ, ಇಂದು ತರಗತಿಗಳಲ್ಲಿ ನಡೆಯುವ ಚರ್ಚೆಗಳು ಹೊರಗಿನವರಿಗೆ ಮುಟ್ಟುತ್ತಿವೆಯೆಂದರೆ, ವಿದ್ಯಾರ್ಥಿಗಳು ಮುಗ್ಧತೆಯನ್ನು ಕಳೆದುಕೊಂಡು ಮಾಹಿತಿದಾರರಾಗಿ ಕೆಲಸ ಮಾಡುತ್ತಿದ್ದಾರೆಯೇ? ಮಕ್ಕಳಿಗೆ ವೈಚಾರಿಕತೆಗಿಂತ ಧಾರ್ಮಿಕ ವಿಚಾರಗಳೇ ಮುಖ್ಯವಾದವೇ? ಅಲ್ಲದೆ ಪೋಷಕರು ಮಕ್ಕಳ ಮಾತುಗಳನ್ನು ಕೇಳಿ ಆಕ್ರೋಶಗೊಂಡು ಮತ್ತಾರಿಗೋ ಸುದ್ದಿ ಮುಟ್ಟಿಸುತ್ತಿದ್ದಾರೆಂದರೆ, ಪೋಷಕರ ಮನಸ್ಸೂ ಅದೆಷ್ಟು ಮಲಿನಗೊಂಡಿರಬಾರದು? ನಮ್ಮ ಸಮಾಜ ಹೀಗೆ ಜನರಿಗೆ ಪ್ರಿಯವೆನಿಸುವ ಕೆಲವು ಧಾರ್ಮಿಕ ವಿಚಾರಗಳಿಂದ ಪ್ರೇರಣೆಗೊಂಡು ತಮ್ಮ ಧರ್ಮಕ್ಕೆ, ನಂಬಿಕೆಗಳಿಗೆ ವಿರುದ್ಧವಾದುದನ್ನು ಶಾಲೆಗಳಲ್ಲಿ ಬೋಧಿಸಲಾಗುತ್ತಿದೆ ಎಂದು ಪ್ರತಿಭಟಿಸಲು ಮುಂದಾದರೆ, ಭವಿಷ್ಯದಲ್ಲಿ ಅದೆಂತಹ ಅಂಧಕಾರ ಕವಿಯಬಹುದು?

ಯಾಕೆಂದರೆ, ಪ್ರಾಥಮಿಕ ಹಂತದಿಂದ ವಿಶ್ವವಿದ್ಯಾಲಯಗಳ ಎಲ್ಲ ಹಂತದ ಬೋಧನೆ ಮತ್ತು ಸಮಾಜವಿಜ್ಞಾನ ಪಠ್ಯಗಳನ್ನು ವೈಚಾರಿಕ ಮತ್ತು ವೈಜ್ಞಾನಿಕ ವಿಚಾರಗಳ ತಳಹದಿಯ ಮೇಲೆಯೇ ರೂಪಿಸಲಾಗಿದೆ. ಬಸವಣ್ಣ, ಕುವೆಂಪು, ಅಂಬೇಡ್ಕರ್ ಅಲ್ಲಿ ಇದ್ದೇ ಇರುತ್ತಾರೆ. ಆ ಎಲ್ಲ ಪಠ್ಯಗಳು ಯಾವುದೇ ಧರ್ಮದ ಮಡಿಯ ವಿಚಾರಗಳನ್ನು ಪ್ರತಿಪಾದಿಸುವುದಿಲ್ಲ. ಅಂತಹ ಪಠ್ಯಗಳನ್ನು ಬೋಧನೆ ಮಾಡುವಾಗ ವರ್ತಮಾನದ ಅನೇಕ ಧಾರ್ಮಿಕ ಆಚರಣೆಗಳು, ನಂಬಿಕೆಗಳು ಮತ್ತು ಭಕ್ತಿಯ ಹೆಸರಿನಲ್ಲಿ ನಡೆಯುತ್ತಿರುವ ಮೋಸಗಳನ್ನು ಉದಾಹರಣೆಯಾಗಿ ನೀಡಿಯೇ ಬೋಧನೆ ಮಾಡಬೇಕಾಗುತ್ತದೆ. ಅಂದರೆ, ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿನ ವಿವಿಧ ಹಂತಗಳ ಕಲಿಕಾ ಪಠ್ಯಕ್ರಮಗಳಲ್ಲಿ ವೈಚಾರಿಕ ಪಠ್ಯಗಳು ಅಡಕವಾಗಿವೆ. ಅಂತಹ ಹಲವು ಪಠ್ಯಗಳನ್ನು ಅಧ್ಯಾಪಕರಾದವರು ಪಾಠ ಮಾಡಲೇಬೇಕಿದೆ.

ಕೆಲವು ಪಠ್ಯಗಳನ್ನಂತೂ ಹೆಚ್ಚು ವಿವರಿಸುವ ಅಗತ್ಯವೂ ಇರುವುದಿಲ್ಲ. ಆ ಪಠ್ಯಗಳು ಇರುವಂತೆ ಜೋರಾಗಿ ಓದಿದರೂ ಅವು ಎಲ್ಲ ಮಡಿಯ ಧರ್ಮಗಳ, ಜಾತಿಗಳ ಮತ್ತು ಅಸಮಾನತೆಯ ಮೌಲ್ಯಗಳ ಪೊಳ್ಳುತನವನ್ನು ಎತ್ತಿ ತೋರಿಸುತ್ತವೆ. ಇತ್ತೀಚಿನ ದಿನಗಳಲ್ಲಿ ತರಗತಿಗಳಲ್ಲಿ ಇಂತಹ ಪಠ್ಯಗಳನ್ನು ಬೋಧಿಸುವುದೇ ಸವಾಲಾಗಿದೆ. ಇಂತಹ ಪಠ್ಯಗಳನ್ನು ಬೋಧಿಸುತ್ತಿದ್ದರೆ ಹೊರಗಿನ ಸಮಾಜ ಇಲ್ಲವೇ ಕೋಮುವಾದಿ ಚಿಂತನೆಗಳಿಂದ ಪ್ರಭಾವಿತವಾಗಿರುವ ಕುಟುಂಬಗಳಲ್ಲಿ ಬೆಳೆದು ಬರುತ್ತಿರುವ ಮಕ್ಕಳು ಆ ಪಠ್ಯಗಳನ್ನು ಮತ್ತು ಪಾಠ ಹೇಳುವ ಅಧ್ಯಾಪಕರನ್ನು ವಿರೋಧಿಸುತ್ತಿರುವುದು ನಡೆದಿದೆ. ವೈಚಾರಿಕವಾಗಿ ಪಾಠ ಮಾಡಬೇಕಿರುವುದು ಹೊಣೆಯರಿತ ಅಧ್ಯಾಪಕರ ನಿಜವಾದ ಕರ್ತವ್ಯ.



ಅದರಲ್ಲಿಯೂ ಜಾತಿ, ಲಿಂಗ ಮತ್ತು ವರ್ಗ ಅಸಮಾನತೆ ವ್ಯಾಪಕವಾಗಿರುವ ಸಮಾಜದಲ್ಲಿ ಮುಕ್ತ ಚಿಂತನೆಗೆ ಮತ್ತು ಅಭಿವ್ಯಕ್ತಿಗೆ ಅವಕಾಶ ಉಳಿಸಬೇಕು. ಅಂತಹ ಅವಕಾಶ ಬಳಸಿಕೊಂಡು ಅಧ್ಯಾಪಕರು ತಮ್ಮ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಆಗ ಮಾತ್ರವೇ ಉತ್ತಮ ಮತ್ತು ಸಮ ಸಮಾಜ ರೂಪಿಸಲು ಸಾಧ್ಯ. ಆದರೆ ಇಂದು ಅಂತಹ ಕರ್ತವ್ಯವನ್ನೇ ನಿರ್ವಹಿಸಲಾರದಂತಹ ಪರಿಸ್ಥಿತಿಯನ್ನು ವ್ಯವಸ್ಥಿತವಾಗಿ ರೂಪಿಸಲಾಗುತ್ತಿದೆ. ಇದಕ್ಕೆ ಅಧ್ಯಾಪಕರೂ ಹೊಂದಿಕೊಳ್ಳುತ್ತಿರುವಂತೆ ಕಾಣಿಸುತ್ತಿದೆ.


ಅಂದರೆ, ವೈಚಾರಿಕ ಪಠ್ಯಗಳನ್ನು ಬೋಧನೆ ಮಾಡುವುದೇ ಅಪರಾಧ ಎನ್ನುವ ಸ್ಥಿತಿಯಿದೆ. ಹಾಗಾದರೆ ಶಿಕ್ಷಣದ ಮೂಲಭೂತ ತತ್ವವಾದರೂ ಏನು? ಮಕ್ಕಳು ಏನನ್ನು ಕಲಿಯಬೇಕು? ಪೋಷಕರು ತಮ್ಮ ಮಕ್ಕಳಿಗೆ ಏನನ್ನು ಕಲಿಸಲು ಬಯಸುತ್ತಿದ್ದಾರೆ? ವೈಚಾರಿಕತೆಯನ್ನು ಕೊಂದು ಬರೀ ಮಾಹಿತಿಗಳನ್ನು ತುರುಕುವುದೇ ಶಿಕ್ಷಣ ಎಂದು ಪೋಷಕರು ಅರ್ಥಾತ್ ಇಂದಿನ ಸಮಾಜ ನಂಬಿದೆಯೇ ಎಂಬ ಪ್ರಶ್ನೆಗಳು ಹುಟ್ಟುತ್ತವೆ.

ವೈಚಾರಿಕತೆಯನ್ನು ಮಕ್ಕಳು, ಪೋಷಕರು ಅರ್ಥಾತ್ ಸಮಾಜ ನಿರಾಕರಿಸುತ್ತಿವೆ ಎಂದರೆ ಮುಂದಿನ ತಲೆಮಾರು ಹೇಗೆ ರೂಪುಗೊಳ್ಳಬಹುದು? ಇದನ್ನು ನೆನೆದರೆ ಮನದಲ್ಲಿ ಭೀಕರ ಕತ್ತಲು ಆವರಿಸಿಕೊಳ್ಳುತ್ತದೆ. ಬಸವಣ್ಣ 'ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ' ಎಂದರು. ಆದರೆ ಇಂದು ಅಜ್ಞಾನವು ಜ್ಞಾನದ ಮೇಲೆ ದಬ್ಬಾಳಿಕೆ ನಡೆಸುತ್ತದೆ. ಹೀಗೆ ನಡೆಸುವುದರಿಂದ 'ಅಲ್ಲಿಯವರೆಗೂ ಕನ್ನಡದ ಮುಖ್ಯವಾಹಿನಿಯಲ್ಲಿ ಜೀವಂತವಾಗಿ ಇಟ್ಟುಕೊಂಡು ಬಂದಿರುವ ವೈಚಾರಿಕ ಪರಂಪರೆಯ ಮೇಲೆ ಮಣ್ಣೆಳೆಯಲಾಗುತ್ತದೆ. ಬುದ್ಧ, ಬಸವಣ್ಣ, ಕನಕ, ಪರಿಯಾರ, ಸಾವಿತ್ರಿಬಾಯಿ ಫುಲೆ, ಗಾಂಧಿ, ಅಂಬೇಡ್ಕರ್, ಕುವೆಂಪು, ಶಿವರಾಮ ಕಾರಂತ, ಲಂಕೇಶ್, ದೇವನೂರ ಮಹಾದೇವ ಮತ್ತು ಆ ನಂತರದ ತಲೆಮಾರು ಕಟ್ಟುತ್ತಿರುವ ಮನುಷ್ಯಪರವಾದ ಉದಾತ್ತ ಚಿಂತನೆಗಳನ್ನು ಗೋರಿಗಳಲ್ಲಿ ಹೂತಿಡಬೇಕಾಗುತ್ತದೆ.

ನಮ್ಮ ಪೋಷಕರು ಇಂದಿನ ಖಾಸಗಿ ಶಿಕ್ಷಣ ವ್ಯವಸ್ಥೆಯಲ್ಲಿ ದುಡಿದ ಹಣ ತೆತ್ತು ಅಜ್ಞಾನವನ್ನು ಕೊಂಡುಕೊಳ್ಳಬೇಕಾಗುತ್ತದೆ. ಉದ್ಯಮಪತಿಗಳು ಮತ್ತು ಸನಾತನವಾದಿಗಳ ಹಿತಾಸಕ್ತಿ ಕಾಪಾಡಲು ಅನುಕೂಲಕರವಾಗಿರುವುದನ್ನೇ ನಿಜವಾದ ಶಿಕ್ಷಣ ಎನ್ನುವಂತೆ ಬಿಂಬಿಸಲಾಗುತ್ತಿದೆ. ಅದನ್ನೇ ಇಂದಿನ ಸಮಾಜ ದೊಡ್ಡ ಆದರ್ಶವಾಗಿ ಸ್ವೀಕರಿಸುತ್ತಿದೆ.

ಇಂತಹ ಅನೇಕ ಬದಲಾವಣೆಗಳಿಂದ ನಮ್ಮ ಶೈಕ್ಷಣಿಕ ಕ್ಷೇತ್ರದಲ್ಲಿ ಈಗಾಗಲೇ ದೊಡ್ಡದೊಂದು ಸಂಘರ್ಷವಿದೆ. ಇದಕ್ಕೆ ತಡೆಯೊಡ್ಡದಿದ್ದರೆ ಮುಂದಿನ ದಿನಗಳು ಮತ್ತೂ ಭೀಕರವಾಗಿರುತ್ತವೆ. ಹಾಗಾಗಿ, ಇಂದಿನ ಸರ್ಕಾರ ಈ ಅಪಾಯವನ್ನು ಅರಿತು ರಾಜ್ಯದ ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಬೋಧನೆಗೆ ಮುಕ್ತ ವಾತಾವರಣ ಇರುವಂತೆ ನೋಡಿಕೊಳ್ಳಬೇಕು. ಬೋಧನೆ ಮತ್ತು ಕಲಿಕೆಯ ಪ್ರಕ್ರಿಯೆಯಲ್ಲಿ ಮೌಢ್ಯವನ್ನು ಸಾಮಾನ್ಯಗೊಳಿಸದಂತೆ ನೋಡಿಕೊಳ್ಳಬೇಕು. ಹೊರಗಿನ ಶಕ್ತಿಗಳು ಶಿಕ್ಷಣ ಸಂಸ್ಥೆಗಳ ಒಳಗೆ ನುಸುಳದಂತೆ ನೋಡಿಕೊಳ್ಳಬೇಕು. ಈ ಬಗ್ಗೆ ಇಡೀ ಸಮಾಜ ಹೊಣೆಯರಿತು ತನ್ನ ಕರ್ತವ್ಯ ನಿಭಾಯಿಸಬೇಕು. ಇಲ್ಲವಾದಲ್ಲಿ ನಮ್ಮ ಒಟ್ಟು ಶಿಕ್ಷಣ ವ್ಯವಸ್ಥೆ ನಾಶವಾಗಿ ಇಡೀ ಸಮಾಜ ಅಜ್ಞಾನದಲ್ಲಿ ಕೊಳೆಯ ಬೇಕಾಗುತ್ತದೆ.

ಚುರುಮುರಿ



ನಮ್ಮ ತೊಕ್ಕು, ನಮ್ಮ ಹಕ್ಕು!

• ತುರುವೇಕೆರೆ ಪ್ರಸಾದ್

ಮನೆಯಲ್ಲಿ ಗಂಭೀರ ವಾತಾವರಣ ಮಧ್ಯೆ ಮೀಟಿಂಗ್ ನಡೆಯುತ್ತಿತ್ತು: 'ಮನೆ ಆದಾಯದ ಹಂಚಿಕೆ ಸರಿಯಾಗಿ ಆಗ್ತಿಲ್ಲ' ಆಕ್ಷೇಪಿಸಿದರು ಪದ್ಮಮ್ಮ.

'ಹೌದು, ನನ್ ಪಾಕೆಟ್‌ಮನಿ ಎಸ್‌ಎಸ್‌ಎಲ್‌ಸಿ ಇದ್ದಷ್ಟೇ ಈಗ್ಲೂ ಇದೆ. ಸರ್ಕಾರನೇ ಯುವನಿಧಿ ಕೊಡುತ್ತೆ, ಅಪ್ಪ ಆಗಿ ಇನ್ನೂ ನನ್ ಪಾಕೆಟ್‌ಮನಿ ರಿವಿಷನ್ ಮಾಡಿಲ್ಲ ಅಂದ್ರೆ ಶೇಮ್ ಅನ್ನುತ್ತೆ' ಕೂಗಿದ ಕುಮಾರ ಕಂಠೀರವ.

'ಹೌದಪ್ಪ, ನನಗೆ ಕೊಡ್ತಿರೋದು ಅಷ್ಟಕ್ಕಷ್ಟೆ! ಮೇಕಪ್‌ಗಾದ್ರೆ ಲಾಲಿಪಪ್‌ಗಿಲ್ಲ, ಲಾಲಿಪಪ್‌ಗಾದ್ರೆ ಕಡ್ಡಾಪ್ಪಿಗಿಲ್ಲ ಅನ್ನೋ ಹಾಗಾಗಿದೆ' ಮಗಳು ಪಮ್ಮಿನೂ ಕೋರಸ್ ಅಂದಳು.

'ಹಾಗೆಲ್ಲಾ ಏನಿಲ್ಲ, ನಾಲ್ಕು ವರ್ಷದ ಕೆಳಗೆ ಏನು ಒಪ್ಪಂದ ಆಗಿತ್ತೋ ಅದೇ ಥರ ಎಲ್ಲರಿಗೂ ಕೊಡ್ತಿದೀನಿ'.

'ನಿಮ್ ಸಂಬಳ ಜಾಸ್ತಿ ಆಗಿದೆ. ಊರಲ್ಲಿ ಹುಣಿಸೇಹಣ್ಣು, ತೆಂಗಿನಕಾಯಿ ಮಾರಿದ್ ದುಡ್ಡೂ ನೀವೇ ತಗೋತೀರ, ಗುಂಬಿ ಏರಿಯಾ ಮಾರಿದ್ ಇನ್‌ಕಂನಲ್ಲೂ ನಮಗೆ ಪಾಲು ಕೊಡಲ್ಲ, ಮೇಲೆ ಪೆನ್‌ಷನ್ ನೀವೇ ಯಾಕ್ ಸಾಲ್ ಮಾಡಿ ಬೈಕ್ ಕೊಡಿಸಲ್ಲ. ನಾವು ಎಲ್ಲಾ ಇನ್ನೆಷ್ಟು ಹೋತಾ? ನಮಗೆ ನ್ಯಾಯ ಬೇಕು' ಅಂದ್ರು ಪದ್ಮಮ್ಮ.

'ಹೌದು! ನಮ್ಮ ಹುಣಿಸೇತೊಕ್ಕು, ನಮ್ಮ ಹಕ್ಕು' ಎಂದು ಮೂವರೂ ಕೂಗಿದರು. 'ನೋಡಿ, ನೀವು ಕೇಳಿದರಲ್ಲಿ ಕೊಡುತ್ತಾರೆ, ನನ್ ಚಿಕ್ಕಪ್ಪನ ಮಕ್ಕಳ ಜವಾಬ್ದಾರಿನೂ ನನ್ ಮೇಲಿದೆ ಅನ್ನೋದು ಮರೀಬಾರ್ದು ಇಲ್ಲ'.

'ಆ ಉತ್ತರೀಗೂ, ವಿಹಾರಿಗೂ ನೀವ್ಯಾಕ್ ನಮ್ ದುಡ್ಡು ಕೊಡ್ತೀರಾ?'

'ಒಟ್ಟಿಗೆ ಇದ್ದಮೇಲೆ ಎಲ್ಲರ ಯೋಗಕ್ಷೇಮನೂ ನೋಡ್ಬೇಕಲ್ಲಾ? ನೀವು ಇದೆಲ್ಲಾ ಯೋಚ್ನೆ ಮಾಡ್ದೆ ದುಡ್ಡನ್ನ್ ಕ್ಟಿ ನನ್ನ ಬಗ್ಗೆ ಇಲ್ಲದ್ದೆಲ್ಲ ಹೇಳ್ತಿದೀರಿ. ಇತ್ತೀಚೆಗೆ ಅವರನ್ನ ಮದ್ವೆಮನೆಗಟ್ಟಿಸಿದರಿಂದ ಕರ್ಪೋರಿಟ್ ಬಂದು ಇಲ್ಲಿ ಇಲ್ಲಿ ನನ್ನೊಂದು ನಾನು'.

'ನೀವು ಅಧಿಕಾರ ಚಲಾಯಿಸ್ತಿ ಆಪಾದನೆಯನ್ನ ಹಿಡಿದು ಎಲ್ಲಾ ಮಂಗ್ತಾಟ ಆಡ್ತಾ ಅಪ್ಪ ನೋಡ್ಕೊಂಡು ಸುಮ್ನೆ ಇರೋಕಾ? ಈಗ ನಮಗೆ ಬಡವನೆ ಇದೆ. ನಾವು ಹೇಳ್ತಿದ್ದೇವೆ. ಕಮಲದ ಗಾದೆ, ಕೈ ದಿಡಿಸುತ್ತಿ ಗ್ಯಾರಂಟಿ ಬನ್ನಿ... ಪ್ರತಿಪಕ್ಷದ ಗಲಾಟೆ ಅವರೇ, ಸಿಬಿಎಸ್ ಚೇಂಜ್ ಆಗ್ತದೆ!' ನಕ್ಕರು ಪದ್ಮಮ್ಮ, ಪರ್ಮೇಶಿ ಮಾತು ಹಿಂಡಿದ.

ಸಂಗತ

ಕನ್ನಡ ಚಲನಚಿತ್ರ: ಬೇಕು ಭಿನ್ನ ರೂಪ

ಅರ್ಥಪೂರ್ಣ ಚಲನಚಿತ್ರ ನಿರ್ಮಾಣದ ಬಗೆಗಿನ ಚರ್ಚೆ ಇಂದಿನ ಅಗತ್ಯ

• ಎಚ್.ಎಸ್.ಮಂಜುನಾಥ

ಚಲನಚಿತ್ರ ಮಾಧ್ಯಮ, ರಂಗ ಒಂದು ಮಹಾಸಮುದ್ರ. ಅಲ್ಲಿ ಅಗಾಗ ಅಲೆಗಳು ಏಳುತ್ತಿರುತ್ತವೆ. ಕನ್ನಡ ಚಲನಚಿತ್ರದ ಇತಿಹಾಸವನ್ನು ಗಮನಿಸಿದರೆ, ಒಂದು ಕಾಲಘಟ್ಟದ (1970, 80ರ ದಶಕಗಳು) ಸಿನಿಮಾಗಳನ್ನು ಹೊಸ ಅಲೆಯ ಚಿತ್ರಗಳು ಎಂದು ಕರೆಯಲಾಗುತ್ತದೆ. ಪ್ರಯೋಗಾತ್ಮಕ, ಆರ್ಟ್‌ಫಿಲ್ಮ್, ಪ್ಯಾರಲಲ್ (ಸಮಾನಾಂತರ), ಇಂಡೀ (ಸ್ವತಂತ್ರ), ಪರ್ಯಾಯ ಎಂದೆಲ್ಲ ಹೆಸರುಗಳಿಂದಲೂ ಈ ವರ್ಗದ ಚಿತ್ರಗಳನ್ನು ಗುರುತಿಸುವ ಪರಿಪಾಟ ಇದೆ.

ಎನ್.ವಿದ್ಯಾಶಂಕರ್ ತಮ್ಮ ಲೇಖನ ಸಂಗ್ರಹ 'ಸಿನಿಮಾ- ಕಲೆ- ಸಂಸ್ಕೃತಿ'ಯಲ್ಲಿ ಇಂತಹ ಇಪ್ಪತ್ತೆರಡಕ್ಕೂ ಹೆಚ್ಚು ಚಿತ್ರಗಳನ್ನು ಹೆಸರಿಸಿದ್ದಾರೆ. 'ಫ್ರೆಂಚ್ ನ್ಯೂ ವೇವ್'ನಂತೆ ಕನ್ನಡದ ಹೊಸ ಅಲೆಗೂ ವ್ಯಾಪ್ತಿ ಇದೆ. ನಮ್ಮ ಈ ಸಿನಿಮಾಗಳು 'ಇಟಾಲಿಯನ್ ನಿಯೊರಿಯಲಿಸಂ' ಚಳವಳಿಯನ್ನು ಆಧರಿಸಿವೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಮುಂದುವರಿದು, ಕನ್ನಡದಲ್ಲಿ ಹೊಸ ಅಲೆ ತನ್ನ ಆವರಣವನ್ನು ಕಂಡುಕೊಂಡ ಬಗೆ ಕುರಿತು ಎಂದು ವಿಶ್ಲೇಷಿಸುವ ಪ್ರಯತ್ನವನ್ನೂ ಮಾಡಿದ್ದಾರೆ. ತೊಂಬತ್ತರ ದಶಕದಿಂದ ಈಚೆಗೆ ಕೆಲವು ಭಿನ್ನ ರೀತಿಯ ಚಿತ್ರಗಳು ಹೊರಬಂದಿದ್ದರೂ ಅದು ಒಂದು ಟ್ರೆಂಡ್ ಅಥವಾ ಚಳವಳಿಯ ಸ್ವರೂಪ ಪಡೆದಿಲ್ಲ. 2000ದಿಂದ ಈಚೆಗೆ ಗಿರೀಶ ಕಾಸರವಳ್ಳಿ, ಟಿ.ಎಸ್.ನಾಗಾಭರಣ, ಪಿ.ಶೇಷಾದ್ರಿ, ಬರಗೂರು ರಾಮಚಂದ್ರಪ್ಪ ಅವರು ತೊಡಗಿಕೊಂಡ ಕೆಲವು ಚಿತ್ರಗಳು ಪ್ರಶಸ್ತಿ, ಪ್ರಶಂಸೆ ಪಡೆದವು, ಚಿತ್ರೋತ್ಸವಗಳಲ್ಲಿ ಪ್ರದರ್ಶನವನ್ನೂ ಕಂಡವು. ಆದರೆ ಚಿತ್ರಮಂದಿರಗಳಿಗೆ ಬಂದಾಗ ಹೆಚ್ಚಿನವು ನಿರೀಕ್ಷಿತ ಜನಮನ್ನಣೆ ಗಳಿಸಲಿಲ್ಲ. ಕೊರೊನಾ ಕಾಲದಲ್ಲಿ ಒಟಿಟಿಯಂತಹ ಮಾರ್ಗಗಳು ತೆರೆದುಕೊಂಡವು. ಆದರೆ ಕನ್ನಡದ ಚಿತ್ರಗಳಿಗೆ ಅಲ್ಲಿ ಹೆಚ್ಚಿನ ಅವಕಾಶ ಸಿಗಲಿಲ್ಲ.

2023ರ ಫಸಲನ್ನು ಅವಲೋಕಿಸಿದಾಗ, ಯಶಸ್ಸು ಅಥವಾ ಪರಿಣಾಮಗಳ ಎನ್ನುವಂತಹ ಸಾಧನ ತೋರಿದ ಕನ್ನಡ ಚಿತ್ರಗಳ ಶೇಕಡಾವಾರು ಪ್ರಮಾಣ ಕಡಿಮೆ. ಅವುಗಳಲ್ಲಿ ಭಿನ್ನ, ಪ್ರಯೋಗಶೀಲ ಎನಿಸಬಲ್ಲವು ಬೆರಳೆಣಿಕೆಯಷ್ಟು ಮಾತ್ರ. ಹಾಗಾಗಿ, ಅರ್ಥಪೂರ್ಣ ಚಲನಚಿತ್ರ ನಿರ್ಮಾಣದ ಬಗೆಗಿನ ಚರ್ಚೆ ಇಂದಿನ ಅಗತ್ಯ. ಸೃಜನಶೀಲ ಸ್ತರದಲ್ಲಿ ಎಂದು ದೃಷ್ಟಿಯಿಂದ ನೋಡೋಣ. 'ಹೊಸ ಅಲೆಯ ಕತೆಗಳಲ್ಲಿ ಸಾಮಾನ್ಯವಾಗಿ ಫ್ರೆಂಚ್ ನ್ಯೂ ಸಾಹಿತ್ಯದಿಂದ ಪ್ರಭಾವಿತವಾದ ಸಾಹಿತ್ಯ ಕೃತಿಗಳನ್ನು ಆಧರಿಸಿವೆ. ಆದರೆ ಸಿನಿಮಾದ ರೂಪ ಪಡೆದುಕೊಂಡದ್ದು ಫ್ರೆಂಚ್ ಹೊಸ ಅಲೆ ಸಿನಿಮಾಗಳ ಪ್ರಭಾವದಿಂದಲ್ಲ' ಎಂದಿದ್ದಾರೆ ವಿದ್ಯಾಶಂಕರ್. 'ಅದರ ಪ್ರವರ್ತಕರು ಮಂಡಿಸಿದ ತಾತ್ವಿಕ ತಳಹದಿಯಾಗಲೀ ತಾಂತ್ರಿಕ ಪ್ರಯೋಗಗಳಾಗಲೀ ನಮ್ಮಲ್ಲಿ ಕಂಡುಬರುವುದಿಲ್ಲ. ಪಾರಂಪರಿಕ ಕಥನಕಲೆಗಳನ್ನು ಬದಲಾಯಿಸುವುದಾಗಲೀ ಆಮೂಲಾಗ್ರ ಚಿತ್ರಕೆಗಳನ್ನು ಕಟ್ಟುವಂತಹ ಪ್ರಯೋಗಗಳಾಗಲೀ ಕನ್ನಡದ ಹೊಸ ಅಲೆಯ ಉದ್ದೇಶವಾಗಿರಲಿಲ್ಲ' ಎಂದೂ ಹೇಳಿದ್ದಾರೆ.

ತಮ್ಮ ಮೇಲೆ ಯಾವ ಪ್ರಭಾವ ಇತ್ತು ಹಾಗೂ ತಮ್ಮ ಉದ್ದೇಶ ಏನಿತ್ತು ಎಂದು ಈಗಾಗಲೇ ಕಾಯಮಿನಿಸಿರಾಗಿರುವ ಆ ನಿರ್ದೇಶಕರೇ ಈಗ ವ್ಯಕ್ತಿಕ್ಕೆ ವಿವರಣೆ ನೀಡಬಹುದು ಸರಿಯಾದೀತು. 'ತಾತ್ವಿಕ ಚೌಕಟ್ಟು, ಆ ತಾತ್ವಿಕತೆಯನ್ನು ಅಳವಡಿಸಿಕೊಂಡಂತಹ ಚಿತ್ರಗಳು ಇಂತಹ ಒಂದು ಹಿನ್ನೆಲೆ ಕನ್ನಡ 'ಹೊಸ ಅಲೆ'ಯ ಚಿತ್ರಗಳಿಗೆ ಇಲ್ಲದಿರುವುದರಿಂದ 'ಇವು ಪ್ರೇಕ್ಷಕರನ್ನ ನಿಧಾನ 'ಗತಿ'ಯ ಚಿತ್ರಗಳು ಸಿನಿಮಾದಿಂತ ಹೆಚ್ಚಾಗಿ ಒಂದು ಪಠ್ಯಪುಸ್ತಕವಾಗಿ ಕಂಡಿರುವುದು 'ಆರ್ಟ್ ಫಿಲ್ಮ್' ಎಂಬ ವಿದ್ಯಾಶಂಕರ್ ಅವರ ಅಭಿಪ್ರಾಯಕ್ಕೆ ಅವರು ಸಾಮೂಹಿಕವಾಗಿ ಪ್ರತಿಕ್ರಿಯಿಸಬಹುದಾಗಿದೆ.

'ಗಿರೀಶ ಕಾಸರವಳ್ಳಿ ಅವರ ಚಿತ್ರಗಳು ಕನ್ನಡಕ್ಕೆ ಪ್ರಾತಿನಿಧಿಕವಾಗಿ ಉಳಿದಿವೆಯೇ ವಿನಾ ಕನ್ನಡ ಸಂಸ್ಕೃತಿಯ ಒಳಗೆ ಪೂರಕವಾಗಿ ಬೆಳೆಯಲಿಲ್ಲ. ಅವರ ಚಿತ್ರಗಳು ತಲುಪಬೇಕಾದಷ್ಟು ಪ್ರೇಕ್ಷಕರನ್ನು ತಲುಪದಿರಲು ವಾಣಿಜ್ಯಕ ಕಾರಣಗಳ ಜತೆ ಕೆಲವು ಸಾಂಸ್ಕೃತಿಕ ಕಾರಣಗಳೂ ಇರಬಹುದು' ಎಂದು ವಿಶ್ಲೇಷಣೆಯ ಜತೆಗೆ ಇತರ ನಿರ್ದೇಶಕರಲ್ಲಿ ಎರಡು ಗುಂಪುಗಳನ್ನು ಸೂಚಿಸಲಾಗಿದೆ: ಹೆಚ್ಚು ಜನಪ್ರಿಯ ವಾಗುವ ಅಪೇಕ್ಷೆ ಉಳ್ಳವರು, ಜನಪ್ರಿಯತೆಯ ಅಪೇಕ್ಷೆಗೆ ಒಳಗಾಗದವರು. ತಾವು ಯಾವ 'ಗುಂಪಿ'ಗೆ ಸೇರಿದವರು ಎಂಬುದನ್ನು ಆ ನಿರ್ದೇಶಕರೇ ಗುರುತಿಸಿಕೊಳ್ಳುತ್ತಾರೋ ಅಥವಾ ಪತ್ರಕರ್ತರು, ವಿಮರ್ಶಕರು ಹಾಗೂ ಈ ಬಗೆಯ ಚಿತ್ರಗಳ ವೀಕ್ಷಕರು ನಿರ್ಧರಿಸಬೇಕೋ?



ಕನ್ನಡದ ಹೊಸ ಅಲೆಯ ಚಿತ್ರಗಳು ಅನುಸರಿಸಿದ ಆ 'ಇಟಾಲಿಯನ್ ನಿಯೊರಿಯಲಿಸಂ ಚಳವಳಿ 1948ರಲ್ಲಿ ಅಂತ್ಯ ಕಂಡಿತು (ಕೆಲವರ ಪ್ರಕಾರ 1952ರಲ್ಲಿ). ಆದರೆ ಫ್ರೆಂಚ್, ಇರಾನಿಯನ್ ಹೊಸ ಅಲೆ ಚಿತ್ರಗಳ ಮೇಲೂ ಪ್ರಭಾವ ಬೀರಿತ್ತು. ಅದು ಎಡಪಂಥೀಯ ಚಳವಳಿ ಆಗಿತ್ತು ಹಾಗೂ ಅದರ ಮೇಲೆ ಬ್ರಿಟನ್ ಸಿನಿಮಾ 'ಸೂಪರ್' ಮೇಲೂ ಅದರ ಪರಿಣಾಮ ಇತ್ತು.

ಈಗ ಎರಡು ಯುದ್ಧಗಳು ನಡೆಯುತ್ತಿದ್ದರೂ ಆಗಿನ ಎರಡನೇ ವಿಶ್ವ ಸಮರದ ಕಾರಣ ಹಾಗೂ ಪರಿಣಾಮಗಳ ಸ್ಥಿತಿಗತಿ ಇಲ್ಲ. ಅದರ ಆಗಿನ ಚಿತ್ರ ಚಳವಳಿಯ ಹಿನ್ನೆಲೆಯ ಅಸ್ತಿತ್ವದಲ್ಲಿದ್ದ ಸಾಮಾನ್ಯ ಮಾನವನ ಬದುಕಿನ ಚಿತ್ರವು ಈಗಲೂ ಸಂಗತವಾಗಿದೆ. ಇಲ್ಲಿ ಅಂತಹ ಚಲನಚಿತ್ರಗಳ ಭಾಷಿಕ, ಸಾಂಸ್ಕೃತಿಕ ಎನ್ನುವಂತಿಲ್ಲ. ಅವು ಸ್ವತಂತ್ರ ನಿರ್ದೇಶಕರಿಂದ ಬೆಳೆದುಬಂದವು ಎಂದು ನಿರೀಕ್ಷಿಸಲಾಗಿದೆ. ಫಿಲ್ಮ್ ತಂತ್ರಜ್ಞಾನ ಬೆಳೆದಿದೆ. ಫಿಲ್ಮ್ ಮೇಕಿಂಗ್ ಸರಳಗೊಂಡಿದ್ದರೂ ದುಬಾರಿ. ಕನ್ನಡ ಸಿನಿಮಾ ಪರಂಪರೆಯ ಅನೇಕ ಹೊಸ ನಿರ್ದೇಶಕರಿಗೆ ಆಪ್ತಾಗಿ ಇರಲಿಕ್ಕಿಲ್ಲ. ಅದರ ಕತೆಗಳಿಗಾಗಿ ಹೊರಗೆ ನೋಡಬೇಕಿಲ್ಲ, ಹಾಲಿವುಡ್, ಬಾಲಿವುಡ್, ನೆರೆಯೂರಿನ ಚಿತ್ರರಂಗಗಳು ಅವರನ್ನು ಪ್ರಭಾವಿಸಬಹುದು‌. ಆ ಪ್ರಭಾವ ಕರಾವಳಿಯಂತೆ ಅವರ ಚಿತ್ರ ಗಳಲ್ಲೂ ಸರವಾಗಿರಬಹುದು.

'ಸರ್ವಜ್ಞ ಮತ್ತೊಮ್ಮೆ ಹುಟ್ಟಿ ಬಾ' ಎಂಬ ಹಾಡಿದೆ. ಹಾಗೇ ಕನ್ನಡದಲ್ಲಿ 'ಹೊಸ ಅಲೆ ಚಿತ್ರಗಳು' ಬೇರೊಂದು ರೂಪ ತಾಳಿ ಬರಲಿ.

ವಾಚಕರ ವಾಣಿ

ಇಂಗ್ಲಿಷ್ ಮಾಧ್ಯಮ ಶಾಲೆ ತೆರೆಯುವ ಮುನ್ನ...

2025ರ ಒಳಗೆ 500 ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯುವುದಾಗಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದ್ದಾರೆ. ಆದರೆ ವಾಸ್ತವ ಸಂಗತಿಗಳತ್ತ ಗಮನಹರಿಸದಿದ್ದರೆ ಇಂತಹ ಶಾಲೆಗಳನ್ನು ತೆರೆಯುವುದರ ಉದ್ದೇಶ ಸಫಲವಾಗುವುದಿಲ್ಲ. ಶಾಲೆಯ ಸರ್ಕಾರದ್ದಾಗಿದ್ದರೆ ಅಥವಾ ಖಾಸಗಿಯದ್ದಾಗಿದ್ದರೆ ಅಲ್ಲಿ ಮಗುವಿನ ಮಾತೃಭಾಷೆ ಅಥವಾ ಪರಿಸರ ಭಾಷೆಯಲ್ಲಿ ಶಿಕ್ಷಣ ನೀಡಿದರೆ ಮಾತ್ರ ಆ ಶಿಕ್ಷಣ ಫಲಕಾರಿಯಾಗುತ್ತದೆ. ಆದಾಗ್ಯೂ ಖಾಸಗಿ ಶಾಲೆಗಳಿಗೆ ಸ್ಪರ್ಧೆ ನೀಡಲು ಹೋಗಿ ಸರ್ಕಾರ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನು ತೆರೆಯುತ್ತಾ ಹೋಗುವುದು ಅವಿವೇಕತನ. ಅದರಿಂದ ಶೈಕ್ಷಣಿಕ ಯಶಸ್ಸು ಸಾಧ್ಯವಿಲ್ಲ. ಈಗಿರುವ ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವಷ್ಟು ಶಿಕ್ಷಕರನ್ನು ನೇಮಿಸಿ, ಅಲ್ಲಿ ಇಂಗ್ಲಿಷ್ ಅನ್ನು ಒಂದು ಭಾಷೆಯನ್ನಾಗಿ ಸರಿಯಾಗಿ ಕಲಿಸಲಿ. ಆಗ ಶೈಕ್ಷಣಿಕ ಪ್ರಗತಿ ತಾನಾಗಿಯೇ ಆಗುತ್ತದೆ.

ಹುರುಕಡ್ಲಿ ಶಿವಕುಮಾರ, ಬಾಗಿಲುಗಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಪಿಂಚಣಿ ಸೌಲಭ್ಯ: ಭ್ರಷ್ಟಾಚಾರ ತಪ್ಪಲಿ

ಪಿಂಚಣಿ ಹಾಗೂ ಇತರ ಸೌಲಭ್ಯದ ಕಡತ ತಯಾರಿಸಿಕೊಡಲು ನಿವೃತ್ತ ಶಿಕ್ಷಕಿಯಿಂದ ಲಂಚ ಸ್ವೀಕರಿಸುತ್ತಿದ್ದ ಬೀದರ್‌ನ ಮುಖ್ಯ ಶಿಕ್ಷಕ ತುಕಾರಾಮ ಕಾಂಬಳೆ ಎಂಬುವರು ಲೋಕಾಯುಕ್ತ ಬಲೆಗೆ ಬಿದ್ದಿರುವುದನ್ನು ಓದಿ (ಪ್ರ.ವಾ., ಫೆ. 16) ಬಹಳ ಬೇಸರವಾಯಿತು. ಆ ಶಿಕ್ಷಕಿ 2020ರಲ್ಲಿ ನಿವೃತ್ತಿ ಹೊಂದಿದ್ದು, ಇದುವರೆಗೆ ಪಿಂಚಣಿ ಹಣ ಅವರ ಕೈಸೇರದಿದ್ದರೆ ಅವರ ದೈನಂದಿನ ಜೀವನ ನಿರ್ವಹಣೆ ಹೇಗೆ? 'ಆರೋಗ್ಯ ಹುಶಿಲ್ಲಿ ಅವರ ಆರೋಗ್ಯದ ಪಾಡೇನು? ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುವ ನೌಕರರು ವಯೋನಿವೃತ್ತಿ ಆದಾಗ ಈ ಬಗೆಯ ಸಮಸ್ಯೆಗಳನ್ನು ಬಹುತೇಕ ಎಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಈ ದಿನಗಳಲ್ಲಿ ಸರ್ವೇಸಾಮಾನ್ಯ ಎಂಬಂತಾಗಿದೆ. ಉತ್ತಮ ಆಡಳಿತ ಮಂಡಳಿಯನ್ನು ಹೊಂದಿರುವ ಕೆಲವೇ ಶಿಕ್ಷಣ ಸಂಸ್ಥೆಗಳಲ್ಲಿ ನಿವೃತ್ತ ಹೊಂದಿದ ನೌಕರರನ್ನು ಗೌರವಯುತ ವಿಳ್ಕೊಡುಗೆ ನೀಡಲಾಗುತ್ತದೆ. ಮುಖ್ಯ ಶಿಕ್ಷಕ ಅಥವಾ ಪ್ರಾಂಶುಪಾಲರ ಮೂಲಕ ನಿವೃತ್ತ ನೌಕರರಿಗೆ ಕಟ್ಟಡ ನಿರ್ಮಾಣ ಅಥವಾ ಪೀಠೋಪಕರಣದ ರೂಪದಲ್ಲಿ ವಂತಿಗೆ ಪಡೆದು ಬಿಡುಗಡೆ ಮಾಡಲಾಗುತ್ತದೆ. ಮಣಿಯದಿದ್ದರೆ ಕಡತ ಒದಗಿಸಲು ವಿಳಂಬ ಮಾಡಲಾಗುತ್ತದೆ. ಬೀದರ್‌ನ ಶಾಲೆಯಲ್ಲಿ ಆಗಿರುವುದೂ ಇದೇ. ಕೆಲವು ಶಾಲಾ ಕಾಲೇಜುಗಳಲ್ಲಿ ಮುಖ್ಯ ಶಿಕ್ಷಕ ಅಥವಾ ಪ್ರಾಂಶುಪಾಲರು ಆಡಳಿತ ಮಂಡಳಿಗೆ ಸೇರಿದವರಾಗಿದ್ದರಂತೂ ನೌಕರರನ್ನು ಈ ರೀತಿ ಪೀಡಿಸುವುದು ಮತ್ತಷ್ಟು ಹೆಚ್ಚು. ಹಾಗಾಗಿ, ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನಿವೃತ್ತ ನೌಕರರು ಪಿಂಚಣಿ ಸೌಲಭ್ಯ ಪಡೆಯಲು ತಿಂಗಳಾನುಗಟ್ಟಲೆ ಕಾಯಬೇಕಾಗುತ್ತದೆ. ಕೆಲವು ಸಂದರ್ಭಗಳಲ್ಲಿ ವರ್ಷಗಳೇ ಉರುಳುತ್ತವೆ. ಅನುದಾನಿತ ಶಿಕ್ಷಣ ಸಂಸ್ಥೆಗಳ ಹಾಗೂ ಶಿಕ್ಷಣ ಇಲಾಖೆಯ ಮೇಲ್ವಿಚಾರಕರುಗಳನ್ನು ತೃಪ್ತಿಪಡಿಸಿ ಅಗತ್ಯ ದಾಖಲೆಗಳನ್ನು ಪಡೆದುಕೊಳ್ಳುವ ವೇಳೆಗೆ ನಿವೃತ್ತ ನೌಕರರು ಇಡೀ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಜುಗುಪ್ಸೆ ಬಂದುಬಿಡುತ್ತದೆ. ಇನ್ನಾದರೂ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತ ನೌಕರರು ಸುಲಭವಾಗಿ ಪಿಂಚಣಿ ಸೌಲಭ್ಯ ಪಡೆಯುವಂತಾಗಲು ಸರ್ಕಾರ ಸೂಕ್ತ ಕಾನೂನು ರೂಪಿಸಬೇಕಿದೆ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ನಿಜವಾದ ಸೌಂದರ್ಯ!

ಅನ್ನದ ಮನೆಯಲ್ಲಿ
ಮುಸುರೆ ತಿಕ್ಕುತ್ತಿದ್ದ
ಸವಿತಾ ಕಾಂಬಳೆ
ಈಗ ಬೆಳಗಾವಿ
ಮೇಯರ್ ಆಗಿ
ಕಾರಲ್ಲಿ ತಮ್ಮ ಪುಟ್ಟ
ಮನೆಯ ಮುಂದೆ
ಬಂದಿಳಿದದ್ದೇ
ಪ್ರಜಾಪ್ರಭುತ್ವದ
ನಿಜವಾದ ಸೌಂದರ್ಯ.

ನಂಜನಹಳ್ಳಿ ನಾರಾಯಣ, ಬೆಂಗಳೂರು

ಚುನಾವಣಾ ಬಾಂಡ್: ಸೈದ್ಧಾಂತಿಕ ವಿಜಯ

ಚುನಾವಣಾ ಬಾಂಡುಗಳನ್ನು ಅಸಿಂಧುಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪು, ಪ್ರಜಾಪ್ರಭುತ್ವ ವ್ಯವಸ್ಥೆಯ ಸೈದ್ಧಾಂತಿಕ ವಿಜಯವಾಗಿದೆ. ಆದರೆ ಇದರಿಂದ ಪ್ರಸಕ್ತ ಚುನಾವಣಾ ವ್ಯವಸ್ಥೆ ಮತ್ತು ಅದರ ಪರಿಣಾಮವಾಗಿ ಉಂಟಾಗುವ ರಾಜಕೀಯ ಅವ್ಯವಹಾರ ಸರ್ವವ್ಯಾಪಕತ್ವಕ್ಕೆ ಕಿಂಚಿತ್ ಕಡಿವಾಣಬೀಳಬಹುದೇ ವಿನಾ ಒಂದು ಪ್ರಶ್ನೆ ಮಾತ್ರ ಹಾಗೇ ಉಳಿಯುತ್ತದೆ. ಚುನಾವಣೆಯಲ್ಲಿ ಜಾತಿಗಳಲ್ಲಿ ತೊಡಗಿಸಿಕೊಳ್ಳುವ ಪಕ್ಷಗಳು ಮತ್ತು ಪಾಲುದಾರರು ಚುನಾವಣೆಯ ಅಗಾಧ ಖರ್ಚಿನ ಬಗ್ಗೆ ಆಗಿಂದಾಗ್ಗೆ ದುಮ್ಮಾನ ಹೊರಹಾಕುತ್ತಿರುತ್ತಾರೆ. ಈ ಮೂಲಕ, ಅವರ ವಿಜಯದ ಹಿಂದೆ ಎಷ್ಟೆಲ್ಲ ಭ್ರಷ್ಟ ವ್ಯವಹಾರ ನಡೆದಿರುತ್ತದೆ ಎನ್ನುವುದು ಅವರಿಗೇ ಅರಿವಿಲ್ಲದಂತೆ ಬಹಿರಂಗವಾಗಿರುತ್ತದೆ! ಇಂತಹ ಮಾತುಗಳನ್ನಾಡುವ ಅವರು ಸದನದ ಪವಿತ್ರ ಸ್ಥಾನದಿಂದಲೇ ಅಡವುದೂ ವಿಪರ್ಯಾಸವೇ ಸರಿ.

ಆತಂತ್ರ ಸ್ಥಿತಿಯ 'ಸಂಖ್ಯಾ ಸಂಕಷ್ಟದ ಸಂದರ್ಭ'ದಲ್ಲಿ, ಜನಪ್ರತಿನಿಧಿಗಳು ತಮ್ಮನ್ನೇ ಹರಾಜಿಗೆ ಮಾರಿಕೊಳ್ಳುವುದಂತೂ ನಾಚಿಕೆಗೇಡಿನ ನಡವಳಿಕೆ. ಈ 'ಬೆಲೆಬಾಳುವಿಕೆ'ಯ ಪೂರ್ವನಿದರ್ಶನಗಳೂ ನಾಗರು, ಸಾಮಗ್ರಿ ಮತ್ತು ಅವುಗಳ ಭದ್ರತೆಗಾಗಿ ಆಗುತ್ತ ತೊಳ್ಳುವ ದಶಗಳನ್ನು ಸಾಕಿಕೊಳ್ಳುವುದಕ್ಕಾಗಿ ಲಕ್ಷಗಟ್ಟಲೆ ಮೀರಿದ ಧನರಾಶಿ ಬೇಕಾಗುತ್ತದೆ. ಇದು ಕೈ ಪವಿತ್ರವಾಗಿರಬೇಕೆ? ಅದೀಗ ಒಟ್ಟಿತ ಮಾನವೇ ಆಗಿಹೋಗಿದೆ! ಸುಪ್ರೀಂ ಕೋರ್ಟಿನ ಹಾಲಿ ತೀರ್ಪು, 'ಇಂತಹ ವಿಶೇಷ ವಿಶಿಷ್ಟ ಮೊತ್ತವನ್ನು ಅರ್ಥವಾಗುವ ರೂಪದಲ್ಲಿ ಅರ್ಥವಿಶಿಷ್ಟವಾಗಿ ಎಂಬ ವಿಶ್ವಾಸ ಇಟ್ಟುಕೊಳ್ಳೋಣ.

ಆರ್.ಕೆ.ದಿವಾಕರ, ಬೆಂಗಳೂರು

ಸರ್ವರ ಕಲ್ಯಾಣಕ್ಕೂ ಸಿಗಲಿ ಆದ್ಯತೆ

ಒಂದೆಡೆ, ಕೇಂದ್ರ ಸರ್ಕಾರವು ರಾಮ ಮಂದಿರವನ್ನು ಚುನಾವಣಾ ಸಿದ್ಧಿಯನ್ನಾಗಿ ಮಾಡಿಕೊಂಡು ಮತ ಗಳಿಸಲು ಹೊರಟಿದೆ. ಅದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರವು ದೇವಸ್ಥಾನಗಳ ಜೀರ್ಣೋದ್ಧಾರದ ಮಾತನಾಡುತ್ತಿದೆ. ದೇವಸ್ಥಾನಗಳ ನಿರ್ಮಾಣ, ಜೀರ್ಣೋದ್ಧಾರವನ್ನು ಆಯಾ ದೇವರ ಭಕ್ತರು ನೋಡಿಕೊಳ್ಳುತ್ತಾರೆ. ಸರ್ಕಾರ ಎಲ್ಲ ಜಾತಿ, ಧರ್ಮೀಯರ ತೆರಿಗೆ ಹಣದಿಂದ ನಡೆಯುತ್ತದೆ ಎಂಬುದನ್ನು ಮರೆತು ಒಂದು ಜನರ ಕಲ್ಯಾಣಕ್ಕೆ ಆದ್ಯತೆಯನ್ನು ನೀಡಬೇಕು. ನಮ್ಮ ಸರ್ಕಾರಿ ಶಾಲೆಗಳಿಗೆ ಕಾಯಕಲ್ಪವಾಗಬೇಕಿದೆ, ನಮ್ಮ ಆಸ್ಪತ್ರೆಗಳು ಬದಲಾಗಬೇಕಿದೆ. ಹಾಗೆಯೇ ಮೂಲ ಸೌಕರ್ಯಗಳಿಗೆ ಆದ್ಯತೆ ನೀಡಬೇಕಾಗಿದೆ. ಇದನ್ನು ಬಿಟ್ಟು ಕೇಂದ್ರ- ರಾಜ್ಯ ಸರ್ಕಾರಗಳು ಬರೀ ಮತ ಗಳಿಕೆಯ ಕಡೆಗೆ ಹೊರಳಿರುವುದು ವಿಷಾದನೀಯ.

ಈ.ಬಸವರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯ ಬಜೆಟ್ 2024-25



₹28,608 ಕೋಟಿ
ಗೃಹಲಕ್ಷ್ಮಿ ಯೋಜನೆಗಾಗಿ 2024–25ನೇ ಆರ್ಥಿಕ ವರ್ಷದಲ್ಲಿ ಮೀಸಲಿಟ್ಟ ಮೊತ್ತ


₹221 ಕೋಟಿ
ಕಲ್ಯಾಣ ಕರ್ನಾಟಕ ಭಾಗದಲ್ಲಿ 46 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಕೆಕೆಆರ್‌ಡಿಬಿ ಮೂಲಕ ಸ್ಥಾಪಿಸಲು ಮೀಸಲಿಟ್ಟ ಹಣ

₹6 ಕೋಟಿ
ರಾಜ್ಯದ 13 ಜಿಲ್ಲಾ ಆಸ್ಪತ್ರೆಗಳಲ್ಲಿ ಅಗ್ನಿಶಾಮಕ ವ್ಯವಸ್ಥೆಯನ್ನು ಅಳವಡಿಸಲು ಮೀಸಲಿಟ್ಟ ಹಣ

₹450 ಕೋಟಿ
ಡಿಸಿಸಿ ಹಾಗೂ ಪಿಕಾರ್ಡ್ ಬ್ಯಾಂಕ್‌ಗಳ ಮಧ್ಯಮಾವಧಿ ಮತ್ತು ದೀರ್ಘಾವಧಿ ಸುಸ್ತಿ ಸಾಲಗಳ ಬಡ್ಡಿ ಮನ್ನಾ ಮಾಡಲು ಮೀಸಲಿಟ್ಟ ಮೊತ್ತ

ಹಲವು ಜಿಲ್ಲೆಗಳಿಗೆ ವಿಶೇಷ ಕೊಡುಗೆ...

ಕೇಂದ್ರ ಸರ್ಕಾರದ ಸಹಯೋಗದಲ್ಲಿ ವಿಜ್ಞಾನ ಕೇಂದ್ರ/ತಾರಾಲಯ ಸ್ಥಾಪನೆ



ಧಾರವಾಡ
- ಹುಬ್ಬಳ್ಳಿ ಮಾರುಕಟ್ಟೆಯಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪಿನೆ
- ಬೆಣ್ಣೆಹಳ್ಳದಿಂದ ಪ್ರವಾಹ ಪೀಡಿತ ಗ್ರಾಮಗಳಿಗೆ ತಡೆಗೋಡೆ ನಿರ್ಮಾಣ ಮಾಡಲು ರಾಜ್ಯ ವಿಪತ್ತು ನಿರ್ವಹಣಾ ನಿಧಿಯಿಂದ ಯೋಜನೆ
- ಹುಬ್ಬಳ್ಳಿ-ಧಾರವಾಡದಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್

ಗದಗ
- ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ₹10 ಕೋಟಿ ವೆಚ್ಚ ಕಾಥಲ್ಯಾಬ್ ಸೌಲಭ್ಯದೊಂದಿಗೆ ಸೂಪರ್ ಸ್ಪೆಷಾಲಿಟಿ ಕಾರ್ಡಿಯಾಕ್ ಯುನಿಟ್ ಆರಂಭ
- ಕಪ್ಪತ್ತಗುಡ್ಡದಲ್ಲಿ ಪರಿಸರ ಪ್ರವಾಸೋದ್ಯಮಕ್ಕೆ ಉತ್ತೇಜನ

ಉತ್ತರ ಕನ್ನಡ
- ಹೊನ್ನಾವರ ತಾಲ್ಲೂಕಿನ ಮಂಕಿ/ಕಾಸರಗೋಡದಲ್ಲಿ ಮೀನುಗಾರಿಕೆ ಸಂಶೋಧನಾ ಕೇಂದ್ರ ಸ್ಥಾಪನೆ
- ಭಟ್ಕಳ ತಾಲ್ಲೂಕಿನ ಮುರುಡೇಶ್ವರದಲ್ಲಿ ಸುಸಜ್ಜಿತ ಮೀನುಗಾರಿಕೆ ಬಂದರು ನಿರ್ಮಾಣ
- ಮಂಕಿಯಲ್ಲಿ ವಿವಿಧೋದ್ದೇಶ ಬಂದರಿನ ಅಭಿವೃದ್ಧಿಗೆ ಕಾರ್ಯಸಾಧ್ಯತಾ ವರದಿ

ಹಾವೇರಿ
- ರಾಣೆಬೆನ್ನೂರಿನಲ್ಲಿ ₹112 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ 222 ಎಕರೆ ಮೆಗಾ ಮಾರುಕಟ್ಟೆ ಪ್ರಾಂಗಣದಲ್ಲಿ ಒಣಮೆಣಸಿನಕಾಯಿ ಮಾರುಕಟ್ಟೆ ಆರಂಭ

ಶಿವಮೊಗ್ಗ
- ಸೋಗಾನೆಯಲ್ಲಿ ಆಹಾರ ಪಾರ್ಕ್
- ಭದ್ರಾವತಿಯಲ್ಲಿ ಅತ್ಯಾಧುನಿಕ ಮೀನು ಮಾರುಕಟ್ಟೆ
- ಕೇಂದ್ರ ಸರ್ಕಾರದ ಸಹಯೋಗದಲ್ಲಿ ವಿಜ್ಞಾನ ಕೇಂದ್ರ/ತಾರಾಲಯ
- ಜಿಲ್ಲೆಯಲ್ಲಿ ₹100 ಕೋಟಿ ವೆಚ್ಚದಲ್ಲಿ ಹೊಸ ಹೈ-ಸೆಕ್ಯೂರಿಟಿ ಕಾರಾಗೃಹ

ದಕ್ಷಿಣ ಕನ್ನಡ
- ಅಂತರರಾಷ್ಟ್ರೀಯ ಕ್ರೂಸ್ ಮತ್ತು ಪ್ರವಾಸೋದ್ಯಮ ಬಂದರು ಅಭಿವೃದ್ಧಿಗೆ ಕಾರ್ಯಸಾಧ್ಯತಾ ವರದಿ
- ಮಂಗಳೂರಿನ ನೆಲ್ಲಿಕಾಯಿ ರಸ್ತೆಯಲ್ಲಿರುವ ಮಾರುಕಟ್ಟೆಯಲ್ಲಿ ₹35 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಕೃಷಿ ಸಂಕೀರ್ಣ
- ಮಂಗಳೂರಿನ ಗುರುಪುರ ಮತ್ತು ನೇತ್ರಾವತಿ ನದಿಗಳಲ್ಲಿ ಜಲ ಮೆಟ್ರೊ ಸೇವೆ ಪರಿಚಯಿಸಲು ಕಾರ್ಯಸಾಧ್ಯತಾ ವರದಿ ತಯಾರಿಸಲಾಗುವುದು

ಬೆಳಗಾವಿ
- ಬೆಳಗಾವಿಯ ಮಾರುಕಟ್ಟೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪಿಸಿ ಶೂನ್ಯ ತ್ಯಾಜ್ಯ ತರಕಾರಿ ಮಾರುಕಟ್ಟೆಯಾಗಿ ಪರಿವರ್ತನೆ
- ಬೆಳಗಾವಿಯಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್
- ಗೋಕಾಕ ಜಲಪಾತ ಅಭಿವೃದ್ಧಿ

ವಿಜಯಪುರ
- ಇಟ್ಟಂಗಿಹಾಳದಲ್ಲಿ ಆಹಾರ ಪಾರ್ಕ್
- ಆಲಮಟ್ಟಿಯಲ್ಲಿ ಒಳನಾಡು ಮೀನುಗಾರಿಕೆ ಕೌಶಲಾಭಿವೃದ್ಧಿ ಕೇಂದ್ರ ಸ್ಥಾಪನೆ
- ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ರಚನೆ

ಚಿಕ್ಕಮಗಳೂರು
- ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ ಸ್ಪೈಸ್ ಪಾರ್ಕ್
- ಶೃಂಗೇರಿಗೆ ತಾಲ್ಲೂಕು ಆಸ್ಪತ್ರೆ

ಕೊಡಗು
- ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಪಿಪಿಪಿ ಮಾದರಿಯಲ್ಲಿ ಕಾರ್ಡಿಯಾಕ್ ಯುನಿಟ್
- ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ವೈರಲ್ ರಿಸರ್ಚ್ ಆ್ಯಂಡ್ ಡೈಯಾಗ್ನೊಸ್ಟಿಕ್ ಲ್ಯಾಬೊರೇಟರಿ

ಬೀದರ್
- ಶ್ರೀ ನಾನಕ್ ಝೀರಾ ಸಾಹೇಬ್ ಗುರುದ್ವಾರದ ಅಭಿವೃದ್ಧಿಗೆ ₹1 ಕೋಟಿ

ಕಲಬುರಗಿ
- ಕಲಬುರಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಮಕ್ಕಳ ಆರೋಗ್ಯ ಘಟಕ ಸ್ಥಾಪನೆ
- ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಜಿಟಿಟಿಸಿ ಬಹು ಕೌಶಲ ಅಭಿವೃದ್ಧಿ ಕೇಂದ್ರ
- ಕಲಬುರಗಿಯ ಕೆಜಿಟಿಟಿಐನಲ್ಲಿ ಕಂಪ್ಯೂಟರ್ ನ್ಯುಮರಿಕಲ್ ಕಂಟ್ರೋಲ್ ಯಂತ್ರವನ್ನು ₹16 ಕೋಟಿ ವೆಚ್ಚದಲ್ಲಿ ಕೇಂದ್ರೀಕರಿಸುವ ಮೊದಲ ಶ್ರೇಷ್ಠತಾ ಕೇಂದ್ರ
- ಕಲಬುರಗಿಯಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್

ರಾಯಚೂರು
- ₹25 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಒಣಮೆಣಸಿನಕಾಯಿ ಮಾರುಕಟ್ಟೆ ಸ್ಥಾಪನೆ
- ಹ್ಯೂಮನ್ ಮಿಲ್ಕ್ ಬ್ಯಾಂಕ್ ಸ್ಥಾಪನೆ
- ವಿಮಾನ ನಿಲ್ದಾಣ ಅಗತ್ಯ ಅನುದಾನ
- ಮಂತ್ರಾಲಯಕ್ಕೆ ಸಂಪರ್ಕ ಕಲ್ಪಿಸಲು ರಾಯಚೂರಿನ ಚಿಕ್ಕಮಂಚಾಲಿ ಗ್ರಾಮದ ಬಳಿ ₹158 ಕೋಟಿ ವೆಚ್ಚದಲ್ಲಿ ಬ್ರಿಡ್ಜ್-ಕಂ-ಬ್ಯಾರೇಜ್

ಕೊಪ್ಪಳ
- ಅಂಜನಾದ್ರಿ ಬೆಟ್ಟ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯ ಅಭಿವೃದ್ಧಿಪಡಿಸಲು ₹100 ಕೋಟಿ

ಬಳ್ಳಾರಿ
- ಬಳ್ಳಾರಿಯಲ್ಲಿ ಜೀನ್ಸ್ ಅಪಾರೆಲ್ ಪಾರ್ಕ್ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರ ಅಭಿವೃದ್ಧಿ
- ಬಳ್ಳಾರಿ ಮಾರುಕಟ್ಟೆಯಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪಿಸಿ ಶೂನ್ಯ ತ್ಯಾಜ್ಯ ತರಕಾರಿ ಮಾರುಕಟ್ಟೆಯಾಗಿ ಪರಿವರ್ತನೆ
- ಬಳ್ಳಾರಿಯಲ್ಲಿ ಹ್ಯೂಮನ್ ಮಿಲ್ಕ್ ಬ್ಯಾಕ್
- ಸಂಡೂರಿನಲ್ಲಿ ಸ್ಕಿಲ್ ಅಕಾಡೆಮಿ ಸ್ಥಾಪನೆ
- ಬಳ್ಳಾರಿ ನಗರ ಸಮೀಪ ಇಂಟಿಗ್ರೇಟೆಡ್ ಟೌನ್‌ಶಿಪ್

ಚಿತ್ರದುರ್ಗ
- ಚಿತ್ರದುರ್ಗ, ಹೊಳಲ್ಕೆರೆ, ಹೊಸದುರ್ಗ ತಾಲ್ಲೂಕುಗಳ ಗಣಿಬಾಧಿತ ಪ್ರದೇಶದಲ್ಲಿ ಮೀನುಗಾರಿಕೆಗೆ ₹6 ಕೋಟಿ ವೆಚ್ಚ

ತುಮಕೂರು
- ವಸಂತನರಸಾಪುರ ಸಮೀಪದಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್

ಚಿಕ್ಕಬಳ್ಳಾಪುರ
- ಚಿಕ್ಕಬಳ್ಳಾಪುರ ಮಾರುಕಟ್ಟೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪಿಸಿ ಶೂನ್ಯ ತ್ಯಾಜ್ಯ ತರಕಾರಿ ಮಾರುಕಟ್ಟೆಯಾಗಿ ಪರಿವರ್ತನೆ

ಕೋಲಾರ
- ಕೋಲಾರ ಮಾರುಕಟ್ಟೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪಿಸಿ ಶೂನ್ಯ ತ್ಯಾಜ್ಯ ತರಕಾರಿ ಮಾರುಕಟ್ಟೆಯಾಗಿ ಪರಿವರ್ತನೆ
- ಕೆಜಿಎಫ್ ಬಳಿ ಇಂಟಿಗ್ರೇಟೆಡ್ ಟೌನ್‌ಶಿಪ್

ಬೆಂ.ಗ್ರಾಮಾಂತರ
- ಪೂಜೇನಹಳ್ಳಿಯಲ್ಲಿ ಆಹಾರ ಪಾರ್ಕ್
- ಆನೇಕಲ್, ನೆಲಮಂಗಲ, ಹೊಸಕೋಟೆಗೆ ತಾಲ್ಲೂಕು ಆಸ್ಪತ್ರೆ

ಚಾಮರಾಜನಗರ
- ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ಖಾದಿ ಚಟುವಟಿಕೆ ಪ್ರೋತ್ಸಾಹಕ್ಕೆ ಕ್ರಮ

ಮಂಡ್ಯ
- ವಿ.ಸಿ. ಫಾರಂನಲ್ಲಿ ಕೃಷಿ ವಿಶ್ವವಿದ್ಯಾಲಯ ಸ್ಥಾಪಿಸುವ ಕುರಿತು ಪರಿಶೀಲಿಸಲು ತಜ್ಞರ ಸಮಿತಿ ರಚನೆ

ಮೈಸೂರು
- ಹ್ಯೂಮನ್ ಮಿಲ್ಕ್ ಬ್ಯಾಂಕ್ ಸ್ಥಾಪನೆ
- ಮೈಸೂರಿನ ಪ್ರಖ್ಯಾತ ಲ್ಯಾನ್ಸ್‌ಡೌನ್ ಕಟ್ಟಡ ಮತ್ತು ದೇವರಾಜ ಮಾರುಕಟ್ಟೆಯನ್ನು ಪಾರಂಪರಿಕ ಶೈಲಿಯಲ್ಲಿ ಅಭಿವೃದ್ಧಿ
- ಮೈಸೂರು ಮಾರುಕಟ್ಟೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಯೋ ಸಿಎನ್‌ಜಿ ಪ್ಲಾಂಟ್ ಸ್ಥಾಪಿಸಿ ಶೂನ್ಯ ತ್ಯಾಜ್ಯ ತರಕಾರಿ ಮಾರುಕಟ್ಟೆಯಾಗಿ ಪರಿವರ್ತನೆ
- ಕೆಆರ್‌ಎಸ್ ಅಣೆಕಟ್ಟೆಯ ಬೃಂದಾವನ ಉದ್ಯಾನವನ ವಿಶ್ವದರ್ಜೆಯ ಪ್ರವಾಸೋದ್ಯಮ ಆಕರ್ಷಣೀಯ ಕೇಂದ್ರವಾಗಿ ಉನ್ನತೀಕರಣ



ಮಕ್ಕಳಿಗೆ ಬಾಹ್ಯಾಕಾಶದ ಕನಸು

ಈ ಬಾರಿಯ ಬಜೆಟ್‌ನಲ್ಲಿ ಹಲವು ಜಿಲ್ಲೆಗಳಲ್ಲಿ ತಾರಾಯಲಗಳನ್ನು ತೆರಯುವ ಘೋಷಣೆಯನ್ನು ಮಾಡಲಾಗಿದೆ. ತಾರಾಲಯಕ್ಕಾಗಿ ಈಗಾಗಲೇ ಅನುಮೋದನೆ ಸಿಕ್ಕಿರುವ ಜಿಲ್ಲೆಗಳಲ್ಲಿ, ಅದರ ಕಾರ್ಯಾರಂಭವನ್ನು ಮಾಡಲಾಗುವುದು ಎಂದು ಸರ್ಕಾರ ಹೇಳಿದೆ. 'ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯನ್ನು ಉತ್ತೇಜಿಸಲು ನಿಟ್ಟಿನಲ್ಲಿ ಯೋಜನೆಗಳನ್ನು ರೂಪಿಸಲಾಗಿದೆ' ಎಂದು ಬಜೆಟ್‌ನಲ್ಲಿ ಹೇಳಲಾಗಿದೆ. ಶಿವಮೊಗ್ಗ, ರಾಯಚೂರು, ಚಿಕ್ಕಮಗಳೂರು, ಯಾದಗಿರಿ ಮತ್ತು ಮೈಸೂರಿನಲ್ಲಿ ಕೇಂದ್ರ ಸರ್ಕಾರದ ಸಹಯೋಗದಲ್ಲಿ ತಾರಾಲಯಗಳನ್ನು ಸ್ಥಾಪಿಸಲಾಗುವುದು ಎಂದು ಸರ್ಕಾರ ಹೇಳಿದೆ.

₹170 ಕೋಟಿ
ತಾರಾಯಲಯಗಳ ಸ್ಥಾಪನೆಗೆ ಮೀಸಲಿಟ್ಟ ಹಣ

₹3 ಕೋಟಿ
833 ವಸತಿ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ತಲಾ 1 ದೂರದರ್ಶಕಕೊಳ್ಳಲು ಮೀಸಲಿಟ್ಟ ಹಣ

ವಿಜಯಪುರ
ಬಸವನಬಾಗೇವಾಡಿಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಶೀತಲಗೃಹ

ಮೈಸೂರು
₹40 ಕೋಟಿ ವೆಚ್ಚದಲ್ಲಿ ಶೀತಲಗೃಹ

ಹಾವೇರಿ
ರಾಣೆಬೆನ್ನೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಶೀತಲಗೃಹ

ಕೊಪ್ಪಳ
ಯಲಬುರ್ಗಾದಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಶೀತಲಗೃಹ

ಗದಗ
ಗದಗ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಶೀತಲಗೃಹ

ಬಳ್ಳಾರಿ
ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಲ್ಲಿ ಶೀತಲಗೃಹ

ರಾಯಚೂರು
₹40 ಕೋಟಿ ವೆಚ್ಚದಲ್ಲಿ ಶೀತಲಗೃಹ

ತೋಟಗಾರಿಕೆ

- ಆಯ್ದ ಜಿಲ್ಲೆಗಳಲ್ಲಿ 'ಕಿಸಾನ್ ಮಾಲ್'ಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ತೋಟಗಾರಿಕೆಗೆ ಸಂಬಂಧಿಸಿದ ತಾಂತ್ರಿಕ ಸಲಹೆ, ಮಾರುಕಟ್ಟೆ ಸಂಪರ್ಕ ಮಾಹಿತಿಗಳೊಂದಿಗೆ ಬೇಸಾಯ ಪರಿಕರಗಳ ಮತ್ತು ಉತ್ಪನ್ನಗಳೂ ಈ ಮಾಲ್‌ಗಳಲ್ಲಿ ಲಭ್ಯ ಇರಲಿವೆ
- ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ವಾಣಿಜ್ಯ ಪುಷ್ಪ ಮಾರುಕಟ್ಟೆ
- ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ ತೋಟಗಾರಿಕೆ ಬೆಳೆಗಳ ಸಂಸ್ಕರಣೆ ಮತ್ತು ರಫ್ತು ಪ್ರಮಾಣ ಹೆಚ್ಚಿಸಲು ಕೊಯ್ಲೋತ್ತರ ನಿರ್ವಹಣಾ ಕೇಂದ್ರ
- ವಿಜಯಪುರ ಜಿಲ್ಲೆಯ ಆಲಮೇಲದಲ್ಲಿ ತೋಟಗಾರಿಕೆ ಕಾಲೇಜು

ಪಶುಸಂಗೋಪನೆ

- ಆಯ್ದ 20 ತಾಲ್ಲೂಕುಗಳ ಪಶು ಆಸ್ಪತ್ರೆಗಳನ್ನು ಪಾಲಿಕ್ಲಿನಿಕ್‌ಗಳನ್ನಾಗಿ ಮೇಲ್ದರ್ಜೆಗೇರಿಸಲು ₹10 ಕೋಟಿ ಮೀಸಲು
- ಬಾಡಿಗೆ, ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 200 ಪಶುವೈದ್ಯ ಸಂಸ್ಥೆಗಳಿಗೆ ₹10 ಕೋಟಿ ವೆಚ್ಚದಲ್ಲಿ ನೂತನ ಕಟ್ಟಡಗಳು

ಮೀನುಗಾರಿಕೆ

- ₹7 ಕೋಟಿ ವೆಚ್ಚದಲ್ಲಿ ಪ್ರಥಮ ಸಮುದ್ರ ಆಂಬುಲೆನ್ಸ್ ಖರೀದಿ
- ನಬಾರ್ಡ್ ಸಹಯೋಗದಲ್ಲಿ ₹20 ಕೋಟಿ ವೆಚ್ಚದಲ್ಲಿ 16 ಮೀನುಮರಿ ಉತ್ಪಾದನಾ ಕೇಂದ್ರಗಳ ಉನ್ನತೀಕರಣ

ಸರ್ವರಿಗೂ ಪಾಲು, ಪ್ರಗತಿಯೇ ಸವಾಲು

ಒಂದನೇ ಪುಟದಿಂದ

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಸೇರಿದಂತೆ ತಳ ಸಮುದಾಯಗಳು ಹಾಗೂ ದುಡಿಯುವ ವರ್ಗದ ಜನರಿಗೆ ಸಾಮಾಜಿಕ ನ್ಯಾಯ, ಆದಾಯದ ಪಾಲನ್ನು ಹಂಚುವ ತಮ್ಮದೇ ಆರ್ಥಿಕ ವಿಧಾನವನ್ನು ಈ ಬಜೆಟ್‌ನಲ್ಲೂ ಮುಂದುವರಿಸಿದರು. ಈ ಸಮುದಾಯಗಳ ಏಳ್ಗೆಗೆ ಅನುದಾನ ನಿಗದಿಯಲ್ಲಿ ಹೆಚ್ಚಿನ ಬದಲಾವಣೆ ಮಾಡಿಲ್ಲ.

ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ (ಟಿಎಸ್‌ಪಿ) ₹39,121 ಕೋಟಿ ಅನುದಾನ ಮೀಸಲಿಡಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಎರಡೂ ಉಪ ಯೋಜನೆಗಳಿಗೆ ಒಟ್ಟು ₹4,827 ಕೋಟಿಯಷ್ಟು ಹೆಚ್ಚಿನ ಅನುದಾನ ಒದಗಿಸಲಾಗಿದೆ.

ಕಳೆದ ವರ್ಷದ ಬಜೆಟ್‌ನಲ್ಲಿ ಐದು ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಲಕ್ಷಾಂತರ ಕುಟುಂಬಗಳಿಗೆ ನೇರವಾಗಿ ಆರ್ಥಿಕ ನೆರವು ನೀಡಿದ್ದ ಮುಖ್ಯಮಂತ್ರಿ, ಈ ಬಾರಿ ಅವುಗಳ ಜತೆಯಲ್ಲೇ ಕೌಶಲಾಭಿವೃದ್ಧಿ ಮತ್ತು ಉದ್ಯೋಗ ಸೃಜನೆಯ ಹಲವು ಯೋಜನೆಗಳನ್ನು ಪ್ರಕಟಿಸಿದರು. ಯುವನಿಧಿಯ ನೆರವಿನ ಜತೆಯಲ್ಲೇ 25,000 ಮಂದಿಗೆ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಲ್ಪಿಸುವ 'ಯುವನಿಧಿ ಪ್ಲಸ್', ಹೆಚ್ಚುವರಿ ಡಿಪ್ಲೊಮಾ ಕೋರ್ಸ್‌ಗಳ ಆರಂಭ, 40 ಸಾವಿರ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಮತ್ತು ಸಂವಹನ ಕೌಶಲ ತರಬೇತಿಯ ಕಾರ್ಯಕ್ರಮಗಳು ಬಜೆಟ್‌ನಲ್ಲಿವೆ. ಸ್ವಸಹಾಯ ಸಂಘಗಳ ಸದಸ್ಯರು ಸೇರಿದಂತೆ ಮಹಿಳೆಯರಿಗೆ ಕೌಶಲಾಭಿವೃದ್ಧಿ ಹಾಗೂ ಸ್ವಯಂ ಉದ್ಯೋಗ ಕಲ್ಪಿಸುವ ಹಲವು ಯೋಜನೆಗಳನ್ನೂ ಪ್ರಕಟಿಸಲಾಗಿದೆ.

ಆಸ್ತಿ ನಗದೀಕರಣಕ್ಕೆ ಒಲವು

ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಹೊಂದಿಸುವುದಕ್ಕೆ ಸರ್ಕಾರಿ ಆಸ್ತಿಗಳನ್ನು ನಗದೀಕರಣ ಮಾಡುವುದಕ್ಕೆ ಸರ್ಕಾರ ಒಲವು ತೋರಿದೆ. ಇದಕ್ಕಾಗಿ ತಜ್ಞರ ಸಮಿತಿಯೊಂದನ್ನು ರಚಿಸುವುದಾಗಿಯೂ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ನಗರಾಭಿವೃದ್ಧಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಸತಿ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಆಸ್ತಿಗಳ ನಗದೀಕರಣದ ಪ್ರಸ್ತಾವ ಬಜೆಟ್‌ನಲ್ಲಿದೆ.

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗಳಿಗಾಗಿ 250ಕ್ಕೂ ಹೆಚ್ಚು ವಿದ್ಯಾರ್ಥಿ ನಿಲಯಗಳು ಮತ್ತು 170 ವಸತಿ ಶಾಲೆಗಳನ್ನು ಆರಂಭಿಸುವ ಘೋಷಣೆ ಬಜೆಟ್‌ನಲ್ಲಿದೆ. ಇದು, ಮುಖ್ಯಮಂತ್ರಿಯವರು ತಳ ಸಮುದಾಯಗಳ ಶಿಕ್ಷಣ ಮತ್ತು ಕೌಶಲಾಭಿವೃದ್ಧಿಯ ಕಾರ್ಯಕ್ರಮಗಳಿಗೆ ಆದ್ಯತೆ ನೀಡಿ ಬಜೆಟ್ ಸಿದ್ಧಪಡಿಸಿರುವುದರ ಸಂಕೇತದಂತಿದೆ.

ಐದು ಗ್ಯಾರಂಟಿ ಯೋಜನೆಗಳಿಗಾಗಿ ₹52,000 ಕೋಟಿಯನ್ನು ಜನರ ಕೈಗೆ ಹಂಚಿಕೆ ಮಾಡಲಾಗುತ್ತಿದೆ ಎಂದು ಬಜೆಟ್‌ನ ಆರಂಭದಲ್ಲೇ ಸಿದ್ದರಾಮಯ್ಯ ಪ್ರಕಟಿಸಿದರು. ತೆರಿಗೆ ಪಾಲು ಮತ್ತು ಅನುದಾನದ ಹಂಚಿಕೆಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂದು ಹಲವು ಬಾರಿ ಉಲ್ಲೇಖಿಸಿದ ಅವರು, ಅಭಿವೃದ್ಧಿ ಕಾಮಗಾರಿಗಳಿಗೆ ದೊಡ್ಡ ಪ್ರಮಾಣದಲ್ಲಿ ಅನುದಾನ ಹಂಚಿಕೆ ಮಾಡಲಾಗದ ಪರಿಸ್ಥಿತಿ ಇದೆ ಎಂಬುದನ್ನೂ ರಾಜ್ಯದ ಮುಂದಿಟ್ಟರು.

ದೊಡ್ಡ ಯೋಜನೆಗಳಿಗಿಲ್ಲ ಆದ್ಯತೆ: ಈ ಬಾರಿಯ ಬಜೆಟ್‌ನಲ್ಲಿ ಮೂಲಸೌಕರ್ಯ ಅಭಿವೃದ್ಧಿಯ ಬೃಹತ್ ಗಾತ್ರದ ಯೋಜನೆಗೆ ಹೆಚ್ಚು ಆದ್ಯತೆ ನೀಡಿಲ್ಲ. ಜಲ ಸಂಪನ್ಮೂಲ ಇಲಾಖೆಗೆ ₹10,000 ಕೋಟಿಗೂ ಹೆಚ್ಚು ಅನುದಾನ ಒದಗಿಸಿದ್ದರೂ, ಹತ್ತಾರು ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಘೋಷಣೆ ಇದೆ. ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಕ್ಷೇತ್ರಕ್ಕೆ ಹೆಚ್ಚು ಅನುದಾನ ಲಭಿಸಿಲ್ಲ.

ವಿದ್ಯುತ್ ಉತ್ಪಾದನೆಯನ್ನು ದ್ವಿಗುಣಗೊಳಿಸುವ ಗುರಿಯೊಂದಿಗೆ, ಈ ಕ್ಷೇತ್ರಕ್ಕೆ ಖಾಸಗಿ ಹೂಡಿಕೆದಾರರನ್ನು ಸೆಳೆಯುವ ಯೋಜನೆಗಳನ್ನೂ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ 10,600 ಕಿ.ಮೀ. ರಸ್ತೆ ಅಭಿವೃದ್ಧಿಪಡಿಸುವ 'ಪ್ರಗತಿ ಪಥ', 'ಕಲ್ಯಾಣ ಪಥ' ಸೇರಿದಂತೆ ಹಲವು ಹೊಸ ಯೋಜನೆಗಳು ಬಜೆಟ್‌ನಲ್ಲಿವೆ. ಗ್ರಾಮ ಪಂಚಾಯಿತಿಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಸುಧಾರಣೆ, ಪಾರದರ್ಶಕತೆ ತರುವ ಭರವಸೆಯೂ ಇದೆ. ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಖಾಸಗಿ ಸಹಭಾಗಿತ್ವವನ್ನು (ಪಿಪಿಪಿ) ಆಶ್ರಯಿಸುವ ಹಲವು ಘೋಷಣೆಗಳೂ ಇವೆ.

ಜಿಲ್ಲಾ ಮಟ್ಟದಲ್ಲಿ ಕ್ಯಾನ್ಸರ್ ಚಿಕಿತ್ಸೆ ಹಾಗೂ ತಪಾಸಣೆ ಸೌಲಭ್ಯವೂ ಸೇರಿದಂತೆ ದುಬಾರಿ ದರದ ಚಿಕಿತ್ಸೆಯನ್ನು ಕೈಗೆಟುಕುವ ದರದಲ್ಲಿ ಜನರಿಗೆ ತಲುಪಿಸುವುದಕ್ಕೆ ಪೂರಕವಾದ ಹಲವು ಕಾರ್ಯಕ್ರಮಗಳು ಬಜೆಟ್‌ನಲ್ಲಿವೆ. ಕರ್ನಾಟಕವನ್ನು 'ಸರ್ವ ಜನಾಂಗದ ಶಾಂತಿಯ ತೋಟ'ವನ್ನಾಗಿ ರಕ್ಷಿಸುವುದಕ್ಕೆ ಶಾಲಾ, ಕಾಲೇಜುಗಳಲ್ಲೇ ಸೌಹಾರ್ದ ಬಿತ್ತುವ 'ನಾವು ಮನುಜರು' ಯೋಜನೆ ಈ ಬಜೆಟ್‌ನ ವಿಶೇಷಗಳಲ್ಲಿ ಒಂದು.

ಬರ ನಿರ್ವಹಣೆಗೆ ₹ 500 ಕೋಟಿ

ರಾಜ್ಯವನ್ನು ಕಾಡುತ್ತಿರುವ ಬರ ಪರಿಸ್ಥಿತಿಯ ನಿರ್ವಹಣೆಗೆ ರಾಜ್ಯ ವಿಪತ್ತು ನಿರ್ವಹಣಾ ನಿಧಿ (ಎಸ್‌ಡಿಆರ್‌ಎಫ್) ಅಡಿಯಲ್ಲಿ ₹ 500 ಕೋಟಿ ಮಾತ್ರ ಒದಗಿಸಲಾಗಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಅನುದಾನ ನಿಗದಿಪಡಿಸುವ ಮಾನದಂಡಗಳ ಕುರಿತು ಬಜೆಟ್‌ನಲ್ಲಿ ಅಸಮಾಧಾನ ವ್ಯಕ್ತಪಡಿಸಿರುವ ಮುಖ್ಯಮಂತ್ರಿ, ಮಾನದಂಡಗಳ ಬದಲಾವಣೆಗೆ ಕೇಂದ್ರ ಸರ್ಕಾರ ಮತ್ತು 16ನೇ ಹಣಕಾಸು ಆಯೋಗವನ್ನು ಒತ್ತಾಯಿಸುವುದಾಗಿ ತಿಳಿಸಿದ್ದಾರೆ.


ಬಜೆಟ್ ಮುಖಪುಟದಲ್ಲೇ ಸಂವಿಧಾನ ಪ್ರಸ್ತಾವನೆ

ಸಿದ್ದರಾಮಯ್ಯ ಮಂಡಿಸಿದ ತಮ್ಮ 15ನೇ ಬಜೆಟ್‌ನ ಮುಖಪುಟವು ಭಾರತದ ಸಂವಿಧಾನದ ಪ್ರಸ್ತಾವನೆಯ ಚಿತ್ರ ಹೊಂದಿದೆ.

ರಾಜ್ಯ ಸರ್ಕಾರ ಮಂಡಿಸುವ ಬಜೆಟ್‌ನಲ್ಲಿ ಕರ್ನಾಟಕದ ಭೂಪಟ ನೀಡಿ, ಅಭಿವೃದ್ಧಿ ಮತ್ತು ಆದ್ಯತೆಯ ಚಿತ್ರಗಳನ್ನು ಒಳಗೊಂಡಿರುವುದು ಸಾಮಾನ್ಯವಾಗಿರುತ್ತಿತ್ತು. ಕೆಲವೊಮ್ಮೆ ವಿಧಾನಸೌಧದ ಚಿತ್ರವೂ ಇದ್ದಿದ್ದುಂಟು. ಇದೇ ಮೊದಲ ಬಾರಿಗೆ, ಸಂವಿಧಾನ ಪ್ರಸ್ತಾವನೆಯನ್ನು ಮುದ್ರಿಸಲಾಗಿದೆ.

ಪದಬಂಧ 5594

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
2.ಹಾದಿಯನ್ನು ತೋರುವವನೀತ (5)
4.ಧಮಕಿ ಹಾಕುತ್ತಿರುವ ನೀಚ! (3)
5.ಭೂತ ಇಲ್ಲಿಗೆ ಬಂದಿದೆಯಲ್ಲಾ? (3)
7.ಸ್ಥಾವರದ ಹತ್ತಿರ ಕೇಳಿದ ಧ್ವನಿ (2)
10.ಶ್ರಮ ನಿರ್ವಹಿಸುವುದು (2)
11.ದಪ್ಪವಾದ ಸೂಜಿಯಿದು (3)
12.ಮಂಡೂಕವಿರುವ ಬಾವಿ (2)
13.ಉದಾಹರಣೆ ನೀಡುವವನ ನೊಸಲು (2)
15.ಕನಸು ಇಲ್ಲಿ ದಿಟವಾಗಿದೆ (3)
17.ಗಂಡು ಕುರಿಯಿಲ್ಲಿ ಉಲ್ಟಾ ನಿಂತಿದೆ (3)
18.ಅಂತರಂಗ ಸ್ಪರ್ಶಿಯಾದುದು (5)

ಮೇಲಿಂದ ಕೆಳಕ್ಕೆ
1.ರುಚಿಯನ್ನು ಹೀಗೆನ್ನಿ (2)
2.ಮಾವಿನ ಮರ ಇಲ್ಲಿದೆ (3)
3.ಪಿನಾಕದ ಹತ್ತಿರವಿರುವ ಮಂಗ (2)
4.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
6.ಮನಸ್ಸು ಬದಲಾಗುವಿಕೆ (5)
8.ವನದೊಳಗೆ ಕಾಣಿಸಿದ ಮುಖ (3)
9.ಹಣ ನೀಡಿ ಖರೀದಿಸಿರುವ ಸೊಡರು ಉಲ್ಟಾ ಆಗಿದೆ (3)
14.ಕರುವಿಗೆ ತೋರಿದ ದಯೆ ತಿರುವು-ಮುರುವಾಗಿದೆ (3)
16.ಸುಗಮವಾಗಿ ಕಿತ್ತಿರುವ ಹೂವು (2)
19.ಪರಸ್ಪರ ಸಂಧಿಸುವುದು (2)

5593ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಂಬ 3.ಆಲಿಕಲ್ಲು
5.ವಸನ 7.ಕುಡಿನೋಟ
9.ವರದಿ 10.ಕಡಲು
11.ನವೀಕೃತ 13.ಮಣಕ
15.ಅರಸಿಕ 16.ವಪೆ

ಮೇಲಿಂದ ಕೆಳಕ್ಕೆ:
2.ಬಡವ 3.ಆನನ
4.ಕರಿಕು 6.ಸರದಿ
8.ಟಪಾಲು 9.ವಪನ
10.ಕಲ್ಯಾಣ 12.ತತ್ವರ
13.ಮಸ್ತಕ 14.ಕಕವ

ಸುಡೊಕು 5979

	5		7		2		8	
						3		4
	7	8	3		9		1	
1							2	3
	2				7			
8		7			1		5	9
2		3	9		6	5		8
	4	6		8			9	7
	8		5		4		3	2

5978 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಫೆಬ್ರುವರಿ 17, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಅಷ್ಟಮಿ ಗಂ. 08-17 **ನಕ್ಷತ್ರ:** ಕೃತ್ತಿಕಾ ಗಂ. 08-46 **ಯೋಗ:** ಐಂದ್ರ ಗಂ. 13-43 **ಕರಣ:** ಬವ ಗಂ. 08-17, ಕುಂಭ ಮಾಸದ 04 ನೇ ದಿನ, **ಮಳೆನಕ್ಷತ್ರ:** ಧನಿಷ್ಠಾ 4.
ರಾಹುಕಾಲ: ಬೆಳಿಗ್ಗೆ 09-00 – 10-30
ಸೂರ್ಯೋದಯ: 06-56 **ಸೂರ್ಯಾಸ್ತ:** 06-33
ಮುಸ್ಲಿಂ ದಿನಾಂಕ: 06 ಶಬನ್
ಅದೃಷ್ಟ ಸಂಖ್ಯೆ: 1, 3

ಮೇಷ: ಬದುಕಿನ ಸಾರ ತಿಳಿಯುವುದು ಕಷ್ಟಕರ ವಿಷಯವಾದರೂ ಅದರ ಬಗ್ಗೆ ಹೆಚ್ಚಿನ ಆಲೋಚನೆಯಲ್ಲಿ ತೊಡಗುವಿರಿ. ಸಂಜೆಯ ತಿಳಿ ವಾತಾವರಣ ಮನಸ್ಸಿನ ಹಾಗೂ ದೇಹದ ಆಯಾಸವನ್ನು ಇಂಗಿಸಲಿದೆ.

ವೃಷಭ: ಮಿತ್ರರಿಂದ ಉತ್ತಮ ಸಹಾಯ ದೊರೆಯುವ ಶುಭ ಸೂಚನೆಯೊಂದಿಗೆ ಪ್ರಾರಂಭವಾಗುವ ಈ ದಿನವು ನಿಮ್ಮ ಜೀವನದಲ್ಲಿ ಮಹತ್ವಪೂರ್ಣ ದಿನವಾಗಿ ಪರಿಣಮಿಸಲಿದೆ. ವ್ಯವಹಾರಿಕ ತಯಾರಿ ಸದಾಕಾಲ ಸಿದ್ಧವಿರಲಿ.

ಮಿಥುನ: ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಹೆಚ್ಚಿನ ತಯಾರಿ ನಡೆಸುವುದರಿಂದ ಮನೋಲ್ಲಾಸ ಪ್ರತಿಫಲ ಸಿಗುತ್ತದೆ. ವಿವಾಹಕ್ಕೆ ಸೋದರಿಕೆಯಲ್ಲಿ ಸಂಬಂಧ ಪ್ರಸ್ತಾಪ ನಡೆಸಬಹುದು. ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿರಿ.

ಕರ್ಕಾಟಕ: ಸೃಜನಶೀಲ ಯೋಜನೆಗಳಲ್ಲಿ ನಿಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವಿರಿ. ಎಲ್ಲವೂ ನಿಮ್ಮ ನಿರೀಕ್ಷೆಯಂತೆ ನಡೆಯಲಿದೆ. ಸ್ತ್ರೀಯರು ಹೊಟ್ಟೆಗೆ ಸಂಬಂಧಿಸಿದ ಸಮಸ್ಯೆಯಿಂದ ನಿರುತ್ಸಾಹಿಯಾಗಿರುತ್ತೀರಿ.

ಸಿಂಹ: ಅನಿವಾರ್ಯತೆಗೆ ಬಂಧು ಮಿತ್ರರಿಂದ ಸಹಕಾರ ಲಭ್ಯವಾಗುವುದು. ಕುಟುಂಬದ ಶುಭ ಕಾರ್ಯಗಳಿಗಾಗಿ ಪ್ರಯಾಣ ಮಾಡಬೇಕಾಗುವುದು. ಮಗನ ಜವಾಬ್ದಾರಿಯುತ ನಡವಳಿಕೆ ಹೆಮ್ಮೆ ಎನಿಸುವುದು.

ಕನ್ಯಾ: ಇತ್ತೀಚಿನ ನಿರ್ಧಾರದ ಬಗ್ಗೆ ಪುನರ್ ಪರಿಶೀಲಿಸಲು ಸ್ವಲ್ಪ ಸಮಯ ಮೀಸಲಿಡಿ. ಸಾಧ್ಯವಾದಷ್ಟು ಸಮಾಧಾನ ತಾಳ್ಮೆಯಿಂದ ಮುಂದುವರಿದಲ್ಲಿ ಮಾನಸಿಕ ನೆಮ್ಮದಿ ಕಾಣುವಿರಿ. ಅನಿವಾರ್ಯಕ್ಕಾಗಿ ವಾಹನ ಕೊಳ್ಳುವಿರಿ.

ತುಲಾ: ಪ್ರಯತ್ನಗಳು ವ್ಯರ್ಥವಾಗದೆ ಸರಿಯಾಗಿ ಫಲಿತಾಂಶವನ್ನು ಪಡೆಯಲು ಮನೆ ದೇವರ ಹಾಗೂ ಗುರುಹಿರಿಯರ ಆಶೀರ್ವಾದ ಪಡೆಯಿರಿ. ಮಧ್ಯವರ್ತಿಗಳ ಸಹಾಯದಿಂದಾಗಿ ವ್ಯಾಪಾರದ ವಿಷಯದಲ್ಲಿ ಅನುಕೂಲವಾಗಲಿದೆ.

ವೃಶ್ಚಿಕ: ಎದುರಾಗುವ ಅವಕಾಶಗಳಿಂದ ನಿಮ್ಮ ಜೀವನದ ಉತ್ಸಾಹದ ಚಿಲುಮೆ ಇಮ್ಮಡಿಗೊಳ್ಳಲಿದೆ. ಮೊದಲು ಪ್ರಯತ್ನ ಸಫಲವಾಗಿದ್ದರಿಂದ ಉತ್ಸಾಹ ಗರಿಗೆದರಿದೆ. ಸಗಟು ವ್ಯಾಪಾರಿಗಳಿಗೆ ಹೇರಳ ಲಾಭ ದೊರಕಲಿದೆ.

ಧನು: ವಿಶೇಷ ವ್ಯಕ್ತಿಗಳ ಭೇಟಿ ಈ ದಿನ ನಿಮಗೆ ಸಂತೋಷ ತರುವುದಲ್ಲದೆ, ನಿಮ್ಮ ಹೊಸ ಯೋಜನೆಗಳಿಗೆ ಚೈತನ್ಯ ತುಂಬುವುದು. ಮಾತು ಮಿತವಾಗಿ ಮತ್ತು ಸತ್ಯವಾಗಿರಲಿ. ಹೊಗಳಿಕೆಯ ಮಾತುಗಳಿಗೆ ಮರಳಾಗಬೇಡಿ.

ಮಕರ: ಜೀವನದಲ್ಲಿ ಬಯಸಿದ ನೆಲೆಯನ್ನು ಗಟ್ಟಿಗೊಳಿಸಿಕೊಂಡ ಸಂತೃಪ್ತಿ ತುಂಬಿರುತ್ತದೆ. ರೈತರಿಗೆ ಕಾಡು ಪ್ರಾಣಿಗಳ ಕಾಟದಿಂದಾಗಿ ನಷ್ಟ ಸಂಭವಿಸಬಹುದು. ಮನೆಯವರ ಸಲಹೆಯಂತೆ ಪ್ರಯಾಣ ಕೈಗೊಳ್ಳಬೇಕಾಗುವುದು.

ಕುಂಭ: ಕೆಲಸ ಕಾರ್ಯಗಳು ಈಡೇರಿದರೂ ಅದಕ್ಕಾಗಿ ಬಹಳ ಹಣ ವ್ಯಯಿಸಬೇಕಾಗಬಹುದು. ಪ್ರಯತ್ನ ಬಲಕ್ಕೆ ಉತ್ತಮ ಫಲ ದೊರೆಯುವುದು. ಇಂದು ಶರೀರದಲ್ಲಿ ಉಲ್ಲಾಸ ಹಾಗೂ ಕಾರ್ಯಪ್ರವೃತ್ತಿಯನ್ನು ಹೊಂದುತ್ತೀರಿ.

ಮೀನ: ರಫ್ತು ಮಾರಾಟದಲ್ಲಿ ಹಿನ್ನಡೆ ಎದುರಾದರೂ, ಆದಾಯಕ್ಕೇನೂ ತೊಂದರೆಯಿಲ್ಲ. ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಬಹಳವಾದುದು ಎಂದು ತಿಳಿದುಕೊಳ್ಳುವಿರಿ. ಅನಾರೋಗ್ಯ ಭೀತಿ ಉಂಟಾಗುವುದು.

ಅಂಗನವಾಡಿ ಮಕ್ಕಳಿಗೆ ಕೊಳೆತ ಮೊಟ್ಟೆ ವಿತರಣೆ

ಪ್ರಜಾವಾಣಿ ವಾರ್ತೆ

ಗದಗ: ನಗರದ ಗಂಗಾಪುರ ಪೇಟೆಯಲ್ಲಿರುವ ಅಂಗನವಾಡಿ ಸಂಖ್ಯೆ 178ರಲ್ಲಿ ಮಕ್ಕಳಿಗೆ ನೀಡಿದ ಮೊಟ್ಟೆಗಳು ಕೊಳೆತಿದ್ದು, ಪೋಷಕರು ಅಂಗನವಾಡಿ ಸಿಬ್ಬಂದಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಸರ್ಕಾರದ ಸವಲತ್ತುಗಳನ್ನು ಮಕ್ಕಳಿಗೆ ತಲುಪಿಸುವಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ದೂರಿದ್ದಾರೆ.

‘ಮಕ್ಕಳಿಗೆ ಕೊಳೆತ ಮೊಟ್ಟೆಗಳನ್ನು ನೀಡಿದ್ದು ಆತಂಕ ಮೂಡಿಸಿದೆ. ಅಂಗನವಾಡಿ ಸಿಬ್ಬಂದಿ ಮೊಟ್ಟೆಗಳನ್ನು ಪರೀಕ್ಷಿಸಿ, ನಂತರ ಮಕ್ಕಳಿಗೆ ನೀಡಬೇಕು. ಕೆಟ್ಟಿರುವ ಪದಾರ್ಥಗಳನ್ನು ತಿಂದು ಮಕ್ಕಳ ಆರೋಗ್ಯ ಹದಗೆಟ್ಟರೆ ಯಾರು ಹೊಣೆ?’ ಎಂದು ಪೋಷಕಿ ಲಲಿತಾ ಪವಾಡೆಪ್ಪನವರ ಪ್ರಶ್ನಿಸಿದರು.

‘ಕೆಟ್ಟಿರುವ ಮೊಟ್ಟೆಯನ್ನು ವಿತರಿಸಲಾಗಿದೆ ಎಂಬ ದೂರು ಬಂದ ಹಿನ್ನೆಲೆಯಲ್ಲಿ ಗಂಗಾಪುರ ಪೇಟೆ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಅಲ್ಲಿನ ಸಿಬ್ಬಂದಿ ಹೊಸ ಮೊಟ್ಟೆಗಳನ್ನು ಉಳಿಸಿ, ಹಳೆಯವನ್ನು ಬೇಯಿಸಿ ಮಕ್ಕಳಿಗೆ ನೀಡಿದ್ದಾರೆ. ಇದರಿಂದ ಈ ಪ್ರಮಾದ ಆಗಿದೆ. ಅಂಗನವಾಡಿ ಶಿಕ್ಷಕಿಯನ್ನು ಅಮಾನತು ಮಾಡಿ, ಅಲ್ಲಿಗೆ ಬೇರೆಯವರನ್ನು ನಿಯೋಜಿಸಲಾಗಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಪರುಶುರಾಮ ಶೆಟ್ಟಪ್ಪನವರ ‘ಪ್ರಜಾವಾಣಿ’ಗೆ ತಿಳಿಸಿದರು.



ಅಂಗನವಾಡಿ ಕೇಂದ್ರದ ಮಕ್ಕಳಿಗೆ ಕೊಳೆತ ಮೊಟ್ಟೆ ವಿತರಣೆ ಮಾಡಿರುವುದು

ಕಾಂಗ್ರೆಸ್ ರಾಜ್ಯಮಟ್ಟದ ಸಮಾವೇಶ ಇಂದು

ಪ್ರಜಾವಾಣಿ ವಾರ್ತೆ

ಮಂಗಳೂರು: ಲೋಕಸಭಾ ಚುನಾವಣೆಯ ತಯಾರಿಗಾಗಿ ಕಾಂಗ್ರೆಸ್ ಕಾರ್ಯಕರ್ತರ ರಾಜ್ಯಮಟ್ಟದ ಸಮಾವೇಶ ಇದೇ 17ರಂದು ಮಧ್ಯಾಹ್ನ 2ಕ್ಕೆ ಇಲ್ಲಿಯ ಅಡ್ಯಾರ್‌ನ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನ ಮೈದಾನದಲ್ಲಿ ನಡೆಯಲಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯದ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಸಚಿವರು ಪಾಲ್ಗೊಳ್ಳುವರು. ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿದ್ದವರು, ಜಿಲ್ಲಾ ಘಟಕಗಳ ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಹಿರಿಯ ಮುಖಂಡರು, ರಾಜ್ಯದ ಜನಪ್ರತಿನಿಧಿಗಳು ಮತ್ತು ನಾಯಕರನ್ನು ಆಹ್ವಾನಿಸಿದ್ದೇವೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರತಿ ಬೂತ್‌ನಿಂದ ಒಟ್ಟಾರೆ 20 ಸಾವಿರಕ್ಕಿಂತ ಹೆಚ್ಚು ಕಾರ್ಯಕರ್ತರು ಸಮಾವೇಶದಲ್ಲಿ ಪಾಲ್ಗೊಳ್ಳುತ್ತಾರೆ’ ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ತಿಳಿಸಿದೆ.

ಸಚಿವರ ಚಿತ್ರ ಬಳಸಿ ವಂಚನೆ

ಚಿತ್ರದುರ್ಗ: ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುವ ರೈಲ್ವೆ ಇಲಾಖೆಯ ಉದ್ಯೋಗಿಗಳು ಸೇರಿದಂತೆ 106 ಜನರಿಂದ ₹ 4.80 ಕೋಟಿ ಸಂಗ್ರಹಿಸಿ ಪರಾರಿಯಾಗಿರುವ ಆಂಧ್ರಪ್ರದೇಶದ ಕೋಡೆ ರಮಣಯ್ಯ, ಪ್ರಭಾವಿ ಸಚಿವರು ಹಾಗೂ ಗಣ್ಯರ ಚಿತ್ರಗಳನ್ನು ‘ಕ್ರೌಡ್ ಕ್ಲಬ್ ಇಂಟರ್ ನ್ಯಾಷನಲ್ ಪ್ರೈವೇಟ್ ಲಿಮಿಟೆಡ್’ ಜಾಲತಾಣದಲ್ಲಿ ಪ್ರಕಟಿಸಿ ಜನರನ್ನು ವಂಚಿಸುತ್ತಿದ್ದ ಸಂಗತಿ ಪೊಲೀಸರ ತನಿಖೆಯಿಂದ ಬೆಳಕಿಗೆ ಬಂದಿದೆ.



ಕೋಡೆ ರಮಣಯ್ಯ

ಆಂಧ್ರಪ್ರದೇಶದ ಹಣಕಾಸು ಸಚಿವ ಬಿ.ರಾಜೇಂದ್ರನಾಥ ರೆಡ್ಡಿ ಮತ್ತಿತರ ಗಣ್ಯರ ಭಾವಚಿತ್ರಗಳನ್ನು ಜಾಲತಾಣದಲ್ಲಿ ಪ್ರಕಟಿಸಿ, ಕೋಡೆ ರಮಣಯ್ಯ ಎಂಬುದಾಗಿ ಆರೋಪಿ ಬಿಂಬಿಸಿಕೊಂಡಿದ್ದ. ಅಧಿಕ ಬಡ್ಡಿ, ಭಾರಿ ಲಾಭದ ಆಮಿಷ ತೋರಿಸಿ ಜನರನ್ನು ಮೋಸ ಮಾಡುತ್ತಿದ್ದ.

ಕೋಡೆ ರಮಣಯ್ಯ ಪತ್ತೆಗೆ ತನಿಖೆ ಚುರುಕುಗೊಳಿಸಿದ ಇಲ್ಲಿನ ‘ಸೆನ್’ ಠಾಣೆಯ ಪೊಲೀಸರು ಆಂಧ್ರಪ್ರದೇಶಕ್ಕೆ ತೆರಳಿದ್ದಾರೆ. ತನಿಖಾಧಿಕಾರಿ ನೇತೃತ್ವದ ತಂಡ ಕರ್ನೂಲ್ ಜಿಲ್ಲೆಯಲ್ಲಿ ಶುಕ್ರವಾರ ಶೋಧ ನಡೆಸಿದೆ.

‘ಪ್ರಜಾವಾಣಿ’ಯ ಫೆ. 15ರ ಸಂಚಿಕೆಯಲ್ಲಿ ‘₹ 480 ಕೋಟಿ ವಂಚನೆ: ಆಸ್ತಿ ಜಪ್ತಿಗೆ ಸಿದ್ಧತೆ’ ಶೀರ್ಷಿಕೆಯಡಿ ವರದಿ ಪ್ರಕಟವಾಗಿತ್ತು. ಈ ವರದಿಯೊಂದಿಗೆ ಸಚಿವ ಬಿ.ರಾಜೇಂದ್ರನಾಥ ರೆಡ್ಡಿ ಅವರ ಭಾವಚಿತ್ರ ಪ್ರಕಟವಾಗಿತ್ತು.

ರೈತರ ಮೇಲೆ ಮತ್ತೆ ಅಶ್ರುವಾಯು ಶೆಲ್ ಪ್ರಯೋಗ • ಗಡಿಯಿಂದ ಕದಲದ ರೈತರು

ರೈತರೊಂದಿಗೆ ನಾಳೆ ಮತ್ತೆ ಮಾತುಕತೆ

ಪ್ರಜಾವಾಣಿ ವಾರ್ತೆ

ಚಂಡೀಗಢ (ಪಿಟಿಐ): ಶಂಭು ಗಡಿಯ ಕಡೆ ಸಾಗಲು ಯತ್ನಿಸಿದ ರೈತರನ್ನು ಚದುರಿಸಲು ಹರಿಯಾಣ ಪೊಲೀಸರು ಶುಕ್ರವಾರ ಅಶ್ರುವಾಯು ಶೆಲ್ ಸಿಡಿಸಿದರು. ರೈತರ ಪ್ರತಿನಿಧಿಗಳು ಹಾಗೂ ಕೇಂದ್ರ ಸರ್ಕಾರದ ಜೊತೆ ಗುರುವಾರ ನಡೆದ ಮಾತುಕತೆಯು ಯಾವುದೇ ತೀರ್ಮಾನಕ್ಕೆ ಬಂದಿಲ್ಲ. ಎರಡೂ ಕಡೆಯವರು ಭಾನುವಾರ ಮತ್ತೆ ಸಭೆ ಸೇರಲಿದ್ದಾರೆ.

ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಮತ್ತು ಇತರ ಕೆಲವು ಬೇಡಿಕೆಗಳ ಈಡೇರಿಕೆಗೆ ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕಿಸಾನ್ ಮಜ್ದೂರ್ ಮೋರ್ಚಾ ಕರೆ ನೀಡಿರುವ 'ದೆಹಲಿ ಚಲೋ' ಪ್ರತಿಭಟನೆಯು ಶುಕ್ರವಾರ ನಾಲ್ಕನೆಯ ದಿನಕ್ಕೆ ಕಾಲಿರಿಸಿತು.

ಭಾನುವಾರ ನಡೆಯಲಿರುವುದು ನಾಲ್ಕನೆಯ ಸುತ್ತಿನ ಸಭೆ. ಫೆಬ್ರುವರಿ 8, 12 ಮತ್ತು 15ರಂದು ಮಾತುಕತೆ ನಡೆದಿವೆ. ಯಾವ ಸಭೆಯಲ್ಲಿಯೂ ತೀರ್ಮಾನವೊಂದಕ್ಕೆ ಬರಲು ಸಾಧ್ಯವಾಗಿಲ್ಲ.

ದೆಹಲಿ ಕಡೆ ಸಾಗಲು ಯತ್ನಿಸುತ್ತಿರುವ ಪಂಜಾಬ್ ರೈತರನ್ನು ಪಂಜಾಬ್–ಹರಿಯಾಣ ನಡುವಿನ ಶಂಭು ಮತ್ತು ಖಾನೌರಿ ಗಡಿಯಲ್ಲಿ ಪೊಲೀಸರು ತಡೆದಿದ್ದಾರೆ. ಮಂಗಳವಾರದಿಂದಲೂ ರೈತರು ಈ ಎರಡು ಗಡಿಗಳಲ್ಲಿ ಬೀಡು ಬಿಟ್ಟಿದ್ದಾರೆ.

ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಮಾತ್ರವೇ ಅಲ್ಲದೆ, ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರಬೇಕು ಎಂದು ರೈತರು ಒತ್ತಾಯಿಸುತ್ತಿದ್ದಾರೆ. ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಪಿಂಚಣಿ ನೀಡಬೇಕು, ಕೃಷಿ ಸಾಲ ಮನ್ನಾ ಮಾಡಬೇಕು, ವಿದ್ಯುತ್ ಶುಲ್ಕ ಹೆಚ್ಚಿಸಬಾರದು ಎಂಬ ಬೇಡಿಕೆಗಳನ್ನೂ ರೈತರು ಸರ್ಕಾರದ ಮುಂದೆ ಇರಿಸಿದ್ದಾರೆ.

ಗುರುವಾರದ ಸಭೆಯಲ್ಲಿ ಕೇಂದ್ರ ಸಚಿವರಾದ ಅರ್ಜುನ್ ಮುಂಡಾ, ಪೀಯೂಷ್ ಗೋಯಲ್ ಮತ್ತು ನಿತ್ಯಾನಂದ ರಾಯ್ ಅವರು ಪಾಲ್ಗೊಂಡಿದ್ದರು. ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರೂ ಸಭೆಯಲ್ಲಿದ್ದರು. ಐದು ತಾಸು ಮಾತುಕತೆ ನಡೆಯಿತು. ಸಭೆಯ ನಂತರ ಮುಂಡಾ ಅವರು, 'ಒಟ್ಟಾಗಿ ಕುಳಿತು ನಾವು ಒಂದು ಪರಿಹಾರ ಕಂಡುಕೊಳ್ಳುತ್ತೇವೆ' ಎಂದು ತಿಳಿಸಿದರು.

ರೈತರ ಬೇಡಿಕೆಗಳ ಕುರಿತು ವಿಸ್ತೃತ ಚರ್ಚೆ ನಡೆದಿದೆ ಎಂದು ರೈತ ಮುಖಂಡ ಸರವಣ್ ಸಿಂಗ್ ಪಂಡೇರ್ ತಿಳಿಸಿದರು.



'ದೆಹಲಿ ಚಲೋ' ಪ್ರತಿಭಟನೆಯಲ್ಲಿ ಭಾಗಿಯಾಗಿರುವ ರೈತರು ದೆಹಲಿ ಪ್ರವೇಶಿಸುವುದನ್ನು ತಡೆಯಲು ಶಂಭು ಗಡಿಯಲ್ಲಿ ಪೊಲೀಸರು ಮತ್ತು ಅರೆಸೇನಾ ಸಿಬ್ಬಂದಿ ತಡೆಗೋಡೆ ನಿರ್ಮಿಸಿದ್ದಾರೆ. –ಎಎಫ್‌ಪಿ ಚಿತ್ರ

ದಿನದ ಬೆಳವಣಿಗೆಗಳು

- ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ 63 ವರ್ಷ ವಯಸ್ಸಿನ ರೈತ ಗ್ಯಾನ್ ಸಿಂಗ್ ಅವರು ಶಂಭು ಗಡಿಯಲ್ಲಿ ಹೃದಯಾಘಾತದಿಂದ ಶುಕ್ರವಾರ ಮೃತಪಟ್ಟಿದ್ದಾರೆ. ಸಿಂಗ್ ಅವರು ಪಂಜಾಬ್‌ನ ಗುರುದಾಸಪುರ ಜಿಲ್ಲೆಯವರು. ಶುಕ್ರವಾರ ಬೆಳಿಗ್ಗೆ ಅವರಿಗೆ ಎದೆನೋವು ಕಾಣಿಸಿಕೊಂಡಿತು. ಅವರನ್ನು ರಾಜಪುರದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ನಂತರ ಅಲ್ಲಿಂದ, ಪಟಿಯಾಲದ ರಾಜೀಂದ್ರ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿಗೆ ತಲುಪುವ ಮೊದಲೇ ಅವರು ಮೃತಪಟ್ಟಿದ್ದರು ಎಂದು ವೈದ್ಯರು ತಿಳಿಸಿದರು.
- ರೈತರ ಸಾಮಾಜಿಕ ಜಾಲತಾಣ ಖಾತೆಗಳನ್ನು ಕೇಂದ್ರ ಸರ್ಕಾರ ಅಮಾನತಿನಲ್ಲಿ ಇರಿಸಿದೆ ಎಂದು ರೈತ ಮುಖಂಡ ಸರವಣ್ ಸಿಂಗ್ ಪಂಡೇರ್ ಆರೋಪಿಸಿದ್ದಾರೆ. ರೈತರ ಪ್ರತಿಭಟನೆ ಬಗ್ಗೆ ಮಾಹಿತಿ ಪ್ರಸಾರ ಮಾಡುತ್ತಿದ್ದ ಅಂದಾಜು 70 ಯುಟ್ಯೂಬರ್‌ಗಳ ಖಾತೆಗಳು ಕೂಡ ಅಮಾನತಾಗಿವೆ ಎಂದು ದೂರಿದ್ದಾರೆ.
- ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿಯನ್ನು ನೀಡದಿರುವುದು ಏಕೆ ಎಂಬ ಪ್ರಶ್ನೆಯನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಮುಂದಿರಿಸಬೇಕು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಸ್ವಾಮಿನಾಥನ್ ಆಯೋಗದ ವರದಿ ಬಗ್ಗೆ ಒಮ್ಮತವನ್ನು ರೂಪಿಸುವ ಕೆಲಸ ನಡೆದಿತ್ತು ಎಂದು ರಮೇಶ್ ಹೇಳಿದ್ದಾರೆ.
- ಶಂಭು ಗಡಿಯಲ್ಲಿ ರೈತರು ಕಲ್ಲು ತೂರಾಟದಲ್ಲಿ ತೊಡಗಿರುವ, ಭದ್ರತಾ ಸಿಬ್ಬಂದಿಯನ್ನು ಪ್ರಚೋದಿಸಲು ಯತ್ನಿಸುತ್ತಿದ್ದಾರೆ ಎನ್ನಲಾದ ವಿಡಿಯೊಗಳನ್ನು ಹರಿಯಾಣ ಪೊಲೀಸರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

ಬಹುತೇಕ ಕಡೆ ಶಾಂತಿಯುತ ಬಂದ್, ಕೆಲವೆಡೆ ನೀರಸ ಪ್ರತಿಕ್ರಿಯೆ

ಫಿರೋಜ್‌ಪುರ/ಅಮೃತಸರ/ಹಿಸಾರ್/ಮುಜಫ್ಫರ್‌ನಗರ (ಪಿಟಿಐ): ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದ್ದ 'ಭಾರತ್ ಬಂದ್' ಪರಿಣಾಮವಾಗಿ ಪಂಜಾಬ್‌ನಲ್ಲಿ ಬಸ್ಸುಗಳು ರಸ್ತೆಗೆ ಇಳಿಯಲಿಲ್ಲ. ಇದರಿಂದಾಗಿ ಪ್ರಯಾಣಿಕರು ತೊಂದರೆ ಅನುಭವಿಸಿದರು. ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಸೇರಿದಂತೆ ರೈತರ ವಿವಿಧ ಬೇಡಿಕೆಗಳಿಗೆ ಈಡೇರಿಕೆಗೆ ಸರ್ಕಾರದ ಮೇಲೆ ಒತ್ತಡ ತರಲು ಸಂಘಟನೆಯು ಬಂದ್‌ಗೆ ಕರೆ ನೀಡಿತ್ತು.

ರಾಜ್ಯದ ಹಲವೆಡೆ ಮಾರುಕಟ್ಟೆಗಳು ಹಾಗೂ ವಾಣಿಜ್ಯ ಘಟಕಗಳು ಬಂದ್ ಆಗಿದ್ದವು. ಹಲವೆಡೆ ಪ್ರತಿಭಟನೆ ನಡೆಸಿದ ರೈತರು ಪಠಾಣ್‌ಕೋಟ್, ತರನ್ ತಾರನ್, ಬಠಿಂಡಾ ಮತ್ತು ಜಲಂಧರ್‌ನಲ್ಲಿ ರಸ್ತೆ ತಡೆ ನಡೆಸಿದರು. ತಮ್ಮ ಬೇಡಿಕೆಗಳನ್ನು ಒಪ್ಪಿಕೊಳ್ಳದ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಪಂಜಾಬ್‌ನಲ್ಲಿ ರಸ್ತೆ ಸಾರಿಗೆ ಸಂಸ್ಥೆಗಳ ವಿವಿಧ ಸಂಘಟನೆಗಳು ಬಂದ್‌ಗೆ ಬೆಂಬಲ ಸೂಚಿಸಿದ್ದವು. ಹರಿಯಾಣದಲ್ಲಿ ಬಂದ್ ಕರೆಗೆ ಭಾಗಶಃ ಬೆಂಬಲ ವ್ಯಕ್ತವಾಯಿತು. ಬಂದ್ ಶಾಂತಿಯುತ ವಾಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ. ಹರಿಯಾಣ ರೋಡ್‌ವೇಸ್‌ನ ನೌಕರರು ಬಂದ್‌ಗೆ ಬೆಂಬಲ ನೀಡಿದ ಪರಿಣಾಮವಾಗಿ ಹಿಸಾರ್‌ನಲ್ಲಿ ಸಾರಿಗೆ ಸೇವೆಗಳಿಗೆ ಅಡ್ಡಿ ಉಂಟಾಯಿತು. ಹರಿಯಾಣದ ಹಲವೆಡೆ ಟೋಲ್ ವಸೂಲಾತಿ ಕೇಂದ್ರಗಳ ಬಳಿ ರೈತರು ಧರಣಿ ನಡೆಸಿದರು, ಟೋಲ್ ಸಂಗ್ರಹಿಸಲು ಅವಕಾಶ ಕೊಡಲಿಲ್ಲ. ಉತ್ತರ ಪ್ರದೇಶದ ಮುಜಫ್ಫರ್‌ನಗರದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಪಾಲ್ಗೊಂಡಿದ್ದರು. ದೆಹಲಿಗೆ ತೆರಳುವ ತಮ್ಮ ಆಲೋಚನೆಯ ಬಗ್ಗೆ ಪ್ರಶ್ನಿಸಿದಾಗ ಟಿಕಾಯತ್ ಅವರು, 'ಶನಿವಾರ ಸಿಸೌಲಿಯಲ್ಲಿ ಸಭೆ ಇದೆ. ಮುಂದಿನ ಕ್ರಮವನ್ನು ಅಲ್ಲಿ ತೀರ್ಮಾನಿಸಲಾಗುತ್ತದೆ' ಎಂದು ತಿಳಿಸಿದರು.

ಹರಿಯಾಣದ ಕುರುಕ್ಷೇತ್ರದಲ್ಲಿ ಬಂದ್‌ಗೆ ಸ್ಪಂದನ ಇರಲಿಲ್ಲ. ಉತ್ತರ ಪ್ರದೇಶದ ಬಿಜನೌರ್‌ನಲ್ಲಿ ರೈತರು ಕಬ್ಬು ತೂಕಮಾಡುವ ಕೇಂದ್ರಗಳಲ್ಲಿ ಕೆಲಸಕ್ಕೆ ಅಡ್ಡಿ ಉಂಟುಮಾಡಿದರು. ಉತ್ತರ ಪ್ರದೇಶದ ಶಹಜಹಾನಪುರ, ಬದಾಯೂಂನಲ್ಲಿ ಬಂದ್ ಪರಿಣಾಮ ಇರಲಿಲ್ಲ.

ಎನ್‌ಆರ್‌ಐ, ಒಸಿಐ ವಿವಾಹಕ್ಕೆ ಸಮಗ್ರ ಕಾನೂನು: ಶಿಫಾರಸು

ನವದೆಹಲಿ (ಪಿಟಿಐ): ಅನಿವಾಸಿ ಭಾರತೀಯರು ಮತ್ತು ಭಾರತೀಯ ಪ್ರಜೆಗಳ ನಡುವೆ 'ಮೋಸದ ಮದುವೆಗಳು' ಹೆಚ್ಚುತ್ತಿರುವುದು ಕಳವಳಕಾರಿ ಬೆಳವಣಿಗೆ ಎಂದು ಹೇಳಿರುವ ಕೇಂದ್ರ ಕಾನೂನು ಆಯೋಗವು, ಈ ಪರಿಸ್ಥಿತಿಯನ್ನು ನಿಭಾಯಿಸಲು ಸಮಗ್ರವಾದ ಕಾನೂನನ್ನು ರೂಪಿಸಬೇಕು ಎಂದು ಶಿಫಾರಸು ಮಾಡಿದೆ. 'ಇಂತಹ ಮದುವೆಗಳ ನೋಂದಣಿಯನ್ನು ಕಡ್ಡಾಯಗೊಳಿಸಬೇಕು' ಎಂಬ ಅಂಶವು ಶಿಫಾರಸಿನಲ್ಲಿ ಇದೆ.

'ಅನಿವಾಸಿ ಭಾರತೀಯರು (ಎನ್‌ಆರ್‌ಐ) ಮತ್ತು ಸಾಗರೋತ್ತರ ಭಾರತೀಯರು (ಒಸಿಐ) ಮದುವೆಗೆ ಸಂಬಂಧಿಸಿದ ವಿಚಾರಗಳ ಕುರಿತ ಕಾನೂನು' ಹೆಸರಿನ ವರದಿಯನ್ನು ಆಯೋಗದ ಅಧ್ಯಕ್ಷ, ನಿವೃತ್ತ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ ಅವರು ಕೇಂದ್ರ ಕಾನೂನು ಸಚಿವಾಲಯಕ್ಕೆ ಸಲ್ಲಿಸಿದ್ದಾರೆ.

ಅನಿವಾಸಿ ಭಾರತೀಯರು ಹಾಗೂ ಭಾರತ ಮೂಲದ ವಿದೇಶಿ ಪ್ರಜೆಗಳು ಭಾರತದ ಪ್ರಜೆಗಳನ್ನು ಮದುವೆ ಆದಲ್ಲಿ, ಅದಕ್ಕೆ ಸಂಬಂಧಿಸಿದ ಎಲ್ಲ ಆಯಾಮಗಳನ್ನು ಒಳಗೊಳ್ಳುವ ಸಮಗ್ರವಾದ ಕಾನೂನು ಬೇಕಿದೆ ಎಂಬುದು ಆಯೋಗದ ಅಭಿಪ್ರಾಯ ಎಂದು ಅವಸ್ಥಿ ಹೇಳಿದ್ದಾರೆ.

'ಎನ್‌ಆರ್‌ಐಗಳು ಮತ್ತು ಭಾರತೀಯ ಪ್ರಜೆಗಳ ನಡುವೆ ಮೋಸದ ಮದುವೆಗಳು ಹೆಚ್ಚಾಗುತ್ತಿರುವುದು ಚಿಂತೆ ಮೂಡಿಸುವಂತಿದೆ. ಇಂತಹ ಮದುವೆಗಳ ಹಿಂದಿನ ವಂಚನೆಯ ಉದ್ದೇಶವನ್ನು ಹೇಳುವ ವರದಿಗಳು ಇವೆ. ಇಂತಹ ಮದುವೆಗಳು ಭಾರತೀಯ ಸಂಗಾತಿಯನ್ನು, ಅದರಲ್ಲೂ ಮುಖ್ಯವಾಗಿ ಮಹಿಳೆಯನ್ನು, ಮದುವೆಯ ನಂತರದಲ್ಲಿ ಪರಾಧೀನವಾದ ಸ್ಥಿತಿಗೆ ನೂಕಿವೆ' ಎಂದು ಅವಸ್ಥಿ ಅವರು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರಿಗೆ ವರದಿಯ ಜೊತೆ ಸಲ್ಲಿಸಿರುವ ಪತ್ರದಲ್ಲಿ ಹೇಳಿದ್ದಾರೆ.

ಪ್ರಸ್ತಾವಿತ ಕಾನೂನು ಎನ್‌ಆರ್‌ಐಗಳಿಗೆ ಮಾತ್ರವೇ ಅಲ್ಲದೆ, ಪೌರತ್ವ ಕಾಯ್ದೆ 1955ರಲ್ಲಿ ನೀಡಲಾಗಿರುವ 'ಸಾಗರೋತ್ತರ ಭಾರತೀಯ' ಎಂಬ ವ್ಯಾಖ್ಯಾನದ ಅಡಿಯಲ್ಲಿ ಬರುವ ಎಲ್ಲರಿಗೂ ಅನ್ವಯವಾಗಬೇಕು ಎಂದು ಆಯೋಗವು ಹೇಳಿದೆ. ಈ ಕಾನೂನಿನ ಅಡಿಯಲ್ಲಿ ವಿಚ್ಛೇದನ, ಜೀವನಾಂಶ, ಮಕ್ಕಳನ್ನು ನೋಡಿಕೊಳ್ಳುವ ಹೊಣೆ, ಎನ್‌ಆರ್‌ಐ ಹಾಗೂ ಸಾಗರೋತ್ತರ ಭಾರತೀಯರಿಗೆ ಸಮನ್ಸ್, ವಾರಂಟ್ ಅಥವಾ ನ್ಯಾಯಾಂಗ ದಾಖಲೆಗಳನ್ನು ತಲುಪಿಸುವ ಬಗೆಯ ಕುರಿತು ವಿವರಣೆ ಇರಬೇಕು ಎಂದು ಅವಸ್ಥಿ ಹೇಳಿದ್ದಾರೆ.

'ಪೇಟಿಎಂನಿಂದ ಫಾಸ್ಟ್ಯಾಗ್ ಖರೀದಿ ಬೇಡ'

ಒಂದನೇ ಪುಟದಿಂದ

ಏರ್‌ಟೆಲ್ ಪೇಮೆಂಟ್ಸ್ ಬ್ಯಾಂಕ್, ಅಲಹಾಬಾದ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಎಚ್‌ಡಿಎಫ್‌ಸಿ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಐಡಿಬಿಐ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಯೆಸ್ ಬ್ಯಾಂಕ್, ಕೆನರಾ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಕೋಟಕ್ ಮಹೀಂದ್ರ ಬ್ಯಾಂಕ್, ಕರೂರ್ ವೈಶ್ಯ ಬ್ಯಾಂಕ್, ಇಂಡಿಯನ್ ಬ್ಯಾಂಕ್ ಸೇರಿದಂತೆ 32 ಬ್ಯಾಂಕ್‌ಗಳಲ್ಲಿ ಬಳಕೆದಾರರು ಫಾಸ್ಟ್ಯಾಗ್ ಖರೀದಿಸಬಹುದು ಎಂದು ಶುಕ್ರವಾರ 'ಎಕ್ಸ್'ನಲ್ಲಿ ತಿಳಿಸಿದೆ.

ದೇಶದಲ್ಲಿ ಒಟ್ಟು 8 ಕೋಟಿಗೂ ಹೆಚ್ಚು ಫಾಸ್ಟ್ಯಾಗ್ ಬಳಕೆದಾರರಿದ್ದಾರೆ. ಈ ಪೈಕಿ ಪೇಟಿಎಂ ಬ್ಯಾಂಕ್ ಶೇ 30ರಷ್ಟು ಪಾಲನ್ನು ಹೊಂದಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜನವರಿ 19ರಂದೇ ಫಾಸ್ಟ್ಯಾಗ್‌ಗಳನ್ನು ವಿತರಿಸದಂತೆ ಪೇಟಿಎಂ ಬ್ಯಾಂಕ್‌ಗೆ, ಭಾರತೀಯ ಹೆದ್ದಾರಿ ನಿರ್ವಹಣಾ ಕಂಪನಿಯು ಸೂಚಿಸಿತ್ತು.

ಮಾರ್ಚ್ 15ರ ವರೆಗೆ ನಿರ್ಬಂಧ ವಿಸ್ತರಣೆ: ಫೆಬ್ರುವರಿ 29ರ ಬಳಿಕ ಎಲ್ಲ ಬಗೆಯ ಸೇವೆಗಳನ್ನು ಸ್ಥಗಿತಗೊಳಿಸುವಂತೆ ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ಗೆ ವಿಧಿಸಿದ್ದ ನಿರ್ಬಂಧವನ್ನು ಭಾರತೀಯ ರಿಸರ್ವ್ ಬ್ಯಾಂಕ್, ಮಾರ್ಚ್ 15ರ ವರೆಗೆ ವಿಸ್ತರಿಸಿದೆ.

ಪೇಟಿಎಂ ಬಳಕೆದಾರರ ಖಾತೆಗಳು, ಪ್ರಿಪೇಯ್ಡ್ ಪೇಮೆಂಟ್, ವ್ಯಾಲೆಟ್ ಹಾಗೂ ಫಾಸ್ಟ್ಯಾಗ್‌ಗಳಿಗೆ ಯಾವುದೇ ಠೇವಣಿ ಅಥವಾ ಟಾಪ್ ಅಪ್‌ಗಳನ್ನು ಸ್ವೀಕರಿಸದಂತೆ ಆರ್‌ಬಿಐ ನಿರ್ಬಂಧ ಹೇರಿತ್ತು.

ಆದರೆ, ಪೇಟಿಎಂ ಸೇವೆ ಬಳಸುತ್ತಿರುವ ವ್ಯಾಪಾರಿಗಳು ಹಾಗೂ ಗ್ರಾಹಕರಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಈ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ.

ಪೇಟಿಎಂ ಬ್ಯಾಂಕ್‌ಗೆ ವಿಧಿಸಿರುವ ನಿರ್ಬಂಧಕ್ಕೆ ಸಂಬಂಧಿಸಿದಂತೆ ಜನಸಾಮಾನ್ಯರು ಕೇಳಿದ ಪ್ರಶ್ನೆಗಳಿಗೆ ಆರ್‌ಬಿಐ ಉತ್ತರಗಳನ್ನೂ ಬಿಡುಗಡೆ ಮಾಡಿದೆ.

ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಹೇಳಿಕೆ

ತಾಂಡಾಗಳಿಗೆ ಕಂದಾಯ ಗ್ರಾಮದ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಾಕಿ ಉಳಿದಿರುವ 3,000 ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವ್ಯಾಪಾರಕ್ಕಾಗಿ ಅಲೆದಾಡುತ್ತಿದ್ದ ಬಂಜಾರ ಸಮುದಾಯವನ್ನು ತಾಂಡಾಗಳಲ್ಲಿ ಒಂದೆಡೆ ನೆಲೆವೂರುವಂತೆ ಸಂತ ಸೇವಾಲಾಲ್ ಮಾಡಿದರು. ಅವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಲು ನಾನು ಹಿಂದಿನ ಬಾರಿ ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಭೂಸುಧಾರಣಾ ಕಾಯ್ದೆಗೆ ತಿದ್ದುಪಡಿ ಮಾಡಲಾಯಿತು. ವಾಸಿಸುವವನೇ ಮನೆಯೊಡೆಯ ಕಾನೂನು ತರಲಾಯಿತು. ಆದರೂ ಬಹಳಷ್ಟು ತಾಂಡಾಗಳು ಇನ್ನೂ ಕಂದಾಯ ಗ್ರಾಮಗಳಾಗಿಲ್ಲ' ಎಂದರು.

'ಸರ್ಕಾರದಿಂದಲೇ ಸೇವಾಲಾಲ್ ಜಯಂತಿ ಆಚರಿಸಲು ತೀರ್ಮಾನ ಕೈಗೊಂಡಿದ್ದೆ. ಅವರ ಜನ್ಮ ಸ್ಥಳವಾದ ಸೂರಗೊಂಡನಕೊಪ್ಪದ ಅಭಿವೃದ್ಧಿಗೆ ₹60 ಕೋಟಿ, ತಾಂಡಾ ಅಭಿವೃದ್ಧಿ ನಿಗಮಕ್ಕೆ ₹400 ಕೋಟಿ ಅನುದಾನ ಒದಗಿಸಿದ್ದೆ. ಸೂರಗೊಂಡನಕೊಪ್ಪದಲ್ಲಿ ವಸತಿನಿಲಯ ನಿರ್ಮಿಸಲು ಅನುದಾನ ಒದಗಿಸಲಾಗುವುದು' ಎಂದು ಭರವಸೆ ನೀಡಿದರು.

ಎಲ್ಲರೂ ಸ್ವಾಭಿಮಾನಿಗಳಾಗಬೇಕು. ಶೋಷಣೆಯಿಂದ ತಪ್ಪಿಸಿಕೊಳ್ಳಬೇಕು. ಬಡತನ, ನಿರುದ್ಯೋಗ ನಿವಾರಣೆಯಾಗಬೇಕು ಮೇಲ್ವರ್ಗ, ಕೆಳವರ್ಗ ಎಂಬ ಭೇದ ಹೋಗಬೇಕಾದರೆ ಶಿಕ್ಷಣ ಬೇಕೇ ಬೇಕು ಎಂದು ಪ್ರತಿಪಾದಿಸಿದರು.

ಸರ್ದಾರ್ ಸೇವಾಲಾಲ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ರಂಗತಜ್ಞ ಎ.ಆರ್. ಗೋವಿಂದಸ್ವಾಮಿ ಉಪನ್ಯಾಸ ನೀಡಿದರು.

ಕನ್ನಡ–ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ, ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಠೋಡ್ , ಮಾಜಿ ಸಚಿವೆ ಬಿ.ಟಿ. ಲಲಿತಾ ನಾಯಕ್, ಕೆಎಂಎಫ್ ಅಧ್ಯಕ್ಷ ಎಸ್. ಭೀಮಾ ನಾಯಕ್, ವಿಧಾನ ಪರಿಷತ್ ಮಾಜಿ ಸದಸ್ಯೆ ಜಲಜಾ ನಾಯಕ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ ಮತ್ತು ನಿರ್ದೇಶಕಿ ಧರಣಿದೇವಿ ಮಾಲಗತ್ತಿ ಭಾಗವಹಿಸಿದ್ದರು.



ಸಂತ ಸೇವಾಲಾಲ್ ಜಯಂತಿ ಪ್ರಯುಕ್ತ ಗುರುವಾರ ಬೆಂಗಳೂರಿನಲ್ಲಿ ನಡೆದ ಮೆರವಣಿಗೆಯಲ್ಲಿ ಬಂಜಾರ ಸಮುದಾಯದ ಮಹಿಳೆಯರು ನೃತ್ಯ ಮಾಡಿದರು. – ಪ್ರಜಾವಾಣಿ ಚಿತ್ರ

ಬಿಜೆಪಿ, ಕಾಂಗ್ರೆಸ್ ನಿಯೋಗಗಳಿಗೆ ತಡೆ

ಪ್ರಜಾವಾಣಿ ವಾರ್ತೆ/ಪಿಟಿಐ

ಕೋಲ್ಕತ್ತ: ಟಿಎಂಸಿ ನಾಯಕ ಶಹಜಹಾನ್ ಶೇಖ್ ಹಾಗೂ ಬೆಂಬಲಿಗರು ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿ ಮಹಿಳೆಯರು ಪ್ರತಿಭಟನೆ ನಡೆಸುತ್ತಿರುವ ಸಂದೇಶ್‌ಖಾಲಿಗೆ ತೆರಳುತ್ತಿದ್ದ ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಪ್ರತ್ಯೇಕ ನಿಯೋಗವನ್ನು ಪೊಲೀಸರು ತಡೆದಿದ್ದಾರೆ.

ಬಿಜೆಪಿಯ ಸಂಸದರು ಹಾಗೂ ಕೇಂದ್ರ ಸಚಿವೆಯರಾದ ಪ್ರತಿಮಾ ಭೌಮಿಕ್, ಅನ್ನಪೂರ್ಣಾ ದೇವಿ ಅವರನ್ನೊಳಗೊಂಡ ಆರು ಮಂದಿಯ ನಿಯೋಗವನ್ನು ಪೊಲೀಸರು ರಾಮ್‌ಪುರದಲ್ಲಿ ಶುಕ್ರವಾರ ಬೆಳಿಗ್ಗೆ ತಡೆದಿದ್ದಾರೆ.

ಬಳಿಕ ತೆರಳಿದ ಪಶ್ಚಿಮ ಬಂಗಾಳದ ಕಾಂಗ್ರೆಸ್ ಘಟಕದ ಅಧ್ಯಕ್ಷ ಅಧೀರ್ ರಂಜನ್ ಚೌಧರಿ ನೇತೃತ್ವದ ನಿಯೋಗಕ್ಕೂ ತಡೆಯೊಡ್ಡಲಾಗಿದೆ.

ಸೆಕ್ಷನ್ 144 ಜಾರಿಯಲ್ಲಿರುವುದರಿಂದ ತಡೆಯೊಡ್ಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ ಎಂದು ಪ್ರತಿಮಾ ಭೌಮಿಕ್ ಹೇಳಿದರು. ಆರೋಪಿಗಳ ರಕ್ಷಣೆಗೆ ಪೊಲೀಸರು ಯತ್ನಿಸುತ್ತಿದ್ದಾರೆ ಎಂದೂ ಅವರು ಆರೋಪಿಸಿದರು.

'ದೌರ್ಜನ್ಯ ನಡೆದಿರುವ ಪ್ರದೇಶಕ್ಕೆ ನಾಲ್ಕೇ ಜನ ತೆರಳುತ್ತೇವೆ ಎಂದರೂ ಪೊಲೀಸರು ಒಪ್ಪಲಿಲ್ಲ. ಪೊಲೀಸರು ನಮ್ಮನ್ನು ತಡೆಯುವಲ್ಲಿ ತೋರಿಸಿರುವ ಚುರುಕುತನವನ್ನು ಶಹಜಹಾನ್ ಶೇಖ್ ಅವರನ್ನು ಬಂಧಿಸುವಲ್ಲಿಯೂ ತೋರಿಸಿದ್ದರೆ ಪರಿಸ್ಥಿತಿಯು ಭಿನ್ನವಾಗುತ್ತಿತ್ತು' ಎಂದು ಅನ್ನಪೂರ್ಣಾ ದೇವಿ ಹೇಳಿದರು.

ಉತ್ತರ 24 ಪರಗಣ ಜಿಲ್ಲೆಯ ಸಂದೇಶ್‌ಖಾಲಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ಬಿಜೆಪಿಯ ನಿಯೋಗದ ಸದಸ್ಯರು ಆರೋಪಿಸಿದರು.

ಪಾಕ್: ಮೈತ್ರಿ ಸರ್ಕಾರ ರಚನೆಗೆ ಯತ್ನ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಮೈತ್ರಿ ಸರ್ಕಾರವನ್ನು ರಚಿಸುವ ಕುರಿತು ಪಾಕಿಸ್ತಾನ್ ಮುಸ್ಲಿಂ ಲೀಗ್ – ನವಾಜ್ (ಪಿಎಂಎಲ್‌–ಎನ್) ಮತ್ತು ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ (ಪಿಪಿಪಿ) ನಡುವೆ ಶುಕ್ರವಾರ ಎರಡನೇ ಸುತ್ತಿನ ಮಾತುಕತೆ ನಡೆಯುವ ನಿರೀಕ್ಷೆಯಿದೆ.

ಸರ್ಕಾರ ರಚನೆಯ ಕಸರತ್ತು ಮುಂದುವರಿದಿರುವಂತೆಯೇ, 2ನೇ ಸುತ್ತಿನ ಚರ್ಚೆ ಕುರಿತು ಸ್ಥಳೀಯ ದೈನಿಕ 'ಡಾನ್' ಈ ಕುರಿತು ವರದಿ ಮಾಡಿದೆ. ಬಿಲಾವಲ್ ಭುಟ್ಟೊ–ಜರ್ದಾರಿ ನೇತೃತ್ವದ ಪಿಪಿಪಿ ಈಗಾಗಲೇ ಸರ್ಕಾರ ರಚನೆಗೆ ಪಿಎಂಎಲ್‌–ಎನ್ ಬೆಂಬಲಿಸುವುದಾಗಿ ಹೇಳಿದೆ.


'ಪ್ರಧಾನಿ ಆಯ್ಕೆ ಹಾಗೂ ಸರ್ಕಾರ ರಚನೆಗೆ ಪಕ್ಷ ಬೆಂಬಲ ನೀಡಲಿದೆ. ಪ್ರತಿಯಾಗಿ ಅಧ್ಯಕ್ಷ ಸ್ಥಾನ ಒಳಗೊಂಡಂತೆ ಪ್ರಮುಖ ಸಾಂವಿಧಾನಿಕ ಸ್ಥಾನಗಳ ಆಯ್ಕೆಗೆ ಬೆಂಬಲ ನೀಡಬೇಕು' ಎಂದು ಪಿಪಿಪಿ ಮುಖಂಡರು ಪಿಎಂಎಲ್‌–ಎನ್ ಮುಖಂಡರಿಗೆ ಷರತ್ತು ಹಾಕಿದ್ದಾರೆ.

ಇದೇ ಹಿನ್ನೆಲೆಯಲ್ಲಿ ಉಭಯ ಪಕ್ಷಗಳ ಮುಖಂಡರ ನಡುವೆ ಶುಕ್ರವಾರ ಮತ್ತೊಂದು ಸುತ್ತಿನ ಚರ್ಚೆ ನಡೆಯಲಿದೆ. ಅಧಿಕಾರ ಹಂಚಿಕೆ ಸೂತ್ರ ಕುರಿತು ಸ್ಪಷ್ಟ ಚಿತ್ರಣ ಮೂಡಬಹುದು ಎಂದು ವರದಿ ಉಲ್ಲೇಖಿಸಿದೆ.

ಮೂಲಗಳ ಪ್ರಕಾರ, ಮಾಜಿ ಪ್ರಧಾನಿ ಯೂಸುಫ್ ರಾಜಾ ಗಿಲಾನಿ ಅವರು ಸಂಸತ್ತಿನ ಸ್ಪೀಕರ್ ಆಗಿ ಆಯ್ಕೆಯಾಗುವ ಸಾಧ್ಯತೆ ಇದೆ. ಈ ಮಧ್ಯೆ, ವಿರೋಧಪಕ್ಷದ ಮಾಜಿ ನಾಯಕ ಖುರ್ಷೀದ್ ಶಾ ಅವರ ಹೆಸರು ಕೂಡ ಈ ಸ್ಥಾನಕ್ಕೆ ಕೇಳಿಬರುತ್ತಿದೆ. ಇನ್ನೊಂದೆಡೆ, ಸ್ಪೀಕರ್ ಸ್ಥಾನಕ್ಕೆ ಪಕ್ಷದ ಅಭ್ಯರ್ಥಿಯಾಗಿ ಮಾಜಿ ಸ್ಪೀಕರ್ ಅಯಾಜ್ ಸಾದಿಕ್ ಅವರ ಹೆಸರನ್ನು ಪಿಎಂಎಲ್–ಎನ್ ಉಲ್ಲೇಖಿಸಿದೆ ಎನ್ನಲಾಗಿದ್ದು, ಅಂತಿಮ ತೀರ್ಮಾನವಾಗಿಲ್ಲ.

'ಇಮ್ರಾನ್ ಖಾನ್ ನೇತೃತ್ವದ ಸರ್ಕಾರವನ್ನು 2022ರಲ್ಲಿ ಪದಚ್ಯುತಗೊಳಿಸುವಲ್ಲಿ ಸೇನೆಯ ಉನ್ನತ ನಾಯಕರ ಪಾತ್ರವಿದೆ' ಎಂದು ಜಮೈತ್ ಉಲೇಮಾ–ಇ–ಇಸ್ಲಾಂ ಫಜ್ಲ್ (ಜೆಯುಐ–ಎಫ್) ನಾಯಕ ಮೌಲಾನಾ ಫಜ್ಲುರ್ ರೆಹಮಾನ್ ಆರೋಪಿಸಿದ್ದಾರೆ.

ಕರ್ನಾಟಕ ಹೈಕೋರ್ಟ್‌ನ ಸಿಜೆಯಾಗಿ ಅಂಜಾರಿಯಾ



ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಎನ್.ವಿ. ಅಂಜಾರಿಯಾ ಅವರನ್ನು ಕೇಂದ್ರ ಸರ್ಕಾರ ಶುಕ್ರವಾರ ನೇಮಕ ಮಾಡಿ ಅಧಿಸೂಚನೆ ಹೊರಡಿಸಿದೆ.

ಗುಜರಾತ್ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿರುವ ಅಂಜಾರಿಯಾ ಅವರನ್ನು ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಲು ಸುಪ್ರೀಂ ಕೋರ್ಟ್ ಕೊಲಿಜಿಯಂ ಫೆ.8ರಂದು ಶಿಫಾರಸು ಮಾಡಿತ್ತು.

ಕರ್ನಾಟಕ ಹೈಕೋರ್ಟ್‌ನ ಮುಖ್ಯ ನ್ಯಾಯ ಮೂರ್ತಿಯಾಗಿರುವ ಪಿ.ಎಸ್. ದಿನೇಶ್ ಕುಮಾರ್ ಇದೇ 24ರಂದು ನಿವೃತ್ತರಾಗಲಿದ್ದಾರೆ. ಅಂಜಾರಿಯಾ ಅವರು 2011ರಿಂದ ಗುಜರಾತ್ ಹೈಕೋರ್ಟ್‌ನಲ್ಲಿ ನ್ಯಾಯಮೂರ್ತಿಯಾಗಿದ್ದಾರೆ.

ರಾಜಕಾರಣಿಗಳ ಭಾಷಾ ಬಳಕೆಗೆ ವಿಶೇಷ ನ್ಯಾಯಪೀಠ ಆಕ್ರೋಶ

ಅನಂತಕುಮಾರ್‌ಗೆ ಹೈಕೋರ್ಟ್ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾಷಾ ಪ್ರಯೋಗ ಹಿಡಿತದಲ್ಲಿರಬೇಕು ಎಂದು ನ್ಯಾಯಮೂರ್ತಿಗಳು ಎಚ್ಚರಿಸಿದ್ದಾರೆ ಎಂದು ನಿಮ್ಮ ಅರ್ಜಿದಾರ ಸಂಸದ ಅನಂತಕುಮಾರ ಹೆಗಡೆಯವರಿಗೆ ತಿಳಿಸಿ' ಎಂದು ಹೆಗಡೆ ಪರ ವಕೀಲರಿಗೆ ಹೈಕೋರ್ಟ್, ಮೌಖಿಕವಾದ ಖಡಕ್ ಎಚ್ಚರಿಕೆ ನೀಡಿದೆ.

'ನನ್ನ ವಿರುದ್ಧ ಕುಮಟಾ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಸಂಸದ ಅನಂತಕುಮಾರ ಹೆಗಡೆ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ಪವನಚಂದ್ರ ಶೆಟ್ಟಿ ವಾದ ಆಲಿಸಿದ ನ್ಯಾಯಪೀಠ, 'ನಾವು ಅವರ ನೀತಿಗಳನ್ನು ಇಷ್ಟಪಡಬಹುದು ಅಥವಾ ಇಲ್ಲದಿರಬಹುದು. ಆದರೆ, ಅವರು ನಮ್ಮ ಮುಖ್ಯಮಂತ್ರಿ ಎಂಬುದನ್ನು ಮರೆಯಬೇಡಿ. ಏಕವಚನದಲ್ಲಿ ಮಾತನಾಡುವುದು ಶೋಭೆ ತರುವ ವಿಚಾರವಲ್ಲ. ಅವರಾಗಲಿ, ನೀವಾಗಲಿ ಯಾರೂ ಏಕವಚನದಲ್ಲಿ ಮಾತನಾಡಬಾರದು. ಚುನಾವಣೆಯಲ್ಲಿ ಒಂದು ಪಕ್ಷ ಬರುತ್ತದೆ, ಇನ್ನೊಂದು ಪಕ್ಷ ಹೋಗುತ್ತದೆ. ಪ್ರಜಾಪ್ರಭುತ್ವ ಕೆಲಸ ಮಾಡುವುದೇ ಹೀಗೆ' ಎಂದರು.

'ಅರ್ಜಿದಾರರು ಉತ್ತಮ ವಾಗ್ಮಿ ಇರಬಹುದು. ಹಾಗೆಂದ ಮಾತ್ರಕ್ಕೆ ಅಸಂಬದ್ಧ ಪದಗಳ ಪ್ರಯೋಗ ಸಲ್ಲದು. ಭಾಷಾ ಬಳಕೆಯಲ್ಲಿ ಎಲ್ಲರೂ ನಿಗಾ ವಹಿಸಬೇಕು. ಒಳ್ಳೆಯ ಭಾಷೆ ಪ್ರಯೋಗ ಮಾಡುವ ಮೂಲಕ ಗೌರವಯುತವಾಗಿ ನಡೆದುಕೊಳ್ಳುವಂತೆ ನಿಮ್ಮ ಅರ್ಜಿದಾರರಿಗೆ ತಿಳಿವಳಿಕೆ ಹೇಳಿ' ಎಂದು ತಾಕೀತು ಮಾಡಿದರು.

ಅಂತಿಮವಾಗಿ, 'ಅನಂತಕುಮಾರ ಹೆಗಡೆ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಯಾವುದೇ ಬಲವಂತದ ಕ್ರಮಕ್ಕೆ ಮುಂದಾಗಬಾರದು' ಎಂದು ಸರ್ಕಾರಕ್ಕೆ ಆದೇಶಿಸಿ ವಿಚಾರಣೆ ಮುಂದೂಡಿದರು.

ಪ್ರಕರಣವೇನು?: 'ಹಿಂದೂ ಮುಸ್ಲಿಂ ಸಮುದಾಯಗಳ ಮಧ್ಯೆ ಕೋಮು ಸೌಹಾರ್ದ ಕದಡುವ ಮತ್ತು ಮುಖ್ಯಮಂತ್ರಿಯವರ ಬಗ್ಗೆ ಕೇವಲವಾದ ಪದಗಳನ್ನು ಬಳಸಿ ಭಾಷಣ ಮಾಡಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ಅನಂತಕುಮಾರ ಹೆಗಡೆ ವಿರುದ್ಧ ಕುಮಟಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಈಶ್ವರಪ್ಪ ಅವರಿಗೂ ಎಚ್ಚರಿಕೆ: 'ರಾಜಕಾರಣಿಗಳು ತಾವು ಬಳಸುವ ಭಾಷೆಯ ಬಗ್ಗೆ ಎಚ್ಚರ ವಹಿಸಬೇಕು' ಎಂದು ಖಡಕ್ ತಾಕೀತು ಮಾಡಿರುವ ಹೈಕೋರ್ಟ್, 'ದೇಶ ವಿಭಜನೆಯ ಮಾತನಾಡುವವರನ್ನು ಗುಂಡಿಕ್ಕಿ ಕೊಲ್ಲುವ ಕಾನೂನು ತರಬೇಕು' ಎಂದು ಹೇಳಿರುವುದಾಗಿ ಆರೋಪಿಸಿ ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗೆ ಮಧ್ಯಂತರ ತಡೆ ನೀಡಿದೆ.

'ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಮತ್ತು ಮುಂದಿನ ಕಾನೂನು ಪ್ರಕ್ರಿಯೆಗೆ ತಡೆ ನೀಡಬೇಕು' ಎಂದು ಕೋರಿ ಕೆ.ಎಸ್.ಈಶ್ವರಪ್ಪ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ಅರ್ಜಿಯನ್ನು ಪರಿಶೀಲಿಸಿದ ನ್ಯಾಯಮೂರ್ತಿ, 'ನಮ್ಮ ರಾಜಕೀಯ ನಾಯಕರು ಯಾಕೆ ಒಳ್ಳೆಯ ಭಾಷೆ ಏಕೆ ಬಳಸುತ್ತಿಲ್ಲ?, ಮಾತನಾಡುವಾಗ ಉತ್ತಮ ಸಂಸ್ಕೃತಿಯನ್ನೇಕೆ ಪ್ರತಿಬಿಂಬಿಸುವುದಿಲ್ಲ? ಈ ರೀತಿ ಮಾತನಾಡಿ ಅದ್ಯಾಕೆ ಭಾಷೆಯ ಮೇಲೆ ದೌರ್ಜನ್ಯ ಎಸಗುತ್ತಾರೆ' ಎಂದು ಖಾರವಾಗಿ ಪ್ರಶ್ನಿಸಿದರು.

'ಕರ್ನಾಟಕ ವಿವಿಧ ಸಿದ್ಧಾಂತಗಳ ಜನರನ್ನು ಮಡಿಲಲ್ಲಿ ಇಟ್ಟುಕೊಂಡಿರುವ ರಾಜ್ಯ. ರಾಜಕಾರಣಿಗಳು ಮಾತನಾಡುವಾಗ ಮೈಮೇಲೆ ಪ್ರಜ್ಞೆ ಇಟ್ಟುಕೊಂಡಿರಬೇಕು. ತಮ್ಮ ಮಾತುಗಳನ್ನು ಶಾಲಾ ಮಕ್ಕಳೂ ಗಮನಿಸುತ್ತಿರುತ್ತಾರೆ ಎಂಬ ಅರಿವಿರಬೇಕು' ಎಂದು ಎಚ್ಚರಿಸಿದರು. ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ ಶ್ಯಾಮ್ ಹಾಜರಿದ್ದರು.

ಪ್ರಕರಣವೇನು?: 'ದಕ್ಷಿಣ ಭಾರತವನ್ನು ಪ್ರತ್ಯೇಕ ರಾಷ್ಟ್ರವನ್ನಾಗಿ ಮಾಡುವಂತೆ ಕೇಳಬೇಕಾದೀತು' ಎಂಬ ಸಂಸದ ಡಿ.ಕೆ. ಸುರೇಶ್ ಅವರ ಮಾತಿಗೆ ಪ್ರತಿಕ್ರಿಯಿಸಿದ್ದ ಈಶ್ವರಪ್ಪ, 'ಸಂಸದ ಡಿ.ಕೆ.ಸುರೇಶ್ ಮತ್ತು ಶಾಸಕ ವಿನಯ ಕುಲಕರ್ಣಿ ದೇಶ ವಿಭಜನೆಯ ಮಾತುಗಳನ್ನಾಡಿದ್ದಾರೆ. ಈ ರೀತಿ ಮಾತನಾಡುವ ರಾಷ್ಟ್ರದ್ರೋಹಿಗಳನ್ನು ಗುಂಡಿಕ್ಕಿ ಕೊಲ್ಲುವ ಕಾನೂನು ತರಬೇಕು' ಎಂದು ಹೇಳಿದ್ದಾಗಿ ಆರೋಪಿಸಿ ದಾವಣಗೆರೆಯ ಬಡಾವಣೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಪೊಲೀಸರು 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ಕೋರ್ಟ್‌ಗೆ ವರದಿ ಸಲ್ಲಿಸಿದ್ದರು.

ನಿಧನ ವಾರ್ತೆ

ಎಂ.ಎಸ್. ವೇಣುಗೋಪಾಲ್



ಮೈಸೂರು: ಇಲ್ಲಿನ ನಿವೇದಿತಾ ನಗರದ ನಿವಾಸಿ, ಜೆಎಸ್‌ಎಸ್ ಕಾನೂನು ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಎಂ.ಎಸ್. ವೇಣುಗೋಪಾಲ್ (79) ಗುರುವಾರ ರಾತ್ರಿ ನಿಧನರಾದರು. ಅವರಿಗೆ ಪತ್ನಿ ಕೆ.ಆರ್.ಮೀನಾಕ್ಷಿ, ಮಗ ಮಾನಸ ನಯನ ಇದ್ದಾರೆ. ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಶುಕ್ರವಾರ ಅಂತ್ಯಸಂಸ್ಕಾರ ನಡೆಯಿತು.

ದೃಷ್ಟಿಹೀನತೆ ಸಮಸ್ಯೆಯ ನಡುವೆಯೂ ಅನೇಕ ಸಮಾಜಮುಖಿ ಕಾರ್ಯಗಳಲ್ಲಿ ಅವರು ತೊಡಗಿಸಿಕೊಂಡಿದ್ದರು. ತುರ್ತು ಪರಿಸ್ಥಿತಿಯಲ್ಲಿ ಜೈಲುವಾಸ ಅನುಭವಿಸಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. 'ಅಂಕ' ತಂಡ ಕಟ್ಟಿಕೊಂಡು ಬೀದಿ ನಾಟಕಗಳನ್ನು ಆಯೋಜಿಸಿದ್ದರು. ಅಂಗವಿಕಲರಿಗೆ ಮಾಹಿತಿ ನೀಡುವ 'ಊರುಗೋಲು' ಮಾಸಪತ್ರಿಕೆಯನ್ನು ಆರಂಭಿಸಿದ್ದರು. ಆಶುಕವಿಯಾಗಿ ಅನೇಕ ಕವನಗಳನ್ನು ರಚಿಸಿ ಹಾಡಿದ್ದು, ಅವುಗಳಲ್ಲಿ ಹಲವು ಆರ್‌ಎಸ್‌ಎಸ್ ಗೀತೆಗಳಾಗಿ ಜನಜನಿತವಾಗಿವೆ.



₹2,000 ಕೋಟಿ
ಜಾಹೀರಾತು ಮತ್ತು ಪ್ರೀಮಿಯಂ ಎಫ್‌ಎಆರ್ ನೀತಿಯಿಂದ ತೆರಿಗೆಯೇತರ ಸಂಪನ್ಮೂಲ ಸಂಗ್ರಹದ ಗುರಿ.

₹233 ಕೋಟಿ
ಬೆಂಗಳೂರು ನಗರದಲ್ಲಿ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ **‘ವಿಜ್ಞಾನ ನಗರಿ’**

20 ಲಕ್ಷ ಆಸ್ತಿ
ಬಿಬಿಎಂಪಿ ವ್ಯಾಪ್ತಿಯ ಎಲ್ಲ ಆಸ್ತಿ ಮಾಲೀಕರಿಗೆ ಡಿಜಿಟಲ್ ಇ-ಖಾತಾ ಮತ್ತು ಆಸ್ತಿ ತೆರಿಗೆ ಪಾವತಿ ವಿವರ.

28 ಜಂಕ್ಷನ್: ಜಪಾನ್ ಸರ್ಕಾರದ ಸಹಯೋಗದೊಂದಿಗೆ ‘ಏರಿಯಾ ಟ್ರಾಫಿಕ್ ಸಿಗ್ನಲ್ ಕಂಟ್ರೋಲ್ ಸಿಸ್ಟಮ್’ ಶೇ 30ರಷ್ಟು ವಾಹನ ಸಂದಣಿ ಕಡಿಮೆಯ ಗುರಿ.

ಬಿಬಿಎಂಪಿಗೆ ತೆರಿಗೆ ಸಂಗ್ರಹದ ಗುರಿ (ಕೋಟಿಗಳಲ್ಲಿ)

₹4,300	₹6,000
2023-24ನೇ ಸಾಲಿನಲ್ಲಿ ಸಂಗ್ರಹದ ದಾಖಲೆ ನಿರೀಕ್ಷೆ	2024-25ರಲ್ಲಿ ತೆರಿಗೆ ಸಂಗ್ರಹದ ಗುರಿ

ಕ್ರೀಡಾ ಸೌಲಭ್ಯಕ್ಕೆ ಪಿಪಿಪಿ ಮಾದರಿ

- **‘ಕ್ರೀಡಾ ನಗರ’** ಬೆಂಗಳೂರಿನ ಉತ್ತರ ತಾಲ್ಲೂಕಿನಲ್ಲಿ 70 ಎಕರೆ ನಿವೇಶನದಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅತ್ಯಾಧುನಿಕ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಸಮುಚ್ಚಯ ಒಳಗೊಂಡ ‘ಕ್ರೀಡಾ ನಗರ’ ಸ್ಥಾಪನೆ.
- **‘ಕ್ರೀಡಾ ಸಂಕೀರ್ಣ’** ಬೆಂಗಳೂರಿನ 4 ಸ್ಥಳಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಬಹುಕ್ರೀಡಾ ಸೌಲಭ್ಯಗಳನ್ನೊಳಗೊಂಡ ಅತ್ಯಾಧುನಿಕ ‘ಕ್ರೀಡಾ ಸಂಕೀರ್ಣ’.
- **ಹಾಕಿ ಪ್ರಾಂಗಣ** ಬೆಂಗಳೂರಿನ ಪೊಲೀಸ್ ಸುಲಿವನ್ ಮೈದಾನದಲ್ಲಿ ₹3 ಕೋಟಿ ವೆಚ್ಚದಲ್ಲಿ ‘ಆಸ್ಟ್ರೋ ಟರ್ಫ್ ಹಾಕಿ ಪ್ರಾಂಗಣ’ ನಿರ್ಮಾಣ.



ರಾಜ್ಯ ಬಜೆಟ್ 2024-25

ನಗರದ ತೆರಿಗೆ ಬಿಬಿಎಂಪಿ ಹಕ್ಕು!

ರಾಜ್ಯ ಸರ್ಕಾರದಿಂದ ಯಾವುದೇ ರೀತಿಯ ಅನುದಾನವನ್ನು ಪಡೆಯದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) 2024–25ನೇ ಸಾಲಿನಲ್ಲಿ ತೆರಿಗೆ ಮತ್ತು ತೆರಿಗೆಯೇತರ ಸಂಪನ್ಮೂಲಗಳನ್ನು ಸಂಗ್ರಹಿಸಿಯೇ ನಗರ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಬೇಕಿದೆ.



2023–24ನೇ ಸಾಲಿನಲ್ಲಿ ₹4,300 ಕೋಟಿ ತೆರಿಗೆ ಸಂಗ್ರಹಿಸುವ ಗುರಿ ತಲುಪುವುದಾಗಿ ಹೇಳಲಾಗಿದ್ದು, ಇದು ಹಿಂದಿನ ವರ್ಷಕ್ಕಿಂತ ₹1 ಸಾವಿರ ಕೋಟಿ ಹೆಚ್ಚು. ಇದೇ ರೀತಿ ಮುಂದಿನ ಆರ್ಥಿಕ ವರ್ಷದಲ್ಲಿ ₹6 ಸಾವಿರ ಕೋಟಿ ತೆರಿಗೆ ಸಂಗ್ರಹದ ಗುರಿಯನ್ನು ಬಜೆಟ್‌ನಲ್ಲಿ ನೀಡಲಾಗಿದೆ. ಈ ಗುರಿ ನೀಡುವ ಮೂಲಕ ಆಸ್ತಿ ಮಾಲೀಕರ ಮೇಲೆ ಬಿಬಿಎಂಪಿ ಒತ್ತಡ ಹೆಚ್ಚಾಗಲಿದೆ.

ಜಾಹೀರಾತು ನೀತಿಯನ್ನು ಪರಿಷ್ಕರಿಸಿ, ಅಪಾರ್ಟ್‌ಮೆಂಟ್‌ಗಳ ‘ಪ್ರೀಮಿಯಂ ಎಫ್‌ಎಆರ್’ ನೀತಿಯನ್ನೂ ಜಾರಿಗೆ ತರುವ ಮೂಲಕ ಹೆಚ್ಚುವರಿಯಾಗಿ ₹2 ಸಾವಿರ ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಈ ಮೂಲಕ ಬಿಬಿಎಂಪಿ ರಾಜ್ಯ ಸರ್ಕಾರದಿಂದ ಯಾವುದೇ ಅನುದಾನವನ್ನು ನಿರೀಕ್ಷಿಸದೆ ತನ್ನದೇ ಸಂಪನ್ಮೂಲವನ್ನು ಕ್ರೋಢೀಕರಿಸಿಕೊಂಡು ಯೋಜನೆಗಳನ್ನು ರೂಪಿಸಬೇಕಿದೆ. ತೆರಿಗೆ ಸಂಗ್ರಹವಲ್ಲದೆ ಇನ್ನಾವ ರೀತಿಯಲ್ಲೂ 2024–25ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಹಣ ನಿರೀಕ್ಷಿಸುವಂತಿಲ್ಲ. ಹೀಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳಿಗೇ ಸಾವಿರಾರು ಕೋಟಿ ಹಣವನ್ನು ಪಾವತಿಸಬೇಕಿರುವ ಬಿಬಿಎಂಪಿಗೆ ಮುಂದಿನ ಹೊಸ ಯೋಜನೆ ರೂಪಿಸಲು ಆರ್ಥಿಕ ಹಿನ್ನಡೆಯಾಗಲಿದೆ.

‘ಸರ್ಕಾರದಿಂದ ಅನುದಾನ ನಿರೀಕ್ಷಿಸದೆ, ಬಿಬಿಎಂಪಿ ತನ್ನ ಯೋಜನೆಗಳಿಗೆ ತಾನೇ ಹಣ ಕ್ರೋಡೀಕರಿಸಿಕೊಳ್ಳಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಆಗಾಗ್ಗೆ ಹೇಳುತ್ತಿದ್ದರು. ಅದು ರಾಜ್ಯ ಬಜೆಟ್‌ನಲ್ಲಿ ಪ್ರತಿಫಲನವಾಗಿವೆ.

> ಬೆಂಗಳೂರನ್ನು ವಿಶ್ವದರ್ಜೆಯ ನಗರವಾಗಿ ಅಭಿವೃದ್ಧಿಪಡಿಸಲು ನಾವು ‘ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆ’ ಜಾರಿಗೊಳಿಸುತ್ತಿದ್ದೇವೆ. ಹೂಡಿಕೆದಾರರನ್ನು ಆಕರ್ಷಿಸಲು ವಿವಿಧ ವಲಯಗಳಲ್ಲಿ ದಿಟ್ಟ ಕ್ರಮಗಳನ್ನು ತೆಗೆದುಕೊಂಡಿದ್ದೇವೆ
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮೂಲಸೌಕರ್ಯ ಇದ್ದಿದ್ದೇ ಮುಂದುವರಿಕೆ

• ಬಾಲಕೃಷ್ಣ ಪಿ.ಎಚ್.

ಮೆಟ್ರೊ, ಉಪನಗರ ರೈಲು, ಬಿಎಂಟಿಸಿ ಸಹಿತ ನಗರದ ಮೂಲಸೌಕರ್ಯಗಳಿಗೆ ಸಂಬಂಧಿಸಿದಂತೆ ಹೊಸ ಘೋಷಣೆಗಳಿಲ್ಲ. ಇರುವ ಯೋಜನೆಗಳನ್ನೇ ಮುಂದಿನ ಹಂತಕ್ಕೆ ಒಯ್ಯುವುದಷ್ಟೇ ಬಜೆಟ್‌ನಲ್ಲಿ ಉಲ್ಲೇಖವಾಗಿವೆ.

ದೇಶದ ಅತ್ಯುತ್ತಮ ಮೆಟ್ರೊಗಳಲ್ಲಿ ಒಂದಾಗಿರುವ ‘ನಮ್ಮ ಮೆಟ್ರೊ’ ಇದೇ ಪ್ರಥಮ ಬಾರಿಗೆ ಲಾಭದಾಯಕ ಪಥಕ್ಕೆ ಬಂದಿದೆ. ಮೆಟ್ರೊ ಮಾರ್ಗ ಸದ್ಯ 74 ಕಿ.ಮೀ. ಇದ್ದು, ಇನ್ನು ಒಂದು ವರ್ಷದಲ್ಲಿ 44 ಕಿ.ಮೀ. ಸೇರಲಿದೆ. 2026ಕ್ಕೆ ಹಂತ 2 ಮತ್ತು 2 ಎ ಆರಂಭಗೊಳ್ಳಲಿದೆ. ಇವು ಈಗಾಗಲೇ ಕಾಮಗಾರಿ ನಡೆಯುತ್ತಿರುವ ಯೋಜನೆಗಳಾಗಿದ್ದು, ಹೊಸತಲ್ಲ.

3ನೇ ಹಂತದಲ್ಲಿ ₹ 15,611 ಕೋಟಿ ಅಂದಾಜು ವೆಚ್ಚದ ಯೋಜನೆಗೆ ರಾಜ್ಯ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಕೇಂದ್ರ ಸರ್ಕಾರದ ಅನುಮೋದನೆಯ ನಿರೀಕ್ಷೆಯಲ್ಲಿದೆ. 3ಎ ಹಂತದಲ್ಲಿ ಸರ್ಜಾಪುರ–ಹೆಬ್ಬಾಳ ಸಂಪರ್ಕಿಸುವ ಮಾರ್ಗ ನಿರ್ಮಾಣದ ಡಿಪಿಆರ್ ಕರಡು ಸಿದ್ಧಪಡಿಸಿದ್ದು, ಕೇಂದ್ರ ಸರ್ಕಾರದ ಅನುಮೋದನೆಗೆ ಕಳುಹಿಸಬೇಕಿದೆ.

ಬೆಂಗಳೂರು ಉಪನಗರ ರೈಲು ಯೋಜನೆ ಕೂಡ ಈಗಿರುವ ಕಾಮಗಾರಿಗಳನ್ನೇ ಚುರುಕುಗೊಳಿಸುವ ಪ್ರಸ್ತಾಪವಿದೆ. ಬೈಯಪ್ಪನಹಳ್ಳಿ–ಚಿಕ್ಕಬಾಣಾವರ (ಕಾರಿಡಾರ್–2) ಸಿವಿಲ್ ಕಾಮಗಾರಿ ನಡೆಯುತ್ತಿದೆ. ಇತ್ತೀಚೆಗೆ ಈ ಕಾಮಗಾರಿ ಸ್ವಲ್ಪ ವೇಗ ಪಡೆದಿದೆಯಾದರೂ ತಿಂಗಳಿಗೆ ಶೇ 5ರಷ್ಟು ಪ್ರಗತಿ ಕೂಡ ಆಗುತ್ತಿಲ್ಲ. ಇದರಿಂದ ನಿಗದಿತ ಸಮಯದಲ್ಲಿ ಈ ಕಾಮಗಾರಿ ಮುಗಿಯುವ ಲಕ್ಷಣಗಳಿಲ್ಲ. ಕಾಮಗಾರಿ ಚುರುಕುಗೊಳಿಸಲು ಯಾವುದೇ ಕ್ರಮಗಳು ಕಾಣುತ್ತಿಲ್ಲ.

ಹೀಲಲಿಗೆ–ರಾಜಾನುಕುಂಟೆ (ಕಾರಿಡಾರ್–4) ಕಾಮಗಾರಿಗೆ ಕಾರ್ಯಾದೇಶ ನೀಡಲಾಗಿದೆ. ರೋಲಿಂಗ್ ಸ್ಟಾಕ್ (ಬೋಗಿ) ಪೂರೈಕೆ, ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಯುರೋಪಿಯನ್ ಇನ್ವೆಸ್ಟ್ ಬ್ಯಾಂಕ್ ಮತ್ತು ಜರ್ಮನಿಯ ಕೆಎಫ್‌ಡಬ್ಲ್ಯು ಬ್ಯಾಂಕ್‌ಗಳ ಜೊತೆಗೆ ಆರ್ಥಿಕ ಒಪ್ಪಂದ ಮಾಡಿಕೊಳ್ಳುತ್ತಿದೆ. ಇವೆಲ್ಲವೂ ಪೂರ್ವನಿರ್ಧರಿತ ಕಾರ್ಯಗಳಾಗಿವೆ.

ಬೆಂಗಳೂರು ಸಂಪರ್ಕ ಕ್ಷೇತ್ರದ ಜೀವನಾಡಿ ಆಗಿರುವ ಬಿಎಂಟಿಸಿಗೆ 1,334 ಹೊಸ ಎಲೆಕ್ಟ್ರಿಕ್ ಬಸ್‌ಗಳು ಹಾಗೂ 820 ಬಿಎಸ್–6 ಡೀಸೆಲ್ ಬಸ್‌ಗಳನ್ನು ಸೇರ್ಪಡೆಗೊಳ್ಳಲಿವೆ. ಪ್ರಯಾಣಿಕರ ಸುರಕ್ಷತೆಗಾಗಿ ವೆಹಿಕಲ್ ಟ್ರ್ಯಾಕಿಂಗ್ ಹೊಂದಿರುವ ಮೊಬೈಲ್ ಆ್ಯಪ್ ಅನುಷ್ಠಾನಗೊಳಿಸಲಾಗುತ್ತಿದೆ. ವಾಹನ ಸಂದಣಿ ಕಡಿಮೆಗೊಳಿಸಲು ಜಪಾನ್ ಸರ್ಕಾರದ ಸಹಯೋಗದಲ್ಲಿ ಪ್ರಮುಖ 28 ಜಂಕ್ಷನ್‌ಗಳಲ್ಲಿ ಏರಿಯಾ ಟ್ರಾಫಿಕ್ ಸಿಗ್ನಲ್ ಕಂಟ್ರೋಲ್ ಸಿಸ್ಟಂ ಅಳವಡಿಸಲು ನಿರ್ಧರಿಸಿದೆ.

ಹೊಸ ಹೊರೆಯನ್ನು ಹೊತ್ತುಕೊಳ್ಳಲು ತಯಾರಿಲ್ಲದ ಸಿದ್ದರಾಮಯ್ಯ ಸರ್ಕಾರವು ಇರುವ ಯೋಜನೆಗಳನ್ನೇ ಮುಂದುವರಿಸುವ ಜಾಣ್ಮೆ ನಡೆಯನ್ನು ಪ್ರದರ್ಶಿಸಿದೆ. ಹೊಸ ಯೋಜನೆಗಳ ನಿರೀಕ್ಷೆಯಲ್ಲಿದ್ದವರಿಗೆ ನಿರಾಸೆಯಾಗಿದೆ.

430 ಪ್ರಯೋಗಾಲಯಕ್ಕೆ ₹20 ಕೋಟಿ

ಬೆಂಗಳೂರಿನಲ್ಲಿ ಬಡಜನತೆಗೆ ಉಚಿತ ಪ್ರಯೋಗಾಲಯ ಸೇವೆಯನ್ನು ಒದಗಿಸಲು ಹಬ್ ಆ್ಯಂಡ್ ಸ್ಪೋಕ್ ಮಾದರಿಯಲ್ಲಿ 430 ಪ್ರಯೋಗಾಲಯಗಳ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ. ಮುಂದಿನ ಎರಡು ವರ್ಷಗಳಲ್ಲಿ ಈ ಪ್ರಯೋಗಾಲಯಗಳಿಗೆ ₹20 ಕೋಟಿ ಅನುದಾನ ಪ್ರಕಟಿಸಲಾಗಿದೆ.

ಬೆಂಗಳೂರು ಪೂರ್ವ ಭಾಗದಲ್ಲಿ 500 ಸಂಖ್ಯೆಯ ‘ಒಂದು ನಿರಾಶ್ರಿತರ ಪರಿಹಾರ ಕೇಂದ್ರ’ವನ್ನು ₹10 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲಾಗುವುದು. ಕೆ.ಸಿ. ಜನರಲ್ ಆಸ್ಪತ್ರೆ ಆವರಣದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡವನ್ನು ₹150 ಕೋಟಿ ವೆಚ್ಚದಲ್ಲಿ ನಿರ್ಮಿಸಲು ನಿರ್ಧರಿಸಲಾಗಿದೆ.

ಕೃಷಿ ಉತ್ಪನ್ನ ಸಂಸ್ಕರಣೆ, ಮಾರುಕಟ್ಟೆ ಸಂಪರ್ಕ ಮತ್ತು ಮೌಲ್ಯವರ್ಧನೆಯಡಿ ಬೆಂಗಳೂರಿನ ದಾಸನಪುರ ಮಾರುಕಟ್ಟೆಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ‘ಬಯೊ ಸಿಎನ್‌ಜಿ ಘಟಕ’ ಸ್ಥಾಪಿಸಿ ‘ಶೂನ್ಯ ತ್ಯಾಜ್ಯ ತರಕಾರಿ ಮಾರುಕಟ್ಟೆ’ಯನ್ನಾಗಿ ಪರಿವರ್ತಿಸಲು ಪ್ರಕಟಿಸಲಾಗಿದೆ.





ಹೊಸತು ಸಿಗದ ನಗರಕ್ಕೆ ಅನುದಾನವೂ ಮರೀಚಿಕೆ

ಹಳೆಯ ಘೋಷಣೆಗಳಿಗಷ್ಟೇ ‘ಬಜೆಟ್ ರೂಪ’

• ಆರ್. ಮಂಜುನಾಥ್

‘ಬ್ರ್ಯಾಂಡ್ ಬೆಂಗಳೂರು’ ಯೋಜನೆಯಡಿ ರಾಜಧಾನಿ ಬೆಂಗಳೂರಿಗೆ ಈ ಬಾರಿ ಬಜೆಟ್‌ನಲ್ಲಿ ಅತ್ಯಧಿಕ ಅನುದಾನ ದೊರೆತು, ಅಂತರರಾಷ್ಟ್ರೀಯ ಮಟ್ಟದ ಬೃಹತ್ ಯೋಜನೆಗಳಿಗೆ ಚಾಲನೆ ಸಿಗುತ್ತವೆ ಎಂಬ ನಿರೀಕ್ಷೆ ಸುಳ್ಳಾಗಿದೆ. ಹೊಸದಾಗಿ ಯಾವುದೇ ಯೋಜನೆ ಘೋಷಣೆಯೂ ಆಗಿಲ್ಲ, ಹಿಂದೆ ಹೇಳಿಕೆಯಾಗಿದ್ದ ಯೋಜನೆಗಳಿಗೆ ಅನುದಾನ ನೀಡುವ ಭರವಸೆಯೂ ಸಿಕ್ಕಿಲ್ಲ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಳೆದ ಎಂಟು ತಿಂಗಳಲ್ಲಿ ಘೋಷಣೆ ಮಾಡಿದ್ದ ಯೋಜನೆಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್‌ನಲ್ಲಿ ಸ್ಥಾನ ಪಡೆದುಕೊಂಡಿವೆ.

ಬೆಂಗಳೂರನ್ನು ವಿಶ್ವದರ್ಜೆ ನಗರವನ್ನಾಗಿ ಅಭಿವೃದ್ಧಿಪಡಿಸಲು, ಹೂಡಿಕೆದಾರರು ಆಕರ್ಷಿಸಲು ದಿಟ್ಟ ಕ್ರಮ ಕೈಗೊಂಡಿದ್ದೇವೆ ಎಂದು ಹೇಳುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಖಾಸಗಿಯವರಿಗೆ ಕೆಂಪು ಹಾಸಿನ ಸ್ವಾಗತ ನೀಡಿದ್ದಾರೆ. ಹೀಗಾಗಿಯೇ, ಬಿಬಿಎಂಪಿ, ಬಿಡಿಎಗೆ ಅನುದಾನ ನೀಡದೆ, ಖಾಸಗಿ ಸಹಭಾಗಿತ್ವಕ್ಕೇ ಹೆಚ್ಚು ಒತ್ತು ನೀಡಲಾಗಿದೆ. ಸ್ಕೈ–ಡೆಕ್, ವರ್ತುಲ ರಸ್ತೆ, ಸುರಂಗ ರಸ್ತೆಯಂತಹ ನೂರಾರು ಕೋಟಿ ವೆಚ್ಚದ ಯೋಜನೆಗಳು ಪಿಪಿಪಿ ಮಾದರಿಯಲ್ಲಿ ನಿರ್ಮಾಣವಾದರೆ ಅದರ ಹೊರೆ ನಾಗರಿಕರ ಮೇಲೆ ನೇರವಾಗಿ ಬೀಳಲಿದೆ.

147 ಕಿ.ಮೀ ವೈಟ್ ಟಾಪಿಂಗ್, ಪ್ರಾಯೋಗಿಕವಾಗಿ ಸುರಂಗ ರಸ್ತೆ, ರಾಜಕಾಲುವೆ ಬಫರ್ ಝೋನ್‌ನಲ್ಲಿ ರಸ್ತೆ, ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ ₹27 ಸಾವಿರ ಕೋಟಿಯಲ್ಲಿ 73 ಪೆರಿಫೆರಲ್ ವರ್ತುಲ ರಸ್ತೆ ನಿರ್ಮಾಣ, 250 ಮೀಟರ್ ಎತ್ತರದ ಸ್ಕೈ–ಡೆಕ್, ನಮ್ಮ ಮೆಟ್ರೊ ವಿಸ್ತರಣೆ, ಉಪ ನಗರ ರೈಲು ಕಾಮಗಾರಿಗೆ ವೇಗ, ಕಾವೇರಿಯಿಂದ 110 ಹಳ್ಳಿಗಳಿಗೆ ನೀರು, ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳ (ಎಸ್‌ಟಿಪಿ) ಉನ್ನತೀಕರಣ ಯೋಜನೆಗಳನ್ನೇ ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ವೈಟ್ ಟಾಪಿಂಗ್ ಕಾಮಗಾರಿಗೆ ಈಗಾಗಲೇ ಟೆಂಡರ್ ಆಹ್ವಾನಿಸಲಾಗಿದ್ದು, ಹಿಂದಿನ ಸರ್ಕಾರದಲ್ಲಿ ನಗರೋತ್ಥಾನ ಯೋಜನೆಯಡಿ ಘೋಷಿಸಲಾಗಿದ್ದ ₹6 ಸಾವಿರ ಕೋಟಿ ಅನುದಾನದಲ್ಲೇ ನಿರ್ವಹಿಸಲಾಗುತ್ತಿದೆ. ಸುರಂಗ ರಸ್ತೆಗೆ ಸರ್ಕಾರದಿಂದ ಅನುದಾನ ದೊರೆತು ಅದರಿಂದ ಪ್ರಾಯೋಗಿಕವಾಗಿ 3 ಕಿ.ಮೀ ರಸ್ತೆ ನಿರ್ಮಿಸುವ ಯೋಜನೆ ಹೊಂದಲಾಗಿತ್ತು. ಪ್ರತಿ ಕಿ.ಮೀಗೆ ₹500 ಕೋಟಿ ವೆಚ್ಚವಾಗುವ ಈ ಸುರಂಗ ರಸ್ತೆಗೆ ಸರ್ಕಾರ ಒಂದು ರೂಪಾಯಿ ಅನುದಾನವನ್ನೂ ಘೋಷಿಸಿಲ್ಲ. ಇನ್ನೂ ಬಿಬಿಎಂಪಿಯೇ ತನ್ನ ಸಂಪನ್ಮೂಲದಿಂದ ₹1,500 ಕೋಟಿ ವೆಚ್ಚ ಮಾಡುವ ಸ್ಥಿತಿಯಲ್ಲಂತೂ ಇಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿರ್ವಹಿಸುವ ಪೆರಿಫೆರಲ್ ವರ್ತುಲ ರಸ್ತೆಗೆ (ಪಿಆರ್‌ಆರ್) ಖಾಸಗಿ ಸಹಭಾಗಿತ್ವದಲ್ಲಿ ₹27 ಸಾವಿರ ಕೋಟಿ ವೆಚ್ಚ ಮಾಡುವುದಾಗಿ ಬಜೆಟ್‌ನಲ್ಲಿ ಪುನರುಚ್ಚರಿಸಲಾಗಿದೆ. ಆದರೆ, ಅತ್ಯಂತ ಪ್ರಮುಖ ಘಟ್ಟವಾಗಿರುವ ಭೂ ಸ್ವಾಧೀನ ಪರಿಹಾರದ ಬಗ್ಗೆ ಯಾವುದೇ ವಿವರಣೆ ಇಲ್ಲ.

ನಗರದಲ್ಲಿ ಹೆಚ್ಚಾಗುತ್ತಿರುವ ಕುಡಿಯುವ ನೀರಿನ ಸಮಸ್ಯೆಗೆ ಹೊಸ ಪರಿಹಾರವನ್ನೇನೂ ಆಯವ್ಯಯದಲ್ಲಿ ನೀಡಲಾಗಿಲ್ಲ. ಬದಲಿಗೆ, ಜಲಮಂಡಳಿಯಿಂದ ಕಾವೇರಿ 5ನೇ ಹಂತದಲ್ಲಿ ಮೇನಲ್ಲಿ ಕುಡಿಯುವ ನೀರು ಒದಗಿಸಲಾಗುತ್ತದೆ, 110 ಹಳ್ಳಿಗಳಿಗೆ ನೀರು ಪೂರೈಸಲು ₹200 ಕೋಟಿ ನೀಡಲಾಗಿದೆ ಎಂಬುದನ್ನು ಮತ್ತೆ ಹೇಳಲಾಗಿದೆ.

ವಾಹನ ದಟ್ಟಣೆಯಿಂದ ನಲುಗುತ್ತಿರುವ ರಾಜಧಾನಿಯಲ್ಲಿ ಸುಗಮ ಸಂಚಾರಕ್ಕೆ ಕೈಗೊಂಡಿರುವ ಹಿಂದಿನ ಯೋಜನೆಗಳ ಪ್ರಗತಿಯನ್ನೇ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ನಮ್ಮ ಮೆಟ್ರೊ ವಿಸ್ತರಣೆ ಮಾರ್ಗ, ಬಿಎಂಟಿಸಿಗೆ ಹೊಸ ಬಸ್, ಜಪಾನ್ ಸರ್ಕಾರ ನೆರವಿನಿಂದ ಅತ್ಯಾಧುನಿಕ ತಂತ್ರಜ್ಞಾನ ಟ್ರಾಫಿಕ್ ಸಿಗ್ನಲ್ ಅನುಷ್ಠಾನವನ್ನು ಪ್ರಸ್ತಾಪಿಸಲಾಗಿದೆ.

ಒಟ್ಟಾರೆಯಾಗಿ, ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯಲ್ಲಿ ಬಿಬಿಎಂಪಿ ಸರ್ಕಾರದಿಂದ ಆರ್ಥಿಕ ಸಹಾಯ ಸೇರಿದಂತೆ ಸಾಕಷ್ಟು ರೀತಿಯ ನೆರವನ್ನು ಬಯಸಿತ್ತು. ಎಂಟು ವರ್ಗಗಳಲ್ಲಿ ಯೋಜನೆಗಳ ಪಟ್ಟಿಯನ್ನೇ ಮಾಡಿಕೊಟ್ಟಿತ್ತು. ಆದರೆ, ಇವುಗಳ ಪ್ರಸ್ತಾಪವೂ ಬಜೆಟ್‌ನಲ್ಲಿ ಆಗಿಲ್ಲ. ಅಗಾಧವಾದದ್ದನ್ನು ನಿರೀಕ್ಷಿಸಿದ್ದ ಬಿಬಿಎಂಪಿ, ಏನೂ ಸಿಗದಿರುವುದರಿಂದ ತನ್ನ ವೆಚ್ಚಕ್ಕೆ ತನ್ನದೇ ಸಂಪನ್ಮೂಲವನ್ನು ಅವಲಂಬಿಸಬೇಕಾಗಿದೆ.

ತ್ಯಾಜ್ಯ ವಿಲೇವಾರಿಗೆ ಸಂಸ್ಥೆ!

ಮನೆಯಿಂದ ತ್ಯಾಜ್ಯ ಸಂಸ್ಕರಣೆ ಘಟಕಗಳವರೆಗೆ ತ್ಯಾಜ್ಯ ವಿಲೇವಾರಿಯನ್ನು ವ್ಯವಸ್ಥಿತವಾಗಿ ನಿರ್ವಹಿಸುವ ಹೊಣೆಯನ್ನು ‘ನುರಿತ ಸಂಸ್ಥೆಗೆ’ ವಹಿಸಲು ಸರ್ಕಾರ ನಿರ್ಧರಿಸಿದೆ. ಬಿಎಂಪಿಯಿಂದ ಹೊರತಾಗಿ ಸಂಸ್ಥೆಯೊಂದು ತ್ಯಾಜ್ಯ ನಿರ್ವಹಣೆಗೆ ಈ ಮೂಲಕ ಹೆಜ್ಜೆ ಇರಿಸಲಿದೆ. ನಗರ ಜಿಲ್ಲೆಯನ್ನೇ ನಾಲ್ಕು ವಲಯವನ್ನಾಗಿ ವಿಂಗಡಿಸಿ, ಪ್ರತಿಯೊಂದು ವಲಯಕ್ಕೆ ‘ನುರಿತ ಸಂಸ್ಥೆಯನ್ನು’ ಪಾರದರ್ಶಕವಾಗಿ ನೇಮಿಸಲಾಗುವುದು ಎಂದು ಪ್ರಕಟಿಸಲಾಗಿದೆ. ಇದಲ್ಲದೆ, ನಗರದ ಹೊರವಲಯದ ನಾಲ್ಕು ಕಡೆಗಳಲ್ಲಿ 50ರಿಂದ 100 ಎಕರೆ ಜಮೀನು ಗುರುತಿಸಿ, ಮುಂದಿನ 30 ವರ್ಷ ವೈಜ್ಞಾನಿಕ ತ್ಯಾಜ್ಯ ವಿಲೇವಾರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಪುನರುಚ್ಚರಿಸಲಾಗಿದೆ.

ರಾತ್ರಿ 1ರವರೆಗೆ ವ್ಯಾಪಾರ!

ನಗರದಲ್ಲಿ ರಾತ್ರಿ 11 ಗಂಟೆಯವರೆಗಿದ್ದ ವಹಿವಾಟಿನ ಅವಕಾಶವನ್ನು ವಾಣಿಜ್ಯ ಮತ್ತು ವ್ಯಾಪಾರವನ್ನು ವೃದ್ಧಿಸುವ ಹಿನ್ನೆಲೆಯಲ್ಲಿ ರಾತ್ರಿ 1ರವರೆಗೆ ವಿಸ್ತರಿಸುವುದಾಗಿ ಪ್ರಕಟಿಸಲಾಗಿದೆ.

ತಿಂಡಿ–ತಿನಿಸು ಮಾರುವ ಅಂಗಡಿಗಳು ಹಾಗೂ ಹೋಟೆಲ್‌ಗಳ ವಹಿವಾಟು ಅವಧಿಯನ್ನು ರಾತ್ರಿ 1 ಗಂಟೆಯವರೆಗೂ ವಿಸ್ತರಿಸಿ, ಅಂದಿನ ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ಅವರು 2022 ಅ.14ರಂದು ಆದೇಶ ಹೊರಡಿಸಿದ್ದರು. ಆದರೆ ನಂತರದ ದಿನಗಳಲ್ಲಿ ಯಾವುದೇ ಆದೇಶವಿಲ್ಲದೇ 11ರ ನಂತರದ ವಹಿವಾಟಿಗೆ ತೆರೆ ಬಿದ್ದಿತ್ತು.

ಇದೀಗ ನಗರದಲ್ಲಿ ರಾತ್ರಿ 1ರವರೆಗೆ ವ್ಯಾಪಾರ ವಹಿವಾಟಿಗೆ ಅವಕಾಶ ನೀಡಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಇದು ಎಂದಿನಿಂದ ಜಾರಿಯಾಗುತ್ತದೆ ಎಂಬುದನ್ನು ರಾಜ್ಯ ಸರ್ಕಾರ ಮುಂದಿನ ದಿನಗಳಲ್ಲಿ ಆದೇಶ ಹೊರಡಿಸಲಿದೆ.

- ನಗರದ ಪ್ರಮುಖ ರಸ್ತೆಗಳಲ್ಲಿ ₹1,700 ಕೋಟಿ ವೆಚ್ಚದಲ್ಲಿ 147 ಕಿ.ಮೀ ಉದ್ದದ ವೈಟ್ ಟಾಪಿಂಗ್ ರಸ್ತೆ ಕಾಮಗಾರಿ 2025 ಡಿಸೆಂಬರ್‌ಗೆ ಪೂರ್ಣ.
- ಸಂಚಾರ ದಟ್ಟಣೆ ಅತ್ಯಂತ ತೀವ್ರವಾಗಿರುವ ಹೆಬ್ಬಾಳ ಜಂಕ್ಷನ್‌ನಲ್ಲಿ ಪ್ರಾಯೋಗಿಕವಾಗಿ ಸುರಂಗ ರಸ್ತೆ ಈ ವರ್ಷ ನಿರ್ಮಾಣ.
- ರಾಜಕಾಲುವೆ ಬಫರ್ ಝೋನ್‌ನಲ್ಲಿ ಸರ್ವಋತು ರಸ್ತೆ ನಿರ್ಮಾಣ ₹200 ಕೋಟಿಯಲ್ಲಿ ಆರಂಭವಾಗಿದ್ದು, 100 ಕಿ.ಮೀ. ಉದ್ದದ ರಸ್ತೆಯನ್ನು ಅಭಿವೃದ್ಧಿ.
- ಆರ್ಥಿಕ ಚಟುವಟಿಕೆಗಳು ದೊಡ್ಡ ಪ್ರಮಾಣದಲ್ಲಿ ವೃದ್ಧಿಸಲು ಸಹಕಾರಿಯಾಗಲು ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಅನ್ನು ‘ಬೆಂಗಳೂರು ಬಿಸಿನೆಸ್ ಕಾರಿಡಾರ್’ ಪರಿಕಲ್ಪನೆಯಲ್ಲಿ ಪರಿಚಯ. ಪಿಪಿಪಿ ಮಾದರಿಯಲ್ಲಿ ₹27 ಸಾವಿರ ಕೋಟಿಯಲ್ಲಿ 73 ಕಿ.ಮೀ ಅಭಿವೃದ್ಧಿ.
- ಬೆಂಗಳೂರು ನಗರದಲ್ಲಿ 250 ಮೀಟರ್ ಎತ್ತರದ ಸ್ಕೈ-ಡೆಕ್ ನಿರ್ಮಾಣಕ್ಕೆ ಅಂತರರಾಷ್ಟ್ರೀಯ ಮಟ್ಟದ ವಾಸ್ತುವಿನ್ಯಾಸಗಾರರ ಆಹ್ವಾನ.
- ಬಿಬಿಎಂಪಿ, ಬಿಎಂಆರ್‌ಸಿಎಲ್, ಬಿಡಬ್ಲ್ಯುಎಸ್‌ಎಸ್‌ಬಿ, ಬಿಡಿಎ ವ್ಯಾಪ್ತಿಯಲ್ಲಿ ಪ್ರತಿ ತಿಂಗಳು ವಿದ್ಯುತ್ ಶುಲ್ಕ ಪಾವತಿಯ ಆರ್ಥಿಕ ಹೊರೆ ಕಡಿಮೆಗೊಳಿಸಲು ಸೋಲಾರ್ ಪಾರ್ಕ್ ೯ ಸ್ಥಾಪನೆ.
- ತ್ಯಾಜ್ಯ ವಿಲೇವಾರಿಗೆ ನಗರ ಜಿಲ್ಲೆಯನ್ನು ನಾಲ್ಕು ವಲಯಗಳನ್ನಾಗಿ ವಿಂಗಡಿಸಿ, ಪ್ರತಿಯೊಂದು ವಲಯಕ್ಕೂ ನುರಿತ ಸಂಸ್ಥೆಯನ್ನು ಪಾರದರ್ಶಕವಾಗಿ ನೇಮಿಸಲಾಗುವುದು.
- ಬಿಬಿಎಂಪಿಯ ಅರಣ್ಯ, ಕೆರೆ ಮತ್ತು ತೋಟಗಾರಿಕಾ ವಿಭಾಗವನ್ನು ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ನಿರ್ವಹಣಾ ವಿಭಾಗ ಎಂದು ಮರುನಾಮಕರಣ. ಕೆರೆ ಮತ್ತು ಉದ್ಯಾನಗಳ ಅಭಿವೃದ್ಧಿಯಲ್ಲಿ ಸಾರ್ವಜನಿಕ ಸಹಭಾಗಿತ್ವಕ್ಕೆ ಪ್ರತ್ಯೇಕ ನೀತಿ.
- ಬಿಬಿಎಂಪಿ ಸಹಯೋಗದೊಂದಿಗೆ ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದಲ್ಲಿ ‘ಸರ್ವಜ್ಞ ಉದ್ಯಾನ’ ಅಭಿವೃದ್ಧಿ.

- ನಮ್ಮ ಮೆಟ್ರೊಗೆ 2025ರ ವೇಳೆಗೆ ಹೆಚ್ಚುವರಿಯಾಗಿ 44 ಕಿ.ಮೀ ಮಾರ್ಗ
- ನಮ್ಮ ಮೆಟ್ರೋ ಹಂತ-3ಎ ರಡಿಯಲ್ಲಿ ಸರ್ಜಾಪುರದಿಂದ ಹೆಬ್ಬಾಳ ಸಂಪರ್ಕಿಸುವ ಮಾರ್ಗಕ್ಕೆ ಡಿ.ಪಿ.ಆರ್. ಕರಡು ಸಿದ್ಧ. ಕೇಂದ್ರ ಸರ್ಕಾರದ ಅನುಮೋದನೆಗೆ ಸಲ್ಲಿಸಲು ನಿರ್ಧಾರ.

- ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) 1,334 ಹೊಸ ಎಲೆಕ್ಟ್ರಿಕ್ ಬಸ್ ಹಾಗೂ 820 ಬಿಎಸ್-6 ಡೀಸೆಲ್ ಬಸ್‌ಗಳ ಸೇರ್ಪಡೆ.
- ಬಿಎಂಟಿಸಿಯಲ್ಲಿ ಮಹಿಳಾ ಸುರಕ್ಷತೆಯನ್ನು ಒಳಗೊಂಡ ‘ವೆಹಿಕಲ್ ಟ್ರ್ಯಾಕಿಂಗ್’ ಮೊಬೈಲ್ ಆ್ಯಪ್ ಅನುಷ್ಠಾನ.

- ಜಲಮಂಡಳಿಯಿಂದ ಕಾವೇರಿ ಹಂತ-5 ಯೋಜನೆಯಡಿ ಮೇ 2024ರ ವೇಳೆಗೆ 12 ಲಕ್ಷ ಜನರಿಗೆ ಪ್ರತಿದಿನ 110 ಲೀಟರ್ ಶುದ್ಧ ಕುಡಿಯುವ ನೀರು ಒದಗಿಸಲಾಗುವುದು.
- ಕಾವೇರಿ ಹಂತ-5 ರಡಿಯಲ್ಲಿ ಒಳಚರಂಡಿ ಕಾಮಗಾರಿಗಳನ್ನು ಡಿಸೆಂಬರ್ 2024ರಲ್ಲಿ ಪೂರ್ಣಗೊಳಿಸಲಾಗುವುದು.
- ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು ₹441 ಕೋಟಿ ವೆಚ್ಚದಲ್ಲಿ ಉನ್ನತೀಕರಣ. 268 ಎಂಎಲ್‌ಡಿ ತ್ಯಾಜ್ಯ ನೀರು ಸಂಸ್ಕರಣೆ.
- ₹200 ಕೋಟಿ ವೆಚ್ಚದಲ್ಲಿ 110 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ಸೌಲಭ್ಯ

- ಯುರೋಪ್ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಸರಕು ಸಾಗಣೆಗೆ ಮಂಗಳೂರು ಬಂದರಿನಿಂದ ಬೆಂಗಳೂರುವರೆಗೆ ಆರ್ಥಿಕ ಕಾರಿಡಾರ್ ಅಭಿವೃದ್ಧಿ. ಕಲ್ಯಾಣ ಕರ್ನಾಟಕ ಪ್ರದೇಶದ ಆರ್ಥಿಕ ಅಭಿವೃದ್ಧಿಯನ್ನು ಚುರುಕುಗೊಳಿಸಲು ಬೀದರ್ ಹಾಗೂ ಬೆಂಗಳೂರು ನಡುವೆ ಕಾರಿಡಾರ್.
- ಬೆಂಗಳೂರು ಇಂಡಿಯಾ ನ್ಯಾನೋ ಅಂತರರಾಷ್ಟ್ರೀಯ ಸಮ್ಮೇಳನ ಆಯೋಜನೆ. ಸಮ್ಮೇಳನದ ಪೂರ್ವಭಾವಿಯಾಗಿ ಜನಸಮುದಾಯದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಒಂದು ತಿಂಗಳು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಉತ್ಸವ.
- ಬೆಂಗಳೂರಿನ ಖಾಸಗಿ ವಸತಿ ಸಮುಚ್ಚಯಗಳಲ್ಲಿ ಸಂಸ್ಕರಿಸಿದ ನೀರನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿದ ಮಾನದಂಡಗಳ ಪ್ರಕಾರ, ಮರುಬಳಕೆ ಮಾಡಲು ಪ್ರೋತ್ಸಾಹ.

ತಜ್ಞರ ಅಭಿಪ್ರಾಯ

ಬೀದಿಬದಿ ವ್ಯಾಪಾರಸ್ಥರ ಕಡೆಗಣನೆ



ಕಾರ್ಮಿಕರ ಒಳಿತಿಗಾಗಿ ಈ ಬಾರಿಯ ಬಜೆಟ್‌ನಲ್ಲಿ ಬಹಳ ಪ್ರಮುಖ ನಿರ್ಧಾರಗಳನ್ನು ಸರ್ಕಾರ ಕೈಗೊಂಡಿದೆ. ಅದರ ಜೊತೆಗೆ ಬೀದಿಬದಿ ವ್ಯಾಪಾರಿಗಳ ಅಭಿವೃದ್ಧಿಗೂ ಯೋಜನೆಗಳನ್ನು ರೂಪಿಸಿದ್ದರೆ ಈ ಬಜೆಟ್ ಜನಪರವಾಗುತ್ತಿತ್ತು. ಬಡವರಷ್ಟೇ ಬೀದಿಬದಿ ವ್ಯಾಪಾರಿಗಳಾಗಿರುತ್ತಾರೆ. ಅವರನ್ನು ಕಡೆಗಣಿಸಿರುವುದು ನೋವು ತಂದಿದೆ.

ರಾಜ್ಯದಲ್ಲಿ 5.5 ಲಕ್ಷ ಬೀದಿಬದಿ ವ್ಯಾಪಾರಿಗಳು ನೋಂದಣಿ ಮಾಡಿಕೊಂಡಿದ್ದಾರೆ. 25 ಲಕ್ಷ ಅವಲಂಬಿತರು ಇದ್ದಾರೆ. ಜೀವನ ನಡೆಸಲು ನಿತ್ಯ ಹೋರಾಟ ಮಾಡಬೇಕಾದ ಪರಿಸ್ಥಿತಿ ಇದೆ. ಇದರ ಜೊತೆಗೆ ಸವಲತ್ತುಗಳಿಗಾಗಿ ಸರ್ಕಾರದ ಗಮನ ಸೆಳೆಯಲು ಹೋರಾಟ ಮಾಡಬೇಕು. ಬೀದಿ ಬದಿ ವ್ಯಾಪಾರಿಗಳ ಕುಟುಂಬಗಳನ್ನು ಬಡತನದಿಂದ ಮೇಲೆತ್ತುವ ಪ್ರಯತ್ನವನ್ನು ಇಲ್ಲಿವರೆಗಿನ ಯಾವ ಸರ್ಕಾರಗಳೂ ಮಾಡಿಲ್ಲ. ಈ ಸರ್ಕಾರವಾದರೂ ಮಾಡೀತು ಎಂಬ ನಿರೀಕ್ಷೆ ಇತ್ತು. ಅದೂ ಹುಸಿಯಾಗಿದೆ.

ಯಾವುದೇ ಜಾಮೀನು ಇಲ್ಲದೇ ₹20 ಸಾವಿರ ಸಾಲ ನೀಡಬೇಕು. ಕಲ್ಯಾಣ ಮಂಡಳಿ ರಚಿಸಬೇಕು. ಇಲ್ಲದೇ ಹೋದರೆ ಪ್ರತ್ಯೇಕ ನಿಗಮ ರಚಿಸಬೇಕು ಎಂಬುದು ನಮ್ಮ ಪ್ರಮುಖ ಬೇಡಿಕೆಗಳಾಗಿದ್ದವು. ಜೊತೆಗೆ ನಿವೇಶನ ರಹಿತ ಬೀದಿಬದಿ ವ್ಯಾಪಾರಿಗಳಿಗೆ ನಿವೇಶನ ನೀಡುವ, ಮನೆ ಇಲ್ಲದವರಿಗೆ ಮನೆ ನೀಡುವ ಯೋಜನೆಗಳನ್ನು ರೂಪಿಸಬೇಕಿತ್ತು.

ಈ ಬಜೆಟ್‌ನಲ್ಲಿ ಯಾವುದೇ ಸ್ಪಂದನೆ ದೊರೆತಿಲ್ಲ. ಆದರೂ ನಾವು ಆಶಾಭಾವನೆಯನ್ನು ಕಳೆದುಕೊಂಡಿಲ್ಲ. ಮುಂದಿನ ಬಜೆಟ್‌ನಲ್ಲಿಯಾದರೂ ಬೀದಿಬದಿ ವ್ಯಾಪಾರಸ್ಥರನ್ನು ಪರಿಗಣಿಸುತ್ತಾರೆ ಎಂಬ ನಂಬಿಕೆ ಇದೆ.

ಸಿ.ಇ. ರಂಗಸ್ವಾಮಿ, ರಾಜ್ಯಾಧ್ಯಕ್ಷ, ಬೀದಿಬದಿ ವ್ಯಾಪಾರಸ್ಥರ ಸಂಘ

ಸ್ಥಳೀಯ ಸರ್ಕಾರ ಬಲಿಷ್ಠಗೊಳಿಸಿ



5ನೇ ಹಣಕಾಸು ಆಯೋಗವು ಈ ಮೊದಲೇ ರಚನೆಯಾಗಬೇಕಿತ್ತು. ಈಗ ರಚನೆಯಾಗಿ ಅದರ ಶಿಫಾರಸ್ಸಿನ ಅಡಿಯಲ್ಲಿ ಹಣ ಹಂಚಿಕೆಯಾಗುವುದರಿಂದ ಸ್ಥಳೀಯ ಸರ್ಕಾರಗಳಿಗೆ ಸಿಗಬೇಕಾಗಿರುವ ಆರ್ಥಿಕ ಬೆಂಬಲ ಸಮರ್ಪಕವಾಗಿ ದೊರೆಯುವ ನಿರೀಕ್ಷೆಯಲ್ಲಿದ್ದೇವೆ. ಸ್ಥಳೀಯ ಸರ್ಕಾರಗಳಿಗೆ ಕಂದಾಯದಿಂದ ಬರುವ ಆದಾಯವೇ ಪ್ರಮುಖವಾದುದು. ಈ ನಿಟ್ಟಿನಲ್ಲಿ ಸರ್ಕಾರ ಡಿಜಿಟಲೀಕರಣ ಮಾಡಿರುವುದು ಒಳ್ಳೆಯ ಆಲೋಚನೆಯಾಗಿದೆ. ಸ್ಥಳೀಯ ಸರ್ಕಾರ ತಮ್ಮ ಕಂದಾಯವನ್ನು ಕ್ರಮಬದ್ಧವಾಗಿ ಹಾಗೂ ವ್ಯವಸ್ಥಿತವಾಗಿ ಸಂಗ್ರಹಣೆ ಮಾಡಬಹುದು.

ಸ್ಥಳೀಯ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಜನರ ಸಹಭಾಗಿತ್ವ ಬಹಳ ಪ್ರಮುಖವಾದುದು. ಆದರೆ ನಗರ ಸ್ಥಳೀಯ ಸರ್ಕಾರಗಳ ಮುಖ್ಯ ಜಾಲತಾಣಗಳಲ್ಲಿ ಪಾಲಿಕೆ ಪರಿಷತ್ ಸಾಮಾನ್ಯ ಸಭೆಗಳ ನಡಾವಳಿ ಸೇರಿದಂತೆ ಯಾವುದೇ ಮಾಹಿತಿಗಳು ಸಾರ್ವಜನಿಕರಿಗೆ ಲಭ್ಯವಿರುವುದಿಲ್ಲ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಡೆಯುವ ಸಭೆಗಳ ಕಾರ್ಯಕಲಾಪವನ್ನು ನೇರ ಪ್ರಸಾರ ಮಾಡುವುದರಿಂದ ಜನರಿಗೆ ತಮ್ಮ ಸ್ಥಳೀಯ ಆಡಳಿತ ಕುರಿತು ವಾರ್ಡ್ ಸದಸ್ಯರು ನಡೆಸುವ ಚರ್ಚೆಯ ಎಲ್ಲ ಮಾಹಿತಿಯು ಇದರಿಂದ ಲಭಿಸಲಿದೆ. ನಗರದಲ್ಲಿನ ವಾತಾವರಣದ ಸ್ವಚ್ಛತೆಗಾಗಿ ಮರಗಳ ಗಣತಿ, ಕೆರೆ ಮತ್ತು ಉದ್ಯಾನಗಳ ತಂತ್ರಾಂಶ ಆಧಾರಿತ ಮೇಲ್ವಿಚಾರಣೆ ಮತ್ತು ಅಭಿವೃದ್ಧಿಯಲ್ಲಿ ಸಾರ್ವಜನಿಕರ ಸಹಭಾಗಿತ್ವವನ್ನು ಹೆಚ್ಚಿಸಲು ಪ್ರತ್ಯೇಕ ನೀತಿ ಜಾರಿಗೊಳಿಸಿರುವುದು ಸ್ವಾಗತಾರ್ಹ. ವಾರ್ಡ್ ಸಮಿತಿ ಮತ್ತು ಏರಿಯಾ ಸಭೆಗಳನ್ನು ಕಾರ್ಯರೂಪಕ್ಕೆ ತಂದು ಸಮರ್ಪಕವಾಗಿ ನಿರ್ವಹಿಸಬಹುದು.

ಮಂಜುನಾಥ ಹಂಪಾಪುರ ಎಲ್., ಕಾರ್ಯಕ್ರಮದ ವ್ಯವಸ್ಥಾಪಕ, ನಾಗರಿಕ ಸಹಭಾಗಿತ್ವ ಕರ್ನಾಟಕ ಜನಾಗ್ರಹ

ಪ್ರತಿಕ್ರಿಯೆಗಳು



ರಾಜ್ಯದಲ್ಲಿ ಈಗಾಗಲೇ ಮಹಿಳೆಯರಿಗೆ ಉಚಿತ ಸಾರಿಗೆ ಕಲ್ಪಿಸಲಾಗಿದ್ದು, ಬಹಳಷ್ಟು ಮಹಿಳೆಯರಿಗೆ ಅನುಕೂಲವಾಗಿದೆ. ಬಿಎಂಟಿಸಿ ಬಸ್‌ಗಳಲ್ಲಿ ಮಹಿಳೆಯರ ಸುರಕ್ಷತೆಗೆ ವೆಹಿಕಲ್ ಟ್ರ್ಯಾಕಿಂಗ್ ಮೊಬೈಲ್ ಆ್ಯಪ್ ಜಾರಿಗೊಳಿಸುತ್ತಿರುವುದು ಉತ್ತಮ

ಸೌಮ್ಯ, ಮಲ್ಲೇಶ್ವರ



ಬಜೆಟ್‌ನಲ್ಲಿ ಘೋಷಿಸಿದ ಎಲ್ಲಾ ಅಭಿವೃದ್ಧಿ ಯೋಜನೆಗಳು ಗ್ಯಾರಂಟಿಯಾಗಿ ರಾಜ್ಯದ ಜನರನ್ನ ತಲುಪಿಸಬೇಕು. ಬೆಂಗಳೂರು ನಗರದ ಸಂಚಾರ ದಟ್ಟಣೆ ನಿವಾರಿಸಲು ಸುರಂಗ ಮಾರ್ಗವನ್ನು ಪ್ರಾಯೋಗಿಕವಾಕ ಹೆಬ್ಬಾಳ ಜಂಕ್ಷನ್‌ನಲ್ಲಿ ಮಾಡುತ್ತಿರುವುದು ಶ್ಲಾಘನೀಯ

ಅರ್ಚನಾ ಆರ್, ಸಹಾಯಕ ಪ್ರಾಧ್ಯಾಪಕಿ, ವಿಜಯ ಪದವಿಪೂರ್ವ ಕಾಲೇಜು



ಪ್ರವಾಸೋದ್ಯಮ ಹಾಗೂ ಬೆಂಗಳೂರು ಅಭಿವೃದ್ಧಿಗೆ ಬಜೆಟ್‌ನಲ್ಲಿ ಮುನ್ನೋಟ ಮಾತ್ರ ಇದೆ. ಬಜೆಟ್‌ನಲ್ಲಿ ಪೂರ್ತಿ ಭರವಸೆಗಳೇ ಇwದ್ದು, ಅವುಗಳನ್ನು ಅನುಷ್ಠಾನ ಮಾಡುವುದು ಅನುಮಾನ. ಆದ್ದರಿಂದ, ಸರ್ಕಾರ ಯೋಜನೆಗಳು ಜನರಿಗೆ ತಲುಪುವಂತಾಗಲಿ

ಬಿ. ಆಶಿಕಾ, ರಾಜರಾಜೇಶ್ವರಿನಗರ




ಐಐಎಸ್ಸಿ, ಐಐಟಿ ಸಂಸ್ಥೆಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ತರಬೇತಿ ಪಡೆಯುವ ಪರಿಶಿಷ್ಟ ಪಂಗಡಗಳ ಎಂಜಿನಿಯರಿಂಗ್ ಪದವೀಧರರಿಗೆ ₹ 15 ಸಾವಿರ ಶಿಷ್ಯವೇತನ ನೀಡಿವುದುದನ್ನು ಸ್ವಾಗತಾರ್ಹ. ಈ ಸೌಲಭ್ಯವನ್ನು ಹಿಂದುಳಿದ ವರ್ಗಗಳ ಪದವೀಧರರಿಗೂ ವಿಸ್ತರಿಸಿದ್ದರೆ ಅನುಕೂಲವಾಗುತ್ತಿತ್ತು

ರವಿಚಂದ್ರ ಗಗನಮಾಲಿ, ಚಿಕ್ಕಬಿದರಕಲ್ಲು



ಕನ್ನಡ ಅಭಿವೃದ್ಧಿ ವಿಷಯದಲ್ಲಿ ನಿರಾಸೆ ಮೂಡಿಸಿದ ಬಜೆಟ್. ಶಿಕ್ಷಣ, ವಿದ್ಯುತ್, ಆರೋಗ್ಯ ಇಲಾಖೆಯ ಯೋಜನೆಗಳ ಘೋಷಣೆ ಪ್ರತಿವರ್ಷದಂತೆ ಈ ವರ್ಷವೂ ಯಥಾಪ್ರಕಾರ ಮುಂದುವರಿದಿದೆ. ಇವೆಲ್ಲವೂ ಸಮರ್ಪಕವಾಗಿ ಜಾರಿಗೆ ಬರಬೇಕು. ಕೊನೆ ಹಂತದ ಜನರಿಗೂ ಯೋಜನೆಗಳು ತಲುಪುವಂತಾಗಬೇಕು

ಎನ್. ಮುನಿರಾಜು, ಹೆಣ್ಣೂರು



ಸರ್ಕಾರಕ್ಕೆ ಬೇಡವಾದ ಅಂಗವಿಕಲರ ಸಮುದಾಯ. ಅಲ್ಪಸಂಖ್ಯಾತರ ಅಭಿವೃದ್ಧಿಗೆ ನೀಡಿದಷ್ಟು ಪ್ರಾಮುಖ್ಯವನ್ನು ಅಂಗವಿಕಲರ ಸಬಲೀಕರಣಕ್ಕೆ ನೀಡದಿರುವುದು ವಿಪರ್ಯಾಸ. ಇವರಿಗೆ ಯಾವುದೇ ನೇರ ಸೌಲಭ್ಯ ಯೋಜನೆ ಘೋಷಿಸದೆ ನಿರೀಕ್ಷೆಗಳನ್ನು ಹುಸಿಮಾಡಿದೆ

ಚಂದ್ರಶೇಖರ ಪುಟ್ಟಪ್ಪ ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿಯ ಕಾರ್ಯಾಧ್ಯಕ್ಷ

ಬಜೆಟ್‌ನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆಗೆ ಕೊಡುಗೆಗಳು

ಮಹಿಳಾ ಕ್ರೀಡಾ ವಸತಿ ನಿಲಯಗಳ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದ 14 ಸ್ಥಳಗಳಲ್ಲಿ ಮಹಿಳೆಯರಿಗಾಗಿ ಕ್ರೀಡಾ ವಸತಿ ನಿಲಯಗಳನ್ನು ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಶುಕ್ರವಾರ ಮಂಡಿಸಿದ ರಾಜ್ಯ ಬಜೆಟ್‌ನಲ್ಲಿ ಅವರು ಯುವ ಸಬಲೀಕರಣ ಮತ್ತು ಕ್ರೀಡೆ ಇಲಾಖೆಗೆ ಹಲವು ಕೊಡುಗೆಗಳನ್ನು ಪ್ರಕಟಿಸಿದರು.

'₹ 35 ಕೋಟಿ ವೆಚ್ಚದಲ್ಲಿ ಮಹಿಳಾ ಕ್ರೀಡಾ ವಸತಿ ನಿಲಯಗಳನ್ನು ನಿರ್ಮಿಸಲಾಗುವುದು. ಕೊಡಗು ಜಿಲ್ಲೆಯ ಪೊನ್ನಂಪೇಟೆಯಲ್ಲಿ ₹ 5 ಕೋಟಿ ವೆಚ್ಚದಲ್ಲಿ ಕ್ರೀಡಾ ವಸತಿ ನಿಲಯ ಕಟ್ಟಡವನ್ನು ನಿರ್ಮಿಸಲಾಗುವುದು. ಬಳ್ಳಾರಿಯಲ್ಲಿ ಕ್ರೀಡಾ ವಸತಿ ನಿಲಯದ ಉನ್ನತೀಕರಣ ಹಾಗೂ ಕ್ರೀಡಾಸೌಕರ್ಯಗಳ ಅಭಿವೃದ್ಧಿಗಾಗಿ ಜಿಲ್ಲಾ ಖನಿಜ ಪ್ರತಿಷ್ಠಾನದ ನಿಧಿಯಿಂದ ₹ 10 ಕೋಟಿ ಒದಗಿಸಲಾಗುವುದು' ಎಂದು ಹೇಳಿದರು.

'ಬೆಂಗಳೂರಿನ ಉತ್ತರ ತಾಲ್ಲೂಕಿನಲ್ಲಿ ಅಂದಾಜು 70 ಎಕರೆ ಪ್ರದೇಶದಲ್ಲಿ ಅತ್ಯಾಧುನಿಕ ಮತ್ತು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಸಮುಚ್ಛಯವನ್ನು ಒಳಗೊಂಡ ಕ್ರೀಡಾ ನಗರವನ್ನು (ಸ್ಪೋರ್ಟ್ಸ್ ಸಿಟಿ) ಸಾರ್ವಜನಿಕ- ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು' ಎಂದರು.

ಬಜೆಟ್‌ನಲ್ಲಿರುವ ಇತರ ಅಂಶಗಳು

- ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ಸೌಕರ್ಯ ಅಭಿವೃದ್ಧಿಪಡಿಸುವ ಉದ್ದೇಶದಿಂದ ನಾಲ್ಕು ಸ್ಥಳಗಳಲ್ಲಿ ಬಹುಕ್ರೀಡಾ ಸೌಲಭ್ಯಗನ್ನು ಒಳಗೊಂಡ ಅತ್ಯಾಧುನಿಕ ಕ್ರೀಡಾ ಸಂಕೀರ್ಣಗಳನ್ನು ಸಾರ್ವಜನಿಕ– ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗುವುದು.
- ಪೊಲೀಸ್, ಅರಣ್ಯ ಸೇರಿದಂತೆ ಎಲ್ಲ ಇಲಾಖೆಗಳಲ್ಲಿ ಶೇ 2ರಷ್ಟು ಹುದ್ದೆಗಳನ್ನು ಮೀಸಲಿಡಲಾಗುವುದು.
- ರಾಜ್ಯದ ವಿವಿಧ ಕ್ರೀಡೆಗಳನ್ನು ಪ್ರೋತ್ಸಾಹಿಸಲು ಹಾಗೂ ಕ್ರೀಡಾಪಟುಗಳಿಗೆ ಉತ್ತೇಜನ ನೀಡಲು ರೈಫಲ್ ಶೂಟಿಂಗ್ ಸಂಸ್ಥೆ, ಹಾಕಿ ಕರ್ನಾಟಕ, ಅಮೆಚೂರು ಬಾಕ್ಸಿಂಗ್ ಸಂಸ್ಥೆ, ಆರ್ಚರಿ ಸಂಸ್ಥೆ, ಅಥ್ಲೆಟಿಕ್ ಸಂಸ್ಥೆ, ಕಯಾಕಿಂಗ್ ಮತ್ತು ಕೆನೊಯಿಂಗ್ ಅಕಾಡೆಮಿ, ಸೈಕ್ಲಿಂಗ್ ಅಕಾಡೆಮಿ ವಿಜಯಪುರ ಮತ್ತು ಫೆನ್ಸಿಂಗ್ ಸಂಸ್ಥೆಗಳಿಗೆ ಒಟ್ಟಾರೆ ₹ 12 ಕೋಟಿ ಅನುದಾನ ನೀಡಲಾಗುವುದು.
- ರಾಜ್ಯದ ಕ್ರೀಡಾಪಟುಗಳಿಗೆ ಅತ್ಯುನ್ನತ ಸ್ಪರ್ಧಾ ಅವಕಾಶ ಒದಗಿಸಲು ಪ್ರತಿ ವರ್ಷ ಒಂದು ರಾಜ್ಯ ಮಟ್ಟದ ಒಲಿಂಪಿಕ್ಸ್ ಮತ್ತು 14 ವರ್ಷ ವಯೋಮಾನದ ಒಳಗಿನವರಿಗೆ ಮಿನಿ ಒಲಿಂಪಿಕ್ಸ್ ಹಮ್ಮಿಕೊಳ್ಳಲಾಗುವುದು.
- ಮುಂಬರುವ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸುವ ಕ್ರೀಡಾಪಟುಗಳಿಗೆ (ಚಿನ್ನಕ್ಕೆ ₹6 ಕೋಟಿ, ಬೆಳ್ಳಿಗೆ ₹4 ಕೋಟಿ, ಕಂಚಿಗೆ ₹3 ಕೋಟಿ) ಪ್ರೋತ್ಸಾಹಧನ ನೀಡಲಾಗುವುದು.
- ಏಷ್ಯನ್ ಮತ್ತು ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಚಿನ್ನದ ಪದಕ ವಿಜೇತ ಕ್ರೀಡಾಪಟುಗಳಿಗ (ಚಿನ್ನಕ್ಕೆ ₹35 ಲಕ್ಷ, ಬೆಳ್ಳಿಗೆ ₹25 ಲಕ್ಷ, ಕಂಚಿಗೆ ₹15 ಲಕ್ಷ) ಪ್ರೋತ್ಸಾಹಧನ ನೀಡಲಾಗುವುದು.
- ಕರ್ನಾಟಕದ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಸಮಯದಲ್ಲಿ ಗಾಯಗೊಂಡಲ್ಲಿ ಅವರ ಚಿಕಿತ್ಸೆಗೆ ನೆರವಾಗಲು ಆರೋಗ್ಯ ವಿಮೆ ಸೌಲಭ್ಯವನ್ನು ಸರ್ಕಾರದ ವತಿಯಿಂದ ಒದಗಿಸಲಾಗುವುದು.

'ಎಂಎಸ್‌ಎಂಇ ಅಭಿವೃದ್ಧಿಗೆ ನಿರ್ಲಕ್ಷ್ಯ'

ಪ್ರಜಾವಾಣಿ ವಾರ್ತೆ



ಸಿ.ಎ. ಶಶಿಧರ ಶೆಟ್ಟಿ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ 2024-25ನೇ ಸಾಲಿನ ಆಯವ್ಯಯದಲ್ಲಿ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ (ಎಂಎಸ್‌ಎಂಇ) ಅಭಿವೃದ್ಧಿಗೆ ಏನನ್ನೂ ನೀಡಿಲ್ಲ. ಈ ವಲಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾರೆ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ) ಪ್ರತಿಕ್ರಿಯಿಸಿದೆ.

ಆದರೂ ಕೃಷಿ, ಶಿಕ್ಷಣ, ಕೌಶಲ ಅಭಿವೃದ್ಧಿ ಮತ್ತು ಆರೋಗ್ಯದ ಬಗ್ಗೆ ಗಮನಹರಿಸಿ ಉತ್ತಮ ಚಿಂತನೆಯ ಅಭಿವೃದ್ಧಿ ಆಯವ್ಯಯ ಮಂಡಿಸಿದ್ದಾರೆ. ಕೇಂದ್ರ ಸರ್ಕಾರದ ಬೆಂಬಲದೊಂದಿಗೆ ಕೈಗಾರಿಕಾ ವಸಾಹತುಗಳ ಉನ್ನತೀಕರಣದ ಪ್ರಸ್ತಾವನೆಯನ್ನು ಸ್ವಾಗತಿಸುತ್ತೇವೆ ಎಂದು ಕಾಸಿಯಾ ಅಧ್ಯಕ್ಷ ಸಿ.ಎ. ಶಶಿಧರ ಶೆಟ್ಟಿ ಹೇಳಿದ್ದಾರೆ.

ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಐಪಿಒ ವೆಚ್ಚಗಳಿಗೆ ಸಹಾಯಧನ, ಎಲೆಕ್ಟ್ರಾನಿಕ್ ವೇದಿಕೆಯಲ್ಲಿ ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಭಾಗವಹಿಸುವಿಕೆ ಬಗ್ಗೆ ಮುಖ್ಯಮಂತ್ರಿ ಅವರು ಪ್ರಸ್ತಾಪಿಸಿದ್ದಾರೆ. ಇದು ಎಂಎಸ್‌ಎಂಇಗಳಿಗೆ ಸರ್ಕಾರಿ ಇಲಾಖೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳಿಂದ ಬರಬೇಕಾದ ಬಾಕಿಯನ್ನು ಕಾಲಮಿತಿಯೊಳಗೆ ಪಡೆಯಲು ಅನುಕೂಲವಾಗಲಿದೆ. ಇದು ಎಂಎಸ್‌ಎಂಇ ಜೀವನವನ್ನು ಸುಲಭಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಆಯವ್ಯಯದಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಸೇರಿದಂತೆ ಇತರೆ ಜಿಲ್ಲೆಗಳಲ್ಲಿ 25 ಮಿನಿ ಜವಳಿ ಪಾರ್ಕ್ ಸ್ಥಾಪಿಸುವ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಇದನ್ನು ಕಾಸಿಯಾ ಸ್ವಾಗತಿಸುತ್ತದೆ ಎಂದಿದ್ದಾರೆ.

ಎಲೆಕ್ಟ್ರಿಕಲ್ ವೆಹಿಕಲ್ ಚಾರ್ಜಿಂಗ್ ಸ್ಟೇಷನ್‌ಗಳು, ಸಾರ್ವಜನಿಕ ಸಾರಿಗೆಯ ವಿವಿಧ ವಿಧಾನಗಳ ಏಕೀಕರಣ, ತುಮಕೂರಿನವರೆಗೆ ಮೆಟ್ರೊ ವಿಸ್ತರಣೆ, ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ಬೆಂಗಳೂರಿನಲ್ಲಿ ಸುರಂಗ ಮಾರ್ಗಗಳ ನಿರ್ಮಾಣ ಸೇರಿದಂತೆ ಆರ್ಥಿಕತೆ ಬೆಳವಣಿಗೆಗೆ ಸಹಕಾರಿಯಾಗುವಂತಹ ಪ್ರಸ್ತಾಪಗಳನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಮುಖ್ಯಮಂತ್ರಿ ಅವರು ನೂತನ ಕೈಗಾರಿಕಾ ನೀತಿಯನ್ನು ರೂಪಿಸುವಾಗಲಾದರೂ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಗಮನ ಹರಿಸಬೇಕು ಎಂದು ಅವರು ಕೋರಿದ್ದಾರೆ.

ಕನ್ನಡ, ಸಾಹಿತ್ಯ ಕ್ಷೇತ್ರ ಕಡೆಗಣನೆ ಕಸಾಪ ಅಧ್ಯಕ್ಷ ಮಹೇಶ ಜೋಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಬಾರಿಯ ಬಜೆಟ್‌ನಲ್ಲಿ ಕನ್ನಡ ಭಾಷೆ ಮತ್ತು ಸಾಹಿತ್ಯ ಕ್ಷೇತ್ರವನ್ನು ಕಡೆಗಣಿಸಲಾಗಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಕನ್ನಡಪರ ಚಟುವಟಿಕೆಗಳನ್ನು ಅಯೋಜಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹೆಚ್ಚಿನ ಅನುದಾನವನ್ನು ಒದಗಿಸಬೇಕಿತ್ತು. ಆದರೆ, ಕನ್ನಡ-ಕನ್ನಡಿಗ-ಕರ್ನಾಟಕದ ಹಿತರಕ್ಷಣೆಯನ್ನು ಕಡೆಗಣಿಸಿರುವುದು ಸ್ಪಷ್ಟವಾಗಿ ಕಾಣುತ್ತಿದೆ' ಎಂದು ಹೇಳಿದ್ದಾರೆ.

'ಮುಂಬರುವ ಜೂನ್ 7ರಿಂದ 9ರವರೆಗೆ ಮಂಡ್ಯ ಜಿಲ್ಲೆಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜಿಸಲು ನಿರ್ಧರಿಸಲಾಗಿದೆ. ಈ ಸಮ್ಮೇಳನಕ್ಕೆ ₹30 ಕೋಟಿ ಅನುದಾನ ನೀಡುವಂತೆ ಮನವಿ ಸಲ್ಲಿಸಲಾಗಿತ್ತು. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಕಸಾಪ ಪ್ರಸ್ತಾವನೆಯನ್ನು ಪರಿಗಣಿಸದೆ ಇರುವುದು ಆಘಾತ ಉಂಟುಮಾಡಿದೆ' ಎಂದು ಅವರು ತಿಳಿಸಿದ್ದಾರೆ.

ಹಳೆ ಪಿಂಚಣಿ ಯೋಜನೆ ಜಾರಿ ಪ್ರಕಟಿಸದ ಸರ್ಕಾರ: ಖಂಡನೆ

ಪ್ರಜಾವಾಣಿ ವಾರ್ತೆ



ಅಮೃತ್ ರಾಜ್

ಬೆಂಗಳೂರು: ರಾಜ್ಯ ಬಜೆಟ್‌ನಲ್ಲಿ 7ನೇ ವೇತನ ಜಾರಿ ಮತ್ತು ಹಳೆಯ ಪಿಂಚಣಿ ಯೋಜನೆ ಜಾರಿಯನ್ನು ಪ್ರಕಟಿಸದ ವಿರುದ್ಧ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ ಆಕ್ರೋಶ ವ್ಯಕ್ತಪಡಿಸಿದೆ.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಎ.ಅಮೃತ್ ರಾಜ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, '2024-25ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರಿ ನೌಕರರು, ಪಾಲಿಕೆ ನೌಕರರು ಮತ್ತು ಸ್ಥಳೀಯ ಸಂಸ್ಥೆ, ನಗರ ಸಭೆ/ಪುರಸಭೆ ನೌಕರರು 7ನೇ ವೇತನ ಜಾರಿ ಮತ್ತು ಹಳೆ ಪಿಂಚಣಿ ಯೋಜನೆ ಜಾರಿಯ ಬಗ್ಗೆ ಬಹುನಿರೀಕ್ಷೆ ಇತ್ತು. ಆದರೆ ಅದನ್ನು ಹುಸಿಯಾಗಿದೆ' ಎಂದರು.

'ಈ ಕೂಡಲೇ 7ನೇ ವೇತನ ಜಾರಿ ಹಾಗೂ ಹಳೆ ಪಿಂಚಣಿ ಜಾರಿ ಮಾಡಬೇಕು. ಇಲ್ಲದಿದ್ದರೆ ಸಮಸ್ತ ಪಾಲಿಕೆ ನೌಕರರು ಮತ್ತು ಸ್ಥಳೀಯ ಸಂಸ್ಥೆ ನೌಕರರು ಮತ್ತು ನಗರಸಭೆ/ಪುರಸಭೆ ನೌಕರರು ಹೋರಾಟ ನಡೆಸಲಿದ್ದಾರೆ' ಎಂದು ತಿಳಿಸಿದರು.

ಅತ್ಯಾಚಾರ: ಬಂಧನ

ಬಿಲಾಸಪುರ (ಪಿಟಿಐ): 14 ವರ್ಷದ ಇಬ್ಬರು ಬಾಲಕಿಯರ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಸ್ವಯಂಘೋಷಿತ ದೇವಮಾನವ ಕುಲೇಶ್ವರ ಸಿಂಗ್ ಸೇರಿ ಐವರನ್ನು ಛತ್ತೀಸಗಢದ ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಷರತ್ತಿಗೆ ಅನುಗುಣವಾಗಿ ಖಾತೆ ಬಳಕೆಗೆ ಮೇಲ್ಮನವಿ ನ್ಯಾಯಮಂಡಳಿ ಅನುಮತಿ

ಕಾಂಗ್ರೆಸ್ ಬ್ಯಾಂಕ್ ಖಾತೆ ಸ್ಥಗಿತ

ಪ್ರಜಾವಾಣಿ ವಾರ್ತೆ

ನವದೆಹಲಿ: 2018-19ನೆಯ ಸಾಲಿಗೆ ಸಂಬಂಧಿಸಿದಂತೆ ₹201 ಕೋಟಿ ಆದಾಯ ತೆರಿಗೆ ಪಾವತಿಸಬೇಕು ಎಂದು ನೋಟಿಸ್ ನೀಡಿದ್ದ ಆದಾಯ ತೆರಿಗೆ ಇಲಾಖೆಯು ಕಾಂಗ್ರೆಸ್ ಪಕ್ಷದ ಒಂಬತ್ತು ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿತು. ಇದನ್ನು ಪ್ರಶ್ನಿಸಿ ಕಾಂಗ್ರೆಸ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯು (ಐಟಿಎಟಿ) ಪಕ್ಷಕ್ಕೆ ಬ್ಯಾಂಕ್ ಖಾತೆಗಳನ್ನು ಬಳಸಲು ಶುಕ್ರವಾರ ಅನುವು ಮಾಡಿಕೊಟ್ಟಿತು.

ಇಲಾಖೆಯ ಕ್ರಮದಿಂದ ಪಕ್ಷದ ಎಲ್ಲ ರಾಜಕೀಯ ಚಟುವಟಿಕೆಗಳ ಮೇಲೆ ಪರಿಣಾಮ ಉಂಟಾಗಿದೆ ಎಂದು ಕಾಂಗ್ರೆಸ್ ದೂರಿದೆ. ಇದು ಪ್ರಜಾಪ್ರಭುತ್ವದ ಮೇಲಿನ ದಾಳಿ ಎಂದು ಪಕ್ಷವು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಟೀಕಿಸಿದೆ.

ಖಾತೆಯಲ್ಲಿ ₹115 ಕೋಟಿ ಹಣವನ್ನು ಉಳಿಸಿಕೊಳ್ಳಬೇಕು ಎಂದು ಐಟಿಎಟಿ, ಕಾಂಗ್ರೆಸ್ ಪಕ್ಷಕ್ಕೆ ಸೂಚಿಸಿದೆ. ಆದರೆ, ಕಾಂಗ್ರೆಸ್ ಪಕ್ಷವು ತನ್ನ ಖಾತೆಯಲ್ಲಿ ಅಷ್ಟು ಹಣ ಇಲ್ಲ ಎಂದು ಸ್ಪಷ್ಟನೆ ನೀಡಿದೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಕಾಂಗ್ರೆಸ್ ಖಜಾಂಚಿ ಅಜಯ್ ಮಾಕನ್, 'ಬ್ಯಾಂಕ್ ಖಾತೆಯಲ್ಲಿ ₹115 ಕೋಟಿ ಇರಬೇಕು ಎಂಬ ಷರತ್ತನ್ನು ನ್ಯಾಯಮಂಡಳಿ ವಿಧಿಸಿದೆ. ನಾವು ಆ ಮೊತ್ತಕ್ಕಿಂತ ಹೆಚ್ಚಿರುವುದನ್ನು ಮಾತ್ರ ವ್ಯಯಿಸಬಹುದು. ಇದರ ಅರ್ಥ ಈ ₹115 ಕೋಟಿ ಬಳಕೆಗೆ ಸಿಗುವುದಿಲ್ಲ. ನಮ್ಮ ಚಾಲ್ತಿ ಖಾತೆಯಲ್ಲಿ ಅಷ್ಟು ಮೊತ್ತ ಇಲ್ಲ' ಎಂದಿದ್ದಾರೆ.

ಅಜಯ್ ಮಾಕನ್ ಶುಕ್ರವಾರ ಬೆಳಿಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಆದಾಯ ತೆರಿಗೆ ಇಲಾಖೆಯು ಬ್ಯಾಂಕ್ ಆಫ್ ಬರೋಡಾ ಹಾಗೂ ಕೆನರಾ ಬ್ಯಾಂಕ್‌ನ ನಾಲ್ಕು ಖಾತೆಗಳನ್ನು ಸ್ಥಗಿತಗೊಳಿಸಿದೆ' ಎಂದು ಮಾಹಿತಿ ನೀಡಿದರು. ಆದರೆ, ಒಂಬತ್ತು ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂಬ ವಿವರವನ್ನು ಪಕ್ಷದ ಮೂಲಗಳು ನಂತರ ನೀಡಿದವು.

2018–19ನೇ ಸಾಲಿನಲ್ಲಿ ಆದಾಯ ತೆರಿಗೆ ವಿವರ ಸಲ್ಲಿಸುವಲ್ಲಿ 40-45 ದಿನಗಳ ವಿಳಂಬ ಮಾಡಿರುವ ಆರೋಪದ ಮೇಲೆ ಹಾಗೂ ಆ ಸಾಲಿನಲ್ಲಿ ಸಂಸದರು ಮತ್ತು ಶಾಸಕರು ನಗದು ರೂಪದಲ್ಲಿ ₹14.40 ಲಕ್ಷ ನೀಡಿದ್ದ ವಿಚಾರವಾಗಿ ಆದಾಯ ತೆರಿಗೆ ಇಲಾಖೆ ತೆರಿಗೆ ನೋಟಿಸ್ ಜಾರಿಗೊಳಿಸಿತ್ತು. ಆ ವರ್ಷದಲ್ಲಿ ಪಕ್ಷದ ಒಟ್ಟು ಸ್ವೀಕೃತಿಯ ಮೊತ್ತ ₹199 ಕೋಟಿ ಆಗಿತ್ತು ಎಂದು ಮಾಕನ್ ತಿಳಿಸಿದರು.

'ಪ್ರಜಾಪ್ರಭುತ್ವ ಜೀವಂತವಾಗಿದೆಯೇ?': 'ಇಲಾಖೆಯು ಸ್ಥಗಿತಗೊಳಿಸಿರುವುದು ನಮ್ಮ ಖಾತೆಯನ್ನಷ್ಟೇ ಅಲ್ಲ. ಇದರಿಂದ ದೇಶದ ಸಂಪೂರ್ಣ ಪ್ರಜಾಪ್ರಭುತ್ವ ವ್ಯವಸ್ಥೆಯೇ ಸ್ಥಗಿತಗೊಂಡಿದೆ. ಲೋಕಸಭಾ ಚುನಾವಣಾ ವೇಳಾಪಟ್ಟಿ ಘೋಷಣೆಗೆ ಕೇವಲ ಎರಡು ವಾರಗಳಿರುವಾಗ ಪ್ರಮುಖ ವಿರೋಧ ಪಕ್ಷದ ಖಾತೆಗಳು ಸ್ಥಗಿತಗೊಳ್ಳುತ್ತವೆ ಎಂದಾದಲ್ಲಿ, ದೇಶದಲ್ಲಿ ಪ್ರಜಾಪ್ರಭುತ್ವ ಜೀವಂತವಾಗಿದೆಯೇ ಎಂದು ನೀವೇ ಆಲೋಚಿಸಿ' ಎಂದು ಅವರು ಕಿಡಿಕಾರಿದರು.

'ಇದೇ ಮೊದಲ ಬಾರಿಗೆ ಇಂತಹ ಘಟನೆ ನಡೆದಿದೆ. ನಮಗೆ ಈಗ ವಿದ್ಯುತ್ ಶುಲ್ಕ ಹಾಗೂ ವೇತನಗಳನ್ನು ಪಾವತಿಸಲು ಸಾಧ್ಯವಾಗುತ್ತಿಲ್ಲ. ಭಾರತ್ ಜೋಡೊ ನ್ಯಾಯ ಯಾತ್ರೆಯ ನಿರ್ವಹಣೆಗೆ ಹಣ ಬಳಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

'ಕಾಂಗ್ರೆಸ್ ಪಕ್ಷದಲ್ಲಿರುವ ಹಣವು ಕಾರ್ಪೊರೇಟ್ ಕಂಪನಿ, ಬಾಂಡ್‌ಗಳು ಅಥವಾ ದೊಡ್ಡ-ದೊಡ್ಡ ಸಂಸ್ಥೆಗಳಿಂದ ಬಂದಿಲ್ಲ. ಇದು ದೇಣಿಗೆಯಿಂದ ಬಂದ ಹಣ. ನಮ್ಮ ಕಾರ್ಯಕರ್ತರ ದೇಣಿಗೆಯಿಂದ ₹25 ಕೋಟಿ ಸಂಗ್ರಹಿಸಿದ್ದೇವೆ. ಇದರಲ್ಲಿ ಶೇ 95ರಷ್ಟು ಮೊತ್ತ ₹100ಕ್ಕಿಂತ ಕಡಿಮೆ ಮೊತ್ತದ ದೇಣಿಗೆ. ಇದನ್ನು ಯುಪಿಐ ಮೂಲಕ ಕಾನೂನುಬದ್ಧವಾಗಿ ಮಾಡಲಾಗಿದೆ. ಆನ್‌ಲೈನ್ ಮೂಲಕ ಹಣ ಸಂಗ್ರಹಿಸಲಾಗಿದೆ. ನಗದು ಹಣ ಸ್ವೀಕರಿಸಿಲ್ಲ. ಆದರೆ, ಬಿಜೆಪಿ ಚುನಾವಣಾ ಬಾಂಡ್‌ಗಳ ಮೂಲಕ ₹6,500 ಕೋಟಿ ಸಂಗ್ರಹಿಸಿದೆ. ಅದರ ವಿರುದ್ಧ ಕ್ರಮ ಕೈಗೊಳ್ಳುತ್ತಿಲ್ಲ ಏಕೆ? ಎಂದು ಪ್ರಶ್ನಿಸಿದರು.

ಈ ಘಟನೆ ನಂತರ ದೇಣಿಗೆ ಸಂಗ್ರಹ ನಿಲ್ಲಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, 'ಇಲ್ಲ, ಅದು ಮುಂದುವರಿಯಲಿದೆ' ಎಂದರು.



ಐಟಿ ಇಲಾಖೆಯ ಈ ಕ್ರಮ ಖಂಡಿಸಿ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ನೇತೃತ್ವದಲ್ಲಿ ಕಾರ್ಯಕರ್ತರು ನವದೆಹಲಿಯಲ್ಲಿ ಪ್ರತಿಭಟನೆ ನಡೆಸಿದರು

ಮುಖ್ಯಾಂಶಗಳು

- ಕಾಂಗ್ರೆಸ್ಸಿಗೆ ಆದಾಯ ತೆರಿಗೆ ನೋಟಿಸ್
- ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿ ಮೊರೆಹೋದ ಪಕ್ಷ
- ದೇಣಿಗೆ ಸಂಗ್ರಹ ನಿಲ್ಲದು: ಮಾಕನ್

ನಿಧನ



ಶ್ರೀಮತಿ ರಾಜೇಶ್ವರಿ

ಜನನ: 11-11-1942 ಮರಣ: 03-02-2024

ಜಯನಗರ ಒಂದನೇ ಬ್ಲಾಕ್ ಪೂರ್ವ, ಬೆಂಗಳೂರು. ಅಂಜಯ್ಯ ಶೆಟ್ಟಿಯವರ ಪತ್ನಿ ರಾಜೇಶ್ವರಿ, 82 ವರ್ಷ ಇವರು ದಿನಾಂಕ: 03-02-2024 ರಂದು ಶನಿವಾರ ಬೆಳಿಗ್ಗೆ 10:00 ಗಂಟೆಗೆ ಸ್ವಗೃಹದಲ್ಲಿ ನಿಧನರಾದರು. ಇವರು ಪತಿಯನ್ನು, ಇಬ್ಬರು ಹೆಣ್ಣು ಮಕ್ಕಳು, ಇಬ್ಬರು ಅಳಿಯಂದಿರು ಹಾಗೂ ನಾಲ್ಕು ಜನ ಗಂಡು ಮೊಮ್ಮಕ್ಕಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ T. R. Mill ಚಿತಾಗಾರದಲ್ಲಿ 3ನೇ ತಾರೀಖು ನಡೆಯಿತು. ಮೊಬೈಲ್: 9008034794

ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಕಿಡಿ

ನವದೆಹಲಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಐ.ಟಿ. ಇಲಾಖೆಯು ಖಾತೆಗಳನ್ನು ಸ್ಥಗಿತಗೊಳಿಸಲು ಆಯ್ಕೆ ಮಾಡಿಕೊಂಡ ಸಮಯವನ್ನು ಪ್ರಶ್ನಿಸಿದರು. ಲೋಕಸಭಾ ಚುನಾವಣೆ ಘೋಷಣೆಗೆ ಕೆಲವು ವಾರಗಳು ಮಾತ್ರ ಇರುವಾಗ ಐ.ಟಿ. ಇಲಾಖೆಯು ಖಾತೆ ಸ್ಥಗಿತದ ಕ್ರಮ ಕೈಗೊಂಡಿತ್ತು.

'ಅಧಿಕಾರದ ಮದವೇರಿರುವ ನರೇಂದ್ರ ಮೋದಿ ನೇತೃತ್ವ ಸರ್ಕಾರವು ದೇಶದ ಅತಿದೊಡ್ಡ ವಿರೋಧ ಪಕ್ಷದ ಖಾತೆಗಳನ್ನು ಲೋಕಸಭಾ ಚುನಾವಣೆ ಹತ್ತಿರವಾಗಿರುವ ಹೊತ್ತಿನಲ್ಲಿ ಸ್ಥಗಿತಗೊಳಿಸಿದೆ. ಇದು ದೇಶದ ಪ್ರಜಾತಂತ್ರ ವ್ಯವಸ್ಥೆಯ ಮೇಲಿನ ದಾಳಿ' ಎಂದು ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಚುನಾವಣಾ ಬಾಂಡ್ ಯೋಜನೆಯನ್ನು ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ಘೋಷಿಸಿರುವುದರ ಬಗ್ಗೆ ಉಲ್ಲೇಖಿಸಿದ ಖರ್ಗೆ, ಬಿಜೆಪಿಯುವರು ತಾವು ಸಂಗ್ರಹಿಸಿದ 'ಅಸಾಂವಿಧಾನಿಕ ಹಣವನ್ನು' ಬಳಸಿಕೊಳ್ಳುತ್ತಾರೆ, ಆದರೆ ಕಾಂಗ್ರೆಸ್ ಪಕ್ಷವು ದೇಣಿಗೆ ಮೂಲಕ ಸಂಗ್ರಹಿಸಿದ ಹಣವನ್ನು ಬಳಸದಂತೆ ತಡೆಯುತ್ತಾರೆ. ಈ ಕಾರಣಕ್ಕಾಗಿಯೇ ನಾನು, ಮುಂದೆ ಎಂದೂ ಚುನಾವಣೆಗಳು ನಡೆಯುವುದಿಲ್ಲ ಎಂದು ಹೇಳಿದ್ದೇನೆ. ಈ ದೇಶದ ಬಹುಪಕ್ಷೀಯ ವ್ಯವಸ್ಥೆಯನ್ನು ಉಳಿಸುವಂತೆ, ಪ್ರಜಾತಂತ್ರ ರಕ್ಷಿಸುವಂತೆ ನಾವು ನ್ಯಾಯಾಂಗವನ್ನು ಕೋರುತ್ತೇವೆ' ಎಂದು ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

'ಕಾಂಗ್ರೆಸ್ ಅಂದರೆ ಹಣದ ಬಲ ಅಲ್ಲ. ಕಾಂಗ್ರೆಸ್ ಅಂದರೆ ಜನರ ಬಲ. ಸರ್ವಾಧಿಕಾರದ ಮುಂದೆ ನಾವು ಯಾವತ್ತೂ ತಲೆಬಾಗಿಲ್ಲ. ತಲೆ ಬಾಗುವುದೂ ಇಲ್ಲ. ದೇಶದ ಪ್ರಜಾತಂತ್ರವನ್ನು ರಕ್ಷಿಸಲು ಕಾಂಗ್ರೆಸ್ಸಿನ ಪ್ರತಿಯೊಬ್ಬ ಕಾರ್ಯಕರ್ತನೂ ಕಠಿಣ ಹೋರಾಟ ನಡೆಸಲಿದ್ದಾನೆ' ಎಂದು ರಾಹುಲ್ ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

ಸೇನಾ ಸಲಕರಣೆಗಳ ಖರೀದಿಗೆ ₹ 84 ಸಾವಿರ ಕೋಟಿ : ಒಪ್ಪಿಗೆ

ನವದೆಹಲಿ(ಪಿಟಿಐ): ಕಡಲ ಗಡಿ ರಕ್ಷಣೆಯಲ್ಲಿ ಬಹುವಿಧದ ಕಾರ್ಯ ನಿರ್ವಹಿಸಬಲ್ಲ ಯುದ್ಧವಿಮಾನ ಸೇರಿ ಸೇನೆಗೆ ಅಗತ್ಯ ₹ 84,560 ಕೋಟಿ ಮೊತ್ತದ ಹಾರ್ಡ್‌ವೇರ್ ಖರೀದಿಗೆ ರಕ್ಷಣಾ ಸಚಿವಾಲಯ ಶುಕ್ರವಾರ ಒಪ್ಪಿಗೆ ನೀಡಿದೆ.

ಸಶಸ್ತ್ರ ಪಡೆಗಳ ದಾಳಿ ಸಾಮರ್ಥ್ಯ ಹೆಚ್ಚಿಸುವ ಈ ಖರೀದಿ ಪ್ರಸ್ತಾವಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಖರೀದಿ ಮಂಡಳಿ ಅನುಮೋದನೆ ನೀಡಿತು ಎಂದು ಸಚಿವಾಲಯ ತಿಳಿಸಿದೆ.

ಈ ಪ್ರಸ್ತಾವವು, ಹೊಸ ತಲೆಮಾರಿನ ಟ್ಯಾಂಕ್ ನಿರೋಧಕ ವ್ಯವಸ್ಥೆ, ವಾಯು ಪ್ರದೇಶದಲ್ಲಿ ನಡೆಯುವ ದಾಳಿ ನಿಯಂತ್ರಿಸಬಲ್ಲ ರಾಡಾರ್, ನೌಕಾಪಡೆಯಲ್ಲಿ ಉಪಯೋಗಿಸುವ ಮಧ್ಯಮ ವ್ಯಾಪ್ತಿಯ ಯುದ್ಧವಿಮಾನ, ವಿಮಾನಗಳಿಗೆ ಇಂಧನ ಮರುಪೂರಣಕ್ಕೆ ನೆರವಾಗುವ ವಿಮಾನಗಳು ಹಾಗೂ ವಿವಿಧ ಸಾಫ್ಟ್‌ವೇರ್‌ಗಳನ್ನು ಒಳಗೊಂಡಿತ್ತು.

ಸುದ್ದಿ 2 ನಿಮಿಷ

ವಿಶ್ವಾಸ ಮತಯಾಚಿಸಲು ಮುಂದಾದ ಕೇಜ್ರಿವಾಲ್

ನವದೆಹಲಿ(ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ವಿಧಾನಸಭೆಯಲ್ಲಿ ಶುಕ್ರವಾರ ವಿಶ್ವಾಸ ಮತಯಾಚನೆಯ ನಿರ್ಣಯ ಮಂಡಿಸಿದ್ದು ಶನಿವಾರ ಈ ಬಗ್ಗೆ ಚರ್ಚೆ ನಡೆಯಲಿದೆ.

ನಿರ್ಣಯ ಮಂಡಿಸಿ ಮಾತನಾಡಿದ ಅವರು, 'ನಮ್ಮ ಪಕ್ಷದ ಇಬ್ಬರು ಶಾಸಕರನ್ನು ಭೇಟಿ ಮಾಡಿರುವ ಬಿಜೆಪಿ ಸದಸ್ಯರು ತಲಾ ₹25 ಕೋಟಿ ನೀಡುವುದಾಗಿ ಹೇಳಿದ್ದಾರೆ. ಅಲ್ಲದೆ, ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಲಾಗುತ್ತದೆ. ಸರ್ಕಾರ ಬೀಳಲಿದೆ ಎಂಬುದಾಗಿ ಹೇಳಿದ್ದರು. ಈ ಕುರಿತು ಆ ಇಬ್ಬರು ಶಾಸಕರೇ ನನ್ನ ಬಳಿ ಹೇಳಿದ್ದಾರೆ' ಎಂದು ತಿಳಿಸಿದರು.

ದೆಹಲಿ ಅಬಕಾರಿ ನೀತಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬುದು ಸುಳ್ಳು. ಎಎಪಿ ಸರ್ಕಾರವನ್ನು ಕೆಡವಲು ಬಿಜೆಪಿ ಈ ರೀತಿಯ ಸುಳ್ಳುಗಳನ್ನು ಹೇಳುತ್ತಿದೆ ಎಂದು ಅವರು ಆರೋಪಿಸಿದರು.

ದೆಹಲಿ ಅಬಕಾರಿ ನೀತಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಪ್ರಕರಣ ಸಂಬಂಧ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ವಿರುದ್ಧ ಜಾರಿ ನಿರ್ದೇಶನಾಲಯ 6ನೇ ಸಮನ್ ಜಾರಿ ಮಾಡಿರುವ ಬೆನ್ನಲ್ಲೇ, ಅವರು ವಿಶ್ವಾಸ ಮತಯಾಚನೆಯ ಮೊರೆ ಹೋಗಿದ್ದಾರೆ.



ಚಂಪೈ ಸಂಪುಟಕ್ಕೆ ಶಿಬು ಕಿರಿಯ ಪುತ್ರ ಬಸಂತ್ ಸೇರ್ಪಡೆ

ರಾಂಚಿ (ಪಿಟಿಐ): ಜಾರ್ಖಂಡ್ ಮುಕ್ತಿ ಮೋರ್ಚಾದ (ಜೆಎಂಎಂ) ಸಂಸ್ಥಾಪಕ ಶಿಬು ಸೊರೇನ್ ಅವರ ಕಿರಿಯ ಪುತ್ರ ಬಸಂತ್ ಸೊರೇನ್ ಶುಕ್ರವಾರ ಚಂಪೈ ಸೊರೇನ್ ಸಂಪುಟದ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಬಸಂತ್ ಸೊರೇನ್, ಭೂ ಹಗರಣಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾಗಿ ನ್ಯಾಯಾಂಗ ಬಂಧನದಲ್ಲಿರುವ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಸಹೋದರ. 12 ಸಚಿವರ ಚಂಪೈ ಸಂಪುಟದಲ್ಲಿ ಚಾಈಬಾಸಾ ಹಾಗೂ ದುಮ್ಕಾ ವಿಧಾನಸಭಾ ಕ್ಷೇತ್ರಗಳ ಜೆಎಂಎಂ ಶಾಸಕರಾದ ದೀಪಕ್ ಬಿರುವಾ ಮತ್ತು ಬಸಂತ್ ಸೊರೇನ್ ಮೊದಲ ಬಾರಿಗೆ ಸಚಿವರಾಗಿದ್ದಾರೆ.

'ಮೋದಿ ಗ್ಯಾರಂಟಿ ವಿಫಲ'

ಮುಂಬೈ: ಹುಸಿ ಭರವಸೆಗಳ ಬಗ್ಗೆ ಮಾತನಾಡುವ ಪ್ರಧಾನಿ ಮೋದಿ ಅವರು ಸ್ವಾರ್ಥಿ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ಕಾಂಗ್ರೆಸ್‌ನ ಮಹಾರಾಷ್ಟ್ರ ರಾಜ್ಯ ಘಟಕ ಏರ್ಪಡಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಖರ್ಗೆ, 'ಮೋದಿ ಗ್ಯಾರಂಟಿಯ ಬಗ್ಗೆ ಮಾತನಾಡುವ ಪ್ರಧಾನಿಯವರು ಬಿಜೆಪಿ ಗ್ಯಾರಂಟಿಯ ಬಗ್ಗೆ ಮಾತನಾಡುವುದಿಲ್ಲ. ಅವರೊಬ್ಬ ಸ್ವಾರ್ಥಿ' ಎಂದು ಟೀಕಿಸಿದರು. 'ಕಳೆದ 10 ವರ್ಷಗಳಲ್ಲಿ ಅವರ ಹುಸಿ ಭರವಸೆಗಳನ್ನು ಕೇಳಿದ್ದೇವೆ. ಅವರು ಕಪ್ಪುಹಣ ಹಿಂದೆ ತರುವ ಮತ್ತು ಪ್ರತಿ ಭಾರತೀಯನ ಖಾತೆಗೆ ₹15 ಲಕ್ಷ ಜಮೆ ಮಾಡುವ ಭರವಸೆ ನೀಡಿದ್ದರು. ನಿಮ್ಮ ಖಾತೆಗೆ ಹಣ ಬಂದಿದೆಯೇ? ಎಂದು ಪ್ರಶ್ನಿಸಿದರು.

ಸಾರ್ವಜನಿಕ ಪ್ರಕಟಣೆ

ಮಾನ್ಯ 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಅಸಲು ದಾವಾ ನಂ. 235/2023

ವಾದಿ: ಶ್ರೀ ರುದ್ರಪ್ಪ ಬಿನ್ ನಿಂಗಪ್ಪ, ವಯಸ್ಸು 75 ವರ್ಷ, ವ್ಯವಸಾಯ, ಹಳೇ ಕುಂದುವಾಡ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ

– ವಿರುದ್ಧ–

ಪ್ರತಿವಾದಿಗಳು: ಶ್ರೀಮತಿ ಚಂದ್ರಮ್ಮ ಮತ್ತು ಇತರರು.

ಪ್ರತಿವಾದಿಯರು/ನೋಟೀಸ್‌ದಾರರು: 18) ಶ್ರೀಮತಿ ಈರಮ್ಮ ಗಂಡ ಹನುಮಂತಪ್ಪ, ವಯಸ್ಸು 63 ವರ್ಷ, ಮನೆಕೆಲಸ, ಚೌಡೇಶ್ವರಿ ನಗರ, ದಾವಣಗೆರೆ. 35) ಶ್ರೀ ವೀರಭದ್ರಪ್ಪ ಬಿನ್ ದಿಳ್ಳೆಪ್ಪ, ವಯಸ್ಸು 58 ವರ್ಷ, ವ್ಯವಸಾಯ, 2ನೇ ಮೇನ್, 7ನೇ ಕ್ರಾಸ್, ಉಪ್ಪಾರ ಸಾಲಿಕೇರಿ, ಅತ್ತಿಬೆಲೆ ಅಂಚೆ, ಆನೇಕಲ್ ತಾಲ್ಲೂಕು, ಬೆಂಗಳೂರು. 49) ಶ್ರೀಮತಿ ನಾಗಜ್ಯೋತಿ ಗಂಡ ಮಹಾಂತೇಶ, 54 ವರ್ಷ, ಗೃಹಿಣಿ, ಹಳೇರಿತ್ತಿ ಗ್ರಾಮ, ಹಾವೇರಿ ತಾಲ್ಲೂಕು ಮತ್ತು ಜಿಲ್ಲೆ. 55) ಶ್ರೀ ವೆಂಕಟೇಶ್ವರ ಡವಲಪರ್ಸ್ ಅಂಡ್ ಬಿಲ್ಡರ್ಸ್, ರಿಜಿಸ್ಟರ್ಡ್ ಪಾರ್ಟನರ್‌ಶಿಪ್ ಫರ್ಮ್, ಪ್ರತಿನಿದಿಸುವವರು ಪಾಲುದಾರರು. 55ಎ) ಶ್ರೀ ಮಹಾರುದ್ರಚಾರಿ ಪಿ. ಬಿನ್ ಪಾಲಾಕ್ಷಪ್ಪ ವಿ., ವಯಸ್ಸು 40 ವರ್ಷ. 55ಬಿ) ಶ್ರೀಮತಿ ಜ್ಯೋತಿ ಡಿ.ಹೆಚ್. ಗಂಡ ಪ್ರಸನ್ನ ಕುಮಾರ್, ವಯಸ್ಸು 34 ವರ್ಷ, ಡೋರ್ ನಂ. 223/2, ಶ್ರೀ ವೀರಭದ್ರೇಶ್ವರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

ಸಿ.ಪಿ.ಸಿ. ಆದೇಶ 5 ನಿಯಮ 20ರ ಅಡಿಯಲ್ಲಿ ಪ್ರತಿವಾದಿ ನಂ. 18, 35, 49 ಹಾಗೂ ಉದ್ದೇಶಿತ ಪ್ರತಿವಾದಿ ನಂ.55 (ಎ) ಮತ್ತು (ಬಿ) ರವರ ವಿರುದ್ಧ ನೀಡಲಾದ ಪ್ರಕಟಣಾ ನೋಟೀಸು

ಮೇಲ್ಕಂಡ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ಘೋಷಣಾತ್ಮಕ ಹಾಗೂ ಪಾಲುವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಮತ್ತು ಇತರೆ ಪರಿಹಾರ ಕೋರಿ ಮಾನ್ಯ ಘನ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ನೀವು ಪ್ರತಿವಾದಿ ನಂ. 18, 35, 49 ಹಾಗೂ ಉದ್ದೇಶಿತ ಪ್ರತಿವಾದಿ ನಂ. 55(ಎ) ಮತ್ತು (ಬಿ) ರವರಾಗಿದ್ದು, ನ್ಯಾಯಾಲಯವು ನಿಮ್ಮ ವಿರುದ್ಧ ನ್ಯಾಯಾಲಯದಿಂದ ಸಮನ್ಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಕಳಿಸಿದ್ದರೂ ಸಹಾ ಅವು ನಿಮಗೆ ಜಾರಿಯಾಗಿರುವುದಿಲ್ಲ. ಕಾರಣ ನಿಮ್ಮ ಹಾಜರಾತಿಗಾಗಿ ದಿನಾಂಕ: 28.02.2024ರಂದು ಬೆಳಿಗ್ಗೆ 11:00 ಗಂಟೆಗೆ ಮುದ್ದತ್ತು ನಿಗದಿಯಾಗಿದ್ದು, ಆ ದಿನ ನೀವು ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಪ್ರಕರಣದಲ್ಲಿ ಹಾಜರಿದ್ದು, ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ವಿರುದ್ಧ ಏಕಪಕ್ಷಿಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ: 16.01.2024 ರಂದು ಕೊಡಲ್ಪಟ್ಟಿದೆ.

ವಾದಿಯ ಪರ ವಕೀಲರು
ಕೆ.ಹೆಚ್. ಧನಂಜಯ
ಸ್ಥಳ: ದಾವಣಗೆರೆ
ದಿನಾಂಕ: 11.01.2024

ನ್ಯಾಯಾಲಯದ ಆದೇಶದ ಮೇರೆಗೆ,
ಸಹಿ/– ಶಿರಸ್ತೇದಾರರು, 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.


ರಾಷ್ಟ್ರೀಯ ಜನತಾ ದಳದ ಅಧ್ಯಕ್ಷ ಲಾಲು ಪ್ರಸಾದ್ ಪ್ರತಿಕ್ರಿಯೆ

ನಿತೀಶ್‌ಗೆ ಸದಾ ಬಾಗಿಲು ತೆರೆದಿರುತ್ತದೆ

ಪಟ್ನಾ(ಪಿಟಿಐ): ಇತ್ತೀಚೆಗಷ್ಟೇ ಮಹಾ ಘಟಬಂಧನ್ ತೊರೆದು ಬಿಜೆಪಿ ನೇತೃತ್ವದ ಎನ್‌ಡಿಎಗೆ ಮರಳಿರುವ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ 'ನಮ್ಮ ಬಾಗಿಲು ಸದಾ ತೆರೆದಿರುತ್ತದೆ' ಎಂದು ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಶುಕ್ರವಾರ ತಿಳಿಸಿದರು.

ನಿತೀಶ್ ಅವರು ಮೈತ್ರಿ ಬದಲಾಯಿಸಿದ ಪರಿಣಾಮ ಆರ್‌ಜೆಡಿ ಅಧಿಕಾರ ಕಳೆದುಕೊಂಡಿದೆ. ಆಗಿನಿಂದಲೂ ಮೌನಕ್ಕೆ ಜಾರಿದ್ದ ಲಾಲು ಈ ಕುರಿತು ಪತ್ರಕರ್ತರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಎರಡು ವರ್ಷಗಳ ಹಿಂದೆ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆಗೆ ಒಳಗಾಗಿರುವ ಲಾಲು ಅವರು ಮನೆಯಿಂದ ಹೊರಗೆ ಬರುವುದು ಕಡಿಮೆ. ರಾಜ್ಯಸಭಾ ಚುನಾವಣೆಗೆ ಆರ್‌ಜೆಡಿ ಅಭ್ಯರ್ಥಿಗಳಾದ ಮನೋಜ್ ಝಾ ಮತ್ತು ಸಂಜಯ್ ಯಾದವ್ ಗುರುವಾರ ನಾಮಪತ್ರ ಸಲ್ಲಿಸುವ ವೇಳೆ ಅವರೊಂದಿಗೆ ಲಾಲು ವಿಧಾನಸಭಾ ಆವರಣಕ್ಕೆ ಬಂದಿದ್ದರು. ಈ ವೇಳೆ ಉಭಯ ನಾಯಕರು ಕೈಕುಲುಕಿ ಕುಶಲೋಪರಿ ವಿಚಾರಿಸಿದರು.



ಲಾಲು ಪ್ರಸಾದ್

ನಿತೀಶ್ ಜತೆ ಹೊಂದಾಣಿಕೆ ಮಾಡಿಕೊಳ್ಳಲು ಇನ್ನೂ ಮುಕ್ತರಾಗಿದ್ದೀರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ನಿತೀಶ್ ಬಂದಾಗ, ನಾವು ಆ ಕುರಿತು ನೋಡುತ್ತೇವೆ. ಅವರಿಗಾಗಿ ಯಾವಾಗಲೂ ಬಾಗಿಲು ತೆರೆದಿರುತ್ತದೆ' ಎಂದರು.

ಇದಕ್ಕೆ ಜೆಡಿಯು ಮುಖ್ಯ ವಕ್ತಾರ ನೀರಜ್ ಕುಮಾರ್, 'ಆರ್‌ಜೆಡಿ ಜತೆ ಅಧಿಕಾರ ಹಂಚಿಕೊಂಡಾಗಲೆಲ್ಲ ಅದು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ನಮ್ಮ ನಾಯಕ ನಿತೀಶ್ ಸ್ಪಷ್ಟವಾಗಿ ಹೇಳಿದ್ದಾರೆ. ಹೀಗಾಗಿ ಹಿಂತಿರುಗುವ ಪ್ರಶ್ನೆಯೇ ಇಲ್ಲ' ಎಂದು ಪ್ರತಿಕ್ರಿಯಿಸಿದರು.



ಬಿಹಾರದ ಸಸರಾಂನಲ್ಲಿ ಕಾಂಗ್ರೆಸ್‌ನ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯಲ್ಲಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಕಾರು ಚಲಾಯಿಸಿದರು. ಪಕ್ಕದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಇದ್ದಾರೆ –ಪಿಟಿಐ ಚಿತ್ರ

ಪ್ರಿಯಾಂಕಾ ಗಾಂಧಿ ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಅನಾರೋಗ್ಯದ ಕಾರಣ ಆಸ್ಪತ್ರೆಗೆ ದಾಖಲಾಗಿದ್ದಾರೆ. ಹೀಗಾಗಿ ಅವರು ಪಕ್ಷದ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯಲ್ಲಿ ಶುಕ್ರವಾರ ಪಾಲ್ಗೊಳ್ಳಲಿಲ್ಲ. ನ್ಯಾಯ ಯಾತ್ರೆಯಲ್ಲಿ ಪಾಲ್ಗೊಂಡಿರುವ ಸಹೋದರ ರಾಹುಲ್ ಗಾಂಧಿ ಮತ್ತು ಇತರ ಕಾಂಗ್ರೆಸ್ ನಾಯಕರಿಗೆ ಅವರು ಶುಭ ಕೋರಿದ್ದಾರೆ. ಅಲ್ಲದೆ ಆರೋಗ್ಯ ಸುಧಾರಿಸಿದ ಕೂಡಲೇ ಯಾತ್ರೆಯಲ್ಲಿ ಪಾಲ್ಗೊಳ್ಳುವುದಾಗಿ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಬಿಹಾರದಲ್ಲಿ ತೇಜಸ್ವಿಯೇ ಚಾಲಕ: ರಾಹುಲ್

ಸಸರಾಂ (ಪಿಟಿಐ): ಬಿಹಾರದಲ್ಲಿ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಡ್ರೈವಿಂಗ್ ಸೀಟಿನಲ್ಲಿ ಇರಬೇಕು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಶುಕ್ರವಾರ ಹೇಳಿದರು.

ಬಿಹಾರದಲ್ಲಿ ಎರಡು ಹಂತಗಳಲ್ಲಿ ಐದು ದಿನಗಳನ್ನು ಕಳೆದಿರುವ 'ಭಾರತ್ ಜೋಡೊ ನ್ಯಾಯ ಯಾತ್ರೆ'ಯಲ್ಲಿ ಮಾಜಿ ಉಪ ಮುಖ್ಯಮಂತ್ರಿ ತೇಜಸ್ವಿ ಅವರು ಭಾಗಿಯಾದರು. ಈ ವೇಳೆ ಇಬ್ಬರೂ ನಾಯಕರೂ ಪರಸ್ಪರ ಆಲಿಂಗಿಸಿದರು. ರೋಡ್‌ಶೋನಲ್ಲಿ ತನ್ನೊಂದಿಗೆ ಪಾಲ್ಗೊಂಡಿದ್ದ ತೇಜಸ್ವಿ ಅವರಿಗೆ, ಕಾರು ಚಲಾಯಿಸುವಂತೆ ರಾಹುಲ್ ತಿಳಿಸಿದರು. ಅದರಂತೆ ತೇಜಸ್ವಿ ಅವರು ಕಾರು ಚಲಾಯಿಸಿದರು.

ಯಾತ್ರೆಯ ಭಾಗವಾಗಿ ಇಬ್ಬರೂ ನಾಯಕರು ರೈತರ ಜತೆಗೆ ಸಂವಾದ ನಡೆಸಿದರು. ರಾಹುಲ್ ಅವರು ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ಮುಂದುವರಿಸಿದರೆ, ಯಾದವ್ ಅವರು ಬಿಹಾರ ಸಿ.ಎಂ ನಿತೀಶ್ ಕುಮಾರ್ ವಿರುದ್ಧ ಹರಿಹಾಯ್ದರು.

ಕಾಂಗ್ರೆಸ್ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ

'ರಾಮ ಕಾಲ್ಪನಿಕ ಎಂದವರಿಂದ ಈಗ ಜೈ ಸಿಯಾ ರಾಮ'

ರೇವಾರಿ (ಹರಿಯಾಣ) (ಪಿಟಿಐ): ಅಯೋಧ್ಯೆಯಲ್ಲಿನ ರಾಮ ಮಂದಿರ ಕುರಿತು ತಳೆದಿರುವ ನಿಲುವಿಗಾಗಿ ಕಾಂಗ್ರೆಸ್ ಪಕ್ಷವನ್ನು ಟೀಕಿಸಿದ ಪ್ರಧಾನಿ ನರೇಂದ್ರ ಮೋದಿ, 'ಭಗವಾನ್ ರಾಮ ಕಾಲ್ಪನಿಕ ವ್ಯಕ್ತಿ ಎಂಬುದಾಗಿ ಕರೆಯುತ್ತಿದ್ದವರು ಹಾಗೂ ಮಂದಿರ ನಿರ್ಮಾಣ ಬಯಸದಿದ್ದವರು ಈಗ ಜೈ ಸಿಯಾ ರಾಮ್ ಎಂಬ ಘೋಷಣೆ ಕೂಗುತ್ತಿದ್ದಾರೆ' ಎಂದು ಶುಕ್ರವಾರ ಹೇಳಿದರು.

ಅಖಿಲ ಭಾರತೀಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ (ಎಐಐಎಂಎಸ್) ಶಾಖೆಗೆ ಶಿಲಾನ್ಯಾಸ ನೆರವೇರಿಸಿ ಹಾಗೂ ವಿವಿಧ ಯೋಜನೆಗಳನ್ನು ಉದ್ಘಾಟಿಸಿದ ನಂತರ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಪ್ರಧಾನಿ ಅಭ್ಯರ್ಥಿಯಾಗಿ ನಾನು ಕೆಲ ಭರವಸೆಗಳನ್ನು ನೀಡಿದ್ದೆ. ಅಯೋಧ್ಯೆಯಲ್ಲಿ ಭವ್ಯವಾದ ರಾಮ ಮಂದಿರ ನಿರ್ಮಾಣವಾಗಬೇಕು ಎಂಬುದು ದೇಶದ ಜನರ ಇಚ್ಛೆಯಾಗಿತ್ತು. ಜನರ ಆಶಯವನ್ನು ಪೂರೈಸಲಾಗಿದೆ' ಎಂದು ಹೇಳಿದರು.



ಹರಿಯಾಣದ ರೇವಾರಿಯಲ್ಲಿ ಶುಕ್ರವಾರ ಬಹಿರಂಗ ಸಭೆಯಲ್ಲಿ ಮೋದಿ ಮಾತನಾಡಿದರು

'ಜನರ ಆಶೀರ್ವಾದದಿಂದ, ಈ ಬಾರಿಯ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ 400ಕ್ಕೂ ಅಧಿಕ ಸ್ಥಾನಗಳಲ್ಲಿ ಗೆಲ್ಲಲಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೀಟುಗಳಿಗೆ ಮಹತ್ವ ಇದೆ. ಆದರೆ, ಜನರ ಆಶೀರ್ವಾದವೇ ನನ್ನ ಪಾಲಿಗೆ ದೊಡ್ಡ ಆಸ್ತಿ' ಎಂದು ಮೋದಿ ಹೇಳಿದರು.

ಯುಎಇಗೆ ಇತ್ತೀಚೆಗೆ ನೀಡಿದ್ದ ಭೇಟಿಯನ್ನು ಪ್ರಸ್ತಾಪಿಸಿದ ಮೋದಿ, 'ವಿಶ್ವದೆಲ್ಲೆಡೆ ಭಾರತಕ್ಕೆ ಅಪಾರ ಗೌರವ ಸಿಗುತ್ತಿದೆ. ಜಾಗತಿಕ ಮಟ್ಟದಲ್ಲಿ ಸಿಗುತ್ತಿರುವ ಈ ಗೌರವ ಮೋದಿಗೆ ಮಾತ್ರ ಸಲ್ಲುವುದಿಲ್ಲ, ಬದಲಾಗಿ ಪ್ರತಿಯೊಬ್ಬ ಭಾರತೀಯನಿಗೂ ಸಲ್ಲುತ್ತದೆ' ಎಂದರು.

'ಸ್ವಜನಪಕ್ಷಪಾತದ ವಿಷ ವರ್ತುಲದಲ್ಲಿ ಕಾಂಗ್ರೆಸ್'

ಜೈಪುರ(ಪಿಟಿಐ): 'ಕಾಂಗ್ರೆಸ್ ಪಕ್ಷ ಸ್ವಜನಪಕ್ಷಪಾತ ಮತ್ತು ಕುಟುಂಬ ರಾಜಕಾರಣ ಎಂಬ ವಿಷ ವರ್ತುಲದಲ್ಲಿ ಸಿಲುಕಿದೆ. ಹೀಗಾಗಿ ಪ್ರತಿಯೊಬ್ಬರು ಆ ಪಕ್ಷವನ್ನು ತೊರೆಯುತ್ತಿದ್ದಾರೆ' ಎಂದು ಕಾಂಗ್ರೆಸ್ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ವಾಗ್ದಾಳಿ ನಡೆಸಿದ್ದಾರೆ.

'ಮೋದಿಯನ್ನು ವಿರೋಧಿಸುವುದೊಂದೇ ಕಾಂಗ್ರೆಸ್‌ನ ಕಾರ್ಯಸೂಚಿ. ನಾನು ಏನು ಮಾಡುತ್ತೇನೋ ಅದಕ್ಕೆ ವಿರುದ್ಧವಾದುದನ್ನೇ ಕಾಂಗ್ರೆಸ್ ಮಾಡುತ್ತದೆ. ಅದು, ದೇಶಕ್ಕೇ ಹಾನಿಯಾಗುವಂತಹ ಕೆಲಸವಾದರೂ ಸರಿ, ಅದನ್ನೇ ಮಾಡುತ್ತದೆ' ಎಂದು ಟೀಕಿಸಿದ್ದಾರೆ.

ನಗರದಲ್ಲಿ ಹಮ್ಮಿಕೊಂಡಿದ್ದ 'ವಿಕಸಿತ ಭಾರತ, ವಿಕಸಿತ ರಾಜಸ್ಥಾನ' ಕಾರ್ಯಕ್ರಮ ಉದ್ದೇಶಿಸಿ ವರ್ಚುವಲ್ ಆಗಿ ಅವರು ಮಾತನಾಡಿದರು. ಇದೇ ಸಂದರ್ಭದಲ್ಲಿ ಅವರು ₹17 ಸಾವಿರ ಕೋಟಿ ವೆಚ್ಚದ ಯೋಜನೆಗಳಿಗೆ ಶಿಲಾನ್ಯಾಸ ನೆರವೇರಿಸಿದರು.

'ಮೋದಿಯನ್ನು ವಿರೋಧಿಸುವುದೇ ಕಾಂಗ್ರೆಸ್‌ನ ಏಕೈಕ ಕಾರ್ಯಸೂಚಿ. ಮೋದಿ ವಿರುದ್ಧ ಅವರು ಎಂತಹ ವಿಷಯಗಳನ್ನು ಹಬ್ಬಿಸುತ್ತಿದ್ದಾರೆ ಅಂದರೆ, ಅದರಿಂದ ಸಮಾಜ ವಿಭಜನೆಗೊಳ್ಳುತ್ತದೆ. ಯಾವಾಗ ಒಂದು ಪಕ್ಷ ಸ್ವಜನಪಕ್ಷಪಾತ ಮತ್ತು ಕುಟುಂಬ ರಾಜಕಾರಣ ಎನ್ನುವ ವಿಷ ವರ್ತುಲದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತದೆಯೋ ಆಗ ಇಂಥದ್ದೆಲ್ಲ ನಡೆಯುತ್ತದೆ' ಎಂದು ಮೋದಿ ಹೇಳಿದರು.

ಇಂಗ್ಲೆಂಡ್ ಹೋರಾಟಕ್ಕೆ ಡಕೆಟ್ ಶತಕ ಬಲ

ಟೆಸ್ಟ್: ಪದಾರ್ಪಣೆ ಪಂದ್ಯದಲ್ಲಿ ಗಮನ ಸೆಳೆದ ಧ್ರುವ ಜುರೇಲ್ • ಅಶ್ವಿನ್‌ಗೆ ಐದನೂರನೇ ವಿಕೆಟ್

ಪ್ರಜಾವಾಣಿ ವಾರ್ತೆ

ರಾಜ್‌ಕೋಟ್: ಪ್ರಸ್ತುತ ಇಂಗ್ಲೆಂಡ್‌ನ ಬ್ಯಾಟರ್‌ಗಳು ಯಾವುದೇ ಇಂಗ್ಲೆಂಡ್‌ನಲ್ಲಿ ಆಕ್ರಮಣಶೀಲವಾದ 'ಬಾಜ್‌ಬಾಲ್' ತಂತ್ರವನ್ನು ಜಾರಿಗೆ ತರುವಲ್ಲಿ ಸಿದ್ಧಹಸ್ತರಾಗಿದ್ದಾರೆ.

ಶುಕ್ರವಾರ ಇಂಗ್ಲೆಂಡ್ ಬ್ಯಾಟರ್ ಬೆನ್ ಡಕೆಟ್ ಕೂಡ ಸುಲಭ ಮಾರ್ಗಗಳನ್ನು ಬಿಟ್ಟು ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರು. ಬೆನ್ ಅವರು ನವಯುಗದ ಇಂಗ್ಲೆಂಡ್ ಕ್ರಿಕೆಟ್‌ನಲ್ಲಿ ಇತ್ತೀಚೆಗೆ ಆಗಿರುವ ಬದಲಾವಣೆಗಳನ್ನು ಮೈಗೂಡಿಸಿಕೊಂಡಿರುವುದನ್ನು ಇಲ್ಲಿ ತೋರಿಸಿದರು. ಒಂದು ದಶಕದಿಂದ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿರುವ ಡಕೆಟ್ ಹೊಸತನಕ್ಕೂ ಒಗ್ಗಿಕೊಂಡಿದ್ದಾರೆ.

ಕೆಂಟ್ ಮೂಲದವರಾದ ಡಕೆಟ್ ಇಲ್ಲಿ ನಡೆಯುತ್ತಿರುವ ಮೂರನೇ ಟೆಸ್ಟ್ ಪಂದ್ಯದ ಎರಡನೇ ದಿನ ಭಾರತದ ಬೌಲರ್‌ಗಳನ್ನು ದಿಟ್ಟತನದಿಂದ ಎದುರಿಸಿ 118 ಎಸೆತಗಳಲ್ಲಿ ಅಜೇಯ 133 ರನ್ ಗಳಿಸಿದರು.

ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿರುವ 445 ರನ್‌ಗಳಿಗೆ ಉತ್ತರವಾಗಿ ಇಂಗ್ಲೆಂಡ್ ದಿನದಾಟದ ಕೊನೆಗೆ 35 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 207 ರನ್ ಗಳಿಸಲು ಡಕೆಟ್ ಕಾಣಿಕೆಯೇ ಮಹತ್ವದ್ದಾಗಿದೆ.

ಡಕೆಟ್ ಮತ್ತು ಜೋ ರೂಟ್ (ಬ್ಯಾಟಿಂಗ್ 9) ಕ್ರೀಸ್‌ನಲ್ಲಿದ್ದಾರೆ.

ಎಡಗೈ ಬ್ಯಾಟರ್ ಡಕೆಟ್ 2016ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದವರು. ಇದು ಅವರ ಮೂರನೇ ಶತಕವಾಗಿದೆ. ಅವರ ಬ್ಯಾಟಿಂಗ್‌ನಲ್ಲಿ ವೇಗ, ನಿಖರತೆ ಮತ್ತು ಆಕ್ರಮಣಶೀಲತೆ ಮೇಳೈಸಿದ್ದವು. ಡ್ರೈವ್, ಸ್ವೀಪ್, ರಿವರ್ಸ್ ಸ್ವೀಪ್‌ಗಳ ಮೂಲಕ ರನ್‌ಗಳನ್ನು ಗಳಿಸಿದರು. ವೇಗಿ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್, ಅನುಭವಿ ಸ್ಪಿನ್ನರ್ ಆರ್. ಅಶ್ವಿನ್, ರವೀಂದ್ರ ಜಡೇಜ ಹಾಗೂ ಕುಲದೀಪ್ ಯಾದವ್ ಅವರು ತಮ್ಮ ಬತ್ತಳಿಕೆಯಲ್ಲಿದ್ದ ಎಲ್ಲ ಅಸ್ತ್ರಗಳನ್ನೂ ಪ್ರಯೋಗಿಸಿದರು. ಆದರೆ ಡಕೆಟ್ ಜಗ್ಗಲಿಲ್ಲ. 29 ವರ್ಷದ ಡಕೆಟ್ ಆಟದ ಮುಂದೆ ಭಾರತವು ಗಳಿಸಿರುವ ಮೊತ್ತವೂ ಕಡಿಮೆಯಾಯಿತೇ ಎಂಬ ಸಂದೇಹ ಕೂಡ ಮೂಡುತ್ತಿತ್ತು.

ಆತಿಥೇಯ ನಾಯಕ ರೋಹಿತ್ ಶರ್ಮಾ ಅವರ ತಂತ್ರಗಳನ್ನು ಡಕೆಟ್ ವಿಫಲಗೊಳಿಸಿದರು. ಎಡಗೈ ಸ್ಪಿನ್ನರ್ ಯಾದವ್ ಆರು ಓವರ್‌ಗಳಲ್ಲಿ 42 ರನ್‌ಗಳನ್ನು ಕೊಟ್ಟರು. ಫೀಲ್ಡಿಂಗ್ ಬದಲಾವಣೆಗಳ ತಂತ್ರಗಳೂ ವಿಫಲವಾದವು.

ಡಕೆಟ್ 39 ಎಸೆತಗಳಲ್ಲಿ ಅರ್ಧಶತಕ ದಾಟಿದರು. ಡಕೆಟ್ ಮತ್ತು ಜ್ಯಾಕ್ ಕ್ರಾಲಿ ಮೊದಲ ವಿಕೆಟ್ ಜೊತೆಯಾಟದಲ್ಲಿ 89 ರನ್ ಸೇರಿಸಿದರು. 14ನೇ ಓವರ್‌ನಲ್ಲಿ ಅಶ್ವಿನ್ ಎಸೆತವನ್ನು ಆಡುವ ಭರದಲ್ಲಿ ಜ್ಯಾಕ್ ಅವರು ರಜತ್ ಪಾಟೀದಾರ್‌ಗೆ ಕ್ಯಾಚಿತ್ತರು. ಅಶ್ವಿನ್ 500 ವಿಕೆಟ್ ಸರದಾರರ ಸಾಲಿಗೆ ಸೇರಿದರು.

ಆದರೆ ಬಂಡೆಗಲ್ಲಿನಂತೆ ನಿಂತಿದ್ದ ಡಕೆಟ್ ಎರಡನೇ ವಿಕೆಟ್ ಜೊತೆಯಾಟದಲ್ಲಿ ಓಲಿ ಪೋಪ್ ಅವರೊಂದಿಗೆ 93 ರನ್ ಸೇರಿಸಿದರು. ಸಿರಾಜ್ ನೇರ ಎಸೆತವನ್ನು ರಕ್ಷಣಾತ್ಮಕವಾಗಿ ಆಡುವಲ್ಲಿ ಎಡವಿದ ಪೋಪ್ ಎಲ್‌ಬಿಡಬ್ಲ್ಯು ಬಲೆಗೆ ಬೀಳುವುದರೊಂದಿಗೆ ಜೊತೆಯಾಟಕ್ಕೆ ತೆರೆಬಿತ್ತು.



ಇಂಗ್ಲೆಂಡ್ ತಂಡದ ಬ್ಯಾಟರ್ ಬೆನ್ ಡಕೆಟ್ ಶತಕ ಸಂಭ್ರಮ ಆಚರಿಸುವುದನ್ನು ನೋಡುತ್ತ ನಿಂತಿರುವ ಭಾರತದ ಬೌಲರ್ ಮೊಹಮ್ಮದ್ ಸಿರಾಜ್ –ಪಿಟಿಐ ಚಿತ್ರ

90 ರನ್‌ಗಳನ್ನು ದಾಟಿದ ಮೇಲೆ ತಮ್ಮ ಆಟದ ವೇಗವನ್ನು ಡಕೆಟ್ ಕಡಿಮೆಗೊಳಿಸಿಕೊಂಡರು. 26ನೇ ಓವರ್‌ನಲ್ಲಿ ಶತಕದ (88 ಎಸೆತ) ಗಡಿ ಮುಟ್ಟಿದರು.

ಧ್ರುವ ಜುರೇಲ್ ಮಿಂಚು: ಪಂದ್ಯದ ಮೊದಲ ದಿನವಾದ ಗುರುವಾರ ದಿನದಾಟದ ಮುಕ್ತಾಯಕ್ಕೆ ಭಾರತ ತಂಡವು 5 ವಿಕೆಟ್‌ಗಳಿಗೆ 326 ರನ್ ಗಳಿಸಿತ್ತು. ಈ ಮೊತ್ತಕ್ಕೆ ಮತ್ತೆ 119 ರನ್ ಸೇರ್ಪಡೆಯಾಗಲು ಪದಾರ್ಪಣೆಯ ಪಂದ್ಯವಾಡಿದ ಧ್ರುವ ಜುರೇಲ್ (46; 104ಎ, 4X2, 6X3) ಬ್ಯಾಟಿಂಗ್ ಕಾರಣವಾಯಿತು. ಅವರೊಂದಿಗೆ ಆಶ್ವಿನ್ (26; 28ಎ, 4X3, 6X1) ಕೂಡ ಕಾಣಿಕೆ ನೀಡಿದರು.

ಆಗ್ರಾದ 23 ವರ್ಷದ ಜುರೇಲ್ ಆತ್ಮವಿಶ್ವಾಸದಿಂದ ಬ್ಯಾಟಿಂಗ್ ಮಾಡಿದರು. ಆದರೆನಾಲ್ಕು ರನ್‌ಗಳ ಅಂತರದಲ್ಲಿ ಚೊಚ್ಚಲ ಅರ್ಧಶತಕ ದಾಖಲಿಸುವ ಅವಕಾಶ ತಪ್ಪಿಸಿಕೊಂಡರು.

ಇದೇ ಪಂದ್ಯದಲ್ಲಿ ಪದಾರ್ಪಣೆ ಮಾಡಿರುವ ಸರ್ಫರಾಜ್ ಖಾನ್ ಗುರುವಾರ ಅರ್ಧಶತಕ ಹೊಡೆದಿದ್ದರು.

ಮೊದಲ ದಿನ ಶತಕ ಗಳಿಸಿದ್ದ ಜಡೇಜ (110 ರನ್) ಮತ್ತು ಕುಲದೀಪ್ ಯಾದವ್ (1 ರನ್) ಕ್ರೀಸ್‌ನಲ್ಲಿದ್ದರು.

ಶುಕ್ರವಾರ ಬೆಳಿಗ್ಗೆ ಆಟ ಮುಂದುವರಿಸಿದ ಜಡೇಜ ತಮ್ಮ ಮೊತ್ತಕ್ಕೆ ನಾಲ್ಕು ರನ್ ಸೇರಿಸಿ ಔಟಾದರು. ಕುಲದೀಪ್ ಕೂಡ ಬೇಗನೇ ನಿರ್ಗಮಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಭಾರತ 130.5 ಓವರ್‌ಗಳಲ್ಲಿ 445 (ಗುರುವಾರ 5 ವಿಕೆಟ್‌ಗೆ 326) (ರವೀಂದ್ರ ಜಡೇಜ 112 , ಧ್ರುವ ಜುರೇಲ್ 46 , ಅಶ್ವಿನ್ 37 , ಮಾರ್ಕ್ ವುಡ್ 114ಕ್ಕೆ4, ರೆಹಾನ್ ಅಹಮದ್ 85ಕ್ಕೆ 2). ಇಂಗ್ಲೆಂಡ್ 35 ಓವರ್‌ಗಳಲ್ಲಿ 2 ವಿಕೆಟ್‌ಗೆ 207 (ಜ್ಯಾಕ್ ಕ್ರಾಲಿ 15, ಬೆನ್ ಡಕೆಟ್ ಔಟಾಗದೆ 133 , ಓಲಿ ಪೋಪ್ 39, ಜೋ ರೂಟ್ ಔಟಾಗದೆ 9 , ಮೊಹಮ್ಮದ್ ಸಿರಾಜ್ 54ಕ್ಕೆ1, ಅಶ್ವಿನ್ 37ಕ್ಕೆ 1)

ಭಾರತಕ್ಕೆ 5 ರನ್ ದಂಡ

ಭಾರತದ ಬ್ಯಾಟರ್‌ಗಳು ಪಿಚ್‌ನ ಮಧ್ಯಭಾಗದಲ್ಲಿ ಓಡಾಡಿದ್ದಕ್ಕಾಗಿ ತಂಡಕ್ಕೆ ಐದು ರನ್‌ಗಳ ದಂಡ ವಿಧಿಸಲಾಯಿತು. ಇದರಿಂದಾಗಿ ಇಂಗ್ಲೆಂಡ್ ತಂಡದ ಖಾತೆಗೆ ಐದು ರನ್‌ಗಳು ಸೇರಿದವು.

ಶುಕ್ರವಾರ ಅಶ್ವಿನ್ ಅವರು ಬ್ಯಾಟಿಂಗ್ ಮಾಡುವಾಗ ಪಿಚ್ ಮಧ್ಯದಲ್ಲಿ ಓಡಾಡಿದಾಗ ಅಂಪೈರ್ ಜೋಯೆಲ್ ವಿಲ್ಸನ್ ಎಚ್ಚರಿಕೆ ನೀಡಿದರು. 102ನೇ ಓವರ್ ಸಂದರ್ಭದಲ್ಲಿ ಅಶ್ವಿನ್ ಅವರೊಂದಿಗೆ ವಿಲ್ಸನ್ ಮಾತನಾಡಿದರು. ಇದಕ್ಕೂ ಮುನ್ನ ರವೀಂದ್ರ ಜಡೇಜಾ ಅವರೂ ಕೂಡ ಇದೇ ತಪ್ಪಿಗೆ ಎಚ್ಚರಿಕೆ ಪಡೆದಿದ್ದರು.

ಟೆಸ್ಟ್ ಕ್ರಿಕೆಟ್: 500 ವಿಕೆಟ್ ಸಾಧಕರು

ಬೌಲರ್	ದೇಶ	ಪಂದ್ಯ	ವಿಕೆಟ್
ಮುತ್ತಯ್ಯ ಮುರಳೀಧರನ್	ಶ್ರೀಲಂಕಾ	133	800
ಶೇನ್ ವಾರ್ನ್	ಆಸ್ಟ್ರೇಲಿಯಾ	145	708
ಜೇಮ್ಸ್ ಆಂಡರ್ಸನ್	ಇಂಗ್ಲೆಂಡ್	185	696
ಅನಿಲ್ ಕುಂಬ್ಳೆ	ಭಾರತ	132	619
ಸ್ಟುವರ್ಟ್ ಬ್ರಾಡ್	ಇಂಗ್ಲೆಂಡ್	167	604
ಗ್ಲೆನ್ ಮೆಕ್‌ಗ್ರಾ	ಆಸ್ಟ್ರೇಲಿಯಾ	124	563
ಕರ್ಟ್ನಿ ವಾಲ್ಶ್	ವೆಸ್ಟ್ ಇಂಡೀಸ್	132	519
ನೇಥನ್ ಲಯನ್	ಆಸ್ಟ್ರೇಲಿಯಾ	127	517
ಆರ್.ಅಶ್ವಿನ್	ಭಾರತ	98	500

ಅಶ್ವಿನ್ ಅಲಭ್ಯ

ರಾಜ್‌ಕೋಟ್: ಕೌಟುಂಬಿಕ ತುರ್ತಿನ ಹಿನ್ನೆಲೆಯಲ್ಲಿ ಆರ್. ಅಶ್ವಿನ್ ಅವರು ಇಂಗ್ಲೆಂಡ್ ವಿರುದ್ಧ ರಾಜ್‌ಕೋಟ್‌ನಲ್ಲಿ ನಡೆಯುತ್ತಿರುವ ಮೂರನೇ ಟೆಸ್ಟ್ ಪಂದ್ಯದಲ್ಲಿ ಆಡುವುದಿಲ್ಲ ಎಂದು ಬಿಸಿಸಿಐ ಪ್ರಕಟಿಸಿದೆ. 'ಆಟಗಾರರು, ಅವರಪ್ರೀತಿಪಾತ್ರರ ಆರೋಗ್ಯ ಮಹತ್ವದ್ದಾಗಿದೆ. ಅಶ್ವಿನ್ ಮತ್ತು ಅವರ ಕುಟುಂಬದ ಗೌಪ್ಯತೆಗೆ ಗೌರವ ನೀಡಬೇಕಿದೆ' ಎಂದು ತಿಳಿಸಿದೆ.

ರಣಜಿ ಟ್ರೋಫಿ ; ವೈಶಾಖ, ಹಾರ್ದಿಕ್‌ಗೆ ತಲಾ 2 ವಿಕೆಟ್

ಚಂಡೀಗಢಕ್ಕೆ ಕರಣ್ ಆಸರೆ

• ಸತೀಶ ಬಿ.

ಹುಬ್ಬಳ್ಳಿ: ತಾಳ್ಮೆಯ ಅರ್ಧಶತಕ ಗಳಿಸಿದ ಕರಣ್ ಕೈಲಾ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ 'ಸಿ' ಗುಂಪಿನ ಕೊನೆಯ ಪಂದ್ಯದಲ್ಲಿ ಚಂಡೀಗಢ ತಂಡವನ್ನು ಆರಂಭಿಕ ಕುಸಿತದಿಂದ ಪಾರು ಮಾಡಿದರು. ಅಲ್ಲದೇ ಮೊದಲ ದಿನವೇ ಮೇಲುಗೈ ಸಾಧಿಸುವ ಛಲದಲ್ಲಿದ್ದ ಕರ್ನಾಟಕದ ಬೌಲರ್‌ಗಳ ಉದ್ದೇಶಕ್ಕೆ ಅಡ್ಡಿಯಾದರು.

ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭವಾದ ಪಂದ್ಯದಲ್ಲಿ ಚಂಡೀಗಢ ತಂಡ ದಿನದಾಟದ ಅಂತ್ಯಕ್ಕೆ 89 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 219 ರನ್ ಕಲೆಹಾಕಿತು.

340 ನಿಮಿಷ ಕ್ರೀಸ್‌ನಲ್ಲಿದ್ದ ಎಡಗೈ ಬ್ಯಾಟರ್ ಕರಣ್, 207 ಎಸೆತಗಳಲ್ಲಿ 79 ರನ್ ಗಳಿಸಿದರು. 9 ಬೌಂಡರಿ ಬಾರಿಸಿದರು.

ಅವರು ಒಂದು ರನ್ ಗಳಿಸಿದ್ದಾಗ ರನ್‌ಔಟ್‌ನಿಂದ ಪಾರಾಗಿದ್ದರು.

ಟಾಸ್ ಜಯಿಸಿದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಚಂಡೀಗಢ ತಂಡ ಬೆಳಿಗ್ಗೆ ಪಾನೀಯ ವಿರಾಮಕ್ಕೂ ಮುನ್ನ 15 ಓವರ್‌ಗಳಲ್ಲಿ 37 ರನ್ ಆಗುವಷ್ಟರಲ್ಲಿ 3 ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತು. ಆರಂಭಿಕ ಆಟಗಾರ ಶಿವಂ ಭಾಂಬ್ರಿ ಖಾತೆ ತೆರೆಯಲಿಲ್ಲ.

41 ಎಸೆತಗಳಲ್ಲಿ 21 ರನ್ ಗಳಿಸಿ ಜವಾಬ್ದಾರಿಯುತ ಆಟವಾಡುತ್ತಿದ್ದ ತಂಡದ ನಾಯಕ ಮನನ್ ವೋಹ್ರಾ ಅವರನ್ನು ವೇಗಿ ಎಂ.ವೆಂಕಟೇಶ್ ಕ್ಲೀನ್ ಬೌಲ್ಡ್ ಮಾಡಿದರು. ಈ ಹಂತದಲ್ಲಿ ಕುನಾಲ್ ಮಹಾಜನ್ ಜತೆಗೂಡಿದ ಕರಣ್ ನಾಲ್ಕನೇ ವಿಕೆಟ್ ಪಾಲುದಾರಿಕೆಯಲ್ಲಿ 71 (186 ಎ) ರನ್ ಗಳಿಸಿ ಸಂಕಷ್ಟ ದೂರ ಮಾಡಿದರು.

ಈ ಜೋಡಿ ಆತಿಥೇಯ ತಂಡದ ಸ್ಪಿನ್ ಮತ್ತು ವೇಗದ ಬೌಲರ್‌ಗಳನ್ನು ಆತ್ಮವಿಶ್ವಾಸದಿಂದ ಎದುರಿಸಿತು. ಕುನಾಲ್ (34) ಅವರನ್ನು ಬೌಲ್ಡ್ ಮಾಡಿದ ಎಡಗೈ ಸ್ಪಿನ್ನರ್ ಹಾರ್ದಿಕ್ ರಾಜ್ ಜತೆಯಾಟ ಮುರಿದರು.

ನಂತರವೂ ತಾಳ್ಮೆಯ ಆಟ ಮುಂದುವರಿಸಿದ ಕರಣ್ ಐದನೇ ವಿಕೆಟ್‌ಗೆ ಎ.ಕೆ.ಕೌಶಿಕ್ ಜತೆ 46 (106 ಎ) ಮತ್ತು ಆರನೇ ವಿಕೆಟ್‌ಗೆ ಮಯಂಕ್ ಸಿಧು ಪಾಲುದಾರಿಕೆಯಲ್ಲಿ 46 (127 ಎ) ರನ್ ಗಳಿಸಿ ವಿಕೆಟ್ ಪತನ ತಡೆದರು. ಎ.ಕೆ.ಕೌಶಿಕ್ (25) ಹಾರ್ದಿಕ್ ರಾಜ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್ ಎಸ್.ಶರತ್‌ಗೆ ಕ್ಯಾಚಿತ್ತರು.

ದಿನದಾಟ ಮುಗಿಯಲು ಕೆಲವೇ ಓವರ್‌ಗಳು ಬಾಕಿ ಇದ್ದಾಗ ಕರಣ್ ಅವರನ್ನು ವೈಶಾಖ ವಿಜಯಕುಮಾರ್ ಎಲ್‌ಬಿ ಬಲೆಗೆ ಕೆಡವಿದರು.

ದಿನದಾಟದ ಅಂತ್ಯಕ್ಕೆ ಮಯಂಕ್ ಸಿಧು (31), ಗುರಿಂದರ್ ಸಿಂಗ್ (10) ಕ್ರೀಸ್‌ನಲ್ಲಿದ್ದರು. ಕರ್ನಾಟಕದ ಪರ ವೇಗಿ ವೈಶಾಖ ವಿಜಯಕುಮಾರ್ ಮತ್ತು ಹಾರ್ದಿಕ್ ರಾಜ್ ತಲಾ 2 ವಿಕೆಟ್ ಕಬಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಚಂಡೀಗಢ: 89 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 219 (ಮನನ್ ವೊಹ್ರಾ 21, ಕರಣ್ ಕೈಲಾ 79, ಕುನಾಲ್ ಮಹಾಜನ್ 34, ಅಂಕಿತ್ ಕೌಶಿಕ್ 25, ಮಯಂಕ್ ಸಿಧು ಬ್ಯಾಟಿಂಗ್ 31, ಗುರೀಂದರ್ ಸಿಂಗ್ ಬ್ಯಾಟಿಂಗ್ 10, ವೈಶಾಖ ವಿಜಯಕುಮಾರ್ 48ಕ್ಕೆ2, ಹಾರ್ದಿಕ್ ರಾಜ್ 54ಕ್ಕೆ2)



ಚಂಡೀಗಢ ತಂಡದ ಕರಣ್ ಕೈಲಾ ಅವರ ಬ್ಯಾಟಿಂಗ್ ವೈಖರಿ.
ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

ಬಜರಂಗ್, ಸಾಕ್ಷಿಗೆ ಆಹ್ವಾನ: ಸಂಜಯ್ ಸಿಂಗ್

ನವದೆಹಲಿ (ಪಿಟಿಐ): ಮಹಾರಾಷ್ಟ್ರದಲ್ಲಿ ನಡೆಯಲಿರುವ ಒಲಿಂಪಿಕ್ ಕ್ವಾಲಿಫೈರ್ಸ್ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶಾ ಫೋಗಾಟ್, ಸಾಕ್ಷಿ ಮಲಿಕ್ ಅವರಿಗೆ ಆಹ್ವಾನ ನೀಡಲಾಗುವುದು ಎಂದು ಭಾರತ ಕುಸ್ತಿ ಸಂಸ್ಥೆ (ಡಬ್ಲ್ಯುಎಫ್‌ಐ) ಅಧ್ಯಕ್ಷ ಸಂಜಯ್ ಸಿಂಗ್ ಅವರು ಶುಕ್ರವಾರ ಹೇಳಿದ್ದಾರೆ.

'ಶೀಘ್ರದಲ್ಲೇ ಮಹಾರಾಷ್ಟ್ರದಲ್ಲಿ ಒಲಿಂಪಿಕ್ ಅರ್ಹತಾ ಸ್ಪರ್ಧೆಗಳಿಗಾಗಿ ಟ್ರಯಲ್ಸ್ ಆಯೋಜಿಸುತ್ತೇವೆ. ಬಜರಂಗ್, ವಿನೇಶ್ ಮತ್ತು ಸಾಕ್ಷಿ ಎಲ್ಲವನ್ನೂ ಮರೆತು ಟ್ರಯಲ್ಸ್‌ಗೆ ತಯಾರಿ ಪ್ರಾರಂಭಿಸಿ ದೇಶಕ್ಕಾಗಿ ಪದಕಗಳನ್ನು ಗೆಲ್ಲುವಂತೆ ಕೋರುತ್ತೇನೆ' ಎಂದು ಸಂಜಯ್ ಸಿಂಗ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಮೂವರಿಗೂ ಇಮೇಲ್, ವಾಟ್ಸ್‌ಆ್ಯಪ್ ಸಂದೇಶವನ್ನು ಕಳುಹಿಸುತ್ತೇನೆ. ಅಗತ್ಯವಿದ್ದರೆ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡುತ್ತೇನೆ. ನಿವೃತ್ತಿಯ ನಿರ್ಧಾರವನ್ನು ಮರುಪರಿಶೀಲಿಸುವಂತೆ ಮತ್ತು ಒಲಿಂಪಿಕ್ ಪದಕ ಗೆಲ್ಲಲು ಮತ್ತೊಮ್ಮೆ ಪ್ರಯತ್ನಿಸುವಂತೆ ಸಾಕ್ಷಿಯನ್ನು ಕೇಳುತ್ತೇನೆ' ಎಂದು ಅವರು ಹೇಳಿದರು.

'ಫೆಬ್ರವರಿ 9 ರಂದು ಯುಡಬ್ಲ್ಯುಡಬ್ಲ್ಯು ಭಾರತ ಕುಸ್ತಿ ಫೆಡರೇಷನ್ ಮೇಲಿನ ಅಮಾನತು ತೆಗೆದುಹಾಕಿದೆ. ಈಗ ಕುಸ್ತಿಪಟುಗಳು ಯಾರನ್ನು ಸಂಪರ್ಕಿಸಬೇಕು ಎಂಬ ಗೊಂದಲ ಇರುವುದಿಲ್ಲ ' ಎಂದು ಸಂಜಯ್ ಹೇಳಿದರು.

ಪುರುಷರು, ಮಹಿಳೆಯರಿಗಾಗಿ ರಾಷ್ಟ್ರೀಯ ಶಿಬಿರವನ್ನು ಹೊಸ ಸ್ಥಳಕ್ಕೆ ಸ್ಥಳಾಂತರಿಸಬಹುದೆಂಬ ಸುಳಿವು ನೀಡಿದರು.

ಡಬ್ಲ್ಯುಪಿಎಲ್: ಜೈಂಟ್ಸ್ ಜೆರ್ಸಿ ಬಿಡುಗಡೆ



ಗುಜರಾತ್ ಜೈಂಟ್ಸ್ ತಂಡದ ಜೆರ್ಸಿಯನ್ನು ಬಿಡುಗಡೆ ಮಾಡಲಾಯಿತು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಫೆ. 23ರಿಂದ ಆರಂಭವಾಗಲಿರುವ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ (ಡಬ್ಲ್ಯುಪಿಎಲ್) ಆಡಲಿರುವ ಗುಜರಾತ್ ಜೈಂಟ್ಸ್ ತಂಡದ ಪೋಷಾಕನ್ನು ಶುಕ್ರವಾರ ಬಿಡುಗಡೆ ಮಾಡಲಾಯಿತು.

ಸಂಪ್ರಸಿದ್ಧಿ ಸ್ಪೋರ್ಟ್ಸ್ ಎಸ್ಟಾಡಿಯೊದ ಕ್ರಿಕೆಟ್ ಮೈದಾನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಗುಜರಾತ್ ಜೈಂಟ್ಸ್ ತಂಡದ ಮುಖ್ಯ ಕೋಚ್ ಮೈಕೆಲ್ ಕ್ಲಿಂಗರ್ ಮತ್ತು ಮೆಂಟರ್ ಮಿಥಾಲಿ ರಾಜ್ ಅವರು ಪೋಷಾಕು ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಮೈಕೆಲ್ ಕ್ಲಿಂಗರ್, 'ದೇಸಿ ಕ್ರಿಕೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಆಟಗಾರರು ತಂಡದಲ್ಲಿದ್ದಾರೆ. ಈ ಬಾರಿ ಲೀಗ್‌ನಲ್ಲಿ ಉತ್ತಮವಾಗಿ ಆಡುತ್ತಾರೆಂಬ ವಿಶ್ವಾಸ ಇದೆ. ಪ್ರತಿ ಆವೃತ್ತಿಯಲ್ಲೂ ತಂಡದ ಗೆಲುವಿನ ಕುರಿತು ಕಾರ್ಯತಂತ್ರ ರೂಪಿಸಲಾಗುವುದು. ಆಟಗಾರರ ಜತೆ ಚರ್ಚಿಸಿ ಅದನ್ನು ಕಾರ್ಯರೂಪಕ್ಕೆ ತರಲಾಗುವುದು' ಎಂದು ಹೇಳಿದರು.

ಎಜಿಒಆರ್‌ಸಿ ತಂಡಕ್ಕೆ ಜಯ

ಬೆಂಗಳೂರು: ಎಜಿಒಆರ್‌ಸಿ ತಂಡವು ಬಿಡಿಎಫ್‌ಎ 'ಎ' ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ 4–2ರಿಂದ ಬಿಟಿಎಂ ಎಫ್‌ಸಿ ತಂಡವನ್ನು ಮಣಿಸಿತು.

ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಎಜಿಒಆರ್‌ಸಿ ಪರ ಸುದರ್ಶನ್ ವಿ ಲೋಕರ್ (6ನೇ ನಿಮಿಷ), ಸೂರ್ಯ ವೈತಿಲಿಂಗಂ (40 + 3ನೇ), ಅರುಣ್ ಪಾಂಡಿ (53ನೇ) ಮತ್ತು ಪಿ.ಸಂದೀಪ್ ಕೃಷ್ಣನ್ (74ನೇ) ಗೋಲು ಗಳಿಸಿದರು. ಮೀರ್ ಮದೋಹಮದ್ ರಜಾ (60ನೇ), ಮತ್ತು ಗೌತಮ್ ಶಿವಕುಮಾರ್ (80ನೇ) ಬಿಟಿಎಂ ಪರ ಚೆಂಡನ್ನು ಗುರಿ ಸೇರಿಸಿದರು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ಈಗಲ್ಸ್ ಎಫ್‌ಸಿ ತಂಡವು 1–0ಯಿಂದ ಎಡಿಇ ಎಫ್‌ಸಿ ತಂಡವನ್ನು ಸೋಲಿಸಿತು.

ಈಗಲ್ಸ್ ಪರ ಸಂಜಯ್ ಕುಮಾರ್ (54ನೇ) ಅವರು ಗೆಲುವಿನ ಗೋಲು ತಂದಿತ್ತರು.

ಟೆನಿಸ್: ರಾಮಕುಮಾರ್ ನಿರ್ಗಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ರಾಮಕುಮಾರ್ ರಾಮನಾಥನ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಮುಗ್ಗರಿಸಿದರು. ಅವರು 5–7, 7–5, 4–6ರಿಂದ ದಕ್ಷಿಣ ಕೊರಿಯಾದ ಹಾಂಗ್ ಸಿಯೊಂಗ್ ಚಾನ್ ಅವರಿಗೆ ಮಣಿದರು. ಮತ್ತೊಂದು ಪಂದ್ಯದಲ್ಲಿ ಭಾರತದ ಸುಮಿತ್ ನಗಾಲ್ ಅವರು 7-5, 6-2 ರಿಂದ ಆಡಮ್ ವಾಲ್ಟನ್ ಅವರನ್ನು ಸೋಲಿಸಿ, ಸೆಮಿಫೈನಲ್ ಪ್ರವೇಶಿಸಿದರು.


ನಗರದ ಕೆಎಸ್‌ಎಲ್‌ಟಿಎ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಶ್ರೇಯಾಂಕ ರಹಿತ ಆಟಗಾರ ರಾಮಕುಮಾರ್ ಅವರು ಒಂಬತ್ತನೇ ಶ್ರೇಯಾಂಕದ ಹಾಂಗ್ ಅವರಿಗೆ ತೀವ್ರ ಪೈಪೋಟಿ ನಡೆಸಿದರು. ಟೂರ್ನಿಗೆ ವೈಲ್ಡ್ ಕಾರ್ಡ್ ಪ್ರವೇಶ ಪಡೆದಿದ್ದ ಭಾರತದ ಸ್ಪರ್ಧಿ ಮೊದಲ ಸೆಟ್‌ನಲ್ಲಿ ಸರ್ವ್‌ನಲ್ಲಿ ಲಯ ಕಂಡುಕೊಳ್ಳಲು ಪರದಾಡಿದರು.

ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ರಾಮಕುಮಾರ್, ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿ ಸಮಬಲ ಸಾಧಿಸಿದರು. ಆದರೆ, ನಿರ್ಣಾಯಕ ಗೇಮ್‌ನಲ್ಲಿ ಮತ್ತೆ ಲಯ ಕಂಡುಕೊಂಡ ಎದುರಾಳಿ ಆಟಗಾರ ವೇಗದ ಸರ್ವ್ ಮತ್ತು ನಿಖರ ರಿಟರ್ನ್‌ಗಳಿಗೆ ತಕ್ಕ ಉತ್ತರ ನೀಡಿ ಮೇಲುಗೈ ಸಾಧಿಸಿದರು. ಮತ್ತೊಂದು ಎಂಟರ ಘಟ್ಟದ ಪಂದ್ಯದಲ್ಲಿ ಏಳನೇ ಶ್ರೇಯಾಂಕದ ಸ್ಟೆಫನೊ ನಾಪೊಲಿಟಾನೊ(ಇಟಲಿ) 6–7, 6–4, 6–4ರಿಂದ ಟುನೇಶಿಯಾದ ಮೊಯೆಜ್ ಎಚಾರ್ಗುಯಿ ಅವರನ್ನು ಹಿಮ್ಮೆಟ್ಟಿಸಿದರು. ಇನ್ನೊಂದು ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಓರಿಯೊಲ್ ರೋಕಾ ಬಟಾಲ್ಲಾ (ಸ್ಪೇನ್) ಅವರು 7–5, 4–6, 7–5ರಿಂದ ಪೋಲೆಂಡ್‌ನ ಮಾಕ್ಸ್ ಕಸ್ನಿಕೋವ್ಸ್ಕಿ ಅವರನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದರು.



ದಕ್ಷಿಣ ಕೊರಿಯಾದ ಹಾಂಗ್ ಸಿಯೊಂಗ್ ಚಾನ್
ಪ್ರಜಾವಾಣಿ ಚಿತ್ರ/ಕೃಷ್ಣ ಕುಮಾರ್ ಪಿ.ಎಸ್

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,910
ಇಂದಿನ ಅಂತ್ಯ	22,040
▲	129
ದಿನದ ಗರಿಷ್ಠ	22,068

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹208-460

ದ್ವಿತಳಿ (ಬಿ.ವಿ) ₹239-538

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹161

ಆರ್‌ಎಸ್‌ಎಸ್-5 ₹156

ಗುಡ್ ಲಾಟ್ ₹139

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹600
12 ಕ್ಕೆ ₹80

ಮೈಸೂರು
100ಕ್ಕೆ ₹600

ಕೈಗಾರಿಕಾ ಬೆಳವಣಿಗೆ ಶೇ 7.5ರಷ್ಟು ಪ್ರಗತಿ: ಆರ್ಥಿಕ ಸಮೀಕ್ಷೆ ಅಂದಾಜು

ಕೃಷಿ, ಸೇವಾ ಚಟುವಟಿಕೆ ಕುಸಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯದ ಕೃಷಿ ಹಾಗೂ ಸೇವಾ ವಲಯದ ಬೆಳವಣಿಗೆ ದರ ಕುಸಿತವಾಗಲಿದ್ದು, ಕೈಗಾರಿಕಾ ವಲಯವು ಹೆಚ್ಚಿನ ಪ್ರಗತಿ ದಾಖಲಿಸಲಿದೆ ಎಂದು 'ಕರ್ನಾಟಕ ಆರ್ಥಿಕ ಸಮೀಕ್ಷೆ 2023–24'ರ ವರದಿಯು ಅಂದಾಜಿಸಿದೆ.

ವಿಧಾನಸಭೆಯಲ್ಲಿ ಶುಕ್ರವಾರ ಬಜೆಟ್ ಮಂಡನೆಗೂ ಮೊದಲು ಈ ಸಮೀಕ್ಷಾ ವರದಿಯನ್ನು ಮಂಡಿಸಲಾಯಿತು.

ತೀವ್ರ ಬರಗಾಲ ಹಾಗೂ ಮಳೆ ಕೊರತೆಯೇ ಕೃಷಿ ಮತ್ತು ಅದರ ಅವಲಂಬಿತ ವಲಯಗಳ ಬೆಳವಣಿಗೆ ದರದ ಇಳಿಕೆಗೆ ಮೂಲ ಕಾರಣ ಎಂದು ವರದಿ ಹೇಳಿದೆ.

2022–23ನೇ ಸಾಲಿನಡಿ ಕೃಷಿ ವಲಯದ ಬೆಳವಣಿಗೆ ದರವು ಶೇ 2.8ರಷ್ಟಿತ್ತು. ಇದಕ್ಕೆ ಹೋಲಿಸಿದರೆ ಶೇ (–) 1.8ರಷ್ಟು ಇಳಿಕೆಯಾಗಬಹುದು ಎಂದು ಹೇಳಿದೆ. 2021–22ನೇ ಸಾಲಿನಡಿ ಈ ವಲಯವು ಶೇ 5.7ರಷ್ಟು ಪ್ರಗತಿ ಸಾಧಿಸಿತ್ತು.

ಮೀನುಗಾರಿಕೆ ವಲಯದ ಬೆಳವಣಿಗೆ ದರವೂ ಶೇ (–)4.6ರಷ್ಟು ಇಳಿಕೆ ಆಗಬಹುದು ಎಂದು ಅಂದಾಜಿಸಲಾಗಿದೆ.

ಕೈಗಾರಿಕಾ ಚಟುವಟಿಕೆ ಹೆಚ್ಚಳ ನಿರೀಕ್ಷೆ: 2022–23ನೇ ಸಾಲಿನಡಿ ಕೈಗಾರಿಕಾ ವಲಯದ ಬೆಳವಣಿಗೆ ದರವು ಶೇ 3.8ರಷ್ಟಿದ್ದು, 2023–24ನೇ ಸಾಲಿಗೆ ಶೇ 7.5ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಲಾಗಿದೆ. ಈ ವಲಯದ ಬೆಳವಣಿಗೆಯು 2021–22ನೇ ಸಾಲಿನಡಿ ಶೇ 11.1ರಷ್ಟು ಇತ್ತು.



ಅಂಕಿ ಅಂಶಗಳು

48 ಲಕ್ಷ ಹೆಕ್ಟೇರ್ — 2023–24ರಲ್ಲಿ ಮಳೆ ಕೊರತೆಗೆ ತುತ್ತಾದ ಪ್ರದೇಶ

70.59 ಲಕ್ಷ ಹೆಕ್ಟೇರ್ — ಆಹಾರ ಧಾನ್ಯ ಬಿತ್ತನೆಯಾಗಿರುವ ಪ್ರದೇಶ

112.2 ಲಕ್ಷ ಟನ್ — ಆಹಾರ ಧಾನ್ಯ ಉತ್ಪಾದನೆ ನಿರೀಕ್ಷೆ

ಕೋವಿಡ್ ಸಾಂಕ್ರಾಮಿಕದ ವೇಳೆ ಹಿಂಜರಿತಕ್ಕೆ ಒಳಗಾಗಿದ್ದ ಕೈಗಾರಿಕಾ ವಲಯವು ಕ್ರಮೇಣ ಚೇತರಿಕೆಯ ಹಳಿಗೆ ಮರಳುತ್ತಿರುವುದು ಆಶಾದಾಯಕವಾಗಿದೆ. ನಿರ್ಮಾಣ ವಲಯದ ಶೇ 8.2ರಷ್ಟು ಹಾಗೂ ತಯಾರಿಕಾ ವಲಯದ ಶೇ 7.4ರಷ್ಟು ಬೆಳವಣಿಗೆಯು ಕೈಗಾರಿಕಾ ವಲಯದ ಒಟ್ಟಾರೆ ಬೆಳವಣಿಗೆಗೆ ಕೊಡುಗೆ ನೀಡಲಿದೆ ಎಂದು ವರದಿ ಹೇಳಿದೆ.

ಸೇವಾ ಚಟುವಟಿಕೆ ಕುಸಿತ: ರಾಜ್ಯದ ಸೇವಾ ವಲಯದ ಬೆಳವಣಿಗೆ ದರವು ಕುಸಿತವಾಗಲಿದೆ ಎಂದು ಅಂದಾಜಿಸಲಾಗಿದೆ.

ತಲಾ ಆದಾಯ 9.3ರಷ್ಟು ಹೆಚ್ಚಳ

2023–24ನೇ ಸಾಲಿನಡಿ ರಾಜ್ಯದ ತಲಾ ಆದಾಯವು ₹3,32,926ಕ್ಕೆ ತಲುಪಲಿದೆ. ರಾಷ್ಟ್ರೀಯ ತಲಾ ಆದಾಯ ₹1,85,854 ಇದೆ. ಇದಕ್ಕೆ ಹೋಲಿಸಿದರೆ ಶೇ 79ರಷ್ಟು ಹೆಚ್ಚಿದೆ ಎಂದು ವರದಿ ಹೇಳಿದೆ.

2022–23ನೇ ಸಾಲಿನಡಿ ತಲಾ ಆದಾಯವು ₹3,04,474 ಇತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಶೇ 9.3ರಷ್ಟು ಏರಿಕೆಯಾಗುವ ನಿರೀಕ್ಷೆಯಿದೆ.

2022–23ನೇ ಸಾಲಿನಡಿ ಕಲಬುರಗಿ ವಿಭಾಗದ (ಬಳ್ಳಾರಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯನಗರ, ಯಾದಗಿರಿ ಜಿಲ್ಲೆ ಒಳಗೊಂಡು) ತಲಾ ಆದಾಯವು ₹1,66,797 ಇದ್ದು, ಕೊನೆಯ ಸ್ಥಾನದಲ್ಲಿದೆ. ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಬೆಳಗಾವಿ (₹1,81,911) ಹಾಗೂ ಮೈಸೂರು (₹3,02,060) ವಿಭಾಗಗಳಿವೆ.

2022–23ರಲ್ಲಿ ಬೆಂಗಳೂರು ನಗರ ಜಿಲ್ಲೆಯ ತಲಾ ಆದಾಯವು ₹7,60,362 ಇದ್ದು, ಅಗ್ರಸ್ಥಾನ ಕಾಯ್ದುಕೊಂಡಿದೆ. ನಂತರದ ಸ್ಥಾನಗಳಲ್ಲಿ ಕ್ರಮವಾಗಿ ದಕ್ಷಿಣ ಕನ್ನಡ (₹4,92,074), ಉಡುಪಿ (₹4,14,274), ಚಿಕ್ಕಮಗಳೂರು (₹3,77,968) ಇವೆ. ಇವುಗಳ ತಲಾ ಆದಾಯವು ರಾಜ್ಯದ ತಲಾ ಆದಾಯಕ್ಕಿಂತಲೂ (₹3,04,474) ಹೆಚ್ಚಿದೆ.

2021–22ನೇ ಸಾಲಿನಡಿ ಶೇ10ರಷ್ಟು ಹಾಗೂ 2022–23ನೇ ಸಾಲಿನಡಿ ಶೇ 9.9ರಷ್ಟಿದ್ದ ಬೆಳವಣಿಗೆ ದರವು, 2023–24ನೇ ಸಾಲಿನಡಿ ಶೇ 8.7ರಷ್ಟು ಬೆಳವಣಿಗೆ ಸಾಧಿಸಬಹುದು ಎಂದು ಅಂದಾಜಿಸಲಾಗಿದೆ.

ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯು 2021–22ರಲ್ಲಿ ಶೇ 11.7 ಹಾಗೂ 2022–23ರಲ್ಲಿ ಶೇ 9.20ರಷ್ಟು ಇತ್ತು. 2023–24ರಲ್ಲಿ ಶೇ 12.6ರಷ್ಟು ಪ್ರಗತಿ ಸಾಧಿಸಲಿದೆ. ಅಲ್ಲದೇ, ಉಪ ವಲಯಗಳಾದ ಸಾರ್ವಜನಿಕ ಆಡಳಿತ ಶೇ 10.5, ಇತರೆ ಸೇವೆಗಳು ಶೇ 8.2, ಹೋಟೆಲ್, ರೆಸ್ಟೋರೆಂಟ್‌ಗಳ ಶೇ 6.5ರಷ್ಟು ಬೆಳವಣಿಗೆಯು ಸೇವಾ ವಲಯದ ಪ್ರಗತಿಗೆ ಕೊಡುಗೆ ನೀಡುತ್ತವೆ ಎಂದು ವರದಿ ವಿವರಿಸಿದೆ.

ರಾಜ್ಯದ ಜಿಡಿಪಿಗೆ ಸೇವಾ ಮತ್ತು ಕೈಗಾರಿಕಾ ವಲಯದ ಪಾಲು ದೊಡ್ಡದಿದೆ. ಸೇವಾ ವಲಯ ಶೇ 67, ಕೈಗಾರಿಕೆ ಶೇ 20 ಹಾಗೂ ಕೃಷಿ ವಲಯವು ಶೇ 13ರಷ್ಟು ಕೊಡುಗೆ ನೀಡಲಿದೆ.

2022–23ರಲ್ಲಿ ಬೆಂಗಳೂರು ನಗರದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ₹8,59,154 ಕೋಟಿ ಆಗಿದೆ. ಇದು ರಾಜ್ಯದ ಜಿಡಿಪಿಗೆ ಶೇ 37.8ರಷ್ಟು ಕೊಡುಗೆ ನೀಡುತ್ತದೆ. ನಂತರದ ಸ್ಥಾನಗಳಲ್ಲಿ ದಕ್ಷಿಣ ಕನ್ನಡ (ಶೇ 5.5) ಬೆಳಗಾವಿ (ಶೇ 4.0) ಇವೆ.

ಐ.ಟಿ ಉದ್ಯಮ ಶೇ 3.8ರಷ್ಟು ಬೆಳವಣಿಗೆ ನಿರೀಕ್ಷೆ

ಮುಂಬೈ (ಪಿಟಿಐ): 2023–24ನೇ ಹಣಕಾಸು ವರ್ಷದಲ್ಲಿ ದೇಶದ ತಂತ್ರಜ್ಞಾನ ಉದ್ಯಮವು ಶೇ 3.8ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಐ.ಟಿ ಉದ್ಯಮ ಸಂಘಟನೆ ನಾಸ್ಕಾಂ ಅಂದಾಜಿಸಿದೆ.

2022–23ನೇ ಹಣಕಾಸು ವರ್ಷದಲ್ಲಿ ಉದ್ಯಮದ ವರಮಾನವು ₹20 ಲಕ್ಷ ಕೋಟಿ ಆಗಿತ್ತು. ಈ ಹಣಕಾಸು ವರ್ಷದಲ್ಲಿ ₹21 ಲಕ್ಷ ಕೋಟಿಗೆ ತಲುಪಲಿದೆ ಎಂದು ನಾಸ್ಕಾಂನ ವಾರ್ಷಿಕ ವರದಿ ತಿಳಿಸಿದೆ.

ಅಡಿಕೆ ಧಾರಣೆ

ಶಿವಮೊಗ್ಗ	
ಬೆಟ್ಟೆ	40209-54399
ಗೊರಬಲು	17009-35809
ರಾಶಿ	30366-48299
ಸರಕು	56369-83496
ಸಿದ್ದಾಪುರ	
ಬಿಳಿಗೋಟು	26319-30019
ಚಾಲಿ	35329-36899
ಕೋಕ	25119-27789
ಹೊಸಚಾಲಿ	31309-34509
ಕೆಂಪುಗೋಟು	30289-35099
ರಾಶಿ	42899-46989
ತಟ್ಟಿಬೆಟ್ಟೆ	39899-44609
ಶಿರಸಿ	
ಬೆಟ್ಟೆ	38169-44799
ಬಿಳಿಗೋಟು	25299-32899
ಚಾಲಿ	36208-38599
ಕೆಂಪುಗೋಟು	30700-34218
ರಾಶಿ	43208-47689
ಯಲ್ಲಾಪುರ	
ಅಪಿ	60269-60269
ಬಿಳಿಗೋಟು	20169-29675
ಚಾಲಿ	31500-38309
ಕೋಕ	14601-27510
ಕೆಂಪುಗೋಟು	2369-34799
ರಾಶಿ	43920-55689
ತಟ್ಟಿಬೆಟ್ಟೆ	32160-43899

ರಾಜ್ಯ ಬಜೆಟ್ 2024-25



ಯಾವ ಕ್ಷೇತ್ರಕ್ಕೆ ಎಷ್ಟು?

₹15,145 ಕೋಟಿ ಆರೋಗ್ಯ ಕ್ಷೇತ್ರಕ್ಕೆ ಹಂಚಿಕೆ ಮಾಡಲಾಗಿರುವ ಮೊತ್ತ

₹270 ಕೋಟಿ ವೆಚ್ಚದಲ್ಲಿ ಗದಗ, ಬಳ್ಳಾರಿ, ಚಿತ್ರದುರ್ಗ, ಕಲಬುರಗಿ, ಕೊಪ್ಪಳ, ಮೈಸೂರಿನಲ್ಲಿ ಬಹು ಕೌಶಲ ಅಬಿವೃದಿ ಕೇಂದ್ರ ಸಾಪನೆ

₹250 ಕೋಟಿ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳ ಸೌಲಭ್ಯಕ್ಕೆ ನಿಗದಿಪಡಿಸಿರುವ ಮೊತ

ಯುವನಿಧಿ ಮೊದಲ ಕಂತು: 1 ಲಕ್ಷ ಯುವಜನರಿಗೆ ನೆರವು

- ಕೇಂದ್ರ–ರಾಜ್ಯ ಸರ್ಕಾರಗಳ ಎಲ್ಲ ಇಲಾಖೆ, ಸಂಸ್ಥೆಗಳ ನೇಮಕಾತಿ ಅಧಿಸೂಚನೆ ಪ್ರಕಟಣೆಗೆ ಒಂದೇ ಜಾಲತಾಣ
- ಬಳ್ಳಾರಿ ಜಿಲ್ಲೆ ಸಂಡೂರಿನಲ್ಲಿ ಕೌಶಲ ಅಕಾಡೆಮಿ ಸ್ಥಾಪನೆ
- ಕ್ಯಾನ್ಸರ್ ರೋಗಿಗಳ ಚಿಕಿತ್ಸೆ ಮತ್ತು ನಿರಂತರ ಅನುಸರಣೆಗಾಗಿ ₹ 20 ಕೋಟಿ ವೆಚ್ಚದಲ್ಲಿ ಪ್ರತಿ ಜಿಲ್ಲೆಯಲ್ಲೂ 'ಒಂದು ಡೇ-ಕೇರ್ ಕಿಮೋಥೆರಪಿ' ಕೇಂದ್ರದ ಸ್ಥಾಪನೆಗೆ ಕ್ರಮ
- ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಮತ್ತು ಗರ್ಭಕಂಠದ ಕ್ಯಾನ್ಸರ್ ಅನ್ನು ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಿ, ಚಿಕಿತ್ಸೆ ನೀಡಲು 20 ಜಿಲ್ಲಾ ಆಸ್ಪತ್ರೆಗಳಲ್ಲಿ ಡಿಜಿಟಲ್ ಮ್ಯಾಮೋಗ್ರಫಿ ಯಂತ್ರಗಳ ಅಳವಡಿಕೆಗೆ ನಿರ್ಧಾರ
- ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆ, ಉಡುಪಿ, ಕೋಲಾರ, ದಾವಣಗೆರೆ ಜಿಲ್ಲಾ ಆಸ್ಪತ್ರೆಗಳಿಗೆ ಕಾಲ್ಪಸ್ಕೋಪಿ ಉಪಕರಣಗಳ ಖರೀದಿಗೆ ₹21 ಕೋಟಿ
- ಆನೇಕಲ್, ನೆಲಮಂಗಲ, ಹೊಸಕೋಟೆ, ಶೃಂಗೇರಿ, ಶಿರಹಟ್ಟಿ ಖಾನಾಪುರ, ಬಳ್ಳಾರಿ, ಯಳಂದೂರುನಲ್ಲಿ ಒಟ್ಟು ₹ 280 ಕೋಟಿ ವೆಚ್ಚದಲ್ಲಿ ತಲಾ 100 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣ
- 15 ಜಿಲ್ಲೆಗಳಲ್ಲಿ ಆಧುನಿಕ ಕ್ರಿಟಿಕಲ್ ಕೇರ್ ಬ್ಲಾಕ್‌ಗಳ ಸ್ಥಾಪನೆ. ಪ್ರಸಕ್ತ ಸಾಲಿನಲ್ಲಿ ಉಡುಪಿ, ದಾವಣಗೆರೆ, ವಿಜಯಪುರ, ಮೈಸೂರು, ಮಂಡ್ಯ, ಧಾರವಾಡ ಮತ್ತು ಕೊಪ್ಪಳ ಜಿಲ್ಲೆಯಲ್ಲಿ ₹ 187 ಕೋಟಿ ವೆಚ್ಚದಲ್ಲಿ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು

ಶಿಕ್ಷಣಕ್ಕೆ ಬೇಕಿತ್ತು ಬಲ



ರಾಜ್ಯ ಬಜೆಟ್‌ನಲ್ಲಿ ಎಂಜಿನಿಯರಿಂಗ್, ವೈದ್ಯಕೀಯ ವಿಭಾಗಗಳನ್ನು ಕ್ರೋಡೀಕರಿಸಿ ಅದನ್ನು ಪದವಿ ಪೂರ್ವ ಹಂತದವರೆಗಿನ ಶಿಕ್ಷಣಕ್ಕೆ ಹೋಲಿಸಿದರೆ ಕಡಿಮೆ ಪ್ರಾಮುಖ್ಯ ದೊರೆತಿದೆ. ದ್ವಿಭಾಷಾ ಮಾಧ್ಯಮ ಶಾಲೆಗಳಾಗಿ ಎರಡು ಸಾವಿರ ಶಾಲೆಗಳ ಪರಿವರ್ತನೆ ಕ್ರಮವೇನೋ ಸರಿ. ಆದರೆ, ಶಿಕ್ಷಕರ ಆಮೂಲಾಗ್ರ ಕೌಶಲದ ಬೆಳವಣಿಗೆಗೆ ಸ್ವಲ್ಪವೂ ಲಕ್ಷ್ಯ ವಹಿಸದಿರುವುದು ಖೇದಕರ. ಜೆ–ಪಿಎಎಲ್ ಸಂಸ್ಥೆಯ ಸಹಯೋಗದಲ್ಲಿನ ಗಣಿತ–ಗಣಕ ಕಾರ್ಯಕ್ರಮ ರಾಜ್ಯದ ಹಳ್ಳಿ–ಹಳ್ಳಿಗೂ ತಲುಪಬಹುದೇ ಎಂಬ ಅನುಮಾನ ಕಾಡುತ್ತಿದೆ.

400 ಆಯ್ದ ಪ್ರಯೋಗಾಲಯಗಳ ಉನ್ನತೀಕರಣ ನಿರ್ಧಾರ ಸರಿ. ಇದನ್ನು ಕಡಿಮೆ ಮಕ್ಕಳಿರುವ ಶಾಲೆಗಳಿಗೂ ವಿಸ್ತರಿಸಿ ಸುಸಜ್ಜಿತ ಪ್ರಯೋಗಾಲಯದ ಸೌಲಭ್ಯ ಕಲ್ಪಿಸ ಬೇಕಿತ್ತು. ಎನ್‌ಇಇಟಿ/ ಜೆಇಇ/ ಸಿಇಟಿ ತರಬೇತಿ ಕಾರ್ಯಕ್ರಮಗಳಿಗೆ ಮೀಸಲಿಟ್ಟ ₹10 ಕೋಟಿ ಸಾಲದು. ಉನ್ನತ ಶಿಕ್ಷಣಗಳಲ್ಲಿ ಮಹಿಳೆಯರಿಗೆ ಆದ್ಯತೆ ಕಂಡು ಬಂದರೂ ಮಹಿಳಾ ಪ್ರಥಮದರ್ಜೆ, ಮಹಿಳಾ ಪಾಲಿಟೆಕ್ನಿಕ್‌ಗೆ ಸಿಕ್ಕ ಅನುದಾನ ಕಡಿಮೆಯಿದೆ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹೊಸ ಪ್ರೌಢಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳು, 100 ಪಿಯು ಕಾಲೇಜುಗಳಲ್ಲಿ ಗಣಕ ವಿಜ್ಞಾನ ಸಂಯೋಜನೆ ಪ್ರಾರಂಭ, ಖಾಲಿ ಹುದ್ದೆಗಳ ಭರ್ತಿಯ ಆಶ್ವಾಸನೆ, ಯುವಿಸಿಇ ಅಭಿವೃದ್ಧಿ, ಮಹಾರಾಣಿ ಕಾಲೇಜಿನ ಹೊಸ ಕಟ್ಟಡ ನಿರ್ಮಾಣ ಸ್ವಾಗತಾರ್ಹ. 'ನಾವು–ಮನುಜರು', 'ಮರುಸಿಂಚನ', 'ಚಿಗುರು–ಬೇರು' ಹಾಗೂ 'ಪ್ರೇರಣಾ' ಎಂಬ ಕಾರ್ಯಕ್ರಮಗಳ ಜನನ ಸ್ವಾಗತಾರ್ಹ. ಸರ್ಕಾರ ಮನೆತನದ ಹೆಸರುಗಳನ್ನು ಕೈಬಿಟ್ಟಿರುವುದು ಉತ್ತಮ ಬೆಳವಣಿಗೆ.

ಪೂರ್ಣಿಮಾ ಜಾರ್ಜ್, ಶಿಕ್ಷಣ ತಜ್ಞೆ, ಬೀದರ್

ಸಂಪನ್ಮೂಲ ಎಲ್ಲಿದೆ?



ಇದು ಅತ್ಯಂತ ಅನುಭವಿ, ಚಾಣಾಕ್ಷತನದ ಬಜೆಟ್. ಸೂಪರ್ ಸ್ಪೆಷಾಲಿಟಿಗೆ ಹೆಚ್ಚು ಗಮನ ಕೊಡಲಾಗಿದೆ. ಹೃದ್ರೋಗ ಮತ್ತು ಕ್ಯಾನ್ಸರ್ ಚಿಕಿತ್ಸಾ ವಿಭಾಗಗಳಿಗೆ ಹೆಚ್ಚಿನ ಆದ್ಯತೆ ಸಿಕ್ಕಿದೆ. ರೋಗ ಗುಣಪಡಿಸುವಿಕೆಗೆ (ಕ್ಯೂರೇಟಿವ್ ಮೆಡಿಸಿನ್) ಪ್ರಾಶಸ್ತ್ಯ ದೊರೆತಿದೆ. ಆದರೆ, ನಿಯಂತ್ರಣದತ್ತ (ಪ್ರಿವೆಂಟಿವ್) ಗಮನ ಕೊಟ್ಟಿಲ್ಲ. ಈ ಎಲ್ಲದಕ್ಕೆ ಮಾನವ ಸಂಪನ್ಮೂಲ ಹೇಗೆ ಹೊಂದಿಸಲಾಗುತ್ತದೆ ಎಂಬುದಕ್ಕೆ ವಿವರಣೆಯಿಲ್ಲ.

ಹೊಸ ವೈದ್ಯಕೀಯ ಕಾಲೇಜು ಸ್ಥಾಪಿಸದಿರುವುದು ಉತ್ತಮ ನಡೆ. ಇರುವ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚಿನ ಅನುದಾನವನ್ನು ಒದಗಿಸಿ, ಅಭಿವೃದ್ಧಿಗೆ ಆದ್ಯತೆ ನೀಡಿರುವುದು ಸೂಕ್ತವಾಗಿದೆ. ಎಲ್ಲ ಕಡೆ 'ಕ್ರಿಟಿಕಲ್ ಕೇರ್ ಯೂನಿಟ್' ಮಾಡುವುದಾಗಿ ಹೇಳಿದ್ದು ಒಳ್ಳೆಯ ಬೆಳವಣಿಗೆ.

ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವನ್ನು (ಡಿಎಂಇ), ವೈದ್ಯಕೀಯ ಶಿಕ್ಷಣ ಆಯುಕ್ತಾಲಯ ಮಾಡುವ ನಿರ್ಧಾರ ಕ್ರಾಂತಿಕಾರಿ ನಡೆ. ಇದು ದೇಶದಲ್ಲೇ ಮೊದಲ ಪ್ರಯತ್ನ. ಇದರಲ್ಲಿ ಐಎಎಸ್ ಅಧಿಕಾರಿಗಳ ಜತೆಗೆ, ವೈದ್ಯರೂ ಇರುತ್ತಾರೆ. ವೈದ್ಯಕೀಯ ಶಿಕ್ಷಣಕ್ಕೆ ಏನು ಬೇಕು ಎಂದು ತೀರ್ಮಾನಿಸಲು ವೈದ್ಯರಿಗೂ ಅವಕಾಶ ಸಿಗಲಿದೆ.

ಗಣಿ, ಕಾರ್ಖಾನೆ ದೂಳು, ವಿಷಕಾರಿ ಅನಿಲ ಹೆಚ್ಚಾಗಿರುವ ಬಳ್ಳಾರಿಯಂಥ ಜಿಲ್ಲೆಗಳಲ್ಲಿ ಕ್ಷಯ ರೋಗ ಬಾಧಿಸುತ್ತಿದೆ. ಇಲ್ಲಿನ ಶ್ವಾಸಕೋಶ ಚಿಕಿತ್ಸಾ ವಿಭಾಗವನ್ನು ಮೇಲ್ದರ್ಜೆಗೆ ಏರಿಸುವ ಅಗತ್ಯವಿತ್ತು. ಅದರತ್ತ ಗಮನ ಹರಿಸಿಲ್ಲ.

ಒಟ್ಟಾರೆ, ವೈದ್ಯಕೀಯ ಕ್ಷೇತ್ರಕ್ಕೆ ತಕ್ಕಮಟ್ಟಿಗೆ ಅನುದಾನ ಸಿಕ್ಕಿದರೂ ಅಗತ್ಯ ಮಾನವ ಸಂಪನ್ಮೂಲಕ್ಕೆ ಏನು ಕ್ರಮ ಎಂದು ವಿವರಿಸಬೇಕಾಗಿತ್ತು.

ಡಾ.ವೈ.ಸಿ.ಯೋಗಾನಂದರೆಡ್ಡಿ, ಮಕ್ಕಳ ತಜ್ಞ, ಬಳ್ಳಾರಿ

ಸ್ತ್ರೀ ಸಬಲೀಕರಣಕ್ಕೆ ದಿಟ್ಟ ಹೆಜ್ಜೆ



ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಡಿ ಘೋಷಿಸಿದಂತೆ ಮಹಿಳೆಯರಿಗೆ ಮಾಸಿಕ ₹ 2 ಸಾವಿರ ಒದಗಿಸಲು ಗೃಹಲಕ್ಷ್ಮಿ ಯೋಜನೆ ಜಾರಿಗೆ ₹ 28,608 ಕೋಟಿ ಒದಗಿಸಿರುವುದು ಮಹಿಳಾ ಸಬಲೀಕರಣದತ್ತ ಇಟ್ಟಿರುವ ದಿಟ್ಟ ಹೆಜ್ಜೆಯೇ ಆಗಿದೆ. ಇದು ಸ್ತುತ್ಯರ್ಹವಾದ ಕ್ರಮ.

ಹೆಣ್ಣು ಮಕ್ಕಳು ಈ ಹಣವನ್ನು ಮಕ್ಕಳು, ಕುಟುಂಬದ ಏಳಿಗೆಗೆ ಬಳಸುತ್ತಾರೆ. ಅವರಿಗೆ ತಮ್ಮ ಮಕ್ಕಳ ಮತ್ತು ಕುಟುಂಬದ ಸೌಲಭ್ಯಗಳೇ ಪ್ರಮುಖವಾಗಿರುತ್ತವೆ. ಅವರು, ಅವಶ್ಯಕ ಖರ್ಚುಗಳ ಮಿತವ್ಯಯವಾಗಿ ಬಳಸುವುದರಲ್ಲಿ ಪರಿಣಿತರಾಗಿರುತ್ತಾರೆ. ಗೃಹಬಳಕೆ ವಸ್ತುಗಳ ಖರೀದಿ, ಮಕ್ಕಳಿಗೆ ಪುಸ್ತಕ, ಟ್ಯೂಷನ್ ಶುಲ್ಕಕ್ಕಾಗಿ ವ್ಯಯಿಸುತ್ತಾರೆ.

ಇದರಿಂದ ಮಾರುಕಟ್ಟೆ ವೃದ್ಧಿಯಾಗಲಿದೆ. ಉತ್ಪಾದನೆ ಹೆಚ್ಚಾಗಿ ಉದ್ಯೋಗಾವಕಾಶಗಳು ಹೆಚ್ಚಲಿವೆ. ಅರ್ಥಶಾಸ್ತ್ರಜ್ಞರ ಪ್ರಕಾರ ಈ ಯೋಜನೆಗಳು ಹಣದುಬ್ಬರದ ದಿನಮಾನಗಳಲ್ಲಿ ಆರ್ಥಿಕತೆಗೆ ಹೊಸ ದಿಕ್ಕು ತೋರಿಸಿದಂತಾಗಿದೆ.

ಜೊತೆಗೆ ₹ 200 ಕೋಟಿ ವೆಚ್ಚದಲ್ಲಿ ರಾಜ್ಯದ ಒಂದು ಸಾವಿರ ಅಂಗನವಾಡಿಗಳ ನಿರ್ಮಾಣ ಕ್ರಮವು ಬಡ ಮಕ್ಕಳ ಕಲಿಕೆಗೆ ಇಂಬು ನೀಡಿದಂತಾಗುತ್ತದೆ. ಮಹಿಳಾ ಉದ್ದೇಶಿತ ಯೋಜನೆಗಳಿಗೆ ₹ 86 ಸಾವಿರ ಕೋಟಿ ಹಾಗೂ ಮಕ್ಕಳ ಉದ್ದೇಶಿತ ಯೋಜನೆಗಳಿಗಾಗಿ ₹ 54,600 ಕೋಟಿ ತೆಗೆದಿರಿಸಿರುವುದು ಸ್ವಾಗತಾರ್ಹ. ಇಷ್ಟು ಹಣ ಖರ್ಚು ಮಾಡಲು ಸಾಧ್ಯವಾದರೆ ಹಲವು ಗುಣಾತ್ಮಕ ಬದಲಾವಣೆಗಳನ್ನು ನಿರೀಕ್ಷಿಸಬಹುದು.

ಎಲ್ಲ ವರ್ಗದ ವಿದ್ಯಾರ್ಥಿನಿಯರಿಗೆ ಇನ್ನಷ್ಟು ಹಾಸ್ಟೆಲ್ ನಿರ್ಮಿಸುವ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾವ ಮಾಡಬೇಕಿತ್ತು.

ನಲಿನಿ ಮಹಾಗಾಂವಕರ್, ವಾಸ್ತುಶಿಲ್ಪಿ, ಕಲಬುರಗಿ

ಸಾಮರಸ್ಯದ ತಾಣವಾಗಿ ಜ್ಞಾನದೇಗುಲ

● ಚಂದ್ರಹಾಸ ಹಿರೇಮಳಲಿ

ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಕೋಮು ಮನೋಭಾವ, ಶಾಲಾ–ಕಾಲೇಜುಗಳಲ್ಲಿ ಮೂಡುತ್ತಿರುವ ಅಸಹಿಷ್ಣುತೆಯ ವಾತಾವರಣ ಶಮನಕ್ಕೆ ದೃಢ ನಿರ್ಧಾರ ಮಾಡಿರುವ ಸರ್ಕಾರ, ರಾಜ್ಯದ ಜ್ಞಾನದೇಗುಲಗಳನ್ನು ಸಾಮರಸ್ಯದ ತಾಣವಾಗಿಸುವತ್ತ ಮಹತ್ವದ ಹೆಜ್ಜೆಇಟ್ಟಿದೆ.

ಎಲ್ಲ ಶಿಕ್ಷಣ ಸಂಸ್ಥೆಗಳನ್ನೂ ಸಾಮಾಜಿಕ ಸಾಮರಸ್ಯ, ವೈಜ್ಞಾನಿಕ ಮನೋಭಾವ ಹಾಗೂ ಸಹ ಬಾಳ್ವೆಯ ಕೇಂದ್ರಗಳಾಗಿ ರೂಪಿಸಲು 'ನಾವು ಮನುಜರು' ಎಂಬ ಕಾರ್ಯಕ್ರಮ ರೂಪಿಸಿದೆ. ಎಲ್ಲ ಶಾಲಾ–ಕಾಲೇಜುಗಳಲ್ಲೂ ಸಂವಿಧಾನ, ಸಾಮರಸ್ಯ, ಸಹಿಷ್ಣುತೆ ವಿಚಾರಗಳ ಕುರಿತು ತರಗತಿಗಳಲ್ಲಿಯೇ ವಾರಕ್ಕೆ ಎರಡು ಗಂಟೆ ವಿಚಾರ, ವಿಮರ್ಶೆ ಮತ್ತು ಸಂವಾದ ಚಟುವಟಿಕೆಯನ್ನು ನಡೆಸಲಾಗುತ್ತದೆ.



ವೈದ್ಯಕೀಯ, ಉನ್ನತ, ಶಾಲಾ ಶಿಕ್ಷಣ

- ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯನಿರ್ವಹಣೆಯಲ್ಲಿ ಇನ್ನಷ್ಟು ದಕ್ಷತೆ ತರಲು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯವನ್ನು ಆಯುಕ್ತಾಲಯವನ್ನಾಗಿ ಉನ್ನತೀಕರಿಸಲಾಗುವುದು
- 74 ಆದರ್ಶ ವಿದ್ಯಾಲಯಗಳಲ್ಲಿ ಪದವಿ ಪೂರ್ವ ಕಾಲೇಜು ಆರಂಭ
- ಪದವಿಪೂರ್ವ ಕಾಲೇಜುಗಳಲ್ಲಿ ಗಣಕ ವಿಜ್ಞಾನಕ್ಕೆ, ವಿಜ್ಞಾನ ಪ್ರಯೋಗಾಲಯಕ್ಕೆ ತಲಾ ₹10 ಕೋಟಿ
- ಪಾಲಿಟೆಕ್ನಿಕ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳಿಗೆ ₹120 ಕೋಟಿ
- ಅಧ್ಯಾಪಕರು, ವಿದ್ಯಾರ್ಥಿಗಳು ತಮ್ಮ ಆವಿಷ್ಕಾರಗಳಿಗೆ ಪೇಟೆಂಟ್ ಪಡೆದುಕೊಳ್ಳಲು ನೆರವಾಗಲು ₹10 ಕೋಟಿ
- ಮೈಸೂರು ಮಹಾರಾಣಿ ಕಾಲೇಜು ಕಟ್ಟಡಕ್ಕೆ ₹54 ಕೋಟಿ, ಹಾಸ್ಟೆಲ್ ಕಟ್ಟಡಕ್ಕೆ ₹116 ಕೋಟಿ

'ಮಕ್ಕಳಿಗೆ ರಾಷ್ಟ್ರ ಧರ್ಮ ಯಾವುದು ಎಂದು ಕೇಳಿದರೆ, ಭಾವೈಕ್ಯ, ಸಾಮರಸ್ಯ, ಪ್ರಜಾಪ್ರಭುತ್ವ ಎನ್ನಬೇಕು. ಸಂವಿಧಾನವೇ ನಮ್ಮ ರಾಷ್ಟ್ರ ಗ್ರಂಥ ಎಂದು ಮನವರಿಕೆ ಮಾಡಿಕೊಡಬೇಕು' ಎನ್ನುವ ಇಬ್ರಾಹಿಂ ಸುತಾರ ಅವರ ಮಾತನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉಲ್ಲೇಖಿಸಿದ್ದಾರೆ.

ವಿಧಾನಸಭೆ ಚುನಾವಣೆಗೂ ಮೊದಲು ಉಡುಪಿಯಲ್ಲಿ ಆರಂಭವಾಗಿದ್ದ ಹಿಜಾಬ್ ವಿವಾದ ರಾಜ್ಯದ ಇತರೆಡೆಗೂ ಹಬ್ಬಿತ್ತು. ತರಗತಿಗಳಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡುವುದನ್ನು ವಿರೋಧಿಸಿ ಮತ್ತೊಂದು ಹಿಂದೂ ಧರ್ಮದ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಬಂದಿದ್ದರು. ಈ ವಿವಾದವನ್ನು ಬಳಸಿಕೊಂಡ ಕೆಲ ಸಂಘಟನೆಗಳು ವಿದ್ಯಾರ್ಥಿಗಳಿಗೆ ಉಚಿತ ಶಾಲು ಹಂಚಿದ್ದರು. ಇದು ಎರಡು ಧರ್ಮದ ವಿದ್ಯಾರ್ಥಿಗಳ ನಡುವಿನ ಸಾಮರಸ್ಯಕ್ಕೆ ಧಕ್ಕೆ ತಂದಿತ್ತು. ಚುನಾವಣೆಯ ನಂತರ ಅಧಿಕಾರದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಪಕ್ಷವು ವಿದ್ಯಾರ್ಥಿಗಳು ಹಾಗೂ ಯುವಜನರಲ್ಲಿ ಸಾಮರಸ್ಯದ ಪರಿಕಲ್ಪನೆ ಮೂಡಿಸಲು ಮುಂದಾಗಿದೆ. ಅದರ ಭಾಗವಾಗಿಯೇ ಬಜೆಟ್‌ನಲ್ಲೇ ಹಲವು ಕ್ರಮಗಳನ್ನು ಘೋಷಿಸಿದೆ.

ಸಂವಿಧಾನದ ಆಶಯಗಳನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಂಡರೆ ಸಾಮಾಜಿಕ ಸಾಮರಸ್ಯ ಸಹಜವಾಗಿ ಅರಳುತ್ತದೆ ಎಂಬುದಕ್ಕೆ ಒತ್ತು ನೀಡಿ ಈಗಾಗಲೇ ಶಾಲಾ–ಕಾಲೇಜುಗಳಲ್ಲಿ ಸಂವಿಧಾನದ ಪೀಠಿಕೆ ಓದಿಗೆ ಆದೇಶಿಸಲಾಗಿದೆ. ಸನಾತನ ಶಿಕ್ಷಣದ ಪರಿಕಲ್ಪನೆಯಿದೆ ಎಂಬ ಕಾರಣಕ್ಕೆ ಎನ್‌ಇಪಿ ಬದಲಿಸಲು ರಾಜ್ಯ ಶಿಕ್ಷಣ ನೀತಿ ಆಯೋಗ ರಚಿಸಿತ್ತು. ವರದಿ ಸಲ್ಲಿಕೆಯಾದ ತಕ್ಷಣ ರಾಜ್ಯ ಶಿಕ್ಷಣ ನೀತಿ ಜಾರಿಗೊಳಿಸಲಾಗುತ್ತದೆ. ಈ ನೀತಿ ರಾಜ್ಯದ ಅಸ್ಮಿತೆ, ಸಂಸ್ಕೃತಿಗೆ ಅನುಗುಣವಾಗಿ ಇರಲಿದೆ ಎಂದು ಸರ್ಕಾರ ಬಜೆಟ್‌ನಲ್ಲಿ ಸುಳಿವು ನೀಡಿದೆ.

ಓದಿನಲ್ಲಿ ಹಿಂದುಳಿದವರಿಗೆ 'ಮರು ಸಿಂಚನ': ಸರ್ಕಾರಿ ಶಾಲೆಗಳಲ್ಲಿ ಓದಿದ ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯ ವೃದ್ಧಿಗೂ ಆದ್ಯತೆ ನೀಡಿರುವುದು ಬಜೆಟ್‌ನಲ್ಲಿನ ಮಹತ್ವದ ಅಂಶ. 6 ಮತ್ತು 7ನೇ ತರಗತಿಯ ವಿದ್ಯಾರ್ಥಿಗಳ ಕಲಿಕಾಮಟ್ಟ ಹೆಚ್ಚಿಸಲು ರೂಪಿಸಿರುವ 'ಮರು ಸಿಂಚನ' ಕಾರ್ಯಕ್ರಮಕ್ಕೆ ₹ 10 ಕೋಟಿ ನೀಡಲಾಗಿದೆ.

ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳನ್ನೇ ಆಯ್ಕೆ ಮಾಡಿಕೊಂಡು ಹೆಚ್ಚಿನ ಫಲಿತಾಂಶ ಪಡೆದೆವು ಎಂದು ಬೀಗುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳೂ 'ಫಲಿತಾಂಶ'ದಲ್ಲಿ ಪೈಪೋಟಿಯನ್ನು ನೀಡಲು ಈ ಕಾರ್ಯಕ್ರಮವು ನೆರವಾಗಲಿದೆ.

3 ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಗಣಿತ ವಿಷಯದಲ್ಲಿ ಆಸಕ್ತಿಯನ್ನು ಮೂಡಿಸಲು 'ಗಣಿತ–ಗಣಕ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಜ್ಯದ ಸರ್ಕಾರಿ ಪಿಯು ಕಾಲೇಜುಗಳಲ್ಲಿನ 20 ಸಾವಿರ ವಿಜ್ಞಾನ ವಿದ್ಯಾರ್ಥಿಗಳಿಗೆ ನೀಟ್, ಸಿಇಟಿ, ಜೆಇಇ ಪರೀಕ್ಷೆಗಳಿಗೆ ಸಜ್ಜುಗೊಳಿಸಲು ತರಬೇತಿ ಕಾರ್ಯಕ್ರಮಗಳ ಆಯೋಜನೆಗಾಗಿ ₹ 10 ಕೋಟಿ ಮೀಸಲಿಡಲಾಗಿದೆ. ಸರ್ಕಾರಿ ಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಮೂಲಸೌಕರ್ಯವನ್ನು ಕಲ್ಪಿಸಲು ₹ 850 ಕೋಟಿ ಘೋಷಿಸಲಾಗಿದೆ. ಕಳೆದ ಹಣಕಾಸು ವರ್ಷದಲ್ಲಿ ₹ 600 ಕೋಟಿ ನೀಡಲಾಗಿತ್ತು. ಯುವಜನರಿಗೆ ರಾಜ್ಯ ಬಜೆಟ್‌ನಲ್ಲಿ ಮಹತ್ವದ ಪ್ರೋತ್ಸಾಹದಾಯಕ ಯೋಜನೆಗಳನ್ನು ಘೋಷಣೆ ಮಾಡಿಲ್ಲ. ಆದರೆ, 'ಯುವನಿಧಿ' ಯೋಜನೆಯ ಮೂಲಕ ನಿರುದ್ಯೋಗಿ ಯುವಜನರಿಗೆ 'ಗ್ಯಾರಂಟಿ' ನೆರವು ಒದಗಿಸಲಾಗಿದೆ.

ಶಾಲೆ–ಕಾಲೇಜು ಅಭಿವೃದ್ಧಿಗೆ ಖಾಸಗಿ ಸಹಭಾಗಿತ್ವ

ಬಜೆಟ್‌ನಲ್ಲಿ ಹೊಸ ಶಾಲೆ, ಕಾಲೇಜುಗಳ ಸ್ಥಾಪನೆ ಕುರಿತ ಉಲ್ಲೇಖವಿಲ್ಲ. ಪೂರ್ವ ಪ್ರಾಥಮಿಕದಿಂದ ಕಾಲೇಜು ಹಂತದವರೆಗೂ ಒಂದೇ ಸೂರಿನಡಿ ಶಿಕ್ಷಣ ನೀಡಲು ಚಿಂತಿಸಿದ್ದರೂ, ಅಭಿವೃದ್ಧಿಗಾಗಿ ಕಾರ್ಪೊರೇಟ್ ಕಂಪನಿಗಳು ನೀಡುವ ಸಿಎಸ್‌ಆರ್ ನಿಧಿ, ಖಾಸಗಿ ಸಹಭಾಗಿತ್ವ ನೆಚ್ಚಿಕೊಳ್ಳಲಾಗಿದೆ.


ಉನ್ನತ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗೂ ಸಿಎಸ್‌ಆರ್ ನಿಧಿಯತ್ತ ಚಿತ್ತ ಹರಿಸಲಾಗಿದೆ. ಹಳೇ ವಿದ್ಯಾರ್ಥಿಗಳನ್ನು ಬಳಸಿಕೊಳ್ಳಲು 'ಬೇರು–ಚಿಗುರು' ಕಾರ್ಯಕ್ರಮ ರೂಪಿಸಲಾಗಿದೆ. ಐಐಟಿ ಮಾದರಿಯಲ್ಲಿ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದ ಅಭಿವೃದ್ಧಿಗೆ ₹500 ಕೋಟಿ ಘೋಷಿಸಿದ್ದರೂ, ಸರ್ಕಾರ ನೀಡುತ್ತಿರುವುದು ₹100 ಕೋಟಿ ಮಾತ್ರ. ಉಳಿದ ಅನುದಾನಕ್ಕೆ ಸಿಎಸ್‌ಆರ್ ನಿಧಿ, ಹಳೇ ವಿದ್ಯಾರ್ಥಿಗಳ ಮೂಲಕ ಹಣ ಸಂಗ್ರಹಿಸಲು ನಿರ್ಧರಿಸಿದೆ.

ಕನ್ನಡ, ಸಂಸ್ಕೃತಿಗೆ ಸಿಕ್ಕಿದ್ದೇನು?

- ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ಸ್ಮಾರಕವನ್ನು ನಿರ್ಮಿಸಲಾಗುವುದು
- ತತ್ವಪದಕಾರರು, ಸೂಫಿಗಳ ಬದುಕು, ಸಂದೇಶಗಳ ಅಧ್ಯಯನ ಕ್ಕಾಗಿ ಗುಲ್ಬರ್ಗಾ ವಿಶ್ವ ವಿದ್ಯಾಲಯದಲ್ಲಿ ಅಧ್ಯಯನ ಪೀಠ ಸ್ಥಾಪನೆ. ಶಿವಯೋಗಿ ಸಿದ್ಧರಾಮೇಶ್ವರರ ಬದುಕು-ಬರಹ ಕುರಿತು ಅಕ್ಕಮಹಾದೇವಿ ಮಹಿಳಾ ವಿ.ವಿ ಯಲ್ಲಿ ಅಧ್ಯಯನ ಪೀಠ ಆರಂಭ
- ಅಳಿವಿನಂಚಿನಲ್ಲಿರುವ ಜಾನಪದ ಕಲಾಪ್ರಕಾರಗಳಾದ ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣ ಪಾರಿಜಾತ, ತೊಗಲು ಗೊಂಬೆಯಾಟ, ಸೂತ್ರದ ಗೊಂಬೆಯಾಟ, ಕರಗ ಮುಂತಾದವುಗಳ ಪುನರುಜ್ಜೀನಕ್ಕೆ ತರಬೇತಿ ಮತ್ತು ಪ್ರದರ್ಶನಗಳ ಆಯೋಜನೆ
- ತ್ರಿಪದಿಗಳ ಮೂಲಕ ಜೀವನಸಾರ ಹೇಳಿದ ವಚನಕಾರ ಸರ್ವಜ್ಞನ ಸ್ಮಾರಕವನ್ನು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನಲ್ಲಿ ಅಭಿವೃದ್ಧಿಪಡಿಸಲಾಗುವುದು
- ಸಂತ ಕವಿ ಕನಕದಾಸ ಅಧ್ಯಯನ ಕೇಂದ್ರದ ಮೂಲಕ ತತ್ವಪದ, ಕೀರ್ತನ ಸಾಹಿತ್ಯ ಮತ್ತು ಭಕ್ತಿ ಚಳವಳಿ ಸೇರಿದಂತೆ ಸಾಹಿತ್ಯ ಸಮೀಕ್ಷೆ, ಸಂಗ್ರಹಣೆ, ಪ್ರಕಟಣೆ ಮತ್ತು ಪ್ರಸಾರ ಕಾರ್ಯಗಳನ್ನು ಕೈಗೊಳ್ಳಲು ₹ 1 ಕೋಟಿ ಒದಗಿಸಲಾಗುವುದು

ಬದ್ಧ ವೆಚ್ಚ ಹೆಚ್ಚಳ: ಅಭಿವೃದ್ಧಿಗೆ ತೊಡಕು

ಯೋಜನಾ ಆಧಾರಿತ ಬದ್ಧವೆಚ್ಚ (₹ಕೋಟಿಗಳಲ್ಲಿ)



ಪ್ರಜಾವಾಣಿ ವಾರ್ತೆ

ವೇತನ, ಪಿಂಚಣಿ, ಸಾಲದ ಮೇಲಿನ ಬಡ್ಡಿ ಪಾವತಿ ಸೇರಿದಂತೆ ಮಾಡಲೇಬೇಕಾದ ಬದ್ಧ ವೆಚ್ಚಗಳು ಹೆಚ್ಚುತ್ತಿರುವುದು ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳಿಗೆ ತೊಡಕಾಗಿದೆ ಎಂದು ಮಧ್ಯಮಾವಧಿ ವಿತ್ತೀಯ ಯೋಜನೆ ಪ್ರತಿಪಾದಿಸಿದೆ.

ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಿದ 2024–28ರ ಅವಧಿಯ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಈ ಉಲ್ಲೇಖವಿದೆ.

ರಾಜಸ್ವ ಸ್ವೀಕೃತಿಗೆ ಅನುಪಾತವಾಗಿ ಬದ್ಧವೆಚ್ಚಗಳು ಹೆಚ್ಚುತ್ತಲೇ ಇವೆ. 2022–23ರಲ್ಲಿ ಶೇ 79ರಷ್ಟಿದ್ದರೆ, 2023–24ರಲ್ಲಿ ಇದು ಶೇ 98ಕ್ಕೆ ಏರಿಕೆಯಾಯಿತು. 2024–25ರಲ್ಲಿ ಈ ಪ್ರಮಾಣವು ಶೇ 103ಕ್ಕೆ ಏರಿಕೆಯಾಗಲಿದೆ ಎಂದು ಯೋಜನೆ ಅಂದಾಜಿಸಿದೆ.

ಯೋಜನೆಯೇತರ ಬದ್ಧವೆಚ್ಚವು ಹಿಂದಿನ ಸಾಲಿಗೆ ಹೋಲಿಸಿದರೆ ಒಟ್ಟಾರೆ ಶೇ 14ರಷ್ಟು ಹೆಚ್ಚಳವಾಗಿದೆ. ಈ ಪೈಕಿ ಬಡ್ಡಿಪಾವತಿ ಮತ್ತು ಪಿಂಚಣಿಯು ಕಳೆದ ವರ್ಷಕ್ಕೆ ಹೋಲಿಸಿದರೆ ಕ್ರಮವಾಗಿ ಶೇ 19 ಹಾಗೂ ಶೇ 21ರಷ್ಟು ಏರಿಕೆಯಾಗಿದೆ. ಒಟ್ಟು ರಾಜಸ್ವ ವೆಚ್ಚದಲ್ಲಿ ಬದ್ಧತಾ ವೆಚ್ಚವು 2021–22ರಲ್ಲಿ ಶೇ 82ರಷ್ಟಿದ್ದುದು 2022–23ರಲ್ಲಿ ಶೇ 84ಕ್ಕೆ ಏರಿಕೆಯಾಗಿದೆ ಎಂದೂ ಯೋಜನೆಯ ವರದಿ ಹೇಳಿದೆ.

ಹೀಗೆ ಬದ್ಧ ವೆಚ್ಚಳ ಹೆಚ್ಚಳದಿಂದಾಗಿ, ರಾಜ್ಯ ಸರ್ಕಾರಕ್ಕೆ ಲಭ್ಯ ಇರುವ ಹಣಕಾಸು ಅವಕಾಶವು ಸೀಮಿತವಾಗಿದೆ. ಇದರಿಂದಾಗಿ ರಾಜ್ಯದ ಅಭಿವೃದ್ಧಿಯ ಆದ್ಯತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಒದಗಿಸಲು, ಸುಸ್ಥಿರ ಅಭಿವೃದ್ಧಿ ಮತ್ತು ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳಿಗೆ ಅನುದಾನ ಹಂಚಿಕೆ ಮಾಡಲು ಕಷ್ಟಕರವಾಗಿದೆ. ಸರ್ಕಾರಕ್ಕೆ ತನ್ನ ವೆಚ್ಚ ನಿರ್ವಹಣೆಗಿರುವ ವಿತ್ತೀಯ ಅವಕಾಶವು ಕ್ಷೀಣಿಸಲಿದೆ. ಸರ್ಕಾರದ ಸಂಪನ್ಮೂಲ ಹಂಚಿಕೆ ಹಾಗೂ ರಾಜ್ಯದ ಒಟ್ಟಾರೆ ವಿತ್ತೀಯ ಪರಿಸ್ಥಿತಿಯ ಮೇಲೆ ಇದು ನೇರವಾಗಿ ಪರಿಣಾಮ ಬೀರಲಿದೆ ಎಂದೂ ವಿವರಿಸಿದೆ.


ವೇತನ ಪರಿಷ್ಕರಣೆಗೆ ಅನುದಾನ?




ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ರಚಿಸಿರುವ 7ನೇ ಆಯೋಗದ ವರದಿಯನ್ನು ಅನುಷ್ಠಾನ ಮಾಡುವ ಸುಳಿವನ್ನು ಮಧ್ಯಮಾವಧಿ ವಿತ್ತೀಯ ಯೋಜನೆಯ ಅಂಕಿ ಅಂಶಗಳು ನೀಡಿವೆ.

2023ರ ಸಾಲಿನಲ್ಲಿ ವೇತನ ಬಾಬ್ತಿಗೆ ₹65,003 ಕೋಟಿ ತೆಗೆದಿರಿಸಿದ್ದರೆ 2024ರಲ್ಲಿ ಈ ಮೊತ್ತ ₹80,434 ಕೋಟಿಗೆ ಏರಿದೆ. ಹಾಗೆಯೇ ಪಿಂಚಣಿ ಮೊತ್ತವು ₹25,116 ಕೋಟಿಯಿಂದ ₹32,355 ಕೋಟಿಗೆ ಹೆಚ್ಚಳ ಮಾಡಿಕೊಳ್ಳಲಾಗಿದೆ. ವೇತನ ಪರಿಷ್ಕರಣೆ ಮಾಡಿದರೆ ₹15 ಸಾವಿರ ಕೋಟಿಗೂ ಹೆಚ್ಚಿನ ಮೊತ್ತ ಬೇಕಾಗಬಹುದು ಎಂದು ಹೇಳಲಾಗಿತ್ತು. ವೇತನ ಪಾವತಿಗೆ ಇಷ್ಟೇ ಪ್ರಮಾಣದ ಮೊತ್ತವನ್ನು ತೆಗೆದಿರಿಸಲಾಗಿದೆ.

ಯೋಜನೇತರ ವೆಚ್ಚ (₹ಕೋಟಿಗಳಲ್ಲಿ)







₹50 ಕೋಟಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್, ಇಂಟರ್‌ನೆಟ್ ಸೌಲಭ್ಯಕ್ಕಾಗಿ ಮೀಸಲಿಟ್ಟ ಹಣ (ಎರಡು ವರ್ಷಗಳ ಪ್ಯಾಕೇಜ್)



₹25 ಕೋಟಿ 46,829 ಸರ್ಕಾರಿ ಶಾಲೆ ಹಾಗೂ 1,234 ಪದವಿ ಪೂರ್ವ ಕಾಲೇಜುಗಳಿಗೆ ಉಚಿತ ವಿದ್ಯುತ್ ಹಾಗೂ ನೀರಿನ ಸೌಲಭ್ಯಕ್ಕಾಗಿ ಮೀಸಲಿಟ್ಟ ಹಣ



₹10 ಕೋಟಿ ಅಲ್ಪಸಂಖ್ಯಾತ ಸಮುದಾಯದ ಮಹಿಳಾ ಸ್ವ–ಸಹಾಯ ಗುಂಪುಗಳಿಗೆ ವಿವಿಧ ಸ್ವಯಂ ಉದ್ಯೋಗ ಚಟುವಟಿಕೆಗಳಿಗೆ ಉತ್ತೇಜನಕ್ಕೆ ಮೀಸಲಿಟ್ಟ ಹಣ

ಪ್ರತಿಕ್ರಿಯೆಗಳು




ಘನತ್ಯಾಜ್ಯ ನಿರ್ವಹಣಾ ಘಟಕವನ್ನು ಬೆಂಗಳೂರು ನಗರದ ಹೊರಗೆ ಮಾಡುವುದು, ಯಶವಂತಪುರ ಜನರ ಸಮಸ್ಯೆಗೆ ಪರಿಹಾರ, ಉತ್ತಮ ಘೋಷಣೆಗಳಿರುವ ಬಜೆಟ್

ಎಸ್.ಟಿ. ಸೋಮಶೇಖರ್, ಬಿಜೆಪಿ ಶಾಸಕ, ಯಶವಂತಪುರ




ಬಜೆಟ್ ಮೇಲೆ ಜನತೆಗೆ ಅಪಾರ ನಿರೀಕ್ಷೆ ಇತ್ತು. ಜನರ ಆಶೋತ್ತರ ಈಡೇರಿಸುವಲ್ಲಿ ವಿಫಲವಾಗಿದೆ,. ಮೇಕೆದಾಟು ಯೋಜನೆಗೆ ಪಾದಯಾತ್ರೆ ಮಾಡಿದ್ದ ಕಾಂಗ್ರೆಸ್ ಈಗ ಸುಮ್ಮನಿದೆ

'ಮುಖ್ಯಮಂತ್ರಿ' ಚಂದ್ರು, ರಾಜ್ಯಾಧ್ಯಕ್ಷ, ಆಮ್ ಆದ್ಮಿ ಪಾರ್ಟಿ



ಜನರ ಮನಸ್ಸಿನಲ್ಲಿ ಉಳಿಯುವ ಬಜೆಟ್ ಅಲ್ಲ. ರಾಜ್ಯದ ಪ್ರಗತಿ, ಆಡಳಿತ ಸುಧಾರಣೆ, ಭ್ರಷ್ಟಾಚಾರ ನಿಗ್ರಹಕ್ಕೆ ಯಾವುದೇ ಕ್ರಮಗಳಿಲ್ಲ

ದೀಪಕ್ ಸಿ.ಎನ್., ರಾಜ್ಯ ಪ್ರಧಾನ ಕಾರ್ಯದರ್ಶಿ, ಕೆಆರ್‌ಎಸ್ ಪಕ್ಷ



ಬಜೆಟ್‌ನಲ್ಲಿ ಆರ್ಥಿಕ ಶಿಸ್ತಿಲ್ಲ, ರಾಜ್ಯದ ಬಗ್ಗೆ ಕಾಳಜಿ ಇಲ್ಲ. ಇದು, ಸಾಲ ಮಾಡಿ ತುಪ್ಪ ತಿನ್ನು ಎಂಬ ರೀತಿ ಬೋಗಸ್ ಬಜೆಟ್

ಎನ್.ರವಿಕುಮಾರ್, ವಿರೋಧ ಪಕ್ಷದ ಮುಖ್ಯ ಸಚೇತಕ, ವಿಧಾನ ಪರಿಷತ್

ಕೆಫೆ ಸಂಜೀವಿನಿಗೆ ಮಹಿಳಾ ಸಾರಥ್ಯ

ಪ್ರಜಾವಾಣಿ ವಾರ್ತೆ

2.5 ಲಕ್ಷ ಮಹಿಳಾ ಸ್ವಸಹಾಯ ಸಂಘಗಳಿಗೆ ನೆರವು, ಕೃಷಿ ಆಧಾರಿತ ಉಪ ಕಸುಬುಗಳಲ್ಲಿ ತೊಡಗಿರುವ ರೈತ ಮಹಿಳೆಯರು, ಮಾಜಿ ದೇವದಾಸಿಯರಿಗೆ, ಅಂಗನವಾಡಿ ಸಿಬ್ಬಂದಿಗೆ ನೆರವು ಮಹಿಳಾ ಸಬಲೀಕರಣದ ಪ್ರಮುಖ ಹೆಜ್ಜೆ.

ಅತಿಸಣ್ಣ ಉದ್ಯಮ ಆರಂಭಿಸಲು 50 ಸಾವಿರ ಸ್ವಸಹಾಯ ಸಂಘಗಳಿಗೆ ನೆರವು ಹಾಗೂ ಮೀನುಗಾರಿಕೆ, ಕುಕ್ಕುಟೋದ್ಯಮ, ಕುರಿ ಮತ್ತು ಮೇಕೆ, ಜೇನು ಸಾಕಣೆಯಂತಹ ಕಿರು ಉದ್ದಿಮೆಗಳ ಸ್ಥಾಪನೆ, ಅವುಗಳಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸಲು ₹100 ಕೋಟಿ ನಿಗದಿ ಮಾಡಲಾಗಿದೆ. ನೆರವು ಪಡೆಯಲು 1 ಲಕ್ಷ ಮಹಿಳಾ ಸ್ವ ಸಹಾಯ ಗುಂಪುಗಳಿಗೆ ಅವಕಾಶ ಕಲ್ಪಿಸಿದೆ.

ಸ್ಥಳೀಯ ಆಹಾರವನ್ನು ಕೈಗೆಟಕುವ ದರದಲ್ಲಿ ಒದಗಿಸಲು ಮಹಿಳೆಯರೇ ನಡೆಸುವ 'ಕೆಫೆ ಸಂಜೀವಿನಿ' ಆರಂಭಿಸುತ್ತಿದ್ದು, 50 ಕೆಫೆಗಳಿಗೆ ₹7.50 ಕೋಟಿ ಮೀಸಲಿಡಲಾಗಿದೆ. ಕಾಫಿ ಮಂಡಳಿ ಸಹಭಾಗಿತ್ವದಲ್ಲಿ ಸ್ವ-ಸಹಾಯ ಗುಂಪುಗಳ ಸದಸ್ಯರಾಗಿರುವ ಒಂದು ಲಕ್ಷ ಮಹಿಳೆಯರಿಗೆ ಕಾಫಿ ಉದ್ಯಮದ ತರಬೇತಿ ನೀಡಲಾಗುತ್ತಿದೆ. 2,500 ಕಾಫಿ ಕಿಯೋಸ್ಕ್ ಗಳನ್ನು ₹25 ಕೋಟಿ ವೆಚ್ಚದಲ್ಲಿ ಪ್ರಾರಂಭಿಸಲಾಗುತ್ತಿದೆ.



ಅಲ್ಪಸಂಖ್ಯಾತ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸ್ವಯಂ ಉದ್ಯೋಗ ಚಟುವಟಿಕೆ ನಡೆಸಲು ₹10 ಕೋಟಿ ನೀಡಲಾಗಿದೆ.

ಮಾಸಾಶನ ಹೆಚ್ಚಳ: ಮಾಜಿ ದೇವದಾಸಿಯರ ಮಾಸಾಶನವನ್ನು ₹1500 ದಿಂದ ₹2 ಸಾವಿರಕ್ಕೆ, ಲಿಂಗತ್ವ ಅಲ್ಪ ಸಂಖ್ಯಾತರಿಗೆ ಮಾಸಾಶನವನ್ನು ₹ 800 ರಿಂದ ₹1,200ಗೆ ಹೆಚ್ಚಿಸಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಗ್ರ್ಯಾಚ್ಯುಟಿ ಸೌಲಭ್ಯ ಘೋಷಿಸಿದೆ.

ಹಸು, ಎಮ್ಮೆ ಖರೀದಿಗೆ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿದ ರೈತ ಮಹಿಳೆಯರಿಗೆ ಶೇ 6ರ ಬಡ್ಡಿ ಸಹಾಯಧನ ನೀಡಲಾಗುತ್ತದೆ.

ಮಹಿಳಾ ಮುನ್ನಡೆಗೆ ಹಲವು ಕ್ರಮ

- ನಿವೇಶನ ಹೊಂದಿರುವ ವಸತಿರಹಿತರಿಗೆ ರಾಜೀವ್ ಗಾಂಧಿ ವಸತಿ ನಿಗಮದಿಂದ ವಸತಿ ಸೌಲಭ್ಯ, ಪುನರ್ವಸತಿ. ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಕುರಿತು ಮರು ಸಮೀಕ್ಷೆ ನಡೆಸಿ, ನಿಖರ ಮಾಹಿತಿ ಸಂಗ್ರಹ.
- ಮಕ್ಕಳ ಶಿಕ್ಷಣ ಮತ್ತು ಆರೈಕೆ ಸಾಮರ್ಥ್ಯ ವೃದ್ಧಿಗಾಗಿ 20 ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ತರಬೇತಿ ನೀಡಲು ₹10 ಕೋಟಿ ಮೀಸಲು.
- ಅಂಗನವಾಡಿ ಕಾರ್ಯಕರ್ತೆಯರಿಗೆ ಮತ್ತು ಮೇಲ್ವಿಚಾರಕಿಯರಿಗೆ ₹90 ಕೋಟಿ ವೆಚ್ಚದಲ್ಲಿ 75,938 ಸ್ಮಾರ್ಟ್ ಫೋನ್‌ಗಳ ವಿತರಣೆ.
- 30 ಸರ್ಕಾರಿ ಮಹಿಳಾ ಪ್ರಥಮದರ್ಜೆ ಕಾಲೇಜುಗಳು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್‌ಗಳ ಉನ್ನತೀಕರಣಕ್ಕೆ ₹30 ಕೋಟಿ.
- ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ತಲಾ ₹1 ಲಕ್ಷ ನೆರವಿನೊಂದಿಗೆ ಎಣ್ಣೆ ಗಾಣ ಸ್ಥಾಪನೆ.

ಕನ್ನಡ ಮತ್ತು ಸಾಂಸ್ಕೃತಿಕ ಕ್ಷೇತ್ರ ಗುಣಗಾನವೇ 'ಭೂಷಣ'

ಪ್ರಜಾವಾಣಿ ವಾರ್ತೆ

ಬಸವಾದಿ ಶಿವಶರಣರ ಗುಣಗಾನವೇ ಕನ್ನಡ ಮತ್ತು ಸಂಸ್ಕೃತಿ ಕ್ಷೇತ್ರಕ್ಕೆ 'ಭೂಷಣ'ವಾಗಿದ್ದು, ಈಗಾಗಲೇ ಜಾರಿಯಲ್ಲಿರುವ ಕಾರ್ಯಕ್ರಮಗಳು, ಘೋಷಣೆಗಳನ್ನೇ ಪುನರುಚ್ಚರಿಸಲಾಗಿದೆ.

ಬಜೆಟ್‌ನಲ್ಲಿ 'ಇವನಾರವ ಇವನಾರವ ಎಂದೆನಿಸದಿರಯ್ಯ...' ಎಂಬ ಬಸವಣ್ಣ ಅವರ ವಚನವನ್ನು ಓದಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಬಸವಾದಿ ಶಿವಶರಣರ ಸ್ಮರಣೆಗೆ ಎರಡು ಪುಟ ಮೀಸಲಿಟ್ಟಿದ್ದರು. ಆದರೆ, ಇಲ್ಲಿ ಗುಣಗಾನವೇ ಹೆಚ್ಚಾಗಿದ್ದು, ಮಹತ್ವದ ಘೋಷಣೆ ಇಲ್ಲವಾಗಿದೆ. ರಂಗಭೂಮಿ, ಸಂಗೀತ, ನೃತ್ಯ, ಕಲೆ, ಸಾಹಿತ್ಯ ಸೇರಿ ವಿವಿಧ ಕ್ಷೇತ್ರಗಳಿಗೆ ಈ ಬಾರಿ ಆದ್ಯತೆ ದೊರೆತಿಲ್ಲ.

ರಂಗಾಯಣಗಳಿಗೆ ಅನುದಾನ ಏರಿಕೆ ಪ್ರಸ್ತಾಪವಿದ್ದರೂ ನಿರ್ದಿಷ್ಟವಾಗಿ ಅನುದಾನದ ಉಲ್ಲೇಖವಿಲ್ಲ. ಮಂಡ್ಯದಲ್ಲಿ ನಡೆಯುವ 87ನೇ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ₹ 30 ಕೋಟಿ ಅನುದಾನ ಕುರಿತ ಕನ್ನಡ ಸಾಹಿತ್ಯ ಪರಿಷತ್ತಿನ ನಿರೀಕ್ಷೆ ಈಡೇರಿಲ್ಲ.

ಬಸವಣ್ಣ ಅವರನ್ನು ರಾಜ್ಯ ಸರ್ಕಾರ ಇತ್ತೀಚೆಗೆ 'ಸಾಂಸ್ಕೃತಿಕ ನಾಯಕ' ಎಂದು ಘೋಷಿಸಿತ್ತು. ಅದರ ಮುಂದುವರಿದ ಭಾಗವಾಗಿ ಸರ್ಕಾರಿ ಕಚೇರಿಗಳಲ್ಲಿನ ಬಸವಣ್ಣ ಅವರ ಭಾವಚಿತ್ರದಲ್ಲಿ 'ವಿಶ್ವಗುರು ಬಸವಣ್ಣ-ಸಾಂಸ್ಕೃತಿಕ ನಾಯಕ'ನೆಂದು ಮುದ್ರಿಸಲಾಗುವುದೆಂದು ತಿಳಿಸಲಾಗಿದೆ. ಶರಣರ ಜೀವನ ಚರಿತ್ರೆ ಹಾಗೂ ವಚನ ಸಾಹಿತ್ಯದ ಕುರಿತು ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದೆಂದು ಹೇಳಲಾಗಿದೆ. ಬಸವಣ್ಣನವರ ಬದುಕು, ಸಂದೇಶ ಹಾಗೂ ಚಿಂತನೆಗಳನ್ನು ಪ್ರಚುರಪಡಿಸಲು ಬಸವ ಜಯಂತಿಯಂದು 'ಸರ್ವ ಧರ್ಮ ಸಂಸತ್ತು' ಆಯೋಜಿಸಲಾಗುವುದು ಎನ್ನಲಾಗಿದೆ.

ಬಸವಣ್ಣನವರ ಜನ್ಮಸ್ಥಳವಾದ ಬಸವನಬಾಗೇವಾಡಿಯ ಅಭಿವೃದ್ಧಿಗೆ 'ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ' ರಚಿಸಲಾಗುತ್ತದೆ. ವಚನಗಳನ್ನು ವಿಶ್ವಕ್ಕೆ ಪರಿಚಯಿಸಲು ವಚನ ಸಂಗ್ರಹಾಲಯ ಅಥವಾ ವಚನ ಮಂಟಪವನ್ನು ಕಲಬುರಗಿಯಲ್ಲಿ ಸ್ಥಾಪಿಸಲು ತೀರ್ಮಾನಿಸಿದೆ. ಆದರೆ, ಅನುದಾನ ಪ್ರಸ್ತಾಪಿಸಿಲ್ಲ.

ವಾಣಿಜ್ಯ ಮಳಿಗೆಗಳು, ಕಚೇರಿಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಅಳವಡಿಕೆಗೆ ಕ್ರಮವಹಿಸಲಾಗುವುದೆಂದು ಪ್ರಸ್ತಾಪಿಸಲಾಗಿದೆ.

ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯದವರ ಕಲೆ ಮತ್ತು ಸಂಸ್ಕೃತಿಯನ್ನು ಗುರುತಿಸಿ, ಪ್ರೋತ್ಸಾಹಿಸಲು ಅಲೆಮಾರಿ ಸಂಸ್ಕೃತಿ ಉತ್ಸವವನ್ನು ಆಯೋಜಿಸಲಾಗುವುದು. ಸಾಮಾಜಿಕ ಮತ್ತು ರಾಜಕೀಯ ಚಿಂತಕರಾದ ನಾರಾಯಣ ಗುರು, ಜ್ಯೋತಿಬಾ ಫುಲೆ, ಪೆರಿಯಾರ್ ರಾಮಸ್ವಾಮಿ, ರಾಮ ಮನೋಹರ ಲೋಹಿಯಾ ಹಾಗೂ ಬಾಬು ಜಗಜೀವನರಾಮ್ ಅವರ ಬರಹಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಪ್ರಕಟಿಸಲಾಗುವುದು ಎನ್ನಲಾಗಿದೆ.

ವಚನ ಮಂಟಪ ಸ್ಥಾಪನೆ



- 'ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ' ಸ್ಥಾಪಿಸುವ ಘೋಷಣೆ
- ಕಲಬುರಗಿಯಲ್ಲಿ ವಚನ ಸಂಗ್ರಹಾಲಯ ಅಥವಾ ವಚನ ಮಂಟಪ ಸ್ಥಾಪನೆ
- ಅಲೆಮಾರಿಗಳ ಸಂಸ್ಕೃತಿ ಉತ್ಸವ ಆಯೋಜಿಸಲು ಕ್ರಮ
- ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಅಳವಡಿಸಲು ಕ್ರಮ
- ನಾರಾಯಣ ಗುರು, ಜ್ಯೋತಿಬಾ ಫುಲೆ ಸೇರಿ ಪ್ರಮುಖರ ಬರಹಗಳ ಅನುವಾದಕ್ಕೆ ಆದ್ಯತೆ



ರಾಜ್ಯ ಬಜೆಟ್ 2024-25

ಅನ್ನದಾತನಿಗೆ ಕೊಟ್ಟಿದ್ದೇನು?

₹376 ಕೋಟಿ ಕರ್ನಾಟಕ ಉಗ್ರಾಣ ನಿಗಮದ 76 ಗೋದಾಮುಗಳ ನಿರ್ಮಾಣ

₹150 ಕೋಟಿ ರಾಮನಗರ ಮತ್ತು ಶಿಡ್ಲಘಟ್ಟದಲ್ಲಿ ಹೈಟೆಕ್ ರೇಷ್ಮೆ ಮಾರುಕಟ್ಟೆ

₹25 ಕೋಟಿ ರಾಯಚೂರಿನಲ್ಲಿ ಸುಸಜ್ಜಿತ ಒಣ ಮೆಣಸಿನಕಾಯಿ ಮಾರುಕಟ್ಟೆ

ಗ್ರಾಮೀಣಾಭಿವೃದ್ಧಿಗೆ ಒತ್ತು

ಬಜೆಟ್‌ನಲ್ಲಿ ಗ್ರಾಮೀಣಾಭಿವೃದ್ಧಿಗೆ ₹21 ಸಾವಿರ ಕೋಟಿಗೂ ಹೆಚ್ಚು ಅನುದಾನ ಮೀಸಲಿಡಲಾಗಿದೆ. ಗ್ರಾಮೀಣ ಭಾಗದಲ್ಲಿ ಸಂಪರ್ಕ ಜಾಲ ಅಭಿವೃದ್ಧಿ, ಘನತ್ಯಾಜ್ಯ ನಿರ್ವಹಣೆ, ಗ್ರಂಥಾಲಯ ನವೀಕರಣಕ್ಕೂ ಹಣ ಒದಗಿಸಿರುವುದು ಶ್ಲಾಘನೀಯ. ಜೀತ ಕಾರ್ಮಿಕರಿಗೆ ಪುನರ್ವಸತಿ ಯೋಜನೆ ಘೋಷಿಸಿರುವುದು ಸ್ವಾಗತಾರ್ಹ.



ಸಾವಿತ್ರಿ ಬಾಯಿ ಫುಲೆ ಮಹಿಳಾ ಸಬಲೀಕರಣ ಯೋಜನೆ ಆರಂಭಿಸಿ ರುವುದು ಬಜೆಟ್‌ನ ವಿಶೇಷತೆಗಳಲ್ಲೊಂದು. ಹಳ್ಳಿಗಾಡಿನ ಆರೋಗ್ಯ ಸೇವೆಯ ಸುಧಾರಣೆಗೆ ಒತ್ತು ನೀಡಿರುವುದು ಮೆಚ್ಚುವಂತಹದ್ದು. ಆದರೆ ಗ್ರಾಮ ಪಂಚಾಯಿತಿಗಳನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿ ಸುವ ನಿಟ್ಟಿನಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಬಲಪಡಿಸುವ ಬಗ್ಗೆ ಬಜೆಟ್‌ನಲ್ಲಿ ಯಾವುದೇ ಉಲ್ಲೇಖ ಇಲ್ಲ.

ಸ್ಥಳೀಯ ಆಡಳಿತ ಸಂಸ್ಥೆಗಳಲ್ಲಿನ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಮತ್ತು ಗ್ರಾಮಾಡಳಿತದ ದಕ್ಷತೆಯನ್ನು ಹೆಚ್ಚಿಸಲು 5 ಉಪ ಕ್ರಮಗಳನ್ನು ಕೈಗೊಂಡಿರುವುದು ಸ್ವಾಗತಾರ್ಹವಾದುದು.

ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಇ-ಆಫೀಸ್ ಆರಂಭಿಸುವುದರಿಂದ ನಾಗರಿಕರಿಗೆ ಅನುಕೂಲವಾಗಲಿದೆ. ಸಾಲ ಸೌಲಭ್ಯಗಳಿಗೆ ವಿಧಿಸುವ ಬಡ್ಡಿ ಕಡಿತದಂತಹ ನಿಲುವುಗಳು ಗ್ರಾಮೀಣ ಮಹಿಳೆಯರ ಬಲವರ್ಧನೆಗೆ ಪೂರಕವಾಗಿವೆ. ಆದರೆ ಕನ್ನಡ ಮಾಧ್ಯಮವನ್ನು ಗಮನದಲ್ಲಿಟ್ಟುಕೊಂಡು ಗ್ರಾಮೀಣ ಯುವಜನರಿಗೆ ಇನ್ನೂ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ವಿಚಾರದಲ್ಲಿ ಸರ್ಕಾರ ಕೊಂಚ ಎಡವಿದಂತೆ ಕಾಣುತ್ತದೆ.

ಶುಭಾ ಮರವಂತೆ, ಪ್ರಾಧ್ಯಾಪಕಿ, ಶಿವಮೊಗ್ಗ

ಸುಸ್ಥಿರ ಕೃಷಿಗೆ ಪೂರಕ

ಬರದ ಛಾಯೆ, ಕೃಷಿಯ ಅಸ್ಥಿರ ಬೆಳವಣಿಗೆ ನಡುವೆಯೂ ಚೇತರಿಕೆ ನೀಡುವ ಆಶಾದಾಯಕ ಅಂಶ ಬಜೆಟ್‌ನಲ್ಲಿವೆ. ಕೃಷಿಯಲ್ಲಿ ತಂತ್ರಜ್ಞಾನ ಬಳಕೆ ಹಾಗೂ ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ, ಅಭಿವೃದ್ಧಿಯ ಪ್ರಸ್ತಾಪದಲ್ಲಿ ಪ್ರಗತಿಯ ಮುನ್ನೋಟ ಕಾಣುತ್ತದೆ. ಸುಸ್ಥಿರ ಕೃಷಿಗೆ ಒತ್ತು ನೀಡಲಾಗಿದೆ. ರೈತಪರ ಯೋಜನೆಗಳನ್ನು ಒಗ್ಗೂಡಿಸಿ 'ಕರ್ನಾಟಕ ರೈತ ಸಮೃದ್ಧಿ' ಯೋಜನೆ ಜಾರಿಗೆ ತರುತ್ತಿರುವುದು ಆಕರ್ಷಕವಾಗಿ ಕಾಣುತ್ತಿದೆ.



₹200 ಕೋಟಿ ಅನುದಾನದೊಂದಿಗೆ ಕೃಷಿ ಭಾಗ್ಯ ಯೋಜನೆ ಮುಂದುವರಿಸಿರುವುದು, ಬ್ಯಾಂಕ್ ಸ್ಥಾಪನೆ ರೈತರಿಗೆ ಅನುಕೂಲವಾಗಬಹುದು. 'ನಮ್ಮ ಮಿಲ್ಲೆಟ್' ಎಂಬ ಹೊಸ ಕಾರ್ಯಕ್ರಮ ಸಿರಿ ಧಾನ್ಯ ಬೆಳೆಯಲು ಕೃಷಿಕರನ್ನು ಉತ್ತೇಜಿಸಲಿದೆ.

ಕೃಷಿ ವಲಯದಲ್ಲಿ ಸ್ಟಾರ್ಟ್‌ಅಪ್, ಮಷಿನ್ ಲರ್ನಿಂಗ್‌ನಂತಹ ಅತ್ಯಾಧುನಿಕ ತಂತ್ರಜ್ಞಾನ ಬಳಕೆಯನ್ನು ರೈತರಿಗೆ ತಲುಪಿಸುವುದು ಸವಾಲಿನ ಕೆಲಸ. ತೋಟಗಾರಿಕೆ ಬೆಳೆಗಳ ಸಂಸ್ಕರಣೆ, ರಫ್ತು ಪ್ರಮಾಣ ಹೆಚ್ಚಿಸಲು ಕೊಯ್ಲೋತ್ತರ ನಿರ್ವಹಣಾ ಕೇಂದ್ರ, ಖಾಸಗಿ ಸಹಭಾಗಿತ್ವದಲ್ಲಿ 'ಸ್ಪೈಸ್ ಪಾರ್ಕ್' ಸ್ಥಾಪನೆ ಉದ್ದೇಶ ಪರಿಣಾಮಕಾರಿ ಯೋಜನೆಯಾಗಿದೆ.

ಹೈಟೆಕ್ ರೇಷ್ಮೆ ಮಾರುಕಟ್ಟೆ ನಿರ್ಮಾಣ ರೇಷ್ಮೆ ಬೆಳೆಗಾರರ ಆದಾಯ ಹೆಚ್ಚಿಸಲಿದೆ.

ಕೃಷಿ, ಪಶುಸಂಗೋಪನೆಗೆ ಆದ್ಯತೆ ನೀಡಲಾಗಿದೆ. ಆದರೆ, ಬೆಲೆ ಕುಸಿತದಿಂದ ತೀವ್ರ ಬಿಕ್ಕಟ್ಟು ಎದುರಿಸುತ್ತಿರುವ ತೆಂಗು ಹಾಗೂ ಕಬ್ಬು ಬೆಳೆಗಾರರನ್ನು ನಿರ್ಲಕ್ಷಿಸಲಾಗಿದೆ.

ಎನ್.ಟಿ.ನೀಲಕಂಠ, ಸಹಾಯಕ ಪ್ರಾಧ್ಯಾಪಕ, ತುಮಕೂರು ವಿಶ್ವವಿದ್ಯಾಲಯ

ಕಾರ್ಮಿಕರಿಗೂ ಬೇಕಿತ್ತು ಸಮಪಾಲು

ಕಾರ್ಮಿಕರ ಹಕ್ಕುಗಳಿಗಾಗಿ ದೀರ್ಘಕಾಲ ನಡೆದ ಹೋರಾಟದ ಫಲವಾಗಿ ಈ ಬಜೆಟ್‌ನಲ್ಲಿ ಒಂದಷ್ಟು ಸಮಾಧಾನಕರ ಅಂಶಗಳನ್ನು ಕಾಣಬಹುದು. ಆದರೆ ಸಮಪಾಲು ನೀಡುವ ನಿಟ್ಟಿನಲ್ಲಿ ಬಜೆಟ್ ಮಂಡನೆಯಾಗಬೇಕಾಗಿತ್ತು.



ಪೌರಕಾರ್ಮಿಕರ ಹಲವು ದಶಕಗಳ ಕಾಲದ ಹೋರಾಟದ ಫಲವಾಗಿ 24,005 ಪೌರಕಾರ್ಮಿಕರನ್ನು ಕಾಯಂಗೊಳಿಸುವುದಾಗಿ ಘೋಷಿಸಿರುವುದು ಒಳ್ಳೆಯ ತೀರ್ಮಾನ. ತ್ಯಾಜ್ಯ ನಿರ್ವಹಣೆ ವಿಭಾಗದಲ್ಲಿ ಕಸ ಸಂಗ್ರಹಿಸುವ ಮತ್ತು ವಿಲೇವಾರಿ ಮಾಡುವ ಕಾರ್ಮಿಕರನ್ನು ನಿರ್ಲಕ್ಷಿಸಲಾಗಿದೆ.

ಎಲ್ಲ ಯೋಜನಾ ಕಾರ್ಮಿಕರಿಗೂ, ಗಿಗ್ ಕೆಲಸಗಾರರಿಗೂ ಕೆಲಸ, ನ್ಯಾಯಯುತ ವೇತನ ಮತ್ತು ಘನತೆಯುಕ್ತ ಕೆಲಸದ ವಾತಾವರಣವನ್ನು ಖಾತ್ರಿಪಡಿಸಬೇಕಾಗಿತ್ತು. ಎಲ್ಲ ಇಲಾಖೆಗಳಲ್ಲಿ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಬೇಕು. ಎಲ್ಲ ಕಾರ್ಮಿರನ್ನು ಕಾಯಂಗೊಳಿಸಬೇಕು. ನಿರುದ್ಯೋಗ ಸಮಸ್ಯೆ ಹೆಚ್ಚಾಗಿರುವುದರಿಂದ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಂತೆಯೇ ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ಒಳಗೊಂಡಿರಬೇಕಾಗಿತ್ತು.

ಕಾರ್ಮಿಕ ಇಲಾಖೆಯನ್ನು ಬಲಗೊಳಿಸುವುದರ ಬಗ್ಗೆ ಯಾವುದೇ ಯೋಜನೆಗಳು ಇಲ್ಲ. ಸಂಪತ್ತನ್ನು ಸೃಷ್ಟಿಸುವ ಕಾರ್ಮಿಕರಿಗೆ ಸಮಪಾಲು ನೀಡುವ ನಿಟ್ಟಿನಲ್ಲಿ ಸರ್ಕಾರ ಯೋಜನೆಗಳನ್ನು ರೂಪಿಸುವುದು ಅವಶ್ಯ.

ಮೈತ್ರೇಯಿ ಕೆ., ಮುಖಂಡರು, ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್

1,000 ಪಂಚಾಯಿತಿಗಳಲ್ಲಿ 'ನನ್ನ ಗುರುತು'

- ಕಲ್ಯಾಣ ಕರ್ನಾಟಕ ಭಾಗದ ಎಸ್‌ಸಿ ಮತ್ತು ಎಸ್‌ಟಿ ಪಂಗಡದವರಿಗೆ ಸರ್ಕಾರಿ ಮಾನ್ಯತೆಯ ದಾಖಲೆಗಳನ್ನು ಡಿಜಿ ಲಾಕರ್ ಆ್ಯಪ್‌ನಲ್ಲಿ ಸುರಕ್ಷಿತವಾಗಿರಿಸಲು 1,000 ಪಂಚಾಯ್ತಿಗಳಲ್ಲಿ 'ನನ್ನ ಗುರುತು' ಅಭಿಯಾನ
- 'ಪ್ರೇರಣಾ' ಕಾರ್ಯಕ್ರಮದಡಿ ಸ್ವಸಹಾಯ ಗುಂಪುಗಳ ಮಹಿಳೆಯರು, ಗ್ರಾಮ ಪಂಚಾಯಿತಿಗಳ ಮಹಿಳಾ ಸದಸ್ಯರು ಹಾಗೂ ಗ್ರಾಮೀಣ ಪ್ರದೇಶದ ಮುಂಚೂಣಿಯ ಕಾರ್ಯಕರ್ತೆಯರಲ್ಲಿ 'ಮುಟ್ಟಿನ ಕಪ್' ಬಳಕೆಗೆ ಪ್ರೋತ್ಸಾಹ
- ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆಡಳಿತ ವ್ಯವಸ್ಥೆ ಬಲವರ್ಧನೆಗೆ ಸದಸ್ಯರಿಗೆ ಮತ್ತು ಒಕ್ಕೂಟಗಳ ಸದಸ್ಯರಿಗೆ ತರಬೇತಿ. ದೇಶದ ಪ್ರಥಮ 'ವರ್ತುಲ ಆರ್ಥಿಕತೆ'ಯ ಪ್ರಯೋಗಾಲಯ ಸ್ಥಾಪನೆಗೆ ₹2 ಕೋಟಿ
- ಜೀತ ಕಾರ್ಮಿಕ ಪದ್ಧತಿಯಿಂದ ಬಿಡುಗಡೆಯಾದ ಕಾರ್ಮಿಕರ ಪುನರ್ವಸತಿಗಾಗಿ ನೀಡುತ್ತಿರುವ ಮಾಸಿಕ ಪ್ರೋತ್ಸಾಹಧನ ₹2,000 ಕ್ಕೆ ಏರಿಕೆ
- ಆಯ್ದ 100 ಗ್ರಾಮ ಪಂಚಾಯಿತಿಗಳಲ್ಲಿ ಮಹಿಳೆಯರಿಗೆ ಉದ್ಯೋಗಾಧಾರಿತ ಕೌಶಲ ತರಬೇತಿಗಾಗಿ 'ಸಾವಿತ್ರಿಬಾಯಿ ಫುಲೆ ಮಹಿಳಾ ಸಬಲೀಕರಣ ಯೋಜನೆ' ಆರಂಭ
- ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ತಲಾ ₹1 ಲಕ್ಷ ನೆರವಿನೊಂದಿಗೆ ಎಸ್.ಎಚ್.ಜಿ ಸಹಯೋಗದೊಂದಿಗೆ ಎಣ್ಣೆ ಗಾಣ ಸ್ಥಾಪನೆ

ಕೃಷಿ ಅಭಿವೃದ್ಧಿ ಪ್ರಾಧಿಕಾರ ರಚನೆ

- ಕೃಷಿ ಮತ್ತು ಪೂರಕ ಚಟುವಟಿಕೆಗಳ ನೀತಿ ಮತ್ತು ಯೋಜನೆಗಳ ಸಂಯೋಜನೆ ಹಾಗೂ ಪರಿಣಾಮಕಾರಿ ಅನುಷ್ಠಾನಕ್ಕೆ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೃಷಿ ಅಭಿವೃದ್ಧಿ ಪ್ರಾಧಿಕಾರ
- 'ಕೃಷಿ ಭಾಗ್ಯ' ಯೋಜನೆ ಮರು ಜಾರಿ. ಸಮುದಾಯ ಬೀಜ ಬ್ಯಾಂಕ್ ಸ್ಥಾಪನೆ. 'ನಮ್ಮ ಮಿಲ್ಲೆಟ್' ಎಂಬ ಹೊಸ ಕಾರ್ಯಕ್ರಮದ ಘೋಷಣೆ
- ಬೆಂಗಳೂರಿನಲ್ಲಿರುವ ಕೃಷಿ ಇಲಾಖೆಯ ಆರ್.ಕೆ. ಶಾಲಾ ಕೃಷಿ ಕ್ಷೇತ್ರವನ್ನು ಕೃಷಿಗೆ ಸಂಬಂಧಿಸಿದ ತಾಂತ್ರಿಕತೆಗಳನ್ನು ಪಸರಿಸುವ ಜ್ಞಾನ ಕೇಂದ್ರವಾಗಿ ಸಾರ್ವಜನಿಕ- ಖಾಸಗಿ ಸಹ ಭಾಗಿತ್ವದಲ್ಲಿ ಅಭಿವೃದ್ಧಿ
- ರಾಯಚೂರು ಕೃಷಿ ವಿಶ್ವ ವಿದ್ಯಾಲಯವು ಅಭಿವೃದ್ಧಿಪಡಿಸಿರುವ ಇ-ಎಸ್‌ಎಪಿ ತಂತ್ರಾಂಶದ ಸೌಲಭ್ಯವನ್ನು ಎಲ್ಲ ರೈತರಿಗೆ ಪರಿಚಯಿಸುವುದು. ಕೃಷಿ ಇಲಾಖೆಯ ಅಧೀನದಲ್ಲಿ ಪ್ರತ್ಯೇಕ ಆಹಾರ ಸಂಸ್ಕರಣಾ ಆಯುಕ್ತಾಲಯ
- ಮಂಡ್ಯ ಜಿಲ್ಲೆಯ ವಿ.ಸಿ. ಫಾರಂನಲ್ಲಿ ಕೃಷಿ ವಿ.ವಿ ಸ್ಥಾಪಿಸುವ ಕುರಿತು ಪರಿಶೀಲಿಸಲು ತಜ್ಞರ ಸಮಿತಿ ರಚನೆ

ಕೃಷಿ ಬೆಳವಣಿಗೆಯಲ್ಲಿ ಕಾಣದ ದೂರದೃಷ್ಟಿ

'ಹೊಳಪು' ಕಳೆದುಕೊಂಡ 'ಅನ್ನದಾತ'

• ಎಸ್. ರವಿಪ್ರಕಾಶ್

ಕೃಷಿ ಕ್ಷೇತ್ರ ಈ ಬಜೆಟ್‌ನಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಬೆರಳೆಣಿಕೆಯ 'ಜನಪ್ರಿಯ' ಯೋಜನೆಗಳನ್ನು ಹೊರತುಪಡಿಸಿ ಅನುದಾನ ನೀಡಿಕೆ, ಕೃಷಿ ಕ್ಷೇತ್ರದ ಸುಸ್ಥಿರ ಬೆಳವಣಿಗೆಗೆ ಗಮನಹರಿಸಿಲ್ಲ.

ರಾಜ್ಯ ಬರದಿಂದ ತತ್ತರಿಸುತ್ತಿದೆ. ರೈತರು ಸಂಕಷ್ಟದಲ್ಲಿದ್ದಾರೆ. ಇದರ ನಿರ್ವಹಣೆಗೆ ಕೇಂದ್ರ ಹಣ ಬಿಡುಗಡೆ ಮಾಡುತ್ತಿಲ್ಲ, ತಾರತಮ್ಯ ಮಾಡುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನಿತ್ಯವೂ ಟೀಕಾ ಪ್ರಹಾರ ನಡೆಸುತ್ತಿದ್ದಾರೆ. ಆದರೆ, ಮುಂಗಾರು ವೈಫಲ್ಯದಿಂದಾಗಿ ಕೃಷಿ ಕ್ಷೇತ್ರದಲ್ಲಿ ಶೇ 1.8 ರಷ್ಟು(ಸ್ಥಿರ ಬೆಲೆಗಳಲ್ಲಿ) ನಕಾರಾತ್ಮಕ ಬೆಳವಣಿಗೆ ಆಗಿದೆ. ಆದರೆ, ಈ ಸಂಕಷ್ಟದಿಂದ ಪಾರು ಮಾಡಿ ಕೃಷಿ ಕ್ಷೇತ್ರಕ್ಕೆ ಚೈತನ್ಯ ನೀಡುವುದಕ್ಕೆ ತುರ್ತು ಯೋಜನೆಗಳನ್ನು ರೂಪಿಸಬಹುದಿತ್ತು. 'ಎಲ್‌ನಿನೋ' ಪರಿಣಾಮ ಇನ್ನೂ ಕೆಲ ವರ್ಷಗಳು ಮುಂದುವರಿಯುವ ಸಾಧ್ಯತೆ ಇರುವುದರಿಂದ ಕೃಷಿ ಕ್ಷೇತ್ರ ಇನ್ನಷ್ಟು ಮಂಕಾಗುವ ಸಾಧ್ಯತೆ ಇದ್ದು, ಕೃಷಿ ಕ್ಷೇತ್ರಕ್ಕೆ ಕಾಯಕಲ್ಪದ ಅಗತ್ಯವಿತ್ತು. ಈ ನಿಟ್ಟಿನಲ್ಲಿ ಬಜೆಟ್ ಭರವಸೆ ಮೂಡಿಸಿಲ್ಲ.

ಹೊಸದಾಗಿ ಪ್ರಕಟಿಸಿರುವ 'ಕರ್ನಾಟಕ ರೈತರ ಸಮೃದ್ಧಿ ಯೋಜನೆ' ಈಗಾಗಲೇ ಜಾರಿಯಲ್ಲಿರುವ ಕೇಂದ್ರ ಮತ್ತು ರಾಜ್ಯದ ಹಲವು ಕಾರ್ಯಕ್ರಮಗಳ 'ಚೌಚೌ ಬಾತ್'ನಂತಿದೆ. ಈ ಯೋಜನೆಯ ಕುರಿತು ಸ್ಪಷ್ಟತೆಯೂ ಇಲ್ಲ. ಉದಾಹರಣೆಗೆ ಮಣ್ಣಿನ ಗುಣ, ಮಾರುಕಟ್ಟೆ ಬೇಡಿಕೆ ಆಧರಿಸಿ ಬೆಳೆ ಬೆಳೆಯುವುದು, ಮಣ್ಣು ಪರೀಕ್ಷೆ ಮತ್ತು ಗುಣಮಟ್ಟದ ಮಾಹಿತಿ ನೀಡುವ ವಿಚಾರ ಕೇಂದ್ರ ಸರ್ಕಾರದ 'ಸಾಯಿಲ್ ಹೆಲ್ತ್ ಕಾರ್ಡ್' ಯೋಜನೆಯಲ್ಲೇ ಇದೆ. ಇನ್ನು ಕೃಷಿ, ಪಶುಸಂಗೋಪನೆ, ತೋಟಗಾರಿಕೆ, ಹೈನುಗಾರಿಕೆ ಒಳಗೊಂಡ ಸಮಗ್ರ ಕೃಷಿ ಮೂಲಕ ಆದಾಯದಲ್ಲಿ ಸುಸ್ಥಿರತೆ ಕಂಡುಕೊಳ್ಳುವ ಅಂಶದಲ್ಲಿ ಹೊಸತೇನಿದೆ ಎಂಬ ಪ್ರಶ್ನೆ ಮೂಡುವುದು ಸಹಜ.

ಏತ ನೀರಾವರಿ, ಕುಡಿಯುವ ನೀರಿಗೆ ಆದ್ಯತೆ

ನೀರಾವರಿಯಲ್ಲಿ 'ಪ್ರತಿಷ್ಠಿತ' ಬೃಹತ್ ಯೋಜನೆಗಳಿಗೆ ಅನುದಾನ ಪ್ರಸ್ತಾಪಿಸಿಲ್ಲ. ಆದರೆ, ಏತ ನೀರಾವರಿ, ಕೆರೆ ತುಂಬಿಸುವ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇದರಿಂದ ನೀರಾವರಿ ವ್ಯಾಪ್ತಿ ಹಿಗ್ಗಲಿದೆ. ಇದಕ್ಕಾಗಿ ಸುಮಾರು ₹15,389 ಕೋಟಿ ಅನುದಾನ ನೀಡಲಾಗಿದೆ.

ಇಲಾಖೆಗೆ ಕಳೆದ ವರ್ಷಕ್ಕಿಂತ ₹135 ಕೋಟಿಯಷ್ಟು ಹೆಚ್ಚು ಅನುದಾನ ನೀಡಲಾಗಿದೆ. ಕಳೆದ ವರ್ಷ ₹19,044 ಕೋಟಿ ನೀಡಲಾಗಿತ್ತು. ಈ ಬಾರಿ ₹19,197 ಕೋಟಿ ಒದಗಿಸಲಾಗಿದೆ.

₹19,197 ಕೋಟಿ ನೀರಾವರಿ ಇಲಾಖೆಗೆ ಮೀಸಲಿಟ್ಟ ಹಣ

- ಕರ್ನಾಟಕ ನೀರಾವರಿ ನಿಗಮದ ವ್ಯಾಪ್ತಿಯ ವಿವಿಧ ಜಿಲ್ಲೆಗಳ ಏತ ನೀರಾವರಿಗೆ ₹7,280 ಕೋಟಿ ಒದಗಿಸಲಾಗಿದ್ದು, 97,698 ಹೆಕ್ಟೇರ್‌ಗೆ ನೀರುಣಿಸಲಾಗುವುದು.
- ಕೆಬಿಜೆಎನ್‌ಎಲ್ ಅಡಿ ₹3,779 ಕೋಟಿ ವೆಚ್ಚದಲ್ಲಿ ವಿವಿಧ ಜಿಲ್ಲೆಗಳಲ್ಲಿ 1,09,350 ಹೆಕ್ಟೇರ್ ಪ್ರದೇಶಕ್ಕೆ ನೀರು ಒದಗಿಸಲಾಗುವುದು.
- ಕೊಪ್ಪಳ ಜಿಲ್ಲೆ ಯಲಬುರ್ಗಾ- ಕುಕನೂರು ತಾಲ್ಲೂಕಿನಲ್ಲಿ 38 ಕೆರೆಗಳನ್ನು ತುಂಬಿಸಲು ₹970 ಕೋಟಿ, ರಾಯಚೂರು ಜಿಲ್ಲೆ ಮಸ್ಕಿ ತಾಲ್ಲೂಕಿನ ಪಾಮನಕಲ್ಲೂರು ಮತ್ತು ಇತರ ಕಡೆ, ನಾರಾಯಣಪುರ ಬಲದಂಡೆ ಕಾಲುವೆಯಿಂದ ₹990 ಕೋಟಿ ವೆಚ್ಚದಲ್ಲಿ ನೀರಾವರಿ ಸೌಲಭ್ಯ.
- ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯಲ್ಲಿ ₹2000 ಕೋಟಿ ವೆಚ್ಚದಲ್ಲಿ ಕುಡಿಯುವ ನೀರು ಮತ್ತು ಇತರ ಕಾಮಗಾರಿಗಳು.
- ಕಲಬುರಗಿ ನಗರಕ್ಕೆ ಕುಡಿಯುವ ನೀರು ಸರಬರಾಜಿಗೆ ಬೆಣ್ಣೆತೊರಾ ಜಲಾಶಯಕ್ಕೆ ಭೀಮಾ ಮತ್ತು ಕಾಗಿಣಾ ನದಿಗಳಿಂದ ನೀರು ತುಂಬಿಸುವ ಯೋಜನೆಗೆ ₹365 ಕೋಟಿ

ರಾಜ್ಯದಲ್ಲಿ ಈ ಹಿಂದೆಯೇ ಸಾಕಷ್ಟು ರೈತರು ಈ ರೀತಿಯ ಕೃಷಿ ವಿಧಾನ ಅಳವಡಿಸಿಕೊಂಡಿದ್ದಾರೆ.

ಖಾಸಗಿ ಕಂಪನಿಗಳ ಹಿಡಿತ ತಪ್ಪಿಸಲು ಎಪಿಎಂಸಿ ಕಾಯ್ದೆಯನ್ನು ರದ್ದು ಮಾಡಿರುವ ಸಿದ್ದರಾಮಯ್ಯ ಸರ್ಕಾರ, ಮತ್ತೊಂದು ಕಡೆ ಖಾಸಗಿಯವರಿಗೆ ಹಿಂಬಾಗಿಲಿನಿಂದ ಮಣೆ ಹಾಕಿದೆ. ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರದಲ್ಲಿ ಮೂಲಸೌಕರ್ಯಗಳ ನಿರ್ಮಾಣ ಮಾಡುವ ಉದ್ದೇಶದಿಂದ ಪ್ರಕಟಿಸಿರುವ ಹಲವು ಯೋಜನೆಗಳಲ್ಲಿ ಖಾಸಗಿಯವರಿಗೆ ಮಣೆ ಹಾಕಿರುವುದು ವಿರೋಧಾಭಾಸವೇ ಸರಿ. 'ಪಿಪಿಪಿ ಮಾದರಿ'ಯಲ್ಲಿ ಪ್ರತಿ ಬಜೆಟ್‌ನಲ್ಲೂ ಶೀತಲಗೃಹಗಳನ್ನು ಪ್ರಕಟಿಸುವುದು ವಾಡಿಕೆ. ರಾಜ್ಯದಲ್ಲಿ ಈವರೆಗೆ ಎಷ್ಟು ಶೀತಲಗೃಹಗಳು ನಿರ್ಮಾಣ ಆಗಿವೆ ಎಂಬ ನಿಖರ ಲೆಕ್ಕವೂ ಸರ್ಕಾರದ ಬಳಿ ಇಲ್ಲ. ಬರೇ ಘೋಷಣೆಗಳಿಂದ ರೈತರಿಗೆ ಆಗುವ ಪ್ರಯೋಜನವಾದರೂ ಏನು?

ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಸಹಕಾರ, ಪಶುಸಂಗೋಪನೆ ಇಲಾಖೆಗಳ ನಡುವಿನ ಸಮನ್ವಯಕ್ಕಾಗಿ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ 'ಕೃಷಿ ಅಭಿವೃದ್ಧಿ ಪ್ರಾಧಿಕಾರ' ರಚನೆಯ ಪ್ರಸ್ತಾಪ ಮಾಡಲಾಗಿದೆ. ಕೃಷಿಗೆ ಸಂಬಂಧಿಸಿದ ಇತರ ಇಲಾಖೆಗಳ ಮಂತ್ರಿಗಳು, ಅಧಿಕಾರಿಗಳನ್ನು ಕರೆದು ಒಂದೆರಡು ಸಭೆಗಳಲ್ಲಿ ಸಮನ್ವಯ ಮಾಡಿ ಮುಗಿಸಬಹುದಾದ ಕೆಲಸಕ್ಕೆ ಹೊಸ ಪ್ರಾಧಿಕಾರದ ಅಗತ್ಯವೇನಿದೆ? ಅನಗತ್ಯ ವೆಚ್ಚಕ್ಕೆ ದಾರಿ ಮಾಡುವ ಸಾಧ್ಯತೆ ಇದೆ.



ಕೃಷಿ ಮತ್ತು ತೋಟಗಾರಿಕೆಗೆ 2023-24 ರಲ್ಲಿ ₹5,860 ಕೋಟಿ ನಿಗದಿ ಮಾಡಲಾಗಿತ್ತು. ಈ ವರ್ಷ ₹6,688 ಕೋಟಿ ನಿಗದಿ ಮಾಡಲಾಗಿದೆ. ಕಳೆದ ಬಾರಿಗಿಂತ ₹828 ಕೋಟಿ ಮಾತ್ರ ಹೆಚ್ಚು ನೀಡಲಾಗಿದೆ. ಇಲಾಖೆಗಳ ವೇತನ, ಭತ್ಯೆ, ಪಿಂಚಣಿ ಮೊತ್ತ ಕಳೆದು ಕೃಷಿ ಅಭಿವೃದ್ಧಿಗೆ ಎಷ್ಟು ಉಳಿಯುತ್ತದೆ ಎಂಬುದು ಯಕ್ಷ ಪ್ರಶ್ನೆ?

ಗಿಗ್ ಕಾರ್ಮಿಕರಿಗೆ ಬೆಲ್ಲ

ಬೀದಿಬದಿ ವ್ಯಾಪಾರಿಗಳಿಗೆ ಬೇವು • ಹೊಸ ಘೋಷಣೆ ಇಲ್ಲ

ಪ್ರಜಾವಾಣಿ ವಾರ್ತೆ

ಸಾರಿಗೆ ಅಸಂಘಟಿತ ಕಾರ್ಮಿಕರಿಗೆ, ಗಿಗ್ ಕಾರ್ಮಿಕರಿಗೆ (ಸ್ವತಂತ್ರ ಕಾರ್ಮಿಕರು) ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ಸರ್ಕಾರ ಮುಂದಡಿ ಇಟ್ಟಿದೆ. ಆದರೆ, ಬೀದಿಬದಿ ವ್ಯಾಪಾರಸ್ಥರ ಅಭಿವೃದ್ಧಿಗಾಗಿ ಯಾವುದೇ ಕಾರ್ಯಕ್ರಮಗಳು ಘೋಷಣೆಯಾಗಿಲ್ಲ.



ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ ನಿಧಿ ಮತ್ತು ಕಲ್ಯಾಣ ಶುಲ್ಕ ಮಸೂದೆಯನ್ನು ಮಂಡಿಸಲಾಗುವುದು ಎಂದು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ. ಆನ್‌ಲೈನ್ ವಹಿವಾಟುಗಳ ಮೇಲೆ ಸೆಸ್ ವಿಧಿಸಿ ಕಾರ್ಯಕ್ರಮ ರೂಪಿಸಲಾಗುವುದು ಎಂದು ತಿಳಿಸಿದೆ.

ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ಸಾರಿಗೆ ವಾಹನಗಳ ಕಾರ್ಮಿಕರಿಗೆ ಭದ್ರತಾ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ಸರ್ಕಾರ ಹೊರಟಿದೆ. ವಾಣಿಜ್ಯ ಸಾರಿಗೆ ವಾಹನಗಳ ನೋಂದಣಿಯ ಮೇಲೆ ಸುಂಕವನ್ನು ವಿಧಿಸುವ ಮೂಲಕ ಅದಕ್ಕೆ ನಿಧಿ ಸಂಗ್ರಹಿಸಲು ನಿರ್ಧರಿಸಿದೆ. ಅಲ್ಲದೇ, ವಾಹನ ಚಾಲಕರಿಗೆ ನಿಲ್ದಾಣ/ಹೆದ್ದಾರಿ ಬದಿಯಲ್ಲಿ ಮೂಲಸೌಕರ್ಯ ಒದಗಿಸಲು ನಿರ್ಧರಿಸುವ ಮೂಲಕ ಲಾರಿ ಚಾಲಕರ ಬಹುಕಾಲದ ಬೇಡಿಕೆಗೆ ಸರ್ಕಾರ ಸ್ಪಂದಿಸಿದೆ.

ಆಶಾದೀಪ ಯೋಜನೆಯಡಿ ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನೀಡುವ ಸೌಲಭ್ಯಗಳನ್ನು ವಿಸ್ತರಿಸಲು ವಿವಿಧ ಕ್ರಮಗಳನ್ನು ಕೈಗೊಂಡಿದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ವಲಸೆ ಹೋದ ಸಂದರ್ಭದಲ್ಲಿ ಅವರಿಗೆ ತಾತ್ಕಾಲಿಕ ವಸತಿ ಸೌಲಭ್ಯ ಒದಗಿಸಲು ಆಯ್ದ 10 ಜಿಲ್ಲೆಗಳಲ್ಲಿ ₹100 ಕೋಟಿ ವೆಚ್ಚದಲ್ಲಿ ತಾತ್ಕಾಲಿಕ ವಸತಿ ಸಮುಚ್ಚಯಗಳನ್ನು ನಿರ್ಮಿಸಲು ನಿರ್ಧರಿಸುವ ಮೂಲಕ ಉತ್ತಮ ಹೆಜ್ಜೆ ಇಟ್ಟಿದೆ.

ಇ.ಎಸ್.ಐ ಯೋಜನೆಯಡಿ ₹311 ಕೋಟಿ ವೆಚ್ಚದಲ್ಲಿ ಸೂಪರ್ ಸ್ಪೆಷಾಲಿಟಿ ಸೇವೆ, ಡಿಜಿಟಲ್ ಡಯಾಗ್ನೊಸ್ಟಿಕ್ ಕಿಯೊಸ್ಕ್, ಮೊಬೈಲ್ ಹೆಲ್ತ್ ಯುನಿಟ್, 40 ವರ್ಷ ಮೇಲ್ಪಟ್ಟ ಕಾರ್ಮಿಕರಿಗೆ ಸಮಗ್ರ ಆರೋಗ್ಯ ತಪಾಸಣೆ, ವಿಮಾದಾರರಿಗೆ ಟೆಟನಸ್ ಮತ್ತು ಹೆಪಟೈಟಿಸ್ ಲಸಿಕೆ ಕಾರ್ಯಕ್ರಮ ಹಾಗೂ ರೋಗಪತ್ತೆಗೆ ಅತ್ಯಾಧುನಿಕ ಕೇಂದ್ರ ಸ್ಥಾಪನೆ ಮುಂತಾದ ಯೋಜನೆ ಕಾರ್ಮಿಕರ ಆರೋಗ್ಯ ರಕ್ಷಣೆಗೆ ಪೂರಕವಾಗಿದೆ.



ಆಯ್ದ ಗ್ರಾಮಗಳಿಗೆ 'ಹೊಂಬೆಳಕು'

ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಹೊಸ 'ಪಥ' ಯೋಜನೆ, ಪಂಚಾಯಿತಿಗಳ 'ಅರಿವು' ಕೇಂದ್ರಗಳ ಬಲವರ್ಧನೆ, 'ಸೌರ-ದೀಪ'ಗಳೊಂದಿಗೆ ಆಯ್ದ ಗ್ರಾಮಗಳಿಗೆ 'ಹೊಂಬೆಳಕು', ಮಹಿಳೆಯರ ಕೌಶಲ ಅಭಿವೃದ್ಧಿಗಾಗಿ ತರಬೇತಿ, ಹಿರಿಯ ನಾಗರಿಕರ ಆರೈಕೆಗಾಗಿ ಕೇಂದ್ರಗಳ ಆರಂಭ…

ಈ ಎಲ್ಲ ಯೋಜನೆಗಳೂ ರಾಜ್ಯದ ಆಯ್ದ ಗ್ರಾಮಗಳಲ್ಲಿ 'ಪೈಲಟ್' ಆಧಾರದಲ್ಲಿ ಅನುಷ್ಠಾನಗೊಳ್ಳಲಿವೆ. ಗ್ರಾಮಗಳ ರಸ್ತೆ ಅಭಿವೃದ್ಧಿಗೆ 'ಪ್ರಗತಿ ಪಥ' ಮತ್ತು 'ಕಲ್ಯಾಣ ಪಥ' ಎಂಬ ಎರಡು ಹೊಸ ಯೋಜನೆಗಳನ್ನು ಪ್ರಕಟಿಸಲಾಗಿದೆ. ಬಾಹ್ಯ ನೆರವಿನೊಂದಿಗೆ ಅನುಷ್ಠಾನಗೊಳ್ಳುವ 'ಪ್ರಗತಿಪಥ' ಯೋಜನೆಯಡಿ 189 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 50 ಕಿ.ಮೀ. ಉದ್ದದ ರಸ್ತೆಗಳಂತೆ, ಒಟ್ಟಾರೆ 9,450 ಕಿ.ಮೀ. ಉದ್ದದ ರಸ್ತೆ ಸಂಪರ್ಕ ಜಾಲ ₹5,200 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ. 'ಕಲ್ಯಾಣ ಪಥ' ಯೋಜನೆಯಡಿ ಕಲ್ಯಾಣ ಕರ್ನಾಟಕದ 38 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಮಾದರಿಯಲ್ಲಿ 1,150 ಕಿ.ಮೀ. ರಸ್ತೆಗಳನ್ನು ₹1,000 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತದೆ.

ಗ್ರಾಮ ಪಂಚಾಯಿತಿಗಳಲ್ಲಿರುವ 'ಅರಿವು' ಕೇಂದ್ರಗಳಿಗೆ ₹132 ಕೋಟಿ ವೆಚ್ಚದಲ್ಲಿ ಸ್ವಂತ ಕಟ್ಟಡ ನಿರ್ಮಾಣ ಮತ್ತು ಪುಸ್ತಕಗಳು, ಡಿಜಿಟಲ್ ಉಪಕರಣಗಳು ಹಾಗೂ ಅಂಗವಿಕಲ ಸ್ನೇಹಿ ಉಪಕರಣಗಳ ಪೂರೈಕೆ ಮಾಡಲಾಗುತ್ತದೆ.

ನರೇಗಾ ಯೋಜನೆ ಅನುಷ್ಠಾನಕ್ಕೆ 16 ಕೋಟಿ ಮಾನವ ದಿನಗಳ ಸೃಜನೆ, 30 ಲಕ್ಷ ಕುಟುಂಬಗಳಿಗೆ ಉದ್ಯೋಗ ನೀಡುವ ಗುರಿ ಹೊಂದಲಾಗಿದೆ. ಜಲಾನಯನ ಇಲಾಖೆಯ ಒಗ್ಗೂಡಿಸುವಿಕೆಯೊಂದಿಗೆ 5,000 ಎಕರೆ ಸವಳು-ಜವಳು ಭೂಮಿ ಸುಧಾರಿಸುವುದು, ಪ್ರತಿ ತಾಲ್ಲೂಕಿಗೆ ಕನಿಷ್ಠ 2ರಂತೆ ಬೂದು ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಗುರಿ ಹೊಂದಲಾಗಿದೆ.

ಬೀದಿ ದೀಪಗಳ ಮೀಟರಿಂಗ್: ವಿದ್ಯುತ್ ಬಳಕೆಯ ಮೇಲೆ ನಿಗಾವಹಿಸಲು, 50 ಗ್ರಾಮ ಪಂಚಾಯಿತಿಗಳಲ್ಲಿ 'ಹೊಂಬೆಳಕು' ಕಾರ್ಯಕ್ರಮದಡಿ ₹25 ಕೋಟಿ ವೆಚ್ಚದಲ್ಲಿ ಸೋಲಾರ್ ದೀಪಗಳ ಅಳವಡಿಸುವ ಜೊತೆಗೆ, 200 ಪಂಚಾಯಿತಿಗಳಲ್ಲಿ ಬೀದಿ ದೀಪಗಳ ವ್ಯವಸ್ಥಿತ ಮೀಟರಿಂಗ್ ವ್ಯವಸ್ಥೆ ಅಳವಡಿಕೆಗೆ ಕ್ರಮಗೊಳ್ಳಲಾಗುತ್ತಿದೆ. ಗ್ರಾಮ ಪಂಚಾಯಿತಿ ಹಳ್ಳಿಗಳಲ್ಲಿರುವ ಹಿರಿಯ ನಾಗರಿಕರ ಆರೈಕೆ ಬಗ್ಗೆಯೂ ಗಮನ, 100 ಗ್ರಾಮ ಪಂಚಾಯಿತಿಗಳ ಗ್ರಾಮಸ್ಥರ ಸಹಭಾಗಿತ್ವದೊಂದಿಗೆ ಹಿರಿಯ ನಾಗರಿಕರ ಆರೈಕೆ ಮತ್ತು ಚಿಕಿತ್ಸೆಗಾಗಿ 'ಆರೈಕೆ-ಉಪಶಮನ' ಕೇಂದ್ರ ಆರಂಭಿಸಲಾಗುತ್ತದೆ.

ಪ್ರತಿಕ್ರಿಯೆಗಳು



ಬಜೆಟ್‌ನ ಅಂಕಿ-ಅಂಶಗಳನ್ನು ನೋಡಿ ವಿಪಕ್ಷಗಳ ನಾಯಕರಿಗೆ ಸಂಕಟ. ಗ್ಯಾರಂಟಿಗಳಿಗೆ ಹಣ ಕೊಟ್ಟು ಇಷ್ಟು ಅಭಿವೃದ್ಧಿ ಕೆಲಸ ಮಾಡುತ್ತಿದ್ದಾರಲ್ಲ ಎಂದು ಅಸೂಯೆಯಿಂದ ಎದ್ದು ಹೋದರು.

ಡಿ.ಕೆ. ಶಿವಕುಮಾರ್, ಡಿಸಿಎಂ



ದೂರದೃಷ್ಟಿ, ಪ್ರಗತಿಯ ಮುನ್ನೋಟ ಇಲ್ಲದ ಬಜೆಟ್. ಯುವ ಜನರಿಗೆ, ಉತ್ತರ ಕರ್ನಾಟಕಕ್ಕೆ ಒಂದೂ ಕಾರ್ಯಕ್ರಮ, ಯೋಜನೆ ಪ್ರಕಟಿಸಿಲ್ಲ.

ಬಿ.ವೈ.ವಿಜಯೇಂದ್ರ
ಅಧ್ಯಕ್ಷ, ರಾಜ್ಯ ಬಿಜೆಪಿ ಘಟಕ



ಸರ್ಕಾರದಿಂದ ಯೋಜನೆ ಜಾರಿ ಮಾಡುವ ಮುನ್ನ ಡಿಪಿಆರ್ ತಯಾರಿಸುತ್ತಾರೆ. ಡಿಪಿಆರ್ ಆದ ಮೇಲೆ ಏನೆಲ್ಲಾ ಆಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿದೆ

ಎಚ್.ಡಿ. ಕುಮಾರಸ್ವಾಮಿ,
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ




ಮನಸ್ಸಿದ್ದರೆ, ಜೀವಪರ ಕಾಳಜಿ ಇದ್ದರೆ ಎಲ್ಲ ಸವಾಲುಗಳನ್ನು ಮೆಟ್ಟಿ ನಿಲ್ಲಬಹುದು ಎಂಬುದಕ್ಕೆ ಈ ಬಜೆಟ್ ಉದಾಹರಣೆ


ಬಿ.ಎನ್.ಚಂದ್ರಪ್ಪ
ಕೆಪಿಸಿಸಿ ಕಾರ್ಯಾಧ್ಯಕ್ಷ

ರೂಪಾಯಿ ಜಮೆ–ವೆಚ್ಚ: ಭಾರಿ ಬದಲಾವಣೆ

(ಆವರಣದಲ್ಲಿರುವುದು 2023–24ನೇ ಆರ್ಥಿಕ ವರ್ಷದ ಬಜೆಟ್ ವಿವರ)





- ಹಿಂದಿನ ಬಜೆಟ್‌ಗೆ ಹೋಲಿಸಿದರೆ ಈ ಬಜೆಟ್‌ನ ಜಮೆಯ ಲೆಕ್ಕಾಚಾರದಲ್ಲಿ ಗಣನೀಯ ಬದಲಾವಣೆ ಇದೆ
- ಹಿಂದಿನ ಬಜೆಟ್‌ನಲ್ಲಿ ಸಾಲದ ಪ್ರಮಾಣ 26 ಪೈಸೆಗಳಷ್ಟು ಇತ್ತು. ಈ ಬಜೆಟ್‌ನಲ್ಲಿ ಅದು 28 ಪೈಸೆಗಳಿಗೆ ಏರಿಕೆಯಾಗಿದೆ
- ರಾಜ್ಯ ತೆರಿಗೆ ಆದಾಯದ ಪ್ರಮಾಣದಲ್ಲೂ ತುಸು ಬದಲಾವಣೆ ಇದೆ. ತೆರಿಗೆ ಆದಾಯದ ಪ್ರಮಾಣವು 54 ಪೈಸೆಗಳಿಂದ 52 ಪೈಸೆಗಳಿಗೆ ಇಳಿಕೆಯಾಗಿದೆ. ಇಳಿಕೆಯಾದ 2 ಪೈಸೆಗಳ ಆದಾಯವನ್ನು ಸಾಲದ ಮೂಲಕ ಸಂಗ್ರಹಿಸಲು ಯೋಜಿಸಲಾಗಿದೆ



- ರೂಪಾಯಿ ವೆಚ್ಚದ ಲೆಕ್ಕಾಚಾರದಲ್ಲೂ ಗಣನೀಯ ಬದಲಾವಣೆಯಾಗಿರುವುದು ಸಮಾಜ ಕಲ್ಯಾಣಕ್ಕೆ ಸಂಬಂಧಿಸಿದ ವೆಚ್ಚಗಳಲ್ಲಿ
- ಹಿಂದಿನ ಬಜೆಟ್‌ನಲ್ಲಿ ಸಮಾಜ ಕಲ್ಯಾಣಕ್ಕೆ ರೂಪಾಯಿಯೊಂದರಲ್ಲಿ 8 ಪೈಸೆಗಳನ್ನು ವೆಚ್ಚ ಮಾಡಲಾಗುತ್ತಿತ್ತು. ಈ ಬಜೆಟ್‌ನಲ್ಲಿ ವೆಚ್ಚ ಪ್ರಮಾಣವನ್ನು 15 ಪೈಸೆಗಳಿಗೆ ಏರಿಕೆ ಮಾಡಲಾಗಿದೆ
- ಸಾಲ ವಾಪಸಾತಿಗೆ ಮಾಡುತ್ತಿದ್ದ ವೆಚ್ಚವೂ ತುಸು (19 ಪೈಸೆಯಿಂದ 18 ಪೈಸೆಗೆ) ಇಳಿಕೆಯಾಗಿದೆ
- ಆದರೆ ಕೃಷಿ, ನೀರಾವರಿ ಮತ್ತು ತೋಟಗಾರಿಕೆ ಕ್ಷೇತ್ರಕ್ಕೆ ಮಾಡುತ್ತಿದ್ದ ವೆಚ್ಚವು 17 ಪೈಸೆಗಳಿಂದ 14 ಪೈಸೆಗಳಿಗೆ ಇಳಿಕೆಯಾಗಿದೆ

1 ಲಕ್ಷ ಕೋಟಿ ಮೀರಿದ ಸಾಲ









ಪ್ರಜಾವಾಣಿ

ಶನಿವಾರ, 17 ಫೆಬ್ರುವರಿ 2024

ಕೊಳೆಗೇರಿ ಜನರಿಗೆ ಮನೆ, ಸೆಸ್ ಪರಿಷ್ಕರಣೆ

ವಸತಿ ಸೌಲಭ್ಯ ಕಲ್ಪಿಸಲು ಕ್ರಮಕೈಗೊಳ್ಳದ ಹಿಂದಿನ ಬಿಜೆಪಿ ಸರ್ಕಾರದ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದ್ದಾರೆ. ನಮ್ಮ ಹಿಂದಿನ ಅವಧಿಯಲ್ಲಿ 14.54 ಲಕ್ಷ ಮನೆಗಳನ್ನು ನಿರ್ಮಿಸಲಾಗಿತ್ತು. 2019 ರಿಂದ 2023ರ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಿರ್ಮಿಸಲಾದ ಮನೆಗಳ ಸಂಖ್ಯೆ ಕೇವಲ 5.19 ಲಕ್ಷ ಎಂದು ಉಲ್ಲೇಖಿಸಿದ್ದಾರೆ.

ಬಾಕಿ ಉಳಿದಿರುವ 12 ಲಕ್ಷ ಮನೆಗಳ ನಿರ್ಮಾಣದ ಹೊಣೆಗಾರಿಕೆ ನಮ್ಮ ಸರ್ಕಾರದ ಮುಂದಿದೆ ಎಂದು ವಿವರಿಸಿದ್ದಾರೆ.

- 2023-2024ನೇ ಸಾಲಿನಲ್ಲಿ 3 ಲಕ್ಷ ಮನೆಗಳ ನಿರ್ಮಾಣ ಪೂರ್ಣ. 2024-25ರಲ್ಲಿ ಮೂರು ಲಕ್ಷ ಮನೆಗಳ ನಿರ್ಮಾಣದ ಗುರಿ. ರಾಜ್ಯದಲ್ಲಿ ವಸತಿರಹಿತರ ಸಂಖ್ಯೆ ಗುರುತಿಸಲು ಸಮೀಕ್ಷೆ
- ಕೊಳೆಗೇರಿ ಅಭಿವೃದ್ಧಿ ಮಂಡಳಿ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ (ಎ.ಎಚ್.ಪಿ.) ಅಡಿ 1,18,359 ಮನೆ ನಿರ್ಮಾಣ. ವಂತಿಗೆ ರೂಪದಲ್ಲಿ ನಿಗದಿ ಮಾಡಿದ್ದ ₹ 5 ಲಕ್ಷದಿಂದ ₹ 1 ಲಕ್ಷಕ್ಕೆ ಇಳಿಕೆ. ಶೀಘ್ರದಲ್ಲೇ 48,796 ಮನೆ ನಿರ್ಮಾಣ ಪೂರ್ಣಗೊಳಿಸಿ ನಿವಾಸಿಗಳಿಗೆ ಹಸ್ತಾಂತರ
- ನಗರ ಪ್ರದೇಶದ ಬಡ ನಿವಾಸಿಗಳಿಗೆ ಕೈಗೆಟಕುವ ದರದಲ್ಲಿ ವಸತಿ ಸೌಲಭ್ಯ ಒದಗಿಸಲು ಸಂಪನ್ಮೂಲ ಕ್ರೋಡೀಕರಣ
- ಆಸ್ತಿ ನಗದೀಕರಣ, ವಸತಿ ಸೆಸ್ ಮತ್ತು ವಿವಿಧ ಶುಲ್ಕ ವಿಧಿಸುವ ಮೂಲಕ ಸಂಪನ್ಮೂಲ ಕ್ರೋಡೀಕರಿಸಿ 'ಕರ್ನಾಟಕ ಕೈಗೆಟಕುವ ವಸತಿ ನಿಧಿ ಸ್ಥಾಪನೆ.
- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆಯಡಿ ಕೊಳೆಗೇರಿ ಸೆಸ್ ದರ ಪರಿಷ್ಕರಣೆ
- ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಸ್ಥಿರ ಆಸ್ತಿಗಳಿಂದ ಸಂಪನ್ಮೂಲ ಸೃಜಿಸಲು ಕ್ರಮ
- ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವು 2023-24 ನೇ ಸಾಲಿನಲ್ಲಿ ಡೆವಲಪರ್‌ಗಳಿಗೆ ₹ 40 ಕೋಟಿ ದಂಡ ವಿಧಿಸಿದೆ.

₹200 ಕೋಟಿ ಅಮೃತ್ 2.0 ಯೋಜನೆಯಡಿ 7.5 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ

₹88,150 ಕೋಟಿ 2023–24ನೇ ಸಾಲಿನಲ್ಲಿ ಹೂಡಿಕೆಯಾಗಿರುವ ಮೊತ್ತ

ಎಲೆಕ್ಟ್ರಾನಿಕ್ ಸಿಸ್ಟಂ ಡಿಸೈನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್ (ಇಎಸ್‌ಡಿಎಂ), ವಿದ್ಯುತ್ ಚಾಲಿತ ವಾಹನಗಳಿಗೆ ಲಿಥಿಯಂ ಅಯಾನ್ ಬ್ಯಾಟರಿ ತಯಾರಿಕೆ, ತಯಾರಿಕಾ ವಲಯ, ಆಟೊಮೊಬೈಲ್, ದೇಟಾ ಸೆಂಟರ್ ಮತ್ತಿತರ ವಲಯಗಳಲ್ಲಿ ಈ ಹೂಡಿಕೆ ಮಾಡಲಾಗಿದೆ.

ಹೂಡಿಕೆಯ ಭರವಸೆ ಉದ್ಯೋಗದ ಆಸೆ



• ಸಚ್ಚಿದಾನಂದ ಕುರಗುಂದ

ಕೈಗಾರಿಕೆ ವಲಯದಲ್ಲಿ ಉದ್ಯೋಗ ಸೃಷ್ಟಿ ಭರವಸೆ ಮೂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಂಪನ್ಮೂಲ ಕ್ರೋಡೀಕರಣಕ್ಕೆ ಆಸ್ತಿಗಳ ನಗದೀಕರಣದ ನೀತಿಗೆ ಮೊರೆಹೋಗಿದ್ದಾರೆ.

ಕೈಗಾರಿಕಾ ಅಭಿವೃದ್ಧಿಯಲ್ಲಿ ಕರ್ನಾಟಕದ ಉನ್ನತ ಸ್ಥಾನವನ್ನು ಉಳಿಸಿಕೊಳ್ಳಲು ಹಾಗೂ ಇನ್ನೂ ಹೆಚ್ಚು ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಹೊಸ ಕೈಗಾರಿಕಾ ನೀತಿ ರೂಪಿಸುವುದಾಗಿ ಪ್ರಕಟಿಸಿದ್ದಾರೆ. ಇದಕ್ಕೆ ಪೂರಕವಾಗಿ 2025ರ ಫೆಬ್ರುವರಿಯಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ಆಯೋಜಿಸುವುದಾಗಿಯೂ ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ.

ಹೊಸ ಜವಳಿ ನೀತಿ, ಸುಲಭವಾಗಿ ಮರಳು ಒದಗಿಸುವುದೂ ಸೇರಿ ಹಲವು ಹೊಸ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸಿದ್ದರೂ ನಿರ್ದಿಷ್ಟ ಮೊತ್ತ ನಿಗದಿ ಪಡಿಸಿಲ್ಲ. ಬಹುತೇಕ ಯೋಜನೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳುವುದಾಗಿ ಪ್ರಕಟಿಸಿದ್ದಾರೆ.

ಬೆಂಗಳೂರು ಸಮೀಪ ಸುಮಾರು ಎರಡು ಸಾವಿರ ಎಕರೆ ಪ್ರದೇಶದಲ್ಲಿ ವಿಶ್ವ ದರ್ಜೆಯ ಜ್ಞಾನ, ಆರೋಗ್ಯ ರಕ್ಷಣೆ, ನಾವೀನ್ಯ ಮತ್ತು ಸಂಶೋಧನಾ ನಗರ (ಕೆಚ್‌ಐಆರ್ ಸಿಟಿ) ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಿಂದ ಅಂದಾಜು ₹40 ಸಾವಿರ ಕೋಟಿ ಬಂಡವಾಳ ಹೂಡಿಕೆಯಾಗಲಿದ್ದು, ಸುಮಾರು 80 ಸಾವಿರ ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆಯಿದೆ ಎಂದು ಮುಖ್ಯಮಂತ್ರಿ ಪ್ರತಿಪಾದಿಸಿದ್ದಾರೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಸಹಭಾಗಿತ್ವದಲ್ಲಿ ಬೆಂಗಳೂರು-ಮುಂಬೈ ಆರ್ಥಿಕ ಕಾರಿಡಾರ್ ಯೋಜನೆಯಡಿ ಧಾರವಾಡ ಸಮೀಪ ಸುಮಾರು 6,000 ಎಕರೆ ಜಮೀನಿನಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಒತ್ತು ನೀಡುವ ಸಂಬಂಧ 'ಕೈಗಾರಿಕಾ ನೋಡ್' ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಇದರಿಂದ ಉತ್ತರ ಕರ್ನಾಟಕದ ನಿರುದ್ಯೋಗ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಹಾಗೂ ಆರ್ಥಿಕತೆಗೆ ಉತ್ತೇಜನ ನೀಡಲು ತೀರ್ಮಾನಿಸಲಾಗಿದೆ.

ಮೆಗಾ ಟೆಕ್ಸ್‌ಟೈಲ್ ಪಾರ್ಕ್: ರಾಜ್ಯದಲ್ಲಿ ಜವಳಿ ಹಾಗೂ ನೇಕಾರಿಕೆ ಅಭಿವೃದ್ಧಿ, ಬಂಡವಾಳ ಹೂಡಿಕೆ ಹಾಗೂ ಉದ್ಯೋಗ ಸೃಷ್ಟಿಸಲು 2024-29ರ ಅವಧಿಗೆ ₹10 ಸಾವಿರ ಕೋಟಿ ಬಂಡವಾಳ ಹೂಡಿಕೆ ಹಾಗೂ 2 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿಯೊಂದಿಗೆ ಹೊಸ ಜವಳಿ ನೀತಿಯನ್ನು ಜಾರಿಗೊಳಿಸಲಾಗುವುದು ಎಂದು ತಿಳಿಸಲಾಗಿದೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ಕಲಬುರಗಿ ಜಿಲ್ಲೆಯ 1,000 ಎಕರೆ ಪ್ರದೇಶದಲ್ಲಿ ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಮೆಗಾ ಟೆಕ್ಸ್‌ಟೈಲ್ ಪಾರ್ಕ್ ಸ್ಥಾಪಿಸಲಾಗುತ್ತಿದೆ. ಇದರಿಂದ 1 ಲಕ್ಷ ಜನರಿಗೆ ನೇರ ಉದ್ಯೋಗ ಹಾಗೂ 2 ಲಕ್ಷ ಜನರಿಗೆ ಪರೋಕ್ಷ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯಿದೆ. ಈ ಯೋಜನೆಗೆ ಪೂರಕವಾದ ಮೂಲಸೌಕರ್ಯಕ್ಕಾಗಿ ₹50 ಕೋಟಿ ಅನುದಾನ ಒದಗಿಸಲು ಉದ್ದೇಶಿಸಲಾಗಿದೆ.

ಮೈಶುಗರ್ ಹೊಸ ಕಾರ್ಖಾನೆ

ಮಂಡ್ಯದ ಮೈಶುಗರ್ ಕಾರ್ಖಾನೆಯ ಆವರಣದಲ್ಲಿ ಹೊಸ ಸಕ್ಕರೆ ಕಾರ್ಖಾನೆ ನಿರ್ಮಿಸುವುದಾಗಿ ಘೋಷಿಸಲಾಗಿದೆ. ಸರ್ಕಾರದ ಅನುದಾನ, ಇತರೆ ಮೂಲಗಳು ಹಾಗೂ ಕಾರ್ಖಾನೆಯ ಆಸ್ತಿ ನಗದೀಕರಣಗೊಳಿಸುವ ಮೂಲಕ ಸಂಪನ್ಮೂಲ ಕ್ರೋಡೀಕರಿಸಲು ಉದ್ದೇಶಿಸಲಾಗಿದೆ.

ಕಿತ್ತೂರು ಕರ್ನಾಟಕ, ಕಲ್ಯಾಣ ಕರ್ನಾಟಕ (ರಾಯಚೂರು) ಮತ್ತು ಮೈಸೂರು ವಿಭಾಗದಲ್ಲಿ ನೂತನ ಜವಳಿ ಪಾರ್ಕ್‌ಗಳನ್ನು ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಪ್ರಾರಂಭಿಸಲಾಗುವುದು. ಇದರಿಂದ 10 ಸಾವಿರ ಉದ್ಯೋಗ ಸೃಷ್ಟಿಯಾಗಲಿದೆ.

ಬಳ್ಳಾರಿಯಲ್ಲಿ ಅಸಂಘಟಿತವಾಗಿರುವ ಜೀನ್ಸ್ ಉದ್ದಿಮೆಗಳನ್ನು ಸಂಘಟಿಸಿ, ವಿಶ್ವದರ್ಜೆಗೆ ಉನ್ನತೀಕರಿಸಲು ಮೂಲಸೌಕರ್ಯಗಳನ್ನು ಒಳಗೊಂಡಂತೆ ಜೀನ್ಸ್ ಅಪಾರೆಲ್ ಪಾರ್ಕ್ ಹಾಗೂ ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಪ್ರಕಟಿಸಲಾಗಿದೆ.

ಜವಳಿ ಪಾರ್ಕ್‌ಗಳು ಇಲ್ಲದಿರುವ ರಾಜ್ಯದ 25 ಜಿಲ್ಲೆಗಳಲ್ಲಿ ಮಿನಿ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸುವ ಉದ್ದಿಮೆದಾರರಿಗೆ ಮೂಲಸೌಕರ್ಯಕ್ಕಾಗಿ ಜವಳಿ ನೀತಿ ಅನ್ವಯ ಸಹಾಯಧನ ನೀಡಲಾಗುವುದು ಎಂದೂ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಗ್ರಾಮೀಣ ಜನರಲ್ಲಿ ಆರ್ಥಿಕ ಶಿಸ್ತು ಮತ್ತು ಉಳಿತಾಯ ಮನೋಭಾವ ಉತ್ತೇಜಿಸಲು ಎಂಎಸ್‌ಐಎಲ್ ವತಿಯಿಂದ ಚಿಟ್‌ಫಂಡ್ ಅನ್ನು ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಿಸುವ ಪ್ರಸ್ತಾವವಿದೆ.

ಕೈಗಾರಿಕಾ ವಸಾಹತುಗಳು ಮೇಲ್ದರ್ಜೆಗೆ: ವಿವಿಧ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿರುವ ಕೈಗಾರಿಕಾ ವಸಾಹತುಗಳನ್ನು ಕೇಂದ್ರ ಸರ್ಕಾರದ ಸಹಯೋಗದಲ್ಲಿ ₹39 ಕೋಟಿ ಅಂದಾಜು ವೆಚ್ಚದಲ್ಲಿ ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕೆಗಳ ನಿಗಮದ (ಕೆ ಎ ಸ್ ಎ ಸ್ ಐ ಡಿ ಸಿ) ಮೂಲಕ ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ.


ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಷೇರು ವಿನಿಮಯ ಕೇಂದ್ರಗಳಲ್ಲಿ ಷೇರುಗಳನ್ನು ಸಾರ್ವಜನಿಕರು ಖರೀದಿಸುವಂತೆ ಮುಕ್ತಗೊಳಿಸಲು (ಐಪಿಒ) ತಗಲುವ ವೆಚ್ಚದಲ್ಲಿ ಗರಿಷ್ಠ ಮಿತಿ ₹25 ಲಕ್ಷಗಳಿಗೆ ಒಳಪಟ್ಟು ಶೇ 50ರಷ್ಟು ಸಹಾಯಧನ ನೀಡಲು ಉದ್ದೇಶಿಸಲಾಗಿದೆ.

ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಗಳಿಗೆ ವಿಶೇಷ ಘಟಕ ಯೋಜನೆಯಡಿ ಕರ್ನಾಟಕ ಚರ್ಮ ಮತ್ತು ಫ್ಯಾಷನ್ ತಂತ್ರಜ್ಞಾನ ಸಂಸ್ಥೆಯಲ್ಲಿ (ಕೆಐಎಲ್‌ಟಿ) 'ಡಿಪ್ಲೊಮಾ ಇನ್ ಲೆದರ್ ಅಂಡ್ ಫ್ಯಾಶನ್ ಟೆಕ್ನಾಲಜಿ ಕೋರ್ಸ್' ಮಾಡಲು ಪ್ರೋತ್ಸಾಹಧನ ನೀಡಲಾಗುವುದು ಎಂದು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ.

ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ನಿಗದಿತ ಬೆಲೆಯಲ್ಲಿ ಮರಳು ಲಭ್ಯವಾಗುವಂತೆ ಮಾಡಲು ಹೊಸ ಮರಳು ನೀತಿ–2020 ಅನ್ನು ಅನುಮೋದಿಸಲಾಗಿದೆ. ಈ ನೀತಿ ಜಾರಿಗೊಂಡಲ್ಲಿ ಸಾರ್ವಜನಿಕರಿಗೆ ಯೋಗ್ಯ ದರದಲ್ಲಿ ಮರಳನ್ನು ಒದಗಿಸುವುದು ಸಾಧ್ಯವಾಗಲಿದೆ.

ಕೈಗಾರಿಕಾ ಕ್ಷೇತ್ರಕ್ಕೆ ಅನುದಾನ ಏರಿಕೆ

(ಕೋಟಿಗಳಲ್ಲಿ)



43% ಸಣ್ಣ ಕೈಗಾರಿಕೆಗಳ ಅನುದಾನದಲ್ಲಿ ಆದ ಏರಿಕೆ ಪ್ರಮಾಣ

22.4% ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಅನುದಾನದಲ್ಲಿ ಆದ ಏರಿಕೆ ಪ್ರಮಾಣ

ಇನ್ನಷ್ಟು ಉಪನಗರ

- ಬೆಂಗಳೂರಿನ ಹೊರವಲಯದಲ್ಲಿರುವ ದೇವನಹಳ್ಳಿ, ನೆಲಮಂಗಲ, ಹೊಸಕೋಟೆ, ದೊಡ್ಡಬಳ್ಳಾಪುರ, ಮಾಗಡಿ ಮತ್ತು ಬಿಡದಿಯಲ್ಲಿ ರಸ್ತೆ ಮತ್ತು ರೈಲು ಸಂಪರ್ಕದೊಂದಿಗೆ ಉಪನಗರ ಟೌನ್‌ಶಿಪ್‌ಗಳನ್ನಾಗಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.
- ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ 2.0 ಅಡಿ ರಾಜ್ಯದ 10 ಮಹಾನಗರ ಪಾಲಿಕೆಗಳಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿಗೆ ₹ 2,000 ಕೋಟಿ ಅನುದಾನ
- ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಕಲಬುರಗಿ, ಕೆ.ಜಿ.ಎಫ್, ತುಮಕೂರಿನ ವಸಂತನರಸಾಪುರ ಮತ್ತು ಬಳ್ಳಾರಿ ನಗರ ಸಮೀಪದಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ಅಭಿವೃದ್ಧಿ
- ಮೈಸೂರು ನಗರಕ್ಕೆ ಪೆರಿಫೆರಲ್ ಹೊರ ವರ್ತುಲ ರಸ್ತೆಯನ್ನು ಖಾಸಗಿ ಸಹಭಾಗಿತ್ವದಲ್ಲಿ ಅಥವಾ ಟೌನ್ ಪ್ಲಾನಿಂಗ್ ಮಾದರಿಯಲ್ಲಿ ನಿರ್ಮಿಸಲು ಕಾರ್ಯಸಾಧ್ಯತಾ ವರದಿ ತಯಾರಿ
- ನಗರ ಪ್ರದೇಶದ ಎಲ್ಲ ಮನೆಗಳಿಗೆ ಕುಡಿಯುವ ನೀರು ಒದಗಿಸಲು ಅಮೃತ್ 2.0 (ಕೇಂದ್ರ ಪುರಸ್ಕೃತ) ಯೋಜನೆ ಅನುಷ್ಠಾನ. ರಾಜ್ಯದ ಪಾಲಿನ ₹4,615 ಕೋಟಿ ಪೈಕಿ ಕಳೆದ ವರ್ಷ ₹ 320 ಕೋಟಿ ಅನುದಾನ. ಈ ಬಾರಿ ₹ 200 ಕೋಟಿ ಅನುದಾನ ನೀಡಿ, 7.5 ಲಕ್ಷ ಮನೆಗಳಿಗೆ ನಲ್ಲಿ ಸಂಪರ್ಕ
- ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್ 2.0 ಅಡಿ ದ್ರವ ಹಾಗೂ ಘನ ತ್ಯಾಜ್ಯ ಸಂಸ್ಕರಣೆಗೆ ₹ 5,072 ಕೋಟಿ ವೆಚ್ಚ (ಕೇಂದ್ರ ಸರ್ಕಾರದ ಪಾಲು ₹ 2,185 ಕೋಟಿ).
- ಸ್ಥಳೀಯ ಸಂಸ್ಥೆ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಅಮೃತ್ 2.0 ಯೋಜನೆ ಅಡಿ ₹ 539 ಕೋಟಿ ಮೊತ್ತದಲ್ಲಿ ಕೆರೆ ಹಾಗೂ ಜಲ ಮೂಲಗಳ ಪುನಶ್ಚೇತನ, ಉದ್ಯಾನಗಳ ಅಭಿವೃದ್ಧಿ
- ನಗರ ಪ್ರದೇಶಗಳಲ್ಲಿ ಆಸ್ತಿಗಳ ಅಕ್ರಮ ನೋಂದಣಿ ತಡೆಯಲು ಹಾಗೂ ಆಸ್ತಿ ನೋಂದಣಿ ಮತ್ತು ಖಾತಾ ನಮೂದು ಸರಳೀಕರಣಗೊಳಿಸಲು, ಕಾವೇರಿ ಮತ್ತು ಇ-ಆಸ್ತಿ ತಂತ್ರಾಂಶಗಳ ಸಂಯೋಜನೆ.
- ಆಸ್ತಿ ತೆರಿಗೆ ಮತ್ತು ಇತರೆ ಶುಲ್ಕವನ್ನು ಪರಿಣಾಮಕಾರಿಯಾಗಿ ವಸೂಲಿ ಮಾಡಲು ಹಾಗೂ ತೆರಿಗೆ ಸೋರಿಕೆ ತಡೆಗಟ್ಟಲು '3ಡಿ' ಡ್ರೋನ್ ತಂತ್ರಜ್ಞಾನ ಬಳಸಿ ಮೌಲ್ಯಮಾಪನ
- ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕ ವಸೂಲಿ ಮಾಡಲು ಸ್ಥಳೀಯ ಮಹಿಳಾ ಸ್ವ-ಸಹಾಯ ಗುಂಪುಗಳ ಸಹಕಾರ
- ಒಂದು ಲಕ್ಷಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ಎಲ್ಲ ಸ್ಥಳೀಯ ಯೋಜನಾ ಪ್ರಾಧಿಕಾರಗಳನ್ನು ನಗರಾಭಿವೃದ್ಧಿ ಪ್ರಾಧಿಕಾರಗಳನ್ನಾಗಿ ಉನ್ನತೀಕರಿಸುವ ನಿರ್ಧಾರ
- ಎಲ್ಲ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಡೆಯುವ ಸಭೆಗಳ ಕಾರ್ಯಕಲಾಪ ನೇರ ಪ್ರಸಾರಕ್ಕೆ ಕ್ರಮ
- ನೇರ ಪಾವತಿ ಅಡಿ ಕಾರ್ಯನಿರ್ವಹಿಸುತ್ತಿರುವ 24,005 ಪೌರಕಾರ್ಮಿಕರನ್ನು ಕಾಯಂಗೊಳಿಸಲು ಸರ್ಕಾರದಿಂದ ಅನುಮೋದನೆ ನೀಡಲಾಗಿದೆ. ನೇರ ಪಾವತಿ ಅಡಿಯಲ್ಲಿ ಬಾಕಿ ಉಳಿದಿರುವ ಪೌರಕಾರ್ಮಿಕರನ್ನು ಹಂತ ಹಂತವಾಗಿ ಕಾಯಂಗೊಳಿಸಲು ಕ್ರಮ

ತಜ್ಞರ ಅಭಿಪ್ರಾಯ

ಉದ್ಯಮಿಗಳಲ್ಲಿ ಆಶಾಭಾವ



ಕೈಗಾರಿಕಾ ಕ್ಷೇತ್ರದ ಎಲ್ಲ ಮಜಲುಗಳನ್ನೂ ತಲುಪಿರುವ ಬಜೆಟ್, ಉದ್ಯಮಿಗಳಲ್ಲಿ ಆಶಾಭಾವ ಮೂಡಿಸಿದೆ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳ ಸಂಪರ್ಕ ವೃದ್ಧಿಗೆ ₹1,600 ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿಗೊಳಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಜತೆಗೆ, ರಸ್ತೆಗಳು ಮತ್ತು ಬಂದರುಗಳ ಅಭಿವೃದ್ಧಿಯ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಪ್ರಸ್ತುತ ರಾಜ್ಯದ ಬಹುಪಾಲು ರಫ್ತು ಉತ್ಪನ್ನಗಳು ಚೆನ್ನೈ ಬಂದರು ಮೂಲಕ ರವಾನೆಯಾಗುತ್ತವೆ. ನಮ್ಮ ಕರಾವಳಿ ಜಿಲ್ಲೆಗಳ ಬಂದರುಗಳು ಉನ್ನತೀಕರಣಗೊಂಡರೆ, ಉತ್ಪನ್ನಗಳನ್ನು ಸ್ಥಳೀಯ ಬಂದರುಗಳ ಮೂಲಕ ರವಾನಿಸಬಹುದು. ಇದರಿಂದ ಸ್ಥಳೀಯ ಮಾರುಕಟ್ಟೆ ಉನ್ನತಿಗೇರುತ್ತದೆ. ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಜವಳಿ, ನೇಕಾರಿಕೆ ಅಭಿವೃದ್ಧಿ, ಟೆಕ್ಸ್‌ಟೈಲ್ ಪಾರ್ಕ್ ನಿರ್ಮಾಣದ ಪ್ರಸ್ತಾವವು, ಕೈಗಾರಿಕೆಗಳ ವಿಸ್ತರಣೆಗೆ ಪೂರಕವಾಗಿದೆ. ಇದರಿಂದಾಗಿ 4 ಲಕ್ಷಕ್ಕೂ ಅಧಿಕ ಉದ್ಯೋಗ ಸೃಷ್ಟಿಗೆ ಅವಕಾಶವಾಗಲಿದೆ. ಉದ್ಯೋಗ ವಲಸೆಯ ಪ್ರಮಾಣ ತಗ್ಗಬಹುದು.

2025ರ ಫೆಬ್ರುವರಿಯಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಸುವ ಭರವಸೆಯು ಕೈಗಾರಿಕಾ ಕ್ಷೇತ್ರಕ್ಕೆ ಹೊಸ ಚೈತನ್ಯ ನೀಡಲಿದೆ. ಐಐಎಂ- ಬಿ ಸಹಭಾಗಿತ್ವದಲ್ಲಿ ಮಹಿಳಾ ಉದ್ಯಮಿಗಳ ಸಬಲೀಕರಣದ ಪ್ರಸ್ತಾವ ಮಹಿಳೆಯರಲ್ಲಿ ಹೊಸ ಹುಮ್ಮಸ್ಸು ಮೂಡಿಸಿದೆ. ಆದರೆ, ಬಜೆಟ್‌ನಲ್ಲಿ ಹೇಳಿರುವ ಎಲ್ಲ ಭರವಸೆಗಳು ನಿಗದಿತ ಅವಧಿಯಲ್ಲಿ ಅನುಷ್ಠಾನಗೊಳ್ಳುವುದು ಮುಖ್ಯ. ಆಶ್ವಾಸನೆಗಳು ಅನುಷ್ಠಾನಕ್ಕೆ ಬಂದಾಗ ಮಾತ್ರ ನಿಜವಾದ ಯಶಸ್ಸು.

ಎಂ. ಆತ್ಮಿಕಾ ಅಮಿನ್, ಉದ್ಯಮಿ, ಚೇರ್ ಪರ್ಸನ್, ಯಂಗ್ ಇಂಡಿಯನ್ಸ್ ಮಂಗಳೂರು ಚಾಪ್ಟರ್

ಆರ್ಥಿಕ ಬೆಳವಣಿಗೆಗೆ ಪೂರಕ



ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಬಹುಮುಖ್ಯ ಪಾತ್ರ ವಹಿಸುವ ಸಾರಿಗೆ ವ್ಯವಸ್ಥೆಯು ವ್ಯಾಪಾರೋದ್ಯಮಗಳ ಸರಪಳಿಯನ್ನು ನಿರ್ಮಿಸುತ್ತದೆ. ಈ ಬಾರಿಯ ಬಜೆಟ್‌ನಲ್ಲಿ ರಾಜ್ಯದ ಸುಮಾರು 2 ಸಾವಿರ ಕಿ.ಮೀ. ಉದ್ದದ ಹೆದ್ದಾರಿಗಳು, ಮೇಲುಸೇತುವೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ನಿರ್ಧಾರವು ಆಶಾದಾಯಕ ಬೆಳವಣಿಗೆ.

ಮಂಗಳೂರು ಬಂದರಿನಿಂದ ಬೆಂಗಳೂರು ಹಾಗೂ ಬೆಂಗಳೂರಿನಿಂದ ಬೀದರ್‌ವರೆಗೆ ಸಂಪರ್ಕ ಕಲ್ಪಿಸುವ ಎರಡು ಆರ್ಥಿಕ ಕಾರಿಡಾರ್‌ಗಳ ನಿರ್ಮಾಣದಿಂದ ರಾಜ್ಯದೆಲ್ಲೆಡೆಯಿಂದ ಸರಕು ಸಾಗಣೆ ಹಾಗೂ ವಿದೇಶಗಳಿಗೆ ಉತ್ಪನ್ನಗಳನ್ನು ರಫ್ತು ಮಾಡಲು ಸಹಕಾರಿಯಾಗಲಿದೆ. ಕೇಂದ್ರ ಸರ್ಕಾರವು ಅನುಷ್ಠಾನಗೊಳಿಸುತ್ತಿರುವ ಜಲ ಮತ್ತು ವಾಯು ಸಾರಿಗೆ ಯೋಜನೆಗಳ ಜೊತೆಗೂಡಿ, ನಾಡಿನ ಕರಾವಳಿ ತೀರಪ್ರದೇಶ, ಮೈಸೂರು, ಹಾಸನ, ರಾಯಚೂರು, ವಿಜಯಪುರದ ವಿಮಾನ ನಿಲ್ದಾಣಗಳ ಅಭಿವೃದ್ಧಿಗೆ ಆರ್ಥಿಕ ಸಹಾಯ ನೀಡಿರುವುದು ಶ್ಲಾಘನೀಯ. ಮುಂದಿನ ದಿನಗಳಲ್ಲಿ ಕೈಗಾರಿಕೆಗಳನ್ನು ಆಕರ್ಷಿಸಲು ಈ ಪ್ರಯತ್ನವು ಹೆಚ್ಚು ಅನುಕೂಲಕರವಾಗಿದೆ.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ನಿರ್ಮಿಸಲಾಗುತ್ತಿರುವ ಸಿಗ್ನೇಚರ್ ಬಿಸಿನೆಸ್ ಪಾರ್ಕ್, ಜಾಗತಿಕ ಮಟ್ಟದ ಹೂಡಿಕೆಗೆ ಬೆಂಗಳೂರನ್ನು ಬಹುದೊಡ್ಡ ಆಕರ್ಷಣೆಯ ಕೇಂದ್ರಬಿಂದುವಾಗಿಸಲಿದೆ. ಇಂತಹ ಮೂಲಸೌಕರ್ಯಗಳು ರಾಜ್ಯದೆಲ್ಲೆಡೆ ಹಲವು ಕೈಗಾರಿಕೆ, ನವ ಉದ್ಯಮ ಹಾಗೂ ಹೂಡಿಕೆಗೆ ಪ್ರಶಸ್ತ ವಾತಾವರಣ ಕಲ್ಪಿಸಿಕೊಡಲಿವೆ.

ಪ್ರೊ. ಬಿ. ಸದಾಶಿವೇಗೌಡ, ಶಿಕ್ಷಣ–ಆರ್ಥಿಕ ತಜ್ಞ, ಮೈಸೂರು

ಬದಲಾಗಲಿ ಜಾರಿ ವಿಧಾನ



ನಗರಾಭಿವೃದ್ಧಿಗೆ ಸರ್ಕಾರ ಹಲವು ಮಹತ್ವದ ಘೋಷಣೆಗಳನ್ನು ಮಾಡಿದೆ. ಆದರೆ, ನಗರಗಳ ಅಭಿವೃದ್ಧಿ ಅನುಷ್ಠಾನದ ವಿಧಾನಗಳನ್ನು ಬದಲಿಸಿಕೊಳ್ಳದಿದ್ದರೆ ಸಾವಿರಾರು ಕೋಟಿ ಮೊತ್ತದ ಯೋಜನೆಗಳು ವಿಫಲವಾಗುತ್ತವೆ. ಅದಕ್ಕೆ ಕೇಂದ್ರ ಸರ್ಕಾರದ 'ಸ್ಮಾರ್ಟ್‌ಸಿಟಿ' ಯೋಜನೆ ಅತ್ಯುತ್ತಮ ಉದಾಹರಣೆ.

'ಸ್ಮಾರ್ಟ್ ಸಿಟಿ' ಯೋಜನೆಯಲ್ಲಿ ಆಯ್ದ ನಗರಗಳ ಅಭಿವೃದ್ಧಿಗೆ ಕೇಂದ್ರದ ನೆರವೂ ಸೇರಿದಂತೆ ₹ 1 ಸಾವಿರ ಕೋಟಿಯವರೆಗೂ ಅನುದಾನ ದೊರಕಿತ್ತು. ಆದರೆ, ಬಂದ ಹಣದಲ್ಲಿ ಅರ್ಧದಷ್ಟೂ ವಿನಿಯೋಗಿಸದೆ ಕಳಪೆ ಕಾಮಗಾರಿ ನಡೆಸಲಾಗಿದೆ. ಶಿವಮೊಗ್ಗ 'ಸ್ಮಾರ್ಟ್ ಸಿಟಿ' ಕಾಮಗಾರಿಯ ವೈಫಲ್ಯಕ್ಕೆ ಈಚೆಗೆ ನಡೆದ ಒಂದು ಘಟನೆ ಸಾಕ್ಷಿಯಾಯಿತು. ವ್ಯಕ್ತಿಯೊಬ್ಬ ಚರಂಡಿಯ ಡೆಕ್‌ಸ್ಲ್ಯಾಬ್ ಮೇಲೆ ನಿಂತಿದ್ದಾಗ ಕುಸಿದು ಮೃತಪಟ್ಟ. ಇದು ನಮ್ಮ ನಗರಾಭಿವೃದ್ಧಿಗೆ ಹಿಡಿದ ಕನ್ನಡಿ.

ನಗರಗಳ ಮೂಲಸೌಕರ್ಯ ಅಭಿವೃದ್ಧಿಗೆ ಸರ್ಕಾರವೇ ಹೂಡಿಕೆ ಮಾಡಬೇಕು. ವಿದ್ಯುತ್ ಶುಲ್ಕ ನಗರಾಡಳಿತಗಳಿಗೆ ಭಾರವಾಗಿದೆ. ಬಜೆಟ್‌ನಲ್ಲಿ ಸೋಲಾರ್ ಪಾರ್ಕ್‌ಗಳ ಸ್ಥಾಪನೆಗೆ ಒತ್ತು ನೀಡಿರುವುದು ಸ್ವಾಗತಾರ್ಹ.

2024–25ನೇ ಸಾಲಿನಲ್ಲಿ ಮೂರು ಲಕ್ಷ ಮನೆಗಳ ನಿರ್ಮಾಣದ ಘೋಷಣೆ ಮಾಡಲಾಗಿದೆ. ಆದರೆ, ಹತ್ತು ಹಲವು ವಸತಿ ಯೋಜನೆಗಳ ಮೂಲಕ ಅನುದಾನ ನೀಡಿದರೂ, ಅರ್ಹರಿಗೆ ಸೂರು ಸಿಗುತ್ತಿಲ್ಲ. ಇಂದಿಗೂ ರಾಜ್ಯದಲ್ಲಿ 20 ಲಕ್ಷಕ್ಕೂ ಹೆಚ್ಚು ಕುಟುಂಬಗಳಿಗೆ ವಸತಿ ಇಲ್ಲ. ಸರ್ಕಾರವೇ ಪೂರ್ಣ ಹಣ ಒದಗಿಸಿ, ಗುಣಮಟ್ಟದ ಮನೆಗಳನ್ನು ಕಟ್ಟಿಕೊಡಬೇಕು.

ಕೆ.ವಿ.ವಸಂತಕುಮಾರ್, ಚಾರ್ಟರ್ಡ್ ಅಕೌಂಟೆಂಟ್, ಶಿವಮೊಗ್ಗ

ಪ್ರತಿಕ್ರಿಯೆಗಳು



ಮುಖ್ಯಮಂತ್ರಿ ಸಿದ್ದರಾಮಯ್ಯ ಗ್ಯಾರಂಟಿಗಳನ್ನೇ ಕೇಂದ್ರೀಕರಿಸಿಕೊಂಡು ಬಜೆಟ್ ಮಂಡಿಸಿದ್ದಾರೆ. ಸಾಧಾರಣ ಬಜೆಟ್ ಎನಿಸಿದರೂ ಗ್ಯಾರಂಟಿಗಳಿಂದ ಹೆಣ್ಣು ಮಕ್ಕಳಿಗೆ, ಬಡವರಿಗೆ ತುಂಬಾ ಅನುಕೂಲವಾಗಿದೆ

ವಿ.ಗೀತಾ, ಜನವಾದಿ ಮಹಿಳಾ ಸಂಘಟನೆ, ಕೋಲಾರ



ಬಡ, ಮಧ್ಯಮ ಕೂಲಿ ಕಾರ್ಮಿಕರ ಬದುಕನ್ನು ಉತ್ತಮಗೊಳಿಸುವ ಆಶಾದಾಯಕ ಬಜೆಟ್ ಇದಾಗಿದೆ. ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಎಲ್ಲ ದೃಷ್ಟಿಕೋನದಿಂದ ನೋಡುವುದಾದರೆ ಅಭಿವೃದ್ಧಿಯ ಮುನ್ನೋಟದ ಸರ್ವಸ್ಪರ್ಶಿ ಬಜೆಟ್ ಇದಾಗಿದೆ

ಜಿ.ವಿ.ಗಂಗಪ್ಪ, ಗುಡಿಬಂಡೆ



ಸಾಮಾಜಿಕ ನ್ಯಾಯ, ಸಮನ್ವಯ ದೃಷ್ಟಿಗೆ ಬಜೆಟ್ ಪೂರಕವಾಗಿದೆ. ಮಕ್ಕಳ ಶಿಕ್ಷಣ, ವಸತಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಘೋಷಿಸಿದ ಕಾರ್ಯಕ್ರಮಗಳು ಸಕಾಲದಲ್ಲಿ ಅನುಷ್ಠಾನ ಆಗಬೇಕು.

ಅನಿತಾ ಪರ್ವತಿಕರ, ಶಿರಸಿ, ಉತ್ತರ ಕನ್ನಡ ಜಿಲ್ಲೆ



ರಾಜ್ಯ ಬಜೆಟ್ ಜನಪರವಾಗಿದ್ದರೂ ಅಭಿವೃದ್ಧಿಯ ದೂರದೃಷ್ಟಿ ಇಲ್ಲ. ಸರ್ಕಾರ ಗ್ಯಾರಂಟಿ ಕಾರ್ಯಕ್ರಮಗಳಿಗೆ ಕೊಟ್ಟಿರುವ ಆದ್ಯತೆಯನ್ನು ರಾಜ್ಯದ ಅಭಿವೃದ್ಧಿ ಹಾಗೂ ತ್ವರಿತ ಆರ್ಥಿಕ ಬೆಳವಣಿಗೆ ಕಡೆಗೂ ಕೊಡಬೇಕು

ಪ್ರಶಾಂತ್, ಅಧ್ಯಕ್ಷ, ರಾಮನಗರ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ



ನೀರಾವರಿ ವಿಚಾರದಲ್ಲಿ ಬಯಲು ಸೀಮೆಗೆ ಬಜೆಟ್ ಮೋಸದ ಪರಾಕಾಷ್ಠೆ ಎನಿಸಿದೆ. ಯಾವುದೇ ಲಾಭವಿಲ್ಲದ ಎತ್ತಿನಹೊಳೆ ಯೋಜನೆಯ ಜಪ ಮುಂದುವರಿದಿದೆ. ಕೆರೆ, ಕುಂಟೆ, ಕಾಲುವೆ ಅಭಿವೃದ್ಧಿಗೆ ಒತ್ತು ಕೊಟ್ಟಿಲ್ಲ

ಆಂಜನೇಯ ರೆಡ್ಡಿ, ಅಧ್ಯಕ್ಷರು, ಶಾಶ್ವತ ನೀರಾವರಿ ಹೋರಾಟ ಸಮಿತಿ, ಚಿಕ್ಕಬಳ್ಳಾಪುರ



ಮಹಿಳಾ ಸಬಲೀಕರಣ, ಗ್ರಾಮೀಣ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಕೃಷಿಗೆ ಇನ್ನಷ್ಟು ಆದ್ಯತೆ ನೀಡಬೇಕಿತ್ತು ಎಂಬ ಕೊರತೆ ನಡುವೆಯೂ ಬಜೆಟ್ ನಮ್ಮಿಂದ, ನಮಗೋಸ್ಕರ ಎಂಬಂತಿದೆ

ಶೀಲಾ ನಂಜುಂಡಯ್ಯ, ರೈತ ಮಹಿಳೆ, ಶ್ರೀರಂಗಪಟ್ಟಣ

ಎರಡು ಹೊಸ ಆರ್ಥಿಕ ಕಾರಿಡಾರ್

ಆರ್ಥಿಕ ಅಭಿವೃದ್ಧಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಎರಡು ಕಾರಿಡಾರ್‌ಗಳನ್ನು ರೂಪಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ.

ಮಂಗಳೂರು ಬಂದರಿನಿಂದ ಬೆಂಗಳೂರುವರೆಗೆ ಹಾಗೂ ಬೀದರ್–ಬೆಂಗಳೂರು ನಡುವೆ ಆರ್ಥಿಕ ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸುವುದಾಗಿ ಪ್ರಸ್ತಾಪಿಸಲಾಗಿದೆ.

ಮಂಗಳೂರು– ಬೆಂಗಳೂರು ಕಾರಿಡಾರ್‌ನಿಂದ ಬಂದರು ಸಂಪರ್ಕ ಸುಲಭವಾಗುವ ಜತೆಗೆ, ಯುರೋಪ್ ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳಿಗೆ ಸರಕು ಸಾಗಾಣಿಕೆ ಅವಧಿ ಕಡಿಮೆಯಾಗಲಿದೆ. ಬೀದರ್–ಬೆಂಗಳೂರು ಕಾರಿಡಾರ್‌ನಿಂದ ಕಲ್ಯಾಣ ಕರ್ನಾಟಕ ಪ್ರದೇಶದ ಆರ್ಥಿಕ ಅಭಿವೃದ್ಧಿ ಚುರುಕೊಳ್ಳಲಿದೆ ಎಂದು ಪ್ರತಿಪಾದಿಸಲಾಗಿದೆ.

- ಕೆಶಿಪ್- 4 ಯೋಜನೆ ಅಡಿ ₹ 5,736 ಕೋಟಿ ಮೊತ್ತದಲ್ಲಿ ಬಾಹ್ಯ ಹಣಕಾಸು ಸಂಸ್ಥೆ ನೆರವಿನೊಂದಿಗೆ ರಾಜ್ಯದ ವಿವಿಧ ಜಿಲ್ಲೆಗಳ 875 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಅಭಿವೃದ್ಧಿ
- ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ-5 ಪ್ರಾರಂಭಿಸಲು ಉದ್ದೇಶಿಸಲಾಗಿದೆ. ₹ 4,000 ಕೋಟಿ ವೆಚ್ಚದಲ್ಲಿ ರಾಜ್ಯದ 1,300 ಕಿ.ಮೀ ಉದ್ದದ ಪ್ರಮುಖ ರಸ್ತೆ ಅಭಿವೃದ್ಧಿ.
- ಬೆಳಗಾವಿಯಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ₹ 450 ಕೋಟಿ ವೆಚ್ಚದಲ್ಲಿ 4.50 ಕಿ.ಮೀ. ಉದ್ದದ ಮೇಲ್ಸೇತುವೆ ನಿರ್ಮಾಣ
- ಬೆಂಗಳೂರು- ಮಂಡ್ಯ- ಮೈಸೂರು ರಾಷ್ಟ್ರೀಯ ಹೆದ್ದಾರಿಯ ಮೈಸೂರು ಹೊರವಲಯದ ಜಂಕ್ಷನ್‌ನಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಮೇಲ್ಸೇತುವೆ ನಿರ್ಮಾಣ
- ಮೈಸೂರು ಕುಕ್ಕರಹಳ್ಳಿ ಬಳಿ ಹಾಗೂ ಕೆ.ಆರ್.ಎಸ್. ರಸ್ತೆ, ಶಿವಮೊಗ್ಗ- ಬೊಮ್ಮನಕಟ್ಟೆ ರಸ್ತೆ, ಗದಗ ಜಿಲ್ಲೆಯ ರೋಣದ ಮಲ್ಲಾಪುರ, ಚನ್ನಪಟ್ಟಣ-ಬೈರಾಪಟ್ಟಣ ಮತ್ತು ಚಿಕ್ಕಬಳ್ಳಾಪುರದಲ್ಲಿ ₹ 350 ಕೋಟಿ ಮೊತ್ತದಲ್ಲಿ ರೈಲ್ವೆ ಮೇಲ್ಸೇತುವೆ ಹಾಗೂ ಕೆಳಸೇತುವೆ ನಿರ್ಮಾಣ

ನೇತ್ರಾವತಿಯಲ್ಲಿ ಜಲಮೆಟ್ರೊ

- ಮೂಲಸೌಕರ್ಯ ಯೋಜನೆಗಳ ಪ್ರಗತಿ ಮೇಲ್ವಿಚಾರಣೆಗೆ ಹಾಗೂ ಎದುರಾಗುವ ಅಂತರ್ ಇಲಾಖಾ ಮತ್ತು ಹಣಕಾಸಿನ ತೊಡಕುಗಳನ್ನು ಬಗೆಹರಿಸಲು ಮುಖ್ಯಮಂತ್ರಿ ಕಚೇರಿಯಲ್ಲಿ ಪ್ರತ್ಯೇಕ ಘಟಕ ಸ್ಥಾಪನೆ
- ರಾಜ್ಯದ 320 ಕಿ.ಮೀ. ಉದ್ದದ ಕರಾವಳಿ ತೀರವನ್ನು ಆರ್ಥಿಕ ಅಭಿವೃದ್ಧಿಗೆ ಸಮರ್ಥವಾಗಿ ಬಳಸಿಕೊಳ್ಳಲು ಆದ್ಯತೆ. ₹ 20,000 ಕೋಟಿ ಹೂಡಿಕೆಯೊಂದಿಗೆ ಸಮುದ್ರ ಸಾರಿಗೆ, ಸರಕು ಸಾಗಣೆ ಹಾಗೂ ಪರಿಸರ ಪ್ರವಾಸೋದ್ಯಮ ವಲಯಗಳಲ್ಲಿ ಗಣನೀಯ ಅಭಿವೃದ್ಧಿ ಸಾಧಿಸುವ ಗುರಿ
- ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತರರಾಷ್ಟ್ರೀಯ ಕ್ರೂಸ್ ಮತ್ತು ಪ್ರವಾಸೋದ್ಯಮ ಬಂದರು ಅಭಿವೃದ್ಧಿಪಡಿಸಲು ಐಐಟಿ ಮದ್ರಾಸ್ ಸಹಯೋಗದಲ್ಲಿ ಕಾರ್ಯಸಾಧ್ಯತಾ ವರದಿ ತಯಾರಿಸಲು ಕ್ರಮ
- ದ್ವೀಪಗಳ ಸಮಗ್ರ ಅಭಿವೃದ್ಧಿಗೆ 'ಮಾಸ್ಟರ್ ಪ್ಲಾನ್' ತಯಾರಿ
- ಮಂಗಳೂರಿನ ಗುರುಪುರ ಹಾಗೂ ನೇತ್ರಾವತಿ ನದಿಗಳಲ್ಲಿ ಜಲಮೆಟ್ರೊ ಸೇವೆಗಳನ್ನು ಪರಿಚಯಿಸಲು ಕಾರ್ಯಸಾಧ್ಯತಾ ವರದಿ ತಯಾರಿ
- ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳೊಂದಿಗೆ ಸಂಪರ್ಕ ಸಾಧಿಸುವ ದೃಷ್ಟಿಯಿಂದ ₹ 1,600 ಕೋಟಿ ವೆಚ್ಚದಲ್ಲಿ ವಿವಿಧ ವಿಮಾನ ನಿಲ್ದಾಣ ಅಭಿವೃದ್ಧಿ
- ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ ಭೂಸ್ವಾಧೀನಕ್ಕೆ ಬಾಕಿ ಇರುವ ₹ 43 ಕೋಟಿ ಬಿಡುಗಡೆ
- ಹಾಸನ ವಿಮಾನ ನಿಲ್ದಾಣ ಕಾಮಗಾರಿಗೆ 2023-24ನೇ ಸಾಲಿನಲ್ಲಿ ₹ 55 ಕೋಟಿ ಬಿಡುಗಡೆ, ಪ್ರಸಕ್ತ ಸಾಲಿನಲ್ಲಿ ಬಾಕಿ ಇರುವ ₹ 30 ಕೋಟಿ ಬಿಡುಗಡೆ
- ₹ 220 ಕೋಟಿ ವೆಚ್ಚದಲ್ಲಿ ರಾಯಚೂರು ವಿಮಾನ ನಿಲ್ದಾಣ ನಿರ್ಮಾಣಕ್ಕೆ ಅಗತ್ಯ ಅನುದಾನ
- ರಾಜ್ಯದ ಮೂಲಸೌಕರ್ಯ ಯೋಜನೆಗಳನ್ನು ಖಾಸಗಿ ಹೂಡಿಕೆಯೊಂದಿಗೆ ಅಭಿವೃದ್ಧಿಪಡಿಸಲು ಚಾಲ್ತಿಯಲ್ಲಿರುವ ಮೂಲಸೌಕರ್ಯ ಯೋಜನೆಗಳ ಪಿ.ಪಿ.ಪಿ. ನೀತಿ-2018ಕ್ಕೆ ಮಧ್ಯಂತರ ಪರಿಷ್ಕರಣೆ

ವಿದ್ಯುತ್: 60 ಸಾವಿರ ಮೆಗಾವಾಟ್ ಹೆಚ್ಚಳದ ಗುರಿ

ವಿದ್ಯುತ್ ಉತ್ಪಾದನೆ ಹೆಚ್ಚಿಸಲು ಹಿಂದಿನ ಬಿಜೆಪಿ ಸರ್ಕಾರ ಕ್ರಮ ಕೈಗೊಂಡಿಲ್ಲ ಎಂದು ಟೀಕಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಂದಿನ ದಿನಗಳಲ್ಲಿ ಈ ವಲಯವನ್ನು ಹೂಡಿಕೆದಾರರ ಸ್ನೇಹಿಯನ್ನಾಗಿ ಮಾಡಲಾಗುವುದು ಎಂದು ಘೋಷಿಸಿದ್ದಾರೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯದಲ್ಲಿ ಯಾವುದೇ ಹೆಚ್ಚಳವಾಗಿಲ್ಲ. ಹೀಗಾಗಿ, ಮುಂದಿನ 7 ವರ್ಷಗಳಲ್ಲಿ ಇಂಧನ ವಲಯಕ್ಕೆ ಹೆಚ್ಚಿನ ಬಂಡವಾಳ ಆಕರ್ಷಿಸುವ ಮೂಲಕ ವಿದ್ಯುತ್ ಉತ್ಪಾದನೆಯ ಸ್ಥಾಪಿತ ಸಾಮರ್ಥ್ಯವನ್ನು 32,000 ಮೆಗಾವಾಟ್‌ನಿಂದ 60,000 ಮೆಗಾವಾಟ್‌ಗಳಿಗೆ ಹೆಚ್ಚಿಸಲಾಗುವುದು ಎಂದು ವಿವರಿಸಿದ್ದಾರೆ.

ರೈತರನ್ನು ಸ್ವಾವಲಂಬಿಗಳನ್ನಾಗಿ ಮಾಡಲು 'ಪಿಎಂ–ಕುಸುಮ' ಯೋಜನೆಯಡಿ ₹1,174 ಕೋಟಿ ಅಂದಾಜು ವೆಚ್ಚದಲ್ಲಿ 40,000 ಜಾಲ ಮುಕ್ತ ಸೋಲಾರ್ ಪಂಪ್ ಸೆಟ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಶೇ 30ರಷ್ಟಿದ್ದು, ರಾಜ್ಯ ಸರ್ಕಾರದ ವತಿಯಿಂದ ನೀಡುವ ಸಹಾಯಧನವನ್ನು ಶೇ 30ರಿಂದ ಶೇ 50ಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ.

ಹಸಿರು ಹೈಡ್ರೋಜನ್ ಭವಿಷ್ಯದ ಇಂಧನ. ಹಸಿರು ಹೈಡ್ರೋಜನ್ ನೀತಿಯನ್ನು ರೂಪಿಸಲಾಗುವುದು. ಖಾಸಗಿ ಬಂಡವಾಳವನ್ನು ಈ ವಲಯಕ್ಕೆ ಆಕರ್ಷಿಸಲು 300 ಕಿಲೋವಾಟ್ ಸಾಮರ್ಥ್ಯದ ಹಸಿರು ಹೈಡ್ರೋಜನ್ ಸ್ಥಾವರವನ್ನು ಪ್ರಾಯೋಗಿಕವಾಗಿ ಅಂದಾಜು ₹10 ಕೋಟಿ ವೆಚ್ಚದಲ್ಲಿ ಕೆಆರ್‌ಇಡಿಎಲ್ ವತಿಯಿಂದ ಅನುಷ್ಠಾನಗೊಳಿಸಲಾಗುವುದಾಗಿ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

4.30 ಲಕ್ಷ ಕೃಷಿಪಂಪಸೆಟ್‌ಗಳಿಗೆ ಸೌರಶಕ್ತಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಜತೆಗೆ, ವಿದ್ಯುತ್ ಚಾಲಿತ ವಾಹನಗಳಿಗೆ ಉತ್ತೇಜನ ನೀಡಲು 2,500 ಇವಿ ಚಾರ್ಜಿಂಗ್ ಕೇಂದ್ರಗಳನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗುವುದು. ಅಲ್ಲದೇ, ವಿದ್ಯುತ್ ಸರಬರಾಜು ಕಂಪನಿಗಳ ಮೂಲಕ ₹35 ಕೋಟಿ ವೆಚ್ಚದಲ್ಲಿ 100 ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ವಿವರಿಸಲಾಗಿದೆ.



ಬಜೆಟ್ ಓದಿ ಬಳಲಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

175 ಪುಟಗಳಷ್ಟು ಮಾಹಿತಿಯುಳ್ಳ ಬಜೆಟ್ ಪುಸ್ತಕವನ್ನು 3 ಗಂಟೆ 10 ನಿಮಿಷಗಳ ಕಾಲ ಓದಿದ ಸಿಎಂ ಸಿದ್ದರಾಮಯ್ಯ, ಕೊನೆಯಲ್ಲಿ ತುಸು ಬಳಲಿದಂತೆ ಕಂಡರು.

ಬೆಳಿಗ್ಗೆ 10.14ಕ್ಕೆ ವಿಧಾನಸಭೆ ಪ್ರವೇಶಿಸಿದ ಅವರು, 10.20ರಿಂದ ಬಜೆಟ್ ಮಂಡನೆ ಆರಂಭಿಸಿದರು. ಮಧ್ಯಾಹ್ನ 1.30ಕ್ಕೆ 2024–25ನೇ ಆರ್ಥಿಕ ವರ್ಷದ ಬಜೆಟ್‌ಗೆ ಒಪ್ಪಿಗೆ ಕೋರುವುದರೊಂದಿಗೆ ಮುಗಿಸಿದರು. ಆ ಬಳಿಕ ಕುರ್ಚಿಯಲ್ಲಿ ಕುಳಿತು ನೀರು ಕುಡಿದು ಸುಧಾರಿಸಿಕೊಂಡರು.

ಮುಖ್ಯಮಂತ್ರಿಯವರು ಬಜೆಟ್ ಓದಲು ಎದ್ದು ನಿಲ್ಲುತ್ತಿದ್ದಂತೆಯೇ ಬಿಜೆಪಿಯ ವಿ. ಸುನಿಲ್ ಕುಮಾರ್, 'ಏನಿಲ್ಲಾ, ಏನಿಲ್ಲಾ...' ಎಂದು ಛೇಡಿಸಿದರು. ತುಸು ವಿಚಲಿತರಾದ ಸಿದ್ದರಾಮಯ್ಯ, ಒಂದೆರಡು ನಿಮಿಷ ಸುಮ್ಮನಾದರು. ಬಳಿಕ ಎದ್ದು ನಿಂತು ಬಜೆಟ್ ಓದಲು ಆರಂಭಿಸಿದರು.

ಬಜೆಟ್‌ನ ಆರಂಭದಲ್ಲೇ 'ಆಗದು ಎಂದು, ಕೈಲಾಗದು ಎಂದು ಕೈಕಟ್ಟಿ ಕುಳಿತರೆ...' ಎಂಬ 'ಬಂಗಾರದ ಮನುಷ್ಯ' ಸಿನಿಮಾ ಹಾಡನ್ನು ಉಲ್ಲೇಖಿಸಿದ ಮುಖ್ಯಮಂತ್ರಿ, ಕುವೆಂಪು, ವಚನಕಾರ್ತಿ ಆಯ್ದಕ್ಕಿ ಲಕ್ಕಮ್ಮ ಸೇರಿ ಹಲವು ಕವಿಗಳು, ವಚನಕಾರರ ರಚನೆಗಳನ್ನು ಉಲ್ಲೇಖಿಸಿದರು. ಕರ್ಪೂರಿ ಠಾಕೂರ್, ಜವಾಹರಲಾಲ್ ನೆಹರೂ ಸೇರಿ ಹಲವರ ಮಾತುಗಳನ್ನೂ ತಮ್ಮ ಘೋಷಣೆಗಳಿಗೆ ಪೂರಕವಾಗಿ ಪ್ರಸ್ತಾಪಿಸಿದರು.

ಬಜೆಟ್ ಓದುವಾಗ ಮುಖ್ಯಮಂತ್ರಿಯವರು ಹಲವು ಬಾರಿ ತಡವರಿಸಿದರು. ಅಂಕಿಅಂಶ, ಪದಗಳನ್ನೂ ತಪ್ಪಾಗಿ ಉಚ್ಚರಿಸಿದರು.'₹15,000'ದ ಬದಲಿಗೆ '₹1,500' ಎಂದರೆ, 'ಆಶ್ರಮ ಶಾಲೆ' ಎಂಬುದನ್ನು 'ಅಕ್ರಮ ಶಾಲೆ' ಎಂದು ಓದಿದರು.

ಶಾಸಕರ ಕೊರಳಲ್ಲಿ ಶಲ್ಯ: ಮುಖ್ಯಮಂತ್ರಿಯೂ ಸೇರಿದಂತೆ ಕಾಂಗ್ರೆಸ್‌ನ ಎಲ್ಲ ಸದಸ್ಯರು ಶಲ್ಯ ಧರಿಸಿ ಸದನಕ್ಕೆ ಬಂದಿದ್ದರು.

ಸಿದ್ದರಾಮಯ್ಯ ಅವರು ಬಜೆಟ್ ಮಂಡಿಸಿದ ಬಳಿಕ ಹಲವು ಮಂದಿ ಸಚಿವರು, ಶಾಸಕರು ಅವರಿದ್ದ ಸ್ಥಳಕ್ಕೆ ಹೋಗಿ ಅಭಿನಂದಿಸಿದರು. ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಜಿ. ಜನಾರ್ದನ ರೆಡ್ಡಿ ಕೂಡ ಅಭಿನಂದನೆ ಸಲ್ಲಿಸಿದರು.

ಪ್ರಜಾವಾಣಿ

ಶನಿವಾರ, 17ಫೆಬ್ರುವರಿ 2024

ಉತ್ತರಕರ್ನಾಟಕಕ್ಕೆ ಅನ್ಯಾಯ ಆಗಿದೆ. ಬೆಂಗಳೂರು ಅಭಿವೃದ್ಧಿಗೆ ಹಣ ಇಟ್ಟಿಲ್ಲ. ಆದರೆ ಸ್ವಕ್ಷೇತ್ರ ವರುಣಾಕ್ಕೆ ₹2,000 ಕೋಟಿ ಅನುದಾನ ನೀಡಿದ್ದಾರೆ.

ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

₹25,000
ಯಾವುದೇ ಫೆಲೋಶಿಪ್ ಪಡೆಯದ ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ನೀಡಲಿರುವ ತಿಂಗಳಿಗೆ ಶಿಷ್ಯವೇತನದ ಮೊತ್ತ

5,000
ಡ್ರೋನ್ ಆಧಾರಿತ ಫೋಟೊಗ್ರಫಿ ಹಾಗೂ ವಿಡಿಯೊಗ್ರಫಿ ಕ್ಷೇತ್ರದಲ್ಲಿ ಉದ್ಯೋಗ ಪಡೆದುಕೊಳ್ಳಲು ಡ್ರೋನ್ ತರಬೇತಿಗೆ ಆಯ್ಕೆ ಮಾಡಲಾಗುವ ಪರಿಶಿಷ್ಟ ಪಂಗಡದ ಯುವಕ/ಯುವತಿಯರ ಸಂಖ್ಯೆ



ತಜ್ಞರ ಅಭಿಪ್ರಾಯ

ಕಲ್ಯಾಣ ಕರ್ನಾಟಕಕ್ಕೆ ಆಶಾದಾಯಕ ಬಜೆಟ್



ರಾಜ್ಯದಲ್ಲಿ ಹಿಂದುಳಿದಿರುವ ಕಲ್ಯಾಣ ಕರ್ನಾಟಕ ಪ್ರದೇಶದ ಪಾಲಿಗೆ ಈ ಬಾರಿಯ ರಾಜ್ಯದ ಬಜೆಟ್ ಆಶಾದಾಯಕವಾಗಿದೆ.

ಆರೋಗ್ಯ ಕೇಂದ್ರಗಳ ಕೊರತೆಯಿಂದಾಗಿ ಗ್ರಾಮೀಣ ಭಾಗದಲ್ಲಿ ಆರೋಗ್ಯ ಸೇವೆ ಮರೀಚಿಕೆಯಾಗಿದ್ದ ಸಂದರ್ಭದಲ್ಲಿ 46 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಘೋಷಿಸಿರುವುದು ಸಮಂಜಸವಾಗಿದೆ. ಈ ಭಾಗದಲ್ಲಿ ಹತ್ತಾರು ನದಿಗಳಿದ್ದರೂ ರೈತರ ಜಮೀನುಗಳಿಗೆ ನೀರು ಒದಗಿಸುವ ಕೆಲಸವಾಗಿರಲಿಲ್ಲ. ಹತ್ತಕ್ಕಿಂತ ಹೆಚ್ಚು ಕೆರೆ ತುಂಬಿಸುವುದು, ನವಲಿ ಸಮತೋಲನ ಜಲಾಶಯ ನಿರ್ಮಾಣದಂತಹ ಬೃಹತ್ ಯೋಜನೆ ಮತ್ತು ನಾಲ್ಕೈದು ಬ್ಯಾರೇಜ್ ನಿರ್ಮಾಣ ಮಾಡಲು ಮುಂದಾಗಿರುವುದು ರೈತರಲ್ಲಿ ಚೈತನ್ಯ ಮೂಡಿಸುವಂತಿದೆ. ಡಾಂಬರು ಕಾಣದ ರಸ್ತೆಗಳೇ ಕಣ್ಣಿಗೆ ಕಾಣುವಂತಹ ಸ್ಥಿತಿಯಲ್ಲಿ 'ಕಲ್ಯಾಣ ಪಥ' ಎನ್ನುವ ಯೋಜನೆಯೊಂದಿಗೆ 1,150 ಕಿ.ಮೀ ಗ್ರಾಮೀಣ ರಸ್ತೆ ನಿರ್ಮಾಣ ಮಾಡುತ್ತಿರುವುದು ಗ್ರಾಮೀಣ ಸಂಪರ್ಕದ ಚಿತ್ರಣವೇ ಬದಲಾಗಬಹುದು.

2011ರ ಜನಗಣತಿಯಲ್ಲಿ ಶೇ 63.71ರಷ್ಟು ಸಾಕ್ಷರತೆ ಹೊಂದಿರುವ ಕಲ್ಯಾಣ ಕರ್ನಾಟಕ ಭಾಗದಲ್ಲಿ ಉನ್ನತ ಶಿಕ್ಷಣ ಪ್ರಮಾಣ ಕೇವಲ ಶೇ 14 ಮಾತ್ರ ಇದೆ. ಒಂದೂವರೆ ದಶಕದಿಂದ ಹೊಸದಾಗಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡದಿರುವ ಸಂದರ್ಭದಲ್ಲಿ ಈ ಬಜೆಟ್‌ನಲ್ಲಿ ಅದಕ್ಕೂ ಅವಕಾಶ ನೀಡಿರುವುದು ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಲಿದೆ. ಬಳ್ಳಾರಿ ಜೀನ್ಸ್ ಅಪ್ಪಾರೆಲ್ ಪಾರ್ಕ್, ರಾಯಚೂರು ಜವಳಿ ಪಾರ್ಕ್, ಕಲಬುರಗಿ ಮೆಗಾ ಜವಳಿ ಪಾರ್ಕ್ ಸ್ಥಾಪನೆ ಮಾಡುತ್ತಿರುವುದು ಈ ಭಾಗದ ಯುವಕರ ಬದುಕಿಗೆ ಆಸರೆಯಾಗಲಿದೆ. ಸರ್ಕಾರ ಈ ಬಜೆಟ್ ಅನ್ನು ಪರಿಪೂರ್ಣವಾಗಿ ಅನುಷ್ಠಾನ ಮಾಡಿದರೆ ಕಲ್ಯಾಣ ಕರ್ನಾಟಕ ಬೆಳವಣಿಗೆ ಕಾಣುವುದರಲ್ಲಿ ಯಾವುದೇ ಸಂಶಯವಿಲ್ಲ.

ರಝಾಕ್ ಉಸ್ತಾದ್, ಉಪಾಧ್ಯಕ್ಷ,
ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ, ರಾಯಚೂರು

ಕಿತ್ತೂರು ಕರ್ನಾಟಕ: ಬೃಹತ್ ಯೋಜನೆಗಳಿಗೆ ಆದ್ಯತೆ ಇಲ್ಲ



ಧಾರವಾಡ, ಬೆಳಗಾವಿ, ವಿಜಯಪುರ, ಬಾಗಲಕೋಟೆ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಒಳಗೊಂಡ ಕಿತ್ತೂರು ಕರ್ನಾಟಕ ಪ್ರದೇಶವು ಪ್ರಸಕ್ತ ಬಜೆಟ್‌ನಲ್ಲಿ ಆಗುವ ಘೋಷಣೆಗಳ ಬಗ್ಗೆ ಹಲವು ನಿರೀಕ್ಷೆಗಳನ್ನು ಹೊಂದಿತ್ತು. ಕೃಷ್ಣ ಮೇಲ್ದಂಡೆ ಯೋಜನೆ–3ನೇ ಹಂತಕ್ಕೆ ₹ 50 ಸಾವಿರ ಕೋಟಿ, ಮಹದಾಯಿ ಯೋಜನೆ ಕಾಮಗಾರಿ ಆರಂಭಿಸಲು ಹೆಚ್ಚಿನ ಅನುದಾನ, ಧಾರವಾಡ–ಕಿತ್ತೂರು–ಬೆಳಗಾವಿ ಮತ್ತು ಗದಗ–ಯಲವಿಗಿ ರೈಲು ಮಾರ್ಗಕ್ಕೆ ಅನುದಾನ, ವಿಜಯಪುರ ಮತ್ತು ಬಾಗಲಕೋಟೆಗೆ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಆರ್ಥಿಕ ನೆರವು ಸಿಗುವ ನಿರೀಕ್ಷೆ ಇತ್ತು.

ಕೃಷ್ಣ ಏತ ನೀರಾವರಿ ಯೋಜನೆಗೆ ₹ 3,771 ಕೋಟಿ, ಕಿತ್ತೂರು ಕರ್ನಾಟಕ ಭಾಗದಲ್ಲಿ ಒಂದು ಜವಳಿ ಪಾರ್ಕ್, ವಿಜಯಪುರದ ಆಲಮಟ್ಟಿಯಲ್ಲಿ ಒಳನಾಡು ಮೀನುಗಾರಿಕೆ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ ಮತ್ತು ಆಲಮೇಲದಲ್ಲಿ ತೋಟಗಾರಿಕೆ ಕಾಲೇಜು ಸ್ಥಾಪನೆ, ಕೇಂದ್ರ–ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಬೆಂಗಳೂರು–ಮುಂಬೈ ಎಕನಾಮಿಕ್ ಕಾರಿಡಾರ್ ಯೋಜನೆಯಡಿ ಧಾರವಾಡ ಬಳಿ 6 ಸಾವಿರ ಎಕರೆ ಜಮೀನಿನಲ್ಲಿ ಕೈಗಾರಿಕೆ ಅಭಿವೃದ್ಧಿಗೆ ಒತ್ತು ನೀಡುವ ಸಂಬಂಧ ಕೈಗಾರಿಕಾ ಜಾಲಘಟಕ, ಹುಬ್ಬಳ್ಳಿಯಲ್ಲಿ ಕೌಶಲ ಮತ್ತು ನಾವೀನ್ಯತಾ ಕೇಂದ್ರ ಸ್ಥಾಪನೆ, ಬಸವನಬಾಗೇವಾಡಿಯಲ್ಲಿ ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ, ಸವದತ್ತಿಯ ರೇಣುಕಾ ಯಲ್ಲಮ್ಮ ಕ್ಷೇತ್ರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ರಚನೆ, ಗದಗ ಜಿಲ್ಲೆಯ ಕಪ್ಪತಗುಡ್ಡದ ಪರಿಸರ ಪ್ರವಾಸೋದ್ಯಮಕ್ಕೆ ಉತ್ತೇಜನ, ಧಾರವಾಡ ವಾಲ್ಮಿ ಉನ್ನತೀಕರಣ ಮತ್ತು ಬೆಣ್ಣೆಹಳ್ಳ ಪ್ರವಾಹ ನಿಯಂತ್ರಣ ಯೋಜನೆಗೆ ಬಜೆಟ್‌ನಲ್ಲಿ ಆದ್ಯತೆ ಸಿಕ್ಕಿದೆ. ಪ್ರಾದೇಶಿಕ ಅಸಮತೋಲನ ನಿವಾರಿಸಲು ಬೆಂಗಳೂರಿನ ಅಭಿವೃದ್ಧಿಯಂತೆ ಉತ್ತರ ಕರ್ನಾಟಕದ ಪ್ರಮುಖ ನಗರಗಳಾದ ಹುಬ್ಬಳ್ಳಿ–ಧಾರವಾಡ, ಬೆಳಗಾವಿಯನ್ನು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಬೇಕಿದೆ. ಇದಕ್ಕಾಗಿ ಬೃಹತ್ ಯೋಜನೆಗಳು ಬೇಕು. ಈ ಭಾಗದ ಮಧ್ಯಮ ಮತ್ತು ಬೃಹತ್ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಸರ್ಕಾರವು ಮೊದಲ ಆದ್ಯತೆ ನೀಡಬೇಕಿತ್ತು.

ಡಾ. ಬಿ.ಎಚ್.ನಾಗೂರ, ಅರ್ಥಶಾಸ್ತ್ರ ಪ್ರಾಧ್ಯಾಪಕರು,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ


ಸಾಲ ಭಾಗ್ಯ ಕರುಣಿಸಿದ ಮುಖ್ಯಮಂತ್ರಿ



ತಮ್ಮ ಮೊದಲ ಅವಧಿಯಲ್ಲಿ ಸಾಲ ಮಾಡಿ ಪ್ರತಿ ಪ್ರಜೆಯ ತಲೆಯ ಮೇಲೆ ₹44 ಸಾವಿರಕ್ಕೂ ಅಧಿಕ ಸಾಲದ ಹೊರೆ ಹೊರಿಸಿ, ರಾಜ್ಯದ ಜನತೆಯ ಮೇಲೆ 'ಸಾಲ ಭಾಗ್ಯ' ಕರುಣಿಸಿದ್ದರು. ಇವರ ಅವಧಿಯಲ್ಲಿ ಹಳಿ ತಪ್ಪಿದ್ದ ಆರ್ಥಿಕತೆಯನ್ನು ನಮ್ಮ ಸರ್ಕಾರ ಬಂದ ಮೇಲೆ ಸರಿ ಮಾಡಿತ್ತು. ಈಗ ಮತ್ತೆ ₹1 ಲಕ್ಷ ಕೋಟಿಗೂ ಅಧಿಕ ಸಾಲ ಮಾಡಿದ್ದಾರೆ. ಕರ್ನಾಟಕವನ್ನು ಸಾಲದ ಸುಳಿಗೆ ಸಿಲುಕಿಸಲು ಸಿದ್ದರಾಮಯ್ಯ ಹೊರಟಿದ್ದಾರೆ. 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಎಂಬುದು, ಈ ಸರ್ಕಾರದಲ್ಲಿ 'ಸರ್ವರಿಗೂ ತೆರಿಗೆ ಸರ್ವರಿಗೂ ಸಾಲದ ಹೊರೆ' ಎಂಬಂತಾಗಿದೆ. 2021 ರಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಬಜೆಟ್ ಭಾಷಣವನ್ನು ಬಹಿಷ್ಕರಿಸಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸದಸ್ಯರು ಹೊರನಡೆದಿದ್ದು ಅವರಿಗೆ ನೆನಪಿಲ್ಲವೆ

ಆರ್.ಅಶೋಕ, ವಿರೋಧಪಕ್ಷದ ನಾಯಕ, ವಿಧಾನಸಭೆ

ಬಜೆಟ್ ಪಾವಿತ್ರ್ಯ ಹಾಳು ಮಾಡಿದ್ದಾರೆ



15 ಬಾರಿ ಬಜೆಟ್ ಮಂಡಿಸಿ ₹1.5 ಲಕ್ಷ ಕೋಟಿ ಸಾಲ ಮಾಡಿ ದಾಖಲೆ ಸೃಷ್ಟಿಸಿರುವ ಸಿದ್ದರಾಮಯ್ಯ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಸುಳ್ಳಿನ ಕಂತೆಯ ರಾಜಕೀಯ ಬಜೆಟ್ ಮಂಡಿಸಿದ್ದಾರೆ. ಕೇಂದ್ರ ಸರ್ಕಾರವನ್ನು ವಿರೋಧಿಸಲು ಬಜೆಟ್ ಬಳಸಿಕೊಂಡಿದ್ದಾರೆ. ಈ ಮೂಲಕ ಬಜೆಟ್‌ನ ಪಾವಿತ್ರ್ಯವನ್ನೇ ಸಿದ್ದರಾಮಯ್ಯ ಹಾಳು ಮಾಡಿದ್ದಾರೆ. ಕೇಂದ್ರದ ಅನುದಾನ ಪಡೆಯಲು ಅನೇಕ ವೇದಿಕೆಗಳಿವೆ. ಜಿಎಸ್‌ಟಿ ಕೌನ್ಸಿಲ್ ಇದೆ. ನೀತಿ ಆಯೋಗ ಇದೆ. ಒಂದು ಬಾರಿಯೂ ನೀತಿ ಆಯೋಗದ ಸಭೆಗೆ ಹಾಜರಾಗದೇ ಆ ಸಂದರ್ಭದಲ್ಲಿ ಮಾತನಾಡದೇ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ವಿರೋಧಿಸುತ್ತಿರುವುದು ಅಪ್ಪಟ ರಾಜಕೀಯ.

ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ

'ಅಹಿಂದ' ಅಭ್ಯುದಯ 'ಗ್ಯಾರಂಟಿ'

• ರಾಜೇಶ್ ರೈ ಚಟ್ಲ

ಈ ಬಜೆಟ್‌ನಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ 'ಸಾಮಾಜಿಕ ಬದ್ಧತೆ' ಪ್ರದರ್ಶಿಸಿದ್ದಾರೆ. ಅಲ್ಪಸಂಖ್ಯಾತ, ಹಿಂದುಳಿದ, ದಲಿತ (ಅಹಿಂದ) ಸಮುದಾಯದ ಅಭ್ಯುದಯಕ್ಕೆ ಸಾಕಷ್ಟು ಯೋಜನೆಗಳನ್ನು ನೀಡಿದ್ದಾರೆ. 'ಕರ್ನಾಟಕ ಅನುಸೂಚಿತ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ' (ಎಸ್‌ಸಿಎಸ್‌ಪಿ, ಟಿಎಸ್‌ಪಿ) ಅಡಿ ಪರಿಶಿಷ್ಟ ಜಾತಿ ಉಪ ಯೋಜನೆಗೆ ₹27,674 ಕೋಟಿ, ಪರಿಶಿಷ್ಟ ಪಂಗಡ ಉಪ ಯೋಜನೆಗೆ ₹11,447 ಕೋಟಿ ಸೇರಿ ಒಟ್ಟು ₹39,121 ಕೋಟಿ ಒದಗಿಸಿದ್ದಾರೆ.

ಕಳೆದ ಮೇ ತಿಂಗಳಲ್ಲಿ ಆಡಳಿತ ಚುಕ್ಕಾಣಿ 'ಕೈ'ಗೆ ತೆಗೆದುಕೊಂಡಿದ್ದ ಸಿದ್ದರಾಮಯ್ಯ, ಜುಲೈನಲ್ಲಿ ಮಂಡಿಸಿದ್ದ ಆಯವ್ಯಯದಲ್ಲಿ ಪರಿಶಿಷ್ಟರಿಗೆ ₹34,294 ಕೋಟಿ ಒದಗಿಸಿದ್ದರು. ಈ ಬಾರಿ ₹4,827 ಕೋಟಿ ಹೆಚ್ಚು ನೀಡಿದ್ದಾರೆ. ಆ ಮೂಲಕ, ತುಳಿತಕ್ಕೆ ಒಳಗಾದ, ಅವಕಾಶ ವಂಚಿತ ಸಮುದಾಯಗಳ ಅಭಿವೃದ್ಧಿಯ ತಮ್ಮ ಪ್ರತಿಪಾದನೆ ಪ್ರಶ್ನಾತೀತ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ.


2012–13ರಲ್ಲಿ ಮತ್ತು ಅದಕ್ಕೂ ಮೊದಲು ಪರಿಶಿಷ್ಟರಿಗೆ ವೈಜ್ಞಾನಿಕವಾಗಿ ಅನುದಾನ ಹಂಚಿಕೆಯಾಗುತ್ತಿರಲಿಲ್ಲ. ಆ ನ್ಯೂನತೆ ಸರಿಪಡಿಸುವ ಉದ್ದೇಶದಿಂದ ಜನಸಂಖ್ಯೆ ಆಧರಿಸಿ ಅನುದಾನ ಹಂಚಿಕೆ ಮತ್ತು ನಿರ್ದಿಷ್ಟ ಉದ್ದೇಶಗಳಿಗೇ ಬಳಕೆ ಮಾಡಲು 'ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ- 2013' ಜಾರಿಗೆ ತಂದ ಶ್ರೇಯ ಸಿದ್ದರಾಮಯ್ಯ ಅವರದ್ದು. ಪರಿಶಿಷ್ಟರಿಗೆ 2013–14ರಲ್ಲಿ ₹8,988 ಕೋಟಿ ಹಂಚಿಕೆಯಾಗಿತ್ತು. ಕಾಯ್ದೆ ಜಾರಿಯ ನಂತರ ಆಯವ್ಯಯದ ಶೇ 24.1ರಷ್ಟು ಕಡ್ಡಾಯವಾಗಿ ದೊರಕಿಸಿಕೊಟ್ಟಿದೆ. 2023ರ ಫೆಬ್ರುವರಿಯಲ್ಲಿ ಬಸವರಾಜ ಬೊಮ್ಮಾಯಿ ಸರ್ಕಾರ ಮಂಡಿಸಿದ್ದ ಬಜೆಟ್‌ನಲ್ಲಿ ಪರಿಶಿಷ್ಟರಿಗೆ ₹30,215 ಕೋಟಿ ಹಂಚಿಕೆ ಮಾಡಿದ್ದರು.

ಈ ಬಾರಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ವಸತಿಶಾಲೆಗಳು ಮತ್ತು ವಿದ್ಯಾರ್ಥಿ ನಿಲಯಗಳ ನಿರ್ಮಾಣಕ್ಕೆ ಒಟ್ಟು ₹2,710 ಕೋಟಿ ಒದಗಿಸಲಾಗಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘಗಳ (ಕ್ರೈಸ್) ಅಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಇಲಾಖೆಗಳಿಗೆ ಸೇರಿದ 29 ವಸತಿ ಶಾಲಾ ಸಂಕೀರ್ಣಗಳ ನಿರ್ಮಾಣ ಕಾಮಗಾರಿಗಳನ್ನು ₹ 638 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಇನ್ನು 20 ಹೋಬಳಿಗಳಲ್ಲಿ ಹೊಸ ವಸತಿಶಾಲೆಗಳನ್ನು ಆರಂಭಿಸಲು ಮತ್ತು ಬಾಡಿಗೆ ಕಟ್ಟಡದಲ್ಲಿರುವ 18 ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಪ್ರಸ್ತಾವಿಸಲಾಗಿದೆ. ಶೈಕ್ಷಣಿಕವಾಗಿ ಪ್ರಮುಖ ನಗರಗಳಲ್ಲಿ ವಸತಿನಿಲಯಗಳಿಗೆ ಬೇಡಿಕೆ ಹೆಚ್ಚುತ್ತಿರುವ ಕಾರಣ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ 31 ಹೊಸ ಮೆಟ್ರಿಕ್ ನಂತರದ ವಸತಿ ನಿಲಯಗಳನ್ನು ಮಂಜೂರು ಮಾಡುವ ಪ್ರಸ್ತಾವವಿದೆ. ಸರ್ಕಾರಿ ಮೆಟ್ರಿಕ್ ಪೂರ್ವ, ಮೆಟ್ರಿಕ್ ನಂತರದ ವಸತಿ ನಿಲಯಗಳು, ಆಶ್ರಮ ಶಾಲೆಗಳು ಮತ್ತು ವಸತಿ ಶಾಲೆಗಳ ವಿದ್ಯಾರ್ಥಿಗಳ ಭೋಜನ ವೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳಿಗೆ ₹ 100 ರಂತೆ ಹೆಚ್ಚಿಸಲು, ಪರಿಶಿಷ್ಟರಿಗೆ ದುಬಾರಿ ವೆಚ್ಚದ ಚಿಕಿತ್ಸೆಗೆ ₹35 ಕೋಟಿಯ ಕಾರ್ಪಸ್ ನಿಧಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಪರಿಶಿಷ್ಟ ಪಂಗಡಗಳ ಕಲ್ಯಾಣ: ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಅಡಿಯಲ್ಲಿರುವ ಆಶ್ರಮ ಶಾಲೆಗಳ ಹೆಸರನ್ನು ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳು ಎಂದು ಮರು ನಾಮಕರಣ ಮಾಡಲಾಗುವುದು. ಈ ಶಾಲೆಗಳನ್ನು ಉನ್ನತೀಕರಿಸುವ ಜೊತೆಗೆ ವಿದ್ಯಾರ್ಥಿಗಳ ಸಂಖ್ಯೆಯನ್ನೂ ಹೆಚ್ಚಿಸಲಾಗುವುದು. ಏಳು ಜಿಲ್ಲಾ ಕೇಂದ್ರಗಳಲ್ಲಿತಲಾ ಎರಡರಂತೆ 100 ಸಂಖ್ಯಾ ಬಲದ ಬಾಲಕ, ಬಾಲಕಿಯರ ಮೆಟ್ರಿಕ್ ನಂತರದ 14 ವಿದ್ಯಾರ್ಥಿನಿಲಯಗಳನ್ನು ಆರಂಭಿಸಲಾಗುವುದು. ಐಐಎಸ್‌ಸಿ, ಐಐಟಿ ಮತ್ತು ಎನ್‌ಐಟಿ ಸಂಸ್ಥೆಗಳ ಮೂಲಕ ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ಮುಂತಾದ 6 ರಿಂದ 12 ತಿಂಗಳ ಅವಧಿಯ ವೃತ್ತಿಪರ ತರಬೇತಿ ಕೋರ್ಸ್‌ಗಳಲ್ಲಿ ಭಾಗವಹಿಸುವ ಪರಿಶಿಷ್ಟ ಪಂಗಡಗಳ 200 ಎಂಜಿನಿಯರಿಂಗ್ ಪದವೀಧರರಿಗೆ ₹15 ಸಾವಿರ ಶಿಷ್ಯವೇತನ ನೀಡಲಾಗುವುದು.

ಹಿಂದುಳಿದ ಸಮುದಾಯ: ಪ್ರಸಕ್ತ ಸಾಲಿನಲ್ಲಿ ಹಿಂದುಳಿದ ವರ್ಗದ 500 ವಿದ್ಯಾರ್ಥಿಗಳಿಗೆ ಎರಡು ವರ್ಷ ಉಚಿತ ಜೆಇಇ, ನೀಟ್ ತರಬೇತಿ ನೀಡುವ ಯೋಜನೆ ಘೋಷಿಸಲಾಗಿದೆ. ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಅಧ್ಯಯನಕ್ಕೆ 'ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಆಯೋಗ ರಚನೆ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸಿಎಲ್‌ಎಟಿ, ಎಂಎಟಿ ಮತ್ತು ಚಾರ್ಟರ್ಡ್ ಅಕೌಂಟೆಂಟ್ ಫೌಂಡೇಷನ್ ಪರೀಕ್ಷೆಗಳಿಗೆ ಸಿದ್ಧಗೊಳಿಸಲು ಪರೀಕ್ಷಾ ಪೂರ್ವ ತರಬೇತಿ ನೀಡುವ ಯೋಜನೆ ಪ್ರಕಟಿಸಲಾಗಿದೆ. ಜಿಲ್ಲಾ ಕೇಂದ್ರಗಳಲ್ಲಿ 100 ಸಂಖ್ಯಾಬಲದ ಮೆಟ್ರಿಕ್ ನಂತರದ ತಲಾ 75 ಬಾಲಕರ ಮತ್ತು ಬಾಲಕಿಯರ ವಸತಿನಿಲಯ, ಈಗ ಇರುವ 100 ಸಂಖ್ಯಾಬಲದ 150 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಹಾಗೂ 174 ಮೊರಾರ್ಜಿ ದೇಸಾಯಿ ವಸತಿಶಾಲೆ, ಕಾಲೇಜುಗಳಲ್ಲಿ ₹200 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ, ಬಾಡಿಗೆ ಕಟ್ಟಡಗಳಲ್ಲಿರುವ 30 ವಿದ್ಯಾರ್ಥಿನಿಲಯಗಳಿಗೆ ₹4 ಕೋಟಿ ಘಟಕ ವೆಚ್ಚದಲ್ಲಿ ಕಟ್ಟಡಗಳನ್ನು ನಿರ್ಮಿಸುವ ಪ್ರಸ್ತಾವವಿದೆ.



ವಕ್ಫ್‌ಗೆ ₹100 ಕೋಟಿ, ಕ್ರೈಸ್ತರಿಗೆ ₹200 ಕೋಟಿ

ರಾಜ್ಯದಲ್ಲಿರುವ ವಕ್ಫ್ ಆಸ್ತಿಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ₹ 100 ಕೋಟಿ, ಕ್ರೈಸ್ತ ಸಮುದಾಯದ ಅಭಿವೃದ್ಧಿಗೆ ₹ 200 ಕೋಟಿ, ಜೈನರ ಪ್ರಮುಖ ಧಾರ್ಮಿಕ ಸ್ಥಳಗಳ ಅಭಿವೃದ್ಧಿಗೆ ₹ 50 ಕೋಟಿ ಅನುದಾನ ಘೋಷಿಸಲಾಗಿದೆ. ಅಲ್ಲದೆ, ಮಂಗಳೂರಿನಲ್ಲಿ ₹ 10 ಕೋಟಿ ವೆಚ್ಚದಲ್ಲಿ ಹಜ್ ಭವನ ನಿರ್ಮಿಸಲಾಗುವುದು. ಬೌದ್ಧರ ಪವಿತ್ರ ಗ್ರಂಥಗಳಾದ ತ್ರಿಪಿಟಕಗಳನ್ನು ಪಾಲಿ ಭಾಷೆಯಿಂದ ಕನ್ನಡಕ್ಕೆ ಅನುವಾದ ಮಾಡಲು ಸೂಕ್ತ ಅನುದಾನ ಒದಗಿಸಲಾಗುವುದು. ರಾಜ್ಯದಲ್ಲಿ ವಾಸಿಸುತ್ತಿರುವ ಸಿಖ್ಖ್ ಲಿಗಾರ್ ಸಮುದಾಯದ ಜನರ ಆರ್ಥಿಕ ಸಬಲೀಕರಣಕ್ಕಾಗಿ ₹ 2 ಕೋಟಿಯಲ್ಲಿ ಹೊಸ ಯೋಜನೆ ರೂಪಿಸಲಾಗುವುದು. ಬೀದರ್‌ನಲ್ಲಿರುವ ಶ್ರೀ ನಾನಕ್ ಝಿರಾ ಸಾಹೇಬ್ ಗುರುದ್ವಾರದ ಅಭಿವೃದ್ಧಿಗೆ ₹ 1 ಕೋಟಿ ಅನುದಾನ ನೀಡಲಾಗುವುದು. ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಈ ಸಾಲಿನಲ್ಲಿ ಒಟ್ಟು ₹ 393 ಕೋಟಿಯ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.

ವಾರಾಣಸಿ ವಸತಿ ಸಂಕೀರ್ಣಕ್ಕೆ ₹5 ಕೋಟಿ: ವಾರಾಣಸಿಯಲ್ಲಿ ₹5 ಕೋಟಿ ವೆಚ್ಚದಲ್ಲಿ ವಸತಿ ಸಂಕೀರ್ಣ, ಮಂತ್ರಾಲಯಕ್ಕೆ ಸಂಪರ್ಕ ಕಲ್ಪಿಸಲು ರಾಯಚೂರಿನ ಚಿಕ್ಕಮಂಚಾಲಿ ಗ್ರಾಮದ ಬಳಿ ₹ 158 ಕೋಟಿ ವೆಚ್ಚದಲ್ಲಿ ಬ್ರಿಡ್ಜ್-ಕಂ-ಬ್ಯಾರೇಜ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಶ್ರೀ ಘಾಟಿ ಸುಬ್ರಹ್ಮಣ್ಯಸ್ವಾಮಿ ದೇವಾಲಯ ಹಾಗೂ ಕೊಪ್ಪಳ ಜಿಲ್ಲೆಯ ಹುಲಿಗೆಮ್ಮ ದೇವಾಲಯದ ಅಭಿವೃದ್ಧಿಗೆ ಪ್ರತ್ಯೇಕ ಪ್ರಾಧಿಕಾರ, ಆದಾಯ ಇಲ್ಲದೆ 34,165 'ಸಿ' ವರ್ಗದ ಐತಿಹಾಸಿಕ ದೇವಾಲಯಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ 'ವಿಷನ್ ಗ್ರೂಪ್' ರಚನೆ, ಇನಾಂ/ಇನಾಂಯೇತರ ಜಮೀನು ಕಳೆದುಕೊಂಡ 'ಸಿ' ವರ್ಗದ 29,523 ದೇವಾಲಯಗಳ ಅರ್ಚಕರ ಬ್ಯಾಂಕ್ ಖಾತೆಗೆ ತಸ್ತಿಕ್ ಮೊತ್ತ ಜಮೆ ಮಾಡಲಾಗುವುದು ಎಂದು ಆಯವ್ಯಯದಲ್ಲಿ ತಿಳಿಸಲಾಗಿದೆ.

'ಕೆಕೆಆರ್‌ಡಿಬಿ'ಗೆ ₹5 ಸಾವಿರ ಕೋಟಿ

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ವ್ಯಾಪ್ತಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ₹ 5 ಸಾವಿರ ಕೋಟಿ ಒದಗಿಸಲಾಗಿದೆ. ಅಲ್ಲದೆ, ಡಿ.ಎಂ. ನಂಜುಂಡಪ್ಪ ವರದಿಯ ಆಧಾರದ ಮೇಲೆ ಹಿಂದುಳಿದ ಪ್ರದೇಶಗಳಲ್ಲಿ ಪ್ರಾದೇಶಿಕ ತಾರತಮ್ಯ ನಿವಾರಿಸಲು ಬಹಳಷ್ಟು ಯೋಜನೆಗಳನ್ನು ಮತ್ತು ಬಂಡವಾಳ ಹೂಡಿಕೆ ಮಾಡಲಾಗಿದೆ. ಇದರಿಂದ ಆಗಿರುವ ಬದಲಾವಣೆಗಳು ಮತ್ತು ಪರಿಣಾಮಗಳನ್ನು ಅಧ್ಯಯನ ಮಾಡಲು ಪ್ರಸಕ್ತ ಸಾಲಿನಲ್ಲಿ ಒಂದು ಉನ್ನತಾಧಿಕಾರಿ ಸಮಿತಿಯನ್ನು ರಚಿಸಲಾಗುವುದು. ಈ ಸಮಿತಿಯ, ರಾಜ್ಯದಲ್ಲಿನ ಆರ್ಥಿಕ ಮತ್ತು ಪ್ರಾದೇಶಿಕ ಅಸಮಾನತೆಯ ಆಧಾರದ ಮೇಲೆ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ವರ್ಗೀಕರಿಸಿ ಹೊಸ ಅಭಿವೃದ್ಧಿ ಸೂಚ್ಯಂಕ ತಯಾರಿಸಲು ಪ್ರಸ್ತಾಪಿಸಲಾಗಿದೆ.

ಖಾಸಗಿ ಸಹಭಾಗಿತ್ವಕ್ಕೆ ಒಲವು

ರಾಜ್ಯದಲ್ಲಿ ಮೂಲಸೌಕರ್ಯ ಯೋಜನೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಲು ಹೆಚ್ಚು ಒತ್ತು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಅದಕ್ಕಾಗಿ ನೀತಿಯನ್ನು ಪರಿಷ್ಕರಣೆ ಮಾಡಿ ಕೆಂಪು ಹಾಸು ಹಾಕಲು ಮುಂದಾಗಿದ್ದಾರೆ.



ಕೃಷಿ, ತೋಟಗಾರಿಕೆ, ಸಿರಿಧಾನ್ಯ ಮಾರುಕಟ್ಟೆ, ಉಗ್ರಾಣ ನಿರ್ಮಾಣ, ಪ್ರವಾಸೋದ್ಯಮ ತಾಣ ಅಭಿವೃದ್ಧಿ, ಸೋಲಾರ್ ಪಾರ್ಕ್ ನಿರ್ಮಾಣ, ಕ್ಯಾಥ್‌ಲ್ಯಾಬ್ ಸ್ಥಾಪನೆ, ರಸ್ತೆ ಅಭಿವೃದ್ಧಿ, ನಮ್ಮ ಮೆಟ್ರೊ ರೈಲು ವಿಸ್ತರಣೆ, ವಿದ್ಯುತ್ ಸಬ್‌ಸ್ಟೇಷನ್, ಜಲಸಾರಿಗೆ, ಬಂದರು ಅಭಿವೃದ್ಧಿ, ಹಡಗು ನಿರ್ಮಾಣ, ಜವಳಿ ಪಾರ್ಕ್, ಕ್ರೀಡಾಂಗಣ ಸೇರಿದಂತೆ ಕೇಬಲ್ ಕಾರ್, ರೋಪ್‌ವೇಗಳನ್ನು ಒದಗಿಸಲು ಖಾಸಗಿ ಸಹಭಾಗಿತ್ವವನ್ನೇ ಅವಲಂಬಿಸಲಾಗಿದೆ.

ಬಜೆಟ್ ಭಾಷಣದಲ್ಲಿ 37 ಅಂಶಗಳಲ್ಲಿ ನೂರಾರು ಯೋಜನೆಗಳನ್ನು ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ ಎಂದು ಘೋಷಿಸಲಾಗಿದೆ. ಅಲ್ಲದೆ, ವಸತಿ ನಿಲಯಗಳ ಅಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳ ಮೊರೆಹೋಗಲಾಗಿದೆ.

ಖಾಸಗಿ ಹೂಡಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ 'ಪಿಪಿಪಿ ನೀತಿ–2018'ಕ್ಕೆ ಮಧ್ಯಂತರ ಪರಿಷ್ಕರಣೆ ಮಾಡಲು ನಿರ್ಧರಿಸಲಾಗಿದೆ. ಅಲ್ಲದೆ, ಪಿಪಿಪಿ ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗುವ ಎಲ್ಲ ಯೋಜನೆಗಳ ಮಾಹಿತಿ ಸಂಗ್ರಹ, ಮೇಲ್ವಿಚಾರಣೆ, ಪರಿಶೀಲನೆಗೆ ತಂತ್ರಜ್ಞಾನ ಆಧಾರಿತ ಮಾಹಿತಿ ನಿರ್ವಹಣೆ ವ್ಯವಸ್ಥೆ ಅಳವಡಿಸಲಾಗುತ್ತದೆ ಎಂದು ಪ್ರಕಟಿಸಲಾಗಿದೆ.

ಸಿರಿಧಾನ್ಯಗಳನ್ನು ನಾಗರಿಕರಿಗೆ ತಲುಪಿಸುವ 'ನಮ್ಮ ಮಿಲ್ಲೆಟ್' ಮಾರುಕಟ್ಟೆಗೆ ಅಗ್ರಿ–ಟೆಕ್ ಕಂಪನಿಗಳನ್ನೇ ನಂಬಿಕೊಳ್ಳಲಾಗಿದೆ. ಕೃಷಿಯಲ್ಲಿ ತಾಂತ್ರಿಕತೆ ಅರಿವು ಮೂಡಿಸಲು ಜ್ಞಾನ ಕೇಂದ್ರ ನಿರ್ಮಾಣ, ಆಹಾರ ಪಾರ್ಕ್‌ಗಳ ನಿರ್ಮಾಣ, ತೋಟಗಾರಿಕೆ, ಪುಷ್ಪ ಬೆಳೆಗಳ ರಫ್ತಿಗೆ ಮಾರುಕಟ್ಟೆ– ಸಂಸ್ಕರಣಾ ಘಟಕಗಳ ಸ್ಥಾಪನೆ, ಶೀತಲಗೃಹ, ಸಾಂಬಾರು ಪದಾರ್ಥ ರಫ್ತು ಮಾಡಲು ಪಿಪಿಪಿ ಮಾದರಿಯನ್ನೇ ಅಳವಡಿಸಿಕೊಳ್ಳಲು ನಿರ್ಧರಿಸಲಾಗಿದೆ.

ಪ್ರತಿಕ್ರಿಯೆಗಳು



ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಉದ್ಯಮಿಗಳು ಸಣ್ಣ ಕೈಗಾರಿಕೆಗಳನ್ನು ಆರಂಭಿಸಲು ಹಾಗೂ ಅಸ್ತಿತ್ವದಲ್ಲಿರುವ ಕೈಗಾರಿಕೆಗಳನ್ನು ಉನ್ನತೀಕರಿಸುವುದಕ್ಕಾಗಿ ಶೇ 6ರ ಬಡ್ಡಿ ದರದಲ್ಲಿ ₹10 ಕೋಟಿವರೆಗೆ ಸಾಲ ನೀಡುವ ಕುರಿತು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರುವುದು ಸ್ವಾಗತಾರ್ಹ

ಮಕ್ಬೂಲ್ ಅಹಮದ್ ಖಾನ್, ಉಡುಪಿ



ಸಾಮಾನ್ಯ ವರ್ಗದವರಿಗೆ ಬಜೆಟ್‌ನಲ್ಲಿ ಯಾವುದೇ ಕೊಡುಗೆ ಸಿಕ್ಕಿಲ್ಲ. ಚಿಕ್ಕಮಗಳೂರಿಗೆ ಸ್ಪೈಸ್ ಪಾರ್ಕ್ ಬರಲಿದೆ ಎಂಬುದನ್ನು ಹಲವು ವರ್ಷಗಳಿಂದ ಕೇಳುತ್ತಿದ್ದೇವೆ. ಈ ಬಾರಿಯೂ ಪ್ರಸ್ತಾಪಿಸಲಾಗಿದ್ದು, ಅದು ಜಾರಿಯಾಗಲಿ

ಸುಮಾ ಪ್ರಸಾದ್, ಚಿಕ್ಕಮಗಳೂರು



ರೈತರ ಬಗ್ಗೆ ಕಾಳಜಿ ವಹಿಸಿ ₹27 ಸಾವಿರ ಕೋಟಿ ಬೆಳೆ ಸಾಲ ವಿತರಣೆ ಗುರಿ ಹೊಂದಿರುವುದು ಸ್ವಾಗತಾರ್ಹ. ಬೆಂಬಲ ಬೆಲೆ ಶೇ 50ರಷ್ಟು ಲಾಭಾಂಶ ಆಧಾರದಡಿ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದು ಒಳ್ಳೆಯ ಬೆಳವಣಿಗೆ

ರಮೇಶ, ಯಾದಗಿರಿ



ಅಂಜನಾದ್ರಿ ಅಭಿವೃದ್ಧಿಗೆ ₹100 ಕೋಟಿ ಘೋಷಿಸಿದ್ದು ಖುಷಿ ನೀಡಿದೆ. ನಿರುದ್ಯೋಗ ಸಮಸ್ಯೆ ಹೆಚ್ಚಿರುವ ಕಾರಣ ಯುವಜನತೆಯಲ್ಲಿ ಕೌಶಲ ಅಭಿವೃದ್ಧಿಗೆ ಸಾಕಷ್ಟು ಒತ್ತುಕೊಡಬೇಕಿತ್ತು. ಉದ್ಯೋಗ ಸೃಜನೆ ಆದ್ಯತೆಯಾಗಬೇಕಿತ್ತು

ಪ್ರತಿಮಾ ಪಟ್ಟಣಶೆಟ್ಟಿ, ಕೊಪ್ಪಳ



ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಮೀಸಲಿಡುವ ಮೂಲಕ ಸರ್ಕಾರಿ ಶಾಲೆ, ಕಾಲೇಜು ಉಳಿವಿಗೆ ಮುಂದಾಗಿರುವುದು ಮಾದರಿ ಕಾರ್ಯ. ಗ್ರಾಮೀಣ ಕೆಫೆ ಪ್ರಾರಂಭದ ಚಿಂತನೆ ಸರ್ವತೋಮುಖ ಅಭಿವೃದ್ಧಿಗೆ ಪೂರಕ

ಟಿ.ದಿಲೀಪ್ ಕುಮಾರ್, ಚಿತ್ರದುರ್ಗ



ಶಿಕ್ಷಣ, ನಗರಾಭಿವೃದ್ಧಿ, ಕೃಷಿಗೆ ಒತ್ತು ನೀಡಲಾಗಿದೆ. ಕ್ರೀಡೆಗೆ ಇನ್ನಷ್ಟು ಬೆಂಬಲ ಬೇಕಿತ್ತು. ಹಣಕಾಸು ಹೊಂದಾಣಿಕೆಗೆ ಕ್ರಮಬದ್ಧ ಯೋಜನೆಗಳನ್ನು ಮಾಡಿ ಬಜೆಟ್‌ನ ಘೋಷಣೆಗಳನ್ನು ಸರಿಯಾದ ರೀತಿಯಲ್ಲಿ ಜಾರಿ ಮಾಡಬೇಕು

ಎಚ್.ವಿ.ಯಶಸ್ವಿನಿ, ಶಿವಮೊಗ್ಗ

ಮಂಕಾದ ವಿಪಕ್ಷಗಳು: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

'ಗ್ಯಾರಂಟಿ ಯೋಜನೆಗಳಿಂದಾಗಿ ಜನರ ಖರೀದಿಸುವ ಸಾಮರ್ಥ್ಯ ವೃದ್ಧಿಸಿದೆ. ಆರ್ಥಿಕ ಚಲನೆಗೆ ವೇಗ ದೊರೆತಿದೆ. ಬರಗಾಲದ ಮಧ್ಯೆಯೂ ಗ್ಯಾರಂಟಿಗಳ ಅನುಷ್ಠಾನಕ್ಕಾಗಿ ₹52 ಸಾವಿರ ಕೋಟಿ ನೀಡಿದ್ದೇನೆ. ಅಗತ್ಯವಿದ್ದರೆ ಹೆಚ್ಚುವರಿ ಅನುದಾನ ಒದಗಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬಜೆಟ್ ಮಂಡನೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗ್ಯಾರಂಟಿ ಯೋಜನೆಗಳು ಬಡವರ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿವೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ, ಬೆಲೆ ಏರಿಕೆ, ಹಣದುಬ್ಬರ ಇರುವಾಗ ಗ್ಯಾರಂಟಿಗಳು ಜನರ ಬದುಕಿಗೆ ಆಸರೆಯಾಗಿವೆ. ಇತರೆ ಅಭಿವೃದ್ಧಿ ಕೆಲಸಗಳಿಗೆ ₹1 ಲಕ್ಷ ಕೋಟಿಗೂ ಹೆಚ್ಚು ಹಣ ಹೊಂದಿಸಲಾಗಿದೆ' ಎಂದರು.

'ಹೆಚ್ಚುವರಿ ತೆರಿಗೆಯನ್ನೂ ವಿಧಿಸದೆ ಬಜೆಟ್ ಗಾತ್ರವನ್ನು ₹3.71 ಲಕ್ಷ ಕೋಟಿಗೆ ಹೆಚ್ಚಿಸಲಾಗಿದೆ. ಇದನ್ನು ಅರ್ಥ ಮಾಡಿಕೊಳ್ಳದ ವಿರೋಧ ಪಕ್ಷಗಳು ಬಿಟ್ಟಿ ಭಾಗ್ಯ ಎನ್ನುತ್ತಾ ಬಡವರಿಗೆ ಅನ್ಯಾಯ ಮಾಡಿವೆ. ಬಜೆಟ್ ಮಂಡಿಸುವ ಮೊದಲೇ ವಿರೋಧ ಪಕ್ಷಗಳ ಸದಸ್ಯರು ಸಭಾತ್ಯಾಗ ಮಾಡಿದ್ದಾರೆ. ಇತಿಹಾಸದಲ್ಲೇ ಯಾವ ವಿರೋಧ ಪಕ್ಷವೂ ಹೀಗೆ ನಡೆದುಕೊಂಡಿಲ್ಲ. ಸಂಸದೀಯ ವ್ಯವಸ್ಥೆ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಲ್ಲದ ಅವರ ತಲೆಯಲ್ಲಿ ಏನೂ ಇಲ್ಲ. ರಾಜಕೀಯವಾಗಿ ಮಂಕಾಗಿದ್ದಾರೆ. ಕಾಮಾಲೆ ಕಣ್ಣು ಆವರಿಸಿಕೊಂಡಿದೆ. ತಲೆಗೆ ಮಂಜು ಕವಿದಿದೆ' ಎಂದು ಟೀಕಿಸಿದರು.

'ಬಜೆಟ್ ಮಂಡನೆಗೂ ಮೊದಲೇ ಫಲಕಗಳನ್ನು ತಂದಿದ್ದಾರೆ. ಇದರ ಅರ್ಥ ಬಜೆಟ್ ಓದುವುದನ್ನು ಕೇಳಿಸಿಕೊಳ್ಳಬಾರದು ಎಂದು ಮೊದಲೇ ನಿರ್ಧಾರ ಮಾಡಿಕೊಂಡು ಬಂದಿದ್ದಾರೆ. ಅವರು ಕೇಳದಿದ್ದರೆ ಚಿಂತೆ ಇಲ್ಲ. ವಿತ್ತೀಯ ಶಿಸ್ತು ಪಾಲಿಸಿ ಬಜೆಟ್ ಸಿದ್ಧಪಡಿಸಿದ್ದೇನೆ. ರಾಜ್ಯದ ಎಲ್ಲ ಜನರಿಗಾಗಿ ಬಜೆಟ್ ವಿವರಗಳನ್ನು ನೀಡಿದ್ದೇನೆ' ಎಂದರು.

'ನಮ್ಮ ಪಾಲಿನ ನ್ಯಾಯಯುತ ಪಾಲು ಬರದಿದ್ದರೂ ರಾಜ್ಯ ಆರ್ಥಿಕವಾಗಿ ಸುಭದ್ರವಾಗಿದೆ. ಉತ್ತರದ ರಾಜ್ಯಗಳು ಕಡಿಮೆ ತೆರಿಗೆ ನೀಡಿದರೂ, ಹೆಚ್ಚಿನ ನೆರವು ಪಡೆಯುತ್ತಿವೆ. ಕರ್ನಾಟಕದ ತೆರಿಗೆ ಪಾಲು ಶೇ 77ರಷ್ಟು ಇದ್ದರೂ, ಮರಳಿ ಪಡೆಯುವ ಮೊತ್ತ ಶೇ 23ರಷ್ಟಿದೆ. ಕರ್ನಾಟಕವೆಂಬ ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಕತ್ತರಿಸಿದಂತೆ ಕೇಂದ್ರದ ನಡೆ ಇದೆ. ಕೇಂದ್ರ ಸರ್ಕಾರ ಅನ್ಯಾಯ ಮಾಡಬಾರದು. 2017-2018ರಿಂದ ಇಲ್ಲಿಯವರೆಗೆ ₹1.87 ಲಕ್ಷ ಕೋಟಿ ಬಾಕಿ ಹಣವನ್ನು ನೀಡಿದ್ದರೆ ರಾಜ್ಯವನ್ನು ಯುರೋಪ್‌ನಂತೆ ಅಭಿವೃದ್ಧಿಪಡಿಸಬಹುದಿತ್ತು' ಎಂದರು.

'ಬಿಜೆಪಿ ವಕ್ತಾರರಾದ ಕುಮಾರಸ್ವಾಮಿ'

ಕೇಂದ್ರ ಬಜೆಟ್‌ನಲ್ಲಿ ಹಿಂದೆ ಭದ್ರಾ ಯೋಜನೆ ₹5,300 ಕೋಟಿ ಘೋಷಿಸಲಾಗಿತ್ತು. ಇದುವರೆಗೂ ನಯಾಪೈಸೆ ಹಣ ಬಂದಿಲ್ಲ. ಬರ ಪರಿಹಾರಕ್ಕೆ ನೆರವು ನೀಡಿಲ್ಲ. ಹಣಕಾಸು ಆಯೋಗದ ಅನುದಾನ ನೀಡಿಲ್ಲ. ಈ ಕುರಿತು ಬಿಜೆಪಿ ಸಂಸದರು, ಶಾಸಕರು ತುಟಿ ಬಿಚ್ಚುತ್ತಿಲ್ಲ. ಬಜೆಟ್‌ನಲ್ಲಿ ಈ ವಿಷಯ ಪ್ರಸ್ತಾಪಿಸಿದರೆ ರಾಜ್ಯದ ಜನರಿಗೆ ಸತ್ಯ ಗೊತ್ತಾಗಿ ಬಿಡುತ್ತದೆ ಎಂದು ನಾಟಕ ಮಾಡುತ್ತಿದ್ದಾರೆ. ಇದು ಕನ್ನಡಿಗರಿಗೆ ಬಿಜೆಪಿ ಬಗೆದ ದ್ರೋಹ, ಅವರ ಜತೆ ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿಯೂ ಸೇರಿಕೊಂಡಿದ್ದಾರೆ. ಬಿಜೆಪಿ ವಕ್ತಾರರಾಗಿದ್ದಾರೆ ಎಂದು ಸಿದ್ದರಾಮಯ್ಯ ಟೀಕಿಸಿದರು.

ಗ್ಯಾರಂಟಿಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಹಣ ಬಳಕೆ

ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲ್ಯಾಣಕ್ಕಾಗಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಗೆ ₹39 ಸಾವಿರ ಕೋಟಿ ನೀಡಲಾಗಿದೆ. ಅಗತ್ಯಬಿದ್ದರೆ ಗ್ಯಾರಂಟಿ ಯೋಜನೆಯಲ್ಲಿನ ಪರಿಶಿಷ್ಟ ಫಲಾನುಭವಿಗಳಿಗೆ ಅದರಲ್ಲೂ ಹಣ ಬಳಸಲಾಗುವುದು. ಮುಸ್ಲಿಂ, ಕ್ರೈಸ್ತರೂ ಸೇರಿದಂತೆ ಅಲ್ಪ ಸಂಖ್ಯಾತರ ಕಲ್ಯಾಣಕ್ಕೆ ಬಜೆಟ್‌ನಲ್ಲಿ ನೀಡಿರುವುದು ಶೇ 0.8 ಅಷ್ಟೇ. ಆದರೆ, ಬಿಜೆಪಿ ನಾಯಕರು ಇದನ್ನೇ ಮುಸ್ಲಿಮರ ಓಲೈಕೆ ಎನ್ನುತ್ತಾರೆ. ಅವರಿಗೆ ಬೇರೆ ವಿಷಯಗಳೇ ಇಲ್ಲ ಎಂದು ಮುಖ್ಯಮಂತ್ರಿ ಅಸಮಾಧಾನ ವ್ಯಕ್ತಪಡಿಸಿದರು.

ಬಜೆಟ್‌ನಲ್ಲೂ ಕೇಂದ್ರ, ಬಿಜೆಪಿಗೆ ತಿವಿತ

ಪ್ರಜಾವಾಣಿ ವಾರ್ತೆ

ತೆರಿಗೆ ಪಾಲು ಹಂಚಿಕೆ, ಅನುದಾನ ಮತ್ತು ನೆರವುಗಳ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೇಂದ್ರ ಸರ್ಕಾರ ಹಾಗೂ ಬಿಜೆಪಿ ವಿರುದ್ಧ ಬಜೆಟ್‌ನಲ್ಲೂ ವಾಗ್ದಾಳಿ ಮುಂದುವರಿಸಿದರು.

ಕೇಂದ್ರ ಸರ್ಕಾರ ಮತ್ತು ಬಿಜೆಪಿಯಿಂದ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂಬ ಉಲ್ಲೇಖ ಬಜೆಟ್‌ನ ಹಲವೆಡೆ ಇದೆ. 'ಹಿಂದಿನ ಹತ್ತು ವರ್ಷಗಳ ಅವಧಿಯಲ್ಲಿನ ಕೇಂದ್ರ ಸರ್ಕಾರದ ಜನವಿರೋಧಿ ನಿಲುವುಗಳಿಂದ ಅಸಮಾನತೆ ಹೆಚ್ಚಾಗಿದೆ' ಎಂದು ಆರಂಭದಲ್ಲೇ ತಿವಿದ ಅವರು, 'ಕೇಂದ್ರ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಂಡಿದೆ. ಅದಕ್ಕಾಗಿ ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಮೂಲಕ ಆ ಕೆಲಸವನ್ನು ಕೈಗೆತ್ತಿಕೊಂಡಿದೆ' ಎಂದರು.

'ನಮ್ಮ ಗ್ಯಾರಂಟಿ ಯೋಜನೆಗಳನ್ನು ಟೀಕಿಸುವವರೇ ಗ್ಯಾರಂಟಿಗಳನ್ನು ಕದ್ದು ಅವರ ಗ್ಯಾರಂಟಿಗಳು ಎಂಬುದಾಗಿ ಬಿಂಬಿಸುತ್ತಿರುವುದು ವಿಪರ್ಯಾಸ' ಎಂದು ಕೇಂದ್ರ ಸರ್ಕಾರವನ್ನು ಟೀಕಿಸಿದರು.

'ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅವೈಜ್ಞಾನಿಕ ಹಂಚಿಕೆಯಿಂದ ಏಳು ವರ್ಷಗಳಲ್ಲಿ ರಾಜ್ಯಕ್ಕೆ ₹59,274 ಕೋಟಿ ನಷ್ಟವಾಗಿದೆ. 15ನೇ ಹಣಕಾಸು ಆಯೋಗದ ಅನುದಾನ ನಿಗದಿಯಲ್ಲೂ ₹62,098 ಕೋಟಿ ನಷ್ಟವಾಗಿದೆ. ಡಬ್ಬಲ್ ಎಂಜಿನ್ ಎಂದು ಹೇಳಿಕೊಳ್ಳುವ ಸರ್ಕಾರ ಇದ್ದರೂ ರಾಜ್ಯಕ್ಕೆ ನ್ಯಾಯ ದೊರಕಿರಲಿಲ್ಲ' ಎಂದು ಬಿಜೆಪಿ ವಿರುದ್ಧ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

'ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಿ, ₹5,300 ಕೋಟಿ ಅನುದಾನ ಕೊಡುವುದಾಗಿ ಕೇಂದ್ರ ಸರ್ಕಾರ 2023–24ರ ಬಜೆಟ್‌ನಲ್ಲಿ ಘೋಷಿಸಿತ್ತು. ಆಗಿನ ರಾಜ್ಯ ಸರ್ಕಾರವು ಪ್ರಧಾನಿಯವರಿಗೆ ತನ್ನ ಬಜೆಟ್‌ನಲ್ಲೇ ಅಭಿನಂದನೆ ಹೇಳಿತ್ತು. ಆದರೆ, ಆ ಭರವಸೆ ಹುಸಿಯಾಗಿಯೇ ಉಳಿದಿದೆ' ಎಂದು ಟೀಕಾಪ್ರಹಾರ ಮಾಡಿದರು.

ಬ್ಯಾಡ್ಮಿಂಟನ್: ಭಾರತ ಮಹಿಳೆಯರ ಐತಿಹಾಸಿಕ ಸಾಧನೆ

ಶಾ ಆಲಂ (ಮಲೇಷ್ಯಾ): ಭಾರತ ಮಹಿಳಾ ತಂಡವು ಶುಕ್ರವಾರ ಬ್ಯಾಡ್ಮಿಂಟನ್ ಏಷ್ಯಾ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಹಾಂಗ್‌ಕಾಂಗ್ ವಿರುದ್ಧ 3–0ಯಿಂದ ಜಯ ಸಾಧಿಸಿ ಸೆಮಿಫೈನಲ್ ಪ್ರವೇಶಿಸಿತು. ಈ ಮೂಲಕ ಇತಿಹಾಸದಲ್ಲೇ ಮೊಟ್ಟಮೊದಲ ಪದಕ ಜಯವನ್ನು ಖಚಿತಪಡಿಸಿಕೊಂಡಿತು. ಆದರೆ, ಪುರುಷರ ತಂಡವು ರೋಚಕ ಕ್ವಾರ್ಟರ್ ಫೈನಲ್‌ನಲ್ಲಿ ಜಪಾನ್ ವಿರುದ್ಧ ಮುಗ್ಗರಿಸಿತು.

ಗುಂಪು ಹಂತದ ಪಂದ್ಯದಲ್ಲಿ ಅಗ್ರ-ಶ್ರೇಯಾಂಕದ ಚೀನಾಕ್ಕೆ ಆಘಾತ ನೀಡಿದ್ದ ಭಾರತದ ಆಟಗಾರ್ತಿಯರು ಕ್ವಾರ್ಟರ್ ಫೈನಲ್ ಪಂದ್ಯದಲ್ಲೂ ಅಮೋಘ ಆಟವಾಡಿದರು. ಎರಡು ಒಲಿಂಪಿಕ್ಸ್ ಪದಕ ವಿಜೇತೆ ಪಿ.ವಿ. ಸಿಂಧು ಮುಂದಾಳತ್ವದಲ್ಲಿ ಅಶ್ಮಿತಾ ಚಲಿಹಾ, ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಅವರು ಹಾಂಗ್‌ಕಾಂಗ್ ಆಟಗಾರ್ತಿಯರನ್ನು ಸದೆಬಡಿದರು.



ಪಿ.ವಿ. ಸಿಂಧು

ಸಿಂಗಲ್ಸ್‌ನಲ್ಲಿ ಸಿಂಧು 21-7, 16-21, 21-12ರಿಂದ ಲೊ ಸಿನ್ ಯಾನ್ ಹ್ಯಾಪಿ ವಿರುದ್ಧ, ಅಶ್ಮಿತಾ 21-12, 21-13 ರಿಂದ ಯೂಂಗ್ ಸಮ್ ಯೀ ವಿರುದ್ಧ ಜಯಿಸಿದರು. ಡಬಲ್ಸ್‌ನಲ್ಲಿ ಅಶ್ವಿನಿ- ತನಿಶಾ 21-10, 21-14ರಿಂದ ಯೆಂಗ್ ನ್ಗಾ ಟಿಂಗ್ ಮತ್ತು ಯೆಂಗ್ ಪುಯಿ ಲ್ಯಾಮ್ ಅವರನ್ನು ಹಿಮ್ಮೆಟ್ಟಿಸಿದರು.

2016 ಮತ್ತು 2020ರ ಆವೃತ್ತಿಗಳಲ್ಲಿ ಭಾರತ ಪುರುಷರ ತಂಡವು ಕಂಚಿನ ಪದಕ ಜಯಿಸಿತ್ತು.

ಪುರುಷರಿಗೆ ಸೋಲು: ಇದೇ ವೇಳೆ ಭಾರತದ ಪುರುಷರ ತಂಡವು 2–3ರಿಂದ ಜಪಾನ್ ತಂಡಕ್ಕೆ ಮಣಿಯಿತು. ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ 21-19, 22-20 ರಿಂದ ಕೊಕೊ ವಟನಾಬೆ ವಿರುದ್ಧ ಜಯ ಪಡೆದರೆ, ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು 21-15, 21-17ರಿಂದ ಕೆನ್ಯಾ ಮಿತ್ಸುಹಾಶಿ ಮತ್ತು ಹಿರೋಕಿ ಒಕಮುರಾ ಜಯಭೇರಿ ಸಾಧಿಸಿತು.

ಆದರೆ, ಇತರ ಸಿಂಗಲ್ಸ್ ಹಣಾಹಣಿಯಲ್ಲಿ ಕಿದಂಬಿ ಶ್ರೀಕಾಂತ್ 21–17, 9–21, 20–22ರಿಂದ ಕೆಂಟೊ ಮೊಮೊಟಾ ಅವರಿಗೆ ಮತ್ತು ಎಚ್.ಎಸ್. ಪ್ರಣಯ್ ಅವರು 16–21, 24–26ರಿಂದ ಕೆಂಟೊ ನಿಶಿಮೊಟೊ ಅವರಿಗೆ ಶರಣಾದರು.

ಡಬಲ್ಸ್‌ನಲ್ಲಿ ಎಂ.ಆರ್. ಅರ್ಜುನ್ ಮತ್ತು ಧ್ರುವ ಕಪಿಲಾ ಜೋಡಿಯು 17–21, 15–21ರಿಂದ ಅಕಿರಾ ಕೋಗಾ ಮತ್ತು ಕಝುಕಿ ಶಿಬಾಟಾ ವಿರುದ್ಧ ಮುಗ್ಗರಿಸಿತು.

ರಣಜಿಯಲ್ಲಿ ಆಡದ ಇಶಾನ್

ಜೆಮ್ಶೆಡ್‌ಪುರ್ (ಪಿಟಿಐ): ವಿಕೆಟ್‌ಕೀಪರ್ ಬ್ಯಾಟರ್ ಇಶಾನ್ ಕಿಶನ್ ಅವರು ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಆಡುತ್ತಿಲ್ಲ.

ಶುಕ್ರವಾರ ಆರಂಭವಾದ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಇಶಾನ್ ಅವರ ತವರು ಜಾರ್ಖಂಡ್ ತಂಡವು ರಾಜಸ್ಥಾನ ವಿರುದ್ಧ ಆಡುತ್ತಿದೆ. ರಣಜಿ ಪಂದ್ಯದಲ್ಲಿ ಆಡುವಂತೆ ಈಚೆಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಸೂಚನೆ ನೀಡಿತ್ತು.

ಆದರೆ ಅವರು ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರೊಂದಿಗೆ ಬರೋಡಾದಲ್ಲಿ ಅಭ್ಯಾಸ ನಡೆಸುತ್ತಿದ್ದಾರೆ. ಅವರಲ್ಲದೇ ಮಧ್ಯಮವೇಗಿ ದೀಪಕ್ ಚಾಹರ್ ಕೂಡ ರಣಜಿ ಪಂದ್ಯದಿಂದ ದೂರವುಳಿದಿದ್ದಾರೆ.

'ಭಾರತ ತಂಡಕ್ಕೆ ಮರಳಲು ದೇಶಿ ಕ್ರಿಕೆಟ್‌ನಲ್ಲಿ ಉತ್ತಮವಾಗಿ ಆಡಬೇಕು. ರಣಜಿ ಆಡು' ಎಂದು ಭಾರತ ತಂಡದ ಅನುಭವಿ ಆಟಗಾರರೊಬ್ಬರು ಇಶಾನ್‌ಗೆ ಹೇಳಿದ್ದರು ಎನ್ನಲಾಗಿದೆ.

ಯೋಗೇಂದ್ರಗೆ ಚಿನ್ನ



ಯೋಗೇಂದ್ರ

ಬೆಂಗಳೂರು: ಮೈಸೂರಿನ ಎಂ. ಯೋಗೇಂದ್ರ ಅವರು ಪುಣೆ ಯಲ್ಲಿ ನಡೆದ 44ನೇ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್‌ನ 2000 ಮೀ ಸ್ಟೀಪಲ್ ಚೇಸ್‌ನಲ್ಲಿ ಚಿನ್ನ ಗೆದ್ದರು. ಶುಕ್ರವಾರ ನಡೆದ 60 ವರ್ಷ ಮೇಲ್ಪಟ್ಟ ಪುರುಷರ ವಿಭಾಗದಲ್ಲಿ ಅವರು ಸ್ಪರ್ಧಿಸಿದ್ದರು.

ವಾಲಿಬಾಲ್ ಲೀಗ್: ಟಾರ್ಪಿಡೋಸ್‌ಗೆ ಜಯ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಬೆಂಗಳೂರು ಟಾರ್ಪಿಡೋಸ್ ತಂಡವು ಪ್ರೈಮ್ ವಾಲಿಬಾಲ್ ಲೀಗ್‌ನ ಮೂರನೇ ಆವೃತ್ತಿಯಲ್ಲಿ ಕೋಲ್ಕತ್ತ ಥಂಡರ್‌ಬೋಲ್ಟ್ ತಂಡವನ್ನು ಮಣಿಸಿ ಶುಭಾರಂಭ ಮಾಡಿದೆ.

ಚೆನ್ನೈನ ಜವಾಹರ್‌ಲಾಲ್ ನೆಹರೂ ಒಳಾಂಗಣ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 16-14, 14-16, 15-13, 15-10 ರಿಂದ ಕೋಲ್ಕತ್ತ ವಿರುದ್ಧ ಜಯ ಸಾಧಿಸಿತು. ಟಾರ್ಪಿಡೋಸ್‌ನ ಥಾಮಸ್ ಹೆಪ್ಪಿನ್‌ಸ್ಟಾಲ್ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದರು.

ಗೋಡೆ ಅಲಂಕರಿಸಿ ಮನೆಯ ಅಂದ ಹೆಚ್ಚಿಸಿ

ಪವಿತ್ರಾ ಭಟ್

ವಿಶೇಷ ಸಂದರ್ಭಗಳಲ್ಲಿ ಮನೆಯನ್ನು ಅಂದಗೊಳಿಸುವುದು ಸಹಜ. ಆದರೆ ಪ್ರತಿದಿನ ಮನೆಯನ್ನು ನಳನಳಿಸುವಂತೆ ಇಟ್ಟುಕೊಳ್ಳಬೇಕೆಂದರೆ ಗೋಡೆ ಅಲಂಕಾರ ಉತ್ತಮ ಆಯ್ಕೆ. ಅಂದವಾದ ಗೋಡೆಗಳು ಮನೆಯ ಸೌಂದರ್ಯ ಹೆಚ್ಚಿಸುವುದರ ಜತೆಗೆ ಮನಸ್ಸಿಗೂ ಆಹ್ಲಾದಕರವೆನಿಸುತ್ತವೆ.

ಅರೇ ಗೋಡೆಯನ್ನು ಹೇಗೆ ಅಂದಗೊಳಿಸುವುದು ಎಂದು ಯೋಚಿಸುತ್ತಿದ್ದರೆ ಅದಕ್ಕೆ ಹಲವು ವಿಧಾನಗಳಿವೆ. ವಾಲ್ ಡೆಕೋರ್ ಅಥವಾ ಗೋಡೆ ಅಲಂಕಾರ ಇತ್ತೀಚಿನ ದಿನಗಳಲ್ಲಿ ಟ್ರೆಂಡ್‌ನಂತಾಗಿದೆ. ಅದಕ್ಕಾಗಿ ಇಲ್ಲಿದೆ ನೋಡಿ ಸಿಂಪಲ್ ಐಡಿಯಾಗಳು

ಫೋಟೊ ಗ್ಯಾಲರಿ ನಾವು ಕ್ಲಿಕ್ಕಿಸಿಕೊಳ್ಳುವ ಕೆಲವು ಫೋಟೊಗಳು ಅಚ್ಚುಮೆಚ್ಚಿನದ್ದಾಗಿರುತ್ತವೆ. ಅಂಥಹ ಫೋಟೊಗಳನ್ನು ಫ್ರೇಮ್ ಹಾಕಿಸಿ ಮನೆಯ ಗೋಡೆಗಳಿಗೆ ತೂಗು ಹಾಕಿದರೆ ಗೋಡೆಯ ಅಂದವನ್ನೂ ಹೆಚ್ಚಿಸಬಹುದು. ಪ್ರೀತಿ ಪಾತ್ರರೊಂದಿಗಿನ ಅಪರೂಪದ ಕ್ಷಣಗಳನ್ನು ಸದಾ ಹಸಿರಾಗಿಟ್ಟುಕೊಳ್ಳಬಹುದು.

ಕ್ರಾಫ್ಟ್‌ಗಳು ಕಸದಿಂದ ರಸ ಎನ್ನುವಂತೆ ಬೇಡವೆಂದು ಬಿಸಾಕಿದ ಬಾಟಲ್‌ಗಳು, ನ್ಯೂಸ್ ಪೇಪರ್‌ಗಳಿಂದ ಅಂದವಾದ ಕ್ರಾಫ್ಟ್‌ಗಳನ್ನು ಮಾಡಿ ಮನೆಯ ಗೋಡೆಗೆ ತೂಗುಹಾಕಬಹುದು. ಪೇಪರ್‌ನಲ್ಲಿ ಚಿಟ್ಟೆ, ಹೂವುಗಳು ಮಾಡಿ ಅಂಟಿಸಬಹುದು. ಜತೆಗೆ ಪ್ಲಾಸ್ಟಿಕ್ ಬಾಟಲ್, ಹಳೆಯ ಸಿ.ಡಿಗಳು, ಪೇಪರ್ ಕಪ್, ಪ್ಲಾಸ್ಟಿಕ್ ಸ್ಟ್ರಾಗಳಿಂದ ವಿಭಿನ್ನ ರೀತಿಯ ವಾಲ್ ಹ್ಯಾಂಗಿಂಗ್‌ಗಳನ್ನು ತಯಾರಿಸಿ ಗೋಡೆಗೆ ಹಾಕಿದರೆ ಗೋಡೆಯ ಆಕರ್ಷಣೆಯನ್ನು ಇನ್ನಷ್ಟು ಹೆಚ್ಚಿಸಬಹುದು.



ಹಸಿರು ಗಿಡಗಳು ಅರೇ ಇದೇನಿದು ಮನೆಯ ಒಳಗೆ ಗಿಡಗಳನ್ನು ಇಡಬಹುದೇ ಎಂಬ ಸಂದೇಹ ಮೂಡಬಹುದು. ಹೌದು ಮನೆಯ ಒಳಗೆ ಇಡಬಹುದಾದ ಒಂದಷ್ಟು ಹಸಿರು ಗಿಡಗಳಿವೆ. ಅದರಲ್ಲಿ ಒಂದು ಏರ್ ಪ್ಲಾಂಟ್‌ಗಳು. ಇದನ್ನು ಗೋಡೆಗೆ ತೂಗುಹಾಕುವುದರಿಂದ ಮನೆಯನ್ನು ಚೆಂದಗೊಳಿಸಬಹುದು. ಈ ಸಸ್ಯಗಳಿಗೆ ವಾರಕ್ಕೊಮ್ಮೆ ನೀರು ಹಾಕಿದರೆ ಸಾಕಾಗುತ್ತದೆ. ಇದರ ಜತೆಗೆ ರಬ್ಬರ್ ಪ್ಲಾಂಟ್, ಪೀಸ್ ಲಿಲಿ, ರೋಜಾಮೇರಿ ಗಿಡ, ಸ್ಪೈಡರ್ ಪ್ಲಾಂಟ್‌ಗಳು ಗೋಡೆಯ ಅಂದವನ್ನು ಇಮ್ಮಡಿಗೊಳಿಸಿ ಮನೆಯ ಒಳಗೆ ಹಸಿರು ವಾತಾವರಣವನ್ನು ನಿರ್ಮಿಸುತ್ತವೆ.

ಪೇಂಟಿಂಗ್‌ಗಳು ನೀವೇನಾದರೂ ಚಿತ್ರಕಲೆಯ ಪ್ರಿಯರಾಗಿದ್ದರೆ ಮನೆಯ ಗೋಡೆಗಳನ್ನು ಅಲಂಕರಿಸುವುದು ಸುಲಭ. ಕ್ಯಾನ್‌ವಾಸ್ ಪೇಂಟಿಂಗ್‌ಗಳು, ಮಂಡಲ ಆರ್ಟ್, ಪೆನ್ಸಿಲ್ ಆರ್ಟ್‌ಗಳು ಗೋಡೆಗಳಿಗೆ ಹೊಸತನವನ್ನು ನೀಡಬಲ್ಲದು. ನಿಮ್ಮ ಚಿತ್ರಕಲೆಯ ಹವ್ಯಾಸಕ್ಕೆ ನಿಮ್ಮ ಮನೆಯ ಗೋಡೆ ವೇದಿಕೆಯಾಗಬಲ್ಲದು.


ಲೈಟ್ ಹಾಗೂ ಲ್ಯಾಂಪ್‌ಗಳು ಗೋಡೆಗಳಿಗೆ ಅಲ್ಲಲ್ಲಿ ಸ್ಪ್ರಿಂಟ್ ಲೈಟ್, ಲ್ಯಾಟರ್ನ್ಸ್‌ಗಳನ್ನು ಹಾಕುವುದರಿಂದ ಮನೆಗೆ ಸಾಂಪ್ರದಾಯಿಕ ಲುಕ್ ನೀಡಬಹುದು. ಇದರ ಜತೆ ಎಲ್‌ಇಡಿ ಬಲ್ಬ್‌ಗಳ ಸರ, ಪೇಪರ್ ಗೂಡು ದೀಪಗಳನ್ನು ಗೋಡೆಯ ಮೇಲೆ ತೂಗುಹಾಕಬಹುದು. ರಾತ್ರಿ ವೇಳೆಯಂತೂ ಇವು ಮನೆಯ ಸೊಬಗನ್ನು ಇಮ್ಮಡಿಗೊಳಿಸಬಲ್ಲದು. ❖



ಸುಂದರ ಒಳಾಂಗಣ

ಸ್ವಪ್ರೀತಿಯ ಸಪ್ತಾಹವಿದು!

ಪ್ರೀತಿಯ ಗಾಳಿ ಫೆಬ್ರುವರಿ ತಿಂಗಳಿನಲ್ಲಿ ನಮ್ಮನ್ನು ಆವರಿಸಿಕೊಳ್ಳುತ್ತದೆ. ವಿರಹದ ಬಿಸಿಲೇರುವ ಮುನ್ನ ಸ್ವಪ್ರೀತಿಯ ಮಹತ್ವ ಹೇಳುವ ಆ್ಯಂಟಿ ವ್ಯಾಲೆಂಟೈನ್ ವೀಕ್ ಅಂತಲೂ ಹಮ್ಮಿಕೊಳ್ಳಲಾಗುತ್ತದೆ.



ಕಳೆದ ಒಂದು ವಾರದಿಂದ ಪ್ರೀತಿಯ ಗಾಳಿ ಬೀಸುತ್ತಲೇ ಇತ್ತು.. ಗಲ್ಲಿ, ಮಾಲು ಮೊಹಲ್ಲಗಳಿಂದ. ಆದರೆ ಹದಿನೈದರ ನಂತರ ಇದು ವಿರಹಿಗಳ, ಚಿರ ವಿರಹಿಗಳ ಸಪ್ತಾಹವಾಗಿ ಬದಲಾಗುತ್ತದೆ.

ಹೃದಯ ಬಿರಿದವರ, ಭಗ್ನ ಪ್ರೇಮಿಗಳಿಗಾಗಿ ಎಂದೇ ಒಂದು ವಾರವನ್ನು ಆಚರಿಸಲಾಗುತ್ತದೆ. ಇದು ಯಾವಾಗಿನಿಂದ ಆರಂಭವಾಯಿತು ಎಂಬುದು ಸ್ಪಷ್ಟವಾಗಿಲ್ಲ. ಆದರೆ ಫೆ.7ರಿಂದ ಹದಿನಾಲ್ಕರವರೆಗೆ ಪ್ರೀತಿಪಾತ್ರರಿಗೆ ಪ್ರೇಮದ ಕಾಣ್ಕೆಗಳನ್ನು ಕೊಡುತ್ತ ಸಂಭ್ರಮಿಸಲಾಗುತ್ತದೆ. ಹದಿನೈದರಿಂದ 21ರವರೆಗೆ ಭಗ್ನಪ್ರೇಮಿಗಳಿಗಾಗಿಯೇ ವಿಶೇಷ ದಿನಗಳನ್ನು ಹಮ್ಮಿಕೊಳ್ಳಲಾಗಿದೆ.

ಫೆ.15 ಸ್ಲ್ಯಾಪ್ ಡೇ: ಹೃದಯ ಚೂರಾಗಿಸಿದ ಹಳೆಯ ಸಂಗಾತಿಯ ಕೆನ್ನೆಗೆ ಬಾರಿಸುವ ದಿನವಿದು. ಹೋಗಿ ಬಾರಿಸಲೇ ಬೇಕೆಂಬ ನಿಯಮವೇನಿಲ್ಲ. ಆದರೆ ಅವರು ನಿಮ್ಮ ಬದುಕಿನಲ್ಲಿ ಬಿಟ್ಟು ಹೋಗಿರುವ ಎಲ್ಲ ಗುರುತು, ಸಂಕೇತಗಳನ್ನೂ, ನಿಮ್ಮ ಮನದಲ್ಲಿರುವ ಸಿಟ್ಟು, ರೋಷಗಳಿಂದ ಬಾರಿಸುವಂತೆ ಬಾರಿಸಿ, ಕೊಡವಿಹಾಕಬೇಕು. ಹಳೆಯ ಪ್ರೀತಿಯನ್ನು ಮರೆಯುವ ಹೊಸ ಸೂತ್ರವಿದು.

ಫೆ.16 ಕಿಕ್ ಡೇ: ಅಂದ್ರೆ ಹಳೆಯ ಸಂಗಾತಿ ಬಳಿ ಹೋಗಿ ಒದೆ ಕೊಟ್ಟು ಬರುವುದಲ್ಲ. ಚಾದರೊದ್ದು ಮಲಗುವುದು ಎಂಬ ಮಾತಿದೆಯಲ್ಲ ಹಾಗೇನೆ ಅವರ ನೆನಪುಗಳನ್ನೆಲ್ಲ ಒದ್ದು, ಅವರು ನೀಡಿದ ಕೊಡುಗೆಗಳಿದ್ದರೆ ಆಚೆ ಎಸೆದು, ಅವರ ಯಾವ ಗುರುತುಗಳೂ ಬದುಕಿನಲ್ಲಿರದಂತೆ ಒದ್ದು ಹಾಕುವುದು.

ಜಬ್ ವಿ ಮೆಟ್‌ನ ಪಾತ್ರ ಗೀತ್, ತನ್ನ ಪ್ರೇಮಿಯ ಫೋಟೊವನ್ನು ಸುಟ್ಟು, ಕಮೋಡ್‌ಗೆ ಹಾಕಿ, ಫ್ಲಷ್ ಮಾಡಿ, ಆತನಿಗೆ ಕರೆ ಮಾಡಿ, ಬಾಯ್ತುಂಬ ಬೈದು ನಿರಾಳ ಆಗ್ತಾಳಲ್ಲ.. ಹಾಗೆ ನಿರಾಳವಾಗುವ ದಿನಗಳಿವು.


ಫೆ. 17 ಪರ್ಫ್ಯೂಮ್ ಡೇ: ಭಗ್ನ ಪ್ರೇಮಿಗಳಂತೆ ಗಡ್ಡ ಬಿಟ್ಟು, ಊಟ ನಿದ್ದೆ ಬಿಟ್ಟು ಸೊರಗುವ ಬದಲು ಸ್ವಪ್ರೀತಿಯನ್ನು ಆರಂಭಿಸುವ ದಿನ ಇದು. ನಿಮ್ಮತನವನ್ನು ಸಂಭ್ರಮಿಸುವ ದಿನ. ಮೊದಲೆರಡು ದಿನಗಳಲ್ಲಿ ನಿಮ್ಮದಲ್ಲದ, ನಿಮ್ಮದಾಗದ ಪ್ರೀತಿಯನ್ನು ಮರೆತು, ಸಂಗಾತಿಯನ್ನು ಮರೆತು, ನಿಮ್ಮನ್ನೇ ಮೊದಲಿಗೆ ಪರಿಗಣಿಸುವ ದಿನವಿದು. ನಿಮಗಿಷ್ಟವಾದ ಸುಗಂಧ ದ್ರವ್ಯ ಕೊಂಡುಕೊಮಡು, ಸ್ವಪ್ರೀತಿಯ ಮಾಧುರ್ಯ ಆವರಿಸಿಕೊಳ್ಳುವಂತೆ ಮಾಡುವ ದಿನವಿದು.

ಫೆ.18 ಫ್ಲರ್ಟ್ ಡೇ: ಮತ್ತೊಮ್ಮೆ ಪ್ರೀತಿಸುವ ದಿನವಿದು. ನಮಗೊಂದೇ ಜೀವನ. ನಮ್ಮದೊಂದೇ ಜೀವ. ಸಂತೋಷವಾಗಿರಲಿ ಎನಿಸಿದರೆ ನಿಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಜೀವನ. ಹೊರಗೆ ಹೋಗಿ, ಮತ್ತೊಬ್ಬ ಸಂಗಾತಿಯನ್ನು ಹುಡುಕಿ. ನಿಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ. ಪ್ರೀತಿಯನ್ನು ಹೇಳಿಕೊಳ್ಳಿ. ಯಾರಿಗೆ ಗೊತ್ತು, ಬದುಕು ಎರಡನೆಯ ಅವಕಾಶವನ್ನು ನೀಡಲೂಬಹುದು. ಆದರೆ ಹೊರಹೋಗುವ, ಹಳೆಯ ಸಾಂಗತ್ಯದಿಂದ ಹೊರಬರುವ ಮನಸು ಮಾಡಿ.

ಫೆ.19 ಕನ್ಫೆಶನ್ ಡೇ: ಹೆಸರೇ ಹೇಳುವಂತೆ ನಿಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವ ದಿನ. ಈ ಹಿಂದೆ ಯಾರದ್ದಾದರೂ ಮನಸು ನೋಯಿಸಿದ್ದಲ್ಲಿ, ಹೃದಯ ಭಗ್ನವಾಗಿಸಿದ್ದಲ್ಲಿ, ಆ ತಪ್ಪುಗಳ, ಅಪರಾಧಿ ಪ್ರಜ್ಞೆಯ ಬ್ಯಾಗೇಜನ್ನು ಹೊತ್ತು ಅಡ್ಡಾಡದಿರಿ. ತಪ್ಪೊಪ್ಪಿಗೆ ಮಾಡಿಕೊಂಡು ಮನಸು ಹಗುರಾಗಿಸಿಕೊಳ್ಳಿ. ಖಾಲಿಯಾಗಿಸಿಕೊಳ್ಳಿ. ಹೀಗೆ ಖಾಲಿಯಾದಾಗಲೇ ಹೊಸದನ್ನು ಆರಂಭಿಸಲು ಸಾಧ್ಯ. ನಿಮ್ಮೆಲ್ಲ ಭಾವನೆಗಳನ್ನೂ ಪ್ರಾಮಾಣಿಕವಾಗಿ ಹೇಳಬೇಕಾದವರ ಮುಂದೆ ಹೇಳಲಿ ಎನ್ನುವುದೇ ಈ ದಿನದ ಆಶಯ.

ಫೆ.20 ಮಿಸ್ಸಿಂಗ್ ಡೇ: ಕೆಲವೊಮ್ಮೆ ನಮ್ಮ ನಮ್ಮ ಅಹಂಕಾರದ ಗೋಡೆಗಳ ನಡುವೆಯೇ ನಾವು ಬಂಧಿಗಳಾಗಿರುತ್ತೇವೆ. ತೇಪೆ ಹಚ್ಚಬಹುದಾದ, ಮರು ಆರಂಭಿಸಬಹುದಾದ ಸಾಧ್ಯತೆಗಳಿರುವ ಬಾಂಧವ್ಯಗಳಲ್ಲಿ, ಐ ಮಿಸ್ ಯು, ಮಿಸ್ಸಿಂಗ್ ಯು ಅಂತ ಹೇಳುವುದು ಅಮೃತದ ಕೆಲಸ ಮಾಡುತ್ತದೆ. ಚಿರಂಜೀವಿ ಪದಗಳಿವು ಎಂದು ಹೇಳಿದರೂ ತಪ್ಪಾಗದು. ಜಗಳಗಳಿಂದ, ಮನೋ ಕ್ಲೇಷಗಳಿಂದ ನಿಮ್ಮ ನಡುವೆ ಮೌನದ ಗೋಡೆಯೊಂದು ಎದ್ದಿದ್ದರೆ ಅದನ್ನು ಕೆಡವಲೆಂದೇ ಇರುವ ಸುತ್ತಿಗೆಯಂಥ ಪದ ಮಿಸ್ಸಿಂಗ್ ಯು ಎಂಬುದು. ಅದನ್ನು ಬಳಸಿ, ಮತ್ತೆ ಒಂದುಗೂಡಿ ಎಂದು ಹೇಳುವ ದಿನವಿದು.

ಫೆ.21 ಬ್ರೇಕಪ್ ಡೇ: ಇದು ಮತ್ತೊಮ್ಮೆ ಬದುಕು ಅಮೂಲ್ಯವಾದುದು. ಕೇವಲ ಒಟ್ಟಿಗಿರಬೇಕು, ಬಾಂಧವ್ಯ ಬೆಸೆದಿಡಬೇಕು ಎಂಬ ಒತ್ತಡಕ್ಕೆ ಕೂಡಿರಬೇಡಿ. ನಿಮ್ಮನ್ನು ಅವಮಾನಿಸುವ, ಅನುಮಾನಿಸುವ, ಹೊಡೆಯುವ, ಹೀಗಳೆಯುವ, ನಿಯಂತ್ರಣವಿರಿಸುವ ಬಾಂಧವ್ಯದಲ್ಲಿ ನೀವಿದ್ದರೆ, ಅದನ್ನು ಆತ್ಮಾವಲೋಕನ ಮಾಡಿಕೊಳ್ಳಿ. ಅಲ್ಲಿಂದಾಚೆ ಬನ್ನಿ. ಬದುಕು ಒಂದೇ ಒಂದು ಸಲ ಜೀವಿಸಲು ಸಿಗುವುದು. ಅದರಲ್ಲಿ ಹಿಂಸೆ ಪಡಲೆಂದೇ ಇರಕೂಡದು. ಪ್ರೀತಿಯಿಲ್ಲದ ಮೇಲೆ ಅಲ್ಲಿಂದಾಚೆ ನಡೆದುಬರುವುದೂ ಸ್ವಪ್ರೀತಿಯ ಒಂದು ಹಂತ ಅಷ್ಟೆ. ಆತ್ಮಗೌರವ ಇಲ್ಲದಿದ್ದಲ್ಲಿ, ನಂಬಿಕೆ ಇರದಿದ್ದಲ್ಲಿ ಅಂಥ ಬಾಂಧವ್ಯದಿಂದ ಮುಕ್ತರಾಗಿ ಎಂದು ಹೇಳುತ್ತದೆ ಈ ದಿನ.



ವ್ಯಾಲೆಂಟೈನ್ ವೀಕ್ ಪರಸ್ಪರ ಪ್ರೀತಿಯನ್ನು ಸಂಭ್ರಮಿಸುವುದಾದರೆ, ಆ್ಯಂಟಿ ವ್ಯಾಲೆಂಟೈನ್ ವೀಕ್ ಸ್ವಪ್ರೀತಿಯನ್ನು ಹೇಳುತ್ತಲೇ, ಅನುರಾಗವಿಲ್ಲದ ಬಂಧದಿಂದ ಆಚೆ ಬರಲೂ ಪ್ರೇರೇಪಿಸುತ್ತದೆ. ❖

19ರಿಂದ ಸಂಗೀತ ನೃತ್ಯಗಳ ಆರಾಧನೆ

ಗಾನ ಸುಧೆ

ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ ಬೆಂಗಳೂರು ವತಿಯಿಂದ 24ನೇ ವರ್ಷದ ವಾರ್ಷಿಕೋತ್ಸವ ಪ್ರಯುಕ್ತ ಪುರಂದರದಾಸರ ಮತ್ತು ಕನಕದಾಸರ ತ್ಯಾಗರಾಜರ ಆರಾಧನಾ ಮಹೋತ್ಸವ ನಡೆಯಲಿದೆ. ಜತೆಗೆ ಗುರುರಾಘವೇಂದ್ರ ಸಂಸ್ಮರಣಾ ಪ್ರಶಸ್ತಿ, ವ್ಯಾಸ ಪ್ರಶಸ್ತಿ, ಕನಕಶ್ರೀ ಪ್ರಶಸ್ತಿ ಪ್ರದಾನ ನಡೆಯಲಿದೆ. ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಸಮಾರಂಭವೂ ನಡೆಯಲಿದೆ.






ಶ್ರೀನಿವಾಸಮೂರ್ತಿ ಆಚಾರ್ಯ, ರತ್ನಾಕರ ರಘುಪತಿ ಭಟ್ಟಸುಗಾವಿ, ನರಸಿಂಹ ನಾಯಕ್

19ರಂದು ಪುರಂದರದಾಸರ ಆರಾಧನಾ ಮಹೋತ್ಸವ

ಪುರಂದರ ನಮನ ಸಂಗೀತ ಸುಧೆ ಕಾರ್ಯಕ್ರಮವನ್ನು ಸೋಮವಾರ ಫೆ.19ರಂದು ಹಮ್ಮಿಕೊಳ್ಳಲಾಗಿದೆ. ವಿ. ಡಾ. ಅರ್ಚನಾ ಕುಲಕರ್ಣಿ ಮತ್ತು ತಂಡದವರು ಸಂಗೀತ ಪ್ರಸ್ತುತ ಪಡಿಸುತ್ತಿದ್ದಾರೆ. ಅಂದು ಸಂಜೆ ಗುರು ರಾಘವೇಂದ್ರ ಸಂಸ್ಮರಣಾ ಪ್ರಶಸ್ತಿ ಮತ್ತು ವ್ಯಾಸ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ಶ್ರೀನಿವಾಸಮೂರ್ತಿ ಆಚಾರ್ಯರು, ಶಿರಸಿಯ ಸೋಂದ ಸ್ವರ್ಣವಲ್ಲಿ ಮಹಾ ಸಂಸ್ಥಾನದ ವ್ಯವಸ್ಥಾಪಕ ರತ್ನಾಕರ ರಘುಪತಿ ಭಟ್ಟ ಸುಗಾವಿ, ಪುತ್ತೂರು ನರಸಿಂಹ ನಾಯಕ್ ಅವರು ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಡಾ. ಆರ್.ಕೆ. ಪದ್ಮನಾಭ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ಡಾ. ಸಂತೋಷ ಹೆಗ್ಡೆ, ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ. ❖



ಅನಂತಕುಲಕರ್ಣಿ

20ರಂದು ಕನಕದಾಸರ ಆರಾಧನೆ

ಗುರು ರಾಘವೇಂದ್ರ ಸಂಸ್ಮರಣಾ ಪ್ರಶಸ್ತಿ ಹಾಗೂ ಕನಕಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು 20ರಂದು ಮಂಗಳವಾರ ಸಂಜೆ ಹಮ್ಮಿಕೊಳ್ಳಲಾಗಿದೆ.

ಸಂಸ್ಮರಣಾ ಪ್ರಶಸ್ತಿಯನ್ನು ಬಾಗಲಕೋಟೆಯ ಪಂಡಿತ್ ಅನಂತಕುಲಕರ್ಣಿ ಅವರಿಗೆ ಹಾಗೂ ಪುತ್ತೂರಿನ ಡಾ. ಪ್ರಶಾಂತ್ ಶೆಟ್ಟಿ ಅವರಿಗೆ ಕನಕಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಈ ಸಮಾರಂಭದ ನಂತರ ಪುತ್ತೂರಿನ ನೃತ್ಯ ನಿರುತ ಶಾಲೆಯ ಡಾನಿಶಿತಾ ಪುತ್ತೂರು ತಂಡ ಬಾಗಿಲನು ತೆರೆದು ನೃತ್ಯರೂಪಕ ಪ್ರಸ್ತುತಪಡಿಸಲಿದೆ. ❖



ಡಾ. ನಿಶಿತಾ ಪುತ್ತೂರು

21ರಂದು ತ್ಯಾಗರಾಜರ ಆರಾಧನೆ

ಸಪ್ತಸ್ವರ ಸಂಗೀತ ಸ್ವರ್ಶಮಣಿ ಬಿರುದು ಸಮಾರಂಭ. ಅಧ್ಯಕ್ಷತೆ: ಡಾ. ಆರ್.ಕೆಪದ್ಮನಾಭ, ವಿಶೇಷ ಅತಿಥಿ: ನಿವೃತ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಉಪಸ್ಥಿತರಿರಲಿದ್ದಾರೆ. ಡಾ. ರಾಯಚೂರು ಶೇಷಗಿರಿದಾಸ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ನಂತರ ಅವರು ಗಾನಸುಧೆಯನ್ನು ಪ್ರಸ್ತುತಪಡಿಸುವರು. ಈ ಕಛೇರಿಯ ನಂತರ ವಿ. ಪದ್ಮಿನಿ ಅಚ್ಚಿ ಅವರ ತಂಡ ತ್ಯಾಗ ವೈಭವಂ ಪ್ರಸ್ತುತ ಪಡಿಸುವುದು.



ಶೇಷಗಿರಿ ದಾಸ್



ಪದ್ಮಿನಿ ಅಚ್ಚಿ

22ರಂದು ಬೆಳಗೆರೆ ಮಹಾಲಕ್ಷ್ಮಮ್ಮ ಸ್ಮರಣಾರ್ಥ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರಿನ ಡಾ.ರಂಗನಾಥ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅಧ್ಯಕ್ಷತೆ: ಡಾ. ಆರ್. ಕೆ.ಪದ್ಮನಾಭ, ಪ್ರಶಸ್ತಿ ಪ್ರದಾನ ಸಮಾರಂಭದ ನಂತರ ನಾಟ್ಯ ಸರಸ್ವತಿ ನೃತ್ಯಶಾಲೆಯ ನಾಗಶ್ರೀ ರಾಘವೇಂದ್ರ ಹಾಗೂ ನಾಟ್ಯ ಸಂಕುಲ ನೃತ್ಯ ಶಾಲೆಯ ನಿವೇದಿತಾ ಶರ್ಮಾ ಅವರ ತಂಡವು ನೃತ್ಯ ಪ್ರಸ್ತುತಪಡಿಸಲಿದೆ.

ಸ್ಥಳ: ದೇವಗಿರಿ ವೆಂಕಟೇಶ್ವರ ದೇವಸ್ಥಾನ ಬನಶಂಕರಿ 2ನೇ ಹಂತ, ಮಾಹಿತಿಗೆ 98454 72172

ಸಮಯ: ಪ್ರತಿದಿನ ಸಂಜೆ 5ಕ್ಕೆ ❖



ನಾಗಶ್ರೀ ರಾಘವೇಂದ್ರ ಮತ್ತು ನಿವೇದಿತಾ ಅಮಿತ್ ನಾಡಿಗ್

ಭಾರತೀಯ ಸಾಮಗಾನ ಸಭಾ 15ನೇ ವಾರ್ಷಿಕ ಸಂಗೀತ ಉತ್ಸವ

ಭಾರತೀಯ ಸಾಮಗಾನ ಸಭಾವು 15ನೇ ವಾರ್ಷಿಕ 'ಕಾಶಿ ಸ್ವರ ಶಂಕರ ಸಂಗೀತ ಉತ್ಸವ'ವನ್ನು ಆಯೋಜಿಸಿದೆ. ಇದು ಭಾರತೀಯ ಸಂಗೀತ ನಾದ ಯಾತ್ರೆಯಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ನ ನಿವೃತ್ತ ಡೆಪ್ಯುಟಿ ಗವರ್ನರ್ ಶ್ಯಾಮಲಾ ಗೋಪಿನಾಥ್, ಐಜಿಎನ್‌ಸಿಎಯ ಪ್ರಾದೇಶಿಕ ನಿರ್ದೇಶಕ ಡಿ. ಮಹೇಂದ್ರ ಅವರು ಭಾಗವಹಿಸಲಿದ್ದಾರೆ.

ಫೆ. 22ರಂದು: 4.45ರಿಂದ ಕಾಶಿ ಸ್ವರ ಶಂಕರ, ಕಾಶಿ ರಾಮೇಶ್ವರಂ: ಸುಬುಧೇಂದ್ರ ರಾವ್, ಸುಮಾ ಸುಧೀಂದ್ರ. ಕಾಶಿ ದರ್ಬಾರ್; ಮಹೇಶ್ ಕಾಳೆ.

23ರಂದು: 4.45ರಿಂದ ಬನರಾಸಿ ಘರಾಣ ಕುರಿತು ವೈಶಾಲಿ ಅವರಿಂದ ಉಪನ್ಯಾಸ . ಕಾಶಿ ಸಂತವಾಣಿ – ಸಂಪ್ರದಾಯಿಕ ಭಜನೆಗಳು: ಸೂರ್ಯಗಾಯತ್ರಿ

ಕಾಶಿಯಾತ್ರೆ: ಸಂದೀಪ್ ನಾರಾಯಣ

24ರಂದು: 4.45ರಿಂದ ಕಾಶಿ ಡಮರು: ಜಗದೀಶ ಕುರ್ತಕೋಟಿ ಮತ್ತು ತಂಡದಿಂದ. ಕಾಶಿ ಧನ್ವಂತರಿ:ಅನಿರ್ಬನ್ ರಾಯ್. ಸಂಸ್ಕೃತ ಕಾಶಿ: ರಾಮಕೃಷ್ಣ ಮೂರ್ತಿ.

25ರಂದು: ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ: 12ನೇ ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ. ಪಿಟೀಲು ವಿದ್ವಾಂಸರಾದ ಮೈಸೂರು ನಾಗರಾಜ್ ಮತ್ತು ಮೈಸೂರು ಮಂಜುನಾಥ್ ಅವರಿಗೆ ಮಾತಂಗ ಪ್ರಶಸ್ತಿ ನೀಡಲಾಗುವುದು.

ಕಾರ್ಯಕ್ರಮ ನಡೆಯುವ ಸ್ಥಳ: ಚೌಡಯ್ಯ ಸ್ಮಾರಕ ಭವನ. ❖



ಮೈಸೂರು ನಾಗರಾಜ್, ಮೈಸೂರು ಮಂಜುನಾಥ್



ಸೂರ್ಯಗಾಯತ್ರಿ

ಪಿಕ್ಚರ್ ಪ್ಯಾಲೇಸ್

ಟ್ರಾಫಿಕ್ ಜಾಮ್






ಒಮ್ಮೆ ಒಂದರೆ ಕ್ಷಣವೂ ಸುಮ್ಮನಿರಲಾಗುವುದಿಲ್ಲ, ಬದುಕಿನ ಧಾವಂತಕ್ಕೆ ಟ್ರಾಫಿಕ್ ಸಿಗ್ನಲ್‌ನಲ್ಲಿ ಸಣ್ಣದೊಂದು ವಿರಾಮವೇನೋ ಸಿಗುತ್ತದೆ. ಆದರೆ ಅಲ್ಲಿಯೂ ಅದೆಷ್ಟು ಕೆಲಸಗಳು ನಡೆದಿರುತ್ತವೆ. ಪ್ರೀತಿಯ ಮಗಳೊಂದಿಗೆ ಒಂದೆರಡು ಮಾತು, ಮಗನ ತಲೆ ನೇವರಿಸುವ ಹೊತ್ತು, ಆಪ್ತರಿಗೆ ಬರುತ್ತಿರುವೆ.. ಇಲ್ಲಿರುವೆ ಎಂದು ಮೆಸೇಜು ಕಳುಹಿಸುವ ಕಾತುರ, ಬೆನ್ನಿಗಂಟ ಕುಳಿತು, ತೋಳುಗಳ ಮೇಲಿಂದ ಇಣುಕುವ ಹುಡುಗಿ, ಹಂಗೆಲ್ಲ ಸುಮ್ಮಿರಬಾರದು ಎಂದೇ ಗುಟ್ಕಾ ಸವಿಯುವವರು, ರಸ್ತೆ ಸವೆಸುವುದಷ್ಟೇ ಅಲ್ಲ, ಜೀವನ ಸವೆಸುವುದೇ ರಸ್ತೆಯ ಮೇಲೆ. ಜೀವನ ಸವಿಯುವುದೂ ಇಲ್ಲೇ ಎಂಬಂತಿದೆ ಬಸ್ ಡ್ರೈವರ್ ನೋಟ.

ಚಿತ್ರಗಳು ಎಂ.ಎಸ್. ಮಂಜುನಾಥ







ಇಂದು ಉಪನ್ಯಾಸ ಮತ್ತು ಯಕ್ಷಗಾನ



ರಂಗಚಂದಿರ ವತಿಯಿಂದ ನಗರದ ರವೀಂದ್ರ ಕಲಾಕ್ಷೇತ್ರ ಆವರಣದ ಸಂಸ ಬಯಲು ರಂಗಮಂದಿರದಲ್ಲಿ ಫೆ.17 ಶನಿವಾರ ಉಪನ್ಯಾಸ, ಅಭಿನಂದನೆ ಹಾಗೂ ಯಕ್ಷಗಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಂಜೆ 6ಗಂಟೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಲಕ್ಷ್ಮೀಶ ತೋಳ್ಪಾಡಿ ಅವರಿಗೆ ಅಭಿನಂದನೆ ಕಾರ್ಯಕ್ರಮವಿದೆ. ಸಂಗೀತ ವಿದ್ವಾಂಸರಾದ ವಿದ್ಯಾಭೂಷಣ ಅವರು ಅಭಿನಂದಿಸಲಿದ್ದಾರೆ. ಪ್ರಜಾವಾಣಿ ಸಂಪಾದಕ ರವೀಂದ್ರ ಭಟ್ಟ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಡಾ.ಧರಣೀದೇವಿ ಮಾಲಗತ್ತಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿ.ಎನ್. ಮೋಹನ್, ಬಹುರೂಪಿ ಪ್ರಕಾಶನ, ಆರ್. ಕೆ.ಹೆಗಡೆ, ಗೌರವಾಧ್ಯಕ್ಷರು, ರಂಗಚಂದಿರ ಭಾಗವಹಿಸಲಿದ್ದಾರೆ. ನ. ರವಿಕುಮಾರ. ಅಭಿನವ, ಬೆಂಗಳೂರು ಇವರು ಸಂಯೋಜನೆ ಮಾಡಿದ್ದಾರೆ. ಸಂಜೆ:5

ನಂತರ, ಲಕ್ಷ್ಮೀಶ ತೋಳ್ಪಾಡಿ ಅವರಿಂದ 'ಮಹಾಭಾರತದಲ್ಲಿ ಮಾತು ಮತ್ತು ಮೌನ' ಉಪನ್ಯಾಸ. ಸಂಜೆ 6.30 ಗಂಟೆಗೆ ಸಂಜೆ 7 ರಿಂದ 8ರ ವರೆಗೆ ಉಡುಪಿಯ ಥಿಯೇಟರ್ ಯಕ್ಷ ಸಂಸ್ಥೆಯಿಂದ ಚಕ್ರವ್ಯೂಹ ಯಕ್ಷಗಾನ ಪ್ರಸ್ತುತಿ ಇದೆ.

ನಮ್ಮೊಂದಿಗೆ ಡಾ. ಸುಂದರ್ ಸರುಕ್ಕೆ, ಡಾ. ಎ.ನಾರಾಯಣ, ಶಶಿಧರ ಅಡಪ, ಸಚ್ಚಿದಾನಂದ ಹೆಗಡೆ, ಎಂಎಎನ್ ಇಸ್ಮಾಯಿಲ್, ಪುರುಷೋತ್ತಮ ಅವರು ಭಾಗವಹಿಸಲಿದ್ದಾರೆ ಎಂದು ರಂಗಚಂದಿರ ಕಾರ್ಯದರ್ಶಿ ಜಿಪಿಓ ಚಂದ್ರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ❖

ಎನ್‌ಎಸ್‌ಡಿ ರಂಗೋತ್ಸವ ಇಂದಿನಿಂದ



ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತ ರಾಷ್ಟ್ರೀಯ ನಾಟಕ ಶಾಲೆ (ಎನ್‌ಎಸ್‌ಡಿ) ಬೆಂಗಳೂರು ಕೇಂದ್ರವು ವಸುದೈವ ಕುಟುಂಬಕಂ– ವಂದೇ ಭಾರಂಗಮ್' ಎಂಬ ಧ್ಯೇಯವಾಕ್ಯದೊಂದಿಗೆ '25ನೇ ಭಾರತ ರಂಗ ಮಹೋತ್ಸವ' ಹಮ್ಮಿಕೊಂಡಿದೆ. ಫೆ. 17ರಿಂದ 21ರವರೆಗೆ ನಡೆಯಲಿದೆ.

ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿರುವ ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ಆವರಣದಲ್ಲಿ ನಡೆಯುವ ರಂಗೋತ್ಸವಕ್ಕೆ ರಂಗಕರ್ಮಿ ಶ್ರೀನಿವಾಸ್ ಜಿ. ಕಪ್ಪಣ್ಣ ಶನಿವಾರ ಚಾಲನೆ ನೀಡಲಿದ್ದಾರೆ. ಕೇಂದ್ರದ ನಿರ್ದೇಶಕಿ ವೀಣಾ ಶರ್ಮಾ ಭೂಸನೂರಮಠ ಉಪಸ್ಥಿತರಿರಲಿದ್ದಾರೆ.

ಫೆ.17ರಂದು ಸುಶೀಲ್ ಶರ್ಮಾ ಮತ್ತು ತಂಡದಿಂದ ಕನ್ನಡ ಹಾಗೂ ಹಿಂದಿ ಭಾಷೆಯಲ್ಲಿ ರಂಗ ಸಂಗೀತ ಕಾರ್ಯಕ್ರಮ ನಡೆಯಲಿದೆ.

ನಾಟಕಗಳು: ಫೆ. 18ರಂದು ಎಸ್.ವಿ. ಸುಷ್ಮಾ ನಿರ್ದೇಶನದ 'ಮಜಾ ಮಜಾ ದೋ', 19ರಂದು ದಿನೇಶ್ ಕುಮಾರ್ ನಿರ್ದೇಶನದ 'ಐ ವಾಂಟ್ ಟು ಸ್ಲೀಪ್', 20ರಂದು ಶುಭಾ ಭಟ್ ಬಾಷೀನ್ ನಿರ್ದೇಶನದ 'ಜಿಂಕ್ಸಡ್ ಆರೆಂಜಸ್', 21ರಂದು ಯಕ್ಷಗಾನ ಕೇಂದ್ರಿತ ಸಹನಾ ಟಿರಕಿ ಅವರ ಏಕವ್ಯಕ್ತಿ ರಂಗ ಪ್ರದರ್ಶನ ಪ್ರಸ್ತುತ ಪಡಿಸಲಿದ್ದಾರೆ. ನಯಾ ಸಫರ್ ಏಕವ್ಯಕ್ತಿ ಪ್ರದರ್ಶನವನ್ನು ದುರ್ಗಾ ಪ್ರಸಾದ್ ಚಿಕ್ಕಮ್ ಪ್ರಸ್ತುತಪಡಿಸಲಿದ್ದಾರೆ. ಪ್ರತಿದಿನ ಸಂಜೆ 7 ಗಂಟೆಗೆ ಪ್ರದರ್ಶನಗಳಿದ್ದು, ಉಚಿತ ಪ್ರವೇಶವಿದೆ ಎಂದು ಪ್ರಕಟಣೆ ತಿಳಿಸಿದೆ.

ರಕುಲ್ ಪ್ರೀತ್ ಸಿಂಗ್‌ಗೆ ಮದುವೆ ಯೋಗ?

ತೆಲುಗು ಹಾಗೂ ಹಿಂದಿ ಚಿತ್ರರಂಗದಲ್ಲಿ ಬೇಡಿಕೆ ನಟಿಯಾಗಿ ಬೆಳೆದಿರುವ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಅಪಾರ ಅಭಿಮಾನಿಗಳನ್ನು ಹೊಂದಿರುವ ನಟಿ ರಕುಲ್ ಪ್ರೀತ್ ಸಿಂಗ್ ವಿವಾಹವಾಗಲಿದ್ದಾರೆ ಎಂದು ಸುದ್ದಿಯಾಗಿದೆ.

ನಟ ಹಾಗೂ ನಿರ್ಮಾಪಕ ಜಕ್ಕಿ ಬಗ್‌ನಾನಿ ಅವರೇ ರಕುಲ್ ಅವರ ಹುಡುಗ. ಅವರು ಇದೇ 21ರಂದು ಗೋವಾದಲ್ಲಿ ಮದುವೆಯಾಗಲಿದ್ದಾರೆ ಎನ್ನಲಾಗಿದೆ.

ಕೋಲ್ಕತ್ತ ಮೂಲದ 36 ವರ್ಷದ ಜಕ್ಕಿ ಬಗ್‌ನಾನಿ ಬಾಲಿವುಡ್ ನಟ ಹಾಗೂ ನಿರ್ಮಾಪಕ. 'ಫಾಲ್ತು', 'ಅಜಬ್ ಗಜಬ್', 'ಮೋಹಿನಿ', 'ವೆಲ್ ಕಮ್ ಟು ಕರಾಚಿ', 'ರಂಗ್ರೇಜ್' ಸೇರಿದಂತೆ ಅನೇಕ ಸಿನಿಮಾಗಳಲ್ಲಿ ನಟಿಸಿದ್ದು, 'ಕೂಲಿ ನಂ 1', 'ವೆಲ್ ಕಮ್ ಟು ನ್ಯೂಯಾರ್ಕ್', 'ಬೆಲ್ ಬಾಟಮ್' ಸೇರಿ ಹಲವು ಸಿನಿಮಾಗಳನ್ನು ನಿರ್ಮಿಸಿದ್ದಾರೆ. ತೆರೆಮರೆಯಲ್ಲಿರಕುಲ್ ಹಾಗೂ ಜಕ್ಕಿ ಕುಟುಂಬದವರು ಮದುವೆ ತಯಾರಿ ನಡೆಸಿದ್ದು ಇನ್ನೂ ಅಧಿಕೃತವಾಗಿ ತಿಳಿಸಿಲ್ಲ. ❖



ಹಿರಿಯ ಜೀವಗಳಿಗೆ ಚೈತನ್ಯ ತುಂಬುವ ವೇದಿಕೆ 'ಸಿಲ್ವರ್ ಕ್ಲಬ್'



ಸಾಗರ್ ಆಸ್ಪತ್ರೆಯ ಸಿಲ್ವರ್ ಕ್ಲಬ್ ವೇದಿಕೆಯಲ್ಲಿ ಹೆಜ್ಜೆ ಹಾಕಿದ ಹಿರಿಯ ನಾಗರಿಕರು

ಉತ್ಸಾಹ

ವಯಸ್ಸು ಕಳೆದಿದೆ ಇನ್ನೇನಿದ್ರು ದೇವರಿಚ್ಛೆ ಅಂತ ಮನೆಯಲ್ಲಿ ಕುಳಿತು ಕಾಲ ಕಳೆಯುವ ಎಷ್ಟೋ ಹಿರಿಯ ಜೀವಗಳು ಸಂತೋಷಿಸುವ ಮನಸ್ಥಿತಿಯನ್ನೇ ಮರೆತಿರುತ್ತಾರೆ. ಮಕ್ಕಳು ಕೆಲಸದ ನಿಮಿತ್ತ ದೂರದೂರಿನಲ್ಲಿ ನೆಲೆಸಿರುತ್ತಾರೆ. ಎಲ್ಲರಿಗೂ ಅವರದ್ದೇ ಆದ ಬದುಕಿದೆ. ಹೀಗಾಗಿ ಪೋಷಕರು ಒಂದು ರೀತಿಯ ಒಂಟಿತನದ ಬದುಕನ್ನು ಅನುಭವಿಸುತ್ತಿರುತ್ತಾರೆ. ಆದರೆ, ಅಂಥ ಜೀವಗಳಿಗೆ ಚೈತನ್ಯ ತುಂಬುವ ಕೆಲಸವನ್ನು ಬೆಂಗಳೂರಿನ ಸಾಗರ್ ಆಸ್ಪತ್ರೆ ಮಾಡುತ್ತಿದೆ.

50 ರಿಂದ 60 ವರ್ಷ ವಯೋಮಿತಿಯ ಹಿರಿಯ ವಯಸ್ಕರು ತಿಂಗಳಿಗೊಮ್ಮೆ ಸೇರಿ ವಿವಿಧ ಮನರಂಜನಾ ಕಾರ್ಯಕ್ರಮಗಳಲ್ಲಿ ತೊಡಗಿಕೊಳ್ಳುತ್ತಾರೆ. ಅಲ್ಲದೆ ಆಯಾ ತಿಂಗಳಲ್ಲಿ ಜನಿಸಿದ ಎಲ್ಲಾ ವಯಸ್ಕರಿಗೆ ಒಂದೇ ವೇದಿಕೆಯಲ್ಲಿ ಕೇಕ್ ಕತ್ತರಿಸುವ ಮೂಲಕ ಹುಟ್ಟು ಹಬ್ಬವನ್ನು ಆಚರಿಸಲಾಗುತ್ತದೆ. ಈ ವಿನೂತನ ವೇದಿಕೆಗೆ 'ಸಿಲ್ವರ್ ಕ್ಲಬ್' ಎಂದು ಹೆಸರಿಸಲಾಗಿದೆ.

ಪ್ರತಿ ತಿಂಗಳು ಹಿರಿಯ ನಾಗರಿಕರು ಸಾಗರ್ ಆಸ್ಪತ್ರೆಯಲ್ಲಿ ಸಭೆ ಸೇರುತ್ತಾರೆ . ಈ ವೇಳೆ ಪರಸ್ಪರ ವಿಷಯಗಳನ್ನು ಹಂಚಿಕೊಳ್ಳುತ್ತಾರೆ. ಹಾಡು, ಹರಟೆ, ನೃತ್ಯ ಹೀಗೆ ನಾನಾ ರೀತಿಯ ಚಟುವಟಿಕೆಗಳನ್ನು ಪ್ರದರ್ಶಿಸುತ್ತಾರೆ. ಈ ಮೂಲಕ ಮಾನಸಿಕ ಹಾಗೂ ದೈಹಿಕ ಆರೋಗ್ಯ ಚೈತನ್ಯಕ್ಕೆ ಮತ್ತಷ್ಟು ಬಲ ತುಂಬುವ ಕೆಲಸವಾಗುತ್ತಿದೆ. ಇದೇ ವೇಳೆ ಆಸ್ಪತ್ರೆಯಿಂದ ಹಿರಿಯ ಜೀವಗಳಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಕೈಗೊಳ್ಳಲಾಗುತ್ತದೆ. ಅಲ್ಲದೇ ವೈದ್ಯರಿಂದ ಮೌಲ್ಯಯುತ ಮಾಹಿತಿಯನ್ನು ನೀಡಲಾಗುತ್ತದೆ.

ಹಿರಿಯ ನಾಗರಿಕರಾದ ನಿವೃತ್ತ ಸಹಾಯಕ ನಿರ್ದೇಶಕಿ ಸುಚೇತಾ ವಿ ಹೆಗಡೆ ಹೇಳುವುದಿಷ್ಟು; ಈ ವಯಸ್ಸಿನಲ್ಲಿ ಒಂಟಿತನದ ಸಮಸ್ಯೆ ಅನೇಕರಿಗೆ ಕಾಡುತ್ತದೆ. ಅಂಥ ಸಮಸ್ಯೆಯನ್ನು ನೀಗಿಸುವ ಪ್ರಯತ್ನದಲ್ಲಿ ಸಾಗರ್ ಆಸ್ಪತ್ರೆಯು ಉತ್ತಮ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

ನಿವೃತ್ತರಾದ ದೇವಣ್ಣ ಬಿ.ಎಚ್ ಮಾತನಾಡಿ, ಹಿರಿಯ ಜೀವಗಳಿಗೆ ಚೈತನ್ಯ ತುಂಬುವ ಕೆಲಸ ಶ್ಲಾಘನೀಯ. ನಾನು ಈ ವೇದಿಕೆಯ ಭಾಗವಾಗಿರುವುದಕ್ಕೆ ಸಂತೋಷವಿದೆ ಎಂದರು.

ಡಯಾಲಿಸಿಸ್ ರೋಗಿಯಾದ ಶ್ಯಾಮ್ ಸುಂದರ್, ನನಗೆ ಕರೋಕೆ ಅಂದ್ರೆ ತುಂಬಾ ಇಷ್ಟ. ಅದನ್ನು ಈ ವೇದಿಕೆಯಲ್ಲಿ ಪ್ರದರ್ಶಿಸಿದ್ದೇನೆ. ಹಾಗಾಗಿ ಈ ವೇದಿಕೆ ನಿಜಕ್ಕೂ ಸ್ಫೂರ್ತಿದಾಯಕ ಎನ್ನುತ್ತಾರೆ. ಸಾಗರ್ ಗ್ರೂಪ್ ಆಫ್ ಹಾಸ್ಪಿಟಲ್ಸ್‌ನ ಅಧ್ಯಕ್ಷರಾದ ಇಶಿಕಾ ಮುಲ್ತಾನಿ ಈ ಪ್ರಯತ್ನಕ್ಕೆ ಹರ್ಷ ವ್ಯಕ್ತಪಡಿಸುತ್ತಾರೆ.

ಕಿವಿ ಕಾಳಜಿ ಹೇಗೆ?

ಕಿವಿ ಸ್ವಚ್ಛತೆಗಾಗಿ ಅನೇಕರು ಕಿವಿಯೊಳಗೆ ಪಿನ್ ಹಾಕುವುದು, ಬಡ್ಸ್ ಹಾಕುವುದು, ನೀರು ಅಥವಾ ಸೋಪಿನ ನೀರನ್ನು ಹಾಕಿ ಸ್ವಚ್ಛಗೊಳಿಸಲು ಮುಂದಾಗುತ್ತಾರೆ. ಇದರಿಂದಾಗಿ ವಿವಿಧ ಸಮಸ್ಯೆಗಳು ಎದುರಾಗುತ್ತವೆ. ಈ ರೀತಿಯ ವಿವಿಧ ಸಮಸ್ಯೆಗಳನ್ನು ಹೊತ್ತ ಅನೇಕರು ವೈದ್ಯರ ಬಳಿ ಬಂದಿರುವ ಘಟನೆಗಳು ಇತ್ತೀಚೆಗೆ ಹೆಚ್ಚಾಗಿವೆ ಎನ್ನುತ್ತಾರೆ ಕಿಂಡರ್ ಆಸ್ಪತ್ರೆಯ ಇಎನ್‌ಟಿ ತಜ್ಞೆ ಡಾ. ಸುನಿತಾ ಮಾಧವನ್.

ಕಿವಿಯನ್ನು ಶುಚಿಗೊಳಿಸುವುದು ಹೇಗೆ ಎನ್ನುತ್ತೀರಾ,.... ಕಿವಿಯು ಸ್ವಯಂ ಶುಚಿಗೊಳಿಸುವ ಕಾರ್ಯವಿಧಾನವನ್ನು ಹೊಂದಿದೆ. ಹೀಗಾಗಿ ಕಿವಿಯಲ್ಲಿರುವ ವ್ಯಾಕ್ಸ್ ಕಾಲಕ್ರಮೇಣ ತನ್ನಿಂದ ತಾನೆ ಹೊರಬರುತ್ತದೆ. ನಾವು ಪ್ರತಿದಿನ ಕಿವಿಯನ್ನು ಸ್ವಚ್ಛಗೊಳಿಸ ಬೇಕಾಗಿಲ್ಲ. ಅದಾಗ್ಯೂ ಕಿವಿ ಸ್ವಚ್ಛಗೊಳಿಸ ಬೇಕೆಂದರೆ ಒಂದು ಮೃದು ಬಟ್ಟೆಯಿಂದ ಸ್ವಚ್ಛಗೊಳಿಸಿದರೆ ಸಾಕು ಎನ್ನುತ್ತಾರೆ ತಜ್ಞರು.



ಕಿವಿ ತುಂಬಾನೆ ಸೂಕ್ಷ್ಮವಾಗಿರುತ್ತದೆ. ಪ್ರತಿದಿನ ಕಿವಿ ತೊಳೆಯುತ್ತಿದ್ದರೆ ಅದರ ಒಳಪದರಕ್ಕೆ ಹಾನಿಯಾಗುವ ಸಾಧ್ಯತೆ ಇರುತ್ತದೆ. ಅಲ್ಲದೆ ಸೋಂಕು ಉಂಟಾಗುವ ಸಾಧ್ಯತೆಯೂ ಇರುತ್ತದೆ. ಬಳಿಕ ತುರಿಕೆಯಾಗುವುದು ಅಥವಾ ಗಾಯಗಳು ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ಕಲುಷಿತ ನೀರಿನಲ್ಲಿ ಈಜಿದರೂ ಕೂಡ ಸೋಂಕುಗಳು ಕಾಣಬರುತ್ತವೆ. ಕಿವಿ ಸ್ವಚ್ಛತೆಗಾಗಿ ಪಿನ್ ಹಾಕುವುದು, ಬಡ್ಸ್ ಹಾಕುವುದರಿಂದಲೂ ಸೋಂಕು ಉಂಟಾಗುವ ಸಾಧ್ಯತೆ ಹೆಚ್ಚು ಎನ್ನುವುದು ತಜ್ಞರ ಎಚ್ಚರಿಕೆ.

ಕಿವಿ ಶುಚಿಗೊಳಿಸಲು ವೈದ್ಯರ ಸಲಹೆಯೇನು ?

- ತಲೆ ಸ್ನಾನ ಮಾಡುವಾಗ ಕಿವಿ ಹೊರಭಾಗದಲ್ಲಿ ವ್ಯಾಸಲಿನ್ ಲೇಪಿತ ಹತ್ತಿಯನ್ನು ಕಿವಿಯ ಮುಂಭಾಗದಲ್ಲಿ ಇರಿಸಿ.
- ಕಿವಿಯಲ್ಲಿ ಕಡಿತ ಉಂಟಾದರೆ ಕೇವಲ ವ್ಯಾಕ್ಸ್‌ನಿಂದಲೇ ಬರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಕೆಲವೊಮ್ಮೆ ಒಣಗುವಿಕೆ ಮತ್ತು ಅಲರ್ಜಿಯಿಂದಲೂ ಕೂಡ ಕಿವಿಯಲ್ಲಿ ಸಮಸ್ಯೆಗಳು ಕಂಡುಬರುತ್ತವೆ. ಕಿವಿಯಲ್ಲಿ ಸ್ವತಃ ಯಾವುದೇ ಔಷಧಿಗಳನ್ನು ಲೇಪಿಸಬೇಡಿ.
- ಶೀತದ ಸಂದರ್ಭದಲ್ಲಿ ನಿಮ್ಮ ಕಿವಿ ಬ್ಲಾಕ್ ಆಗಿದ್ದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ.
- ಕಿವಿಯ ಹೊರಭಾಗದಲ್ಲಿ ಏನಾದರೂ ಕಸ ಕಂಡುಬಂದಲ್ಲಿ ನೀವೇ ಸ್ವತಃ ಮೃದು ಬಟ್ಟೆಯಿಂದ ಒರೆಸಿ ಸ್ವಚ್ಛಗೊಳಿಸಿ.

ಕಿವಿ ಶುಚಿಗಾಗಿ ಏನೆಲ್ಲಾ ಮಾಡಬಾರದು?

- ಪ್ರತಿದಿನ ಬೆಳಗೆದ್ದು ಕಿವಿ ಶುಚಿಗೊಳಿಸುವುದನ್ನೇ ಅಭ್ಯಾಸ ಮಾಡಬೇಡಿ.
- ಕಿವಿ ಶುಚಿಗಾಗಿ ಕಿವಿಯಲ್ಲಿ ಬಡ್ಸ್, ಪಿನ್, ಬೆರಳು ಹಾಕುವುದು ಮತ್ತು ಇತರೆ ವಸ್ತುಗಳನ್ನು ಹಾಕದಿರಿ.
- ಕಿವಿಯಲ್ಲಿ ಏನೇ ಸಮಸ್ಯೆಗಳು ಕಂಡುಬಂದರೆ ಸ್ವತಃ ಯಾವುದೇ ಔಷಧಗಳನ್ನು ಬಳಸಲು ಮುಂದಾಗದಿರಿ.
- ಡಯಾಬಿಟಿಕ್ ರೋಗಿಗಳಲ್ಲಿ ಕಿವಿ ಸಂಬಂಧಿ ಸಮಸ್ಯೆಗಳು ಕಂಡುಬಂದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿ.
- ಕಿವಿ ಸಂಬಂಧಿ ಸಮಸ್ಯೆಯಿಂದ ಬಳಲುತ್ತಿರುವವರು ಈಜುವಾಗ, ಕಿವಿ ನೀರಿನ ಸಂಪರ್ಕಕ್ಕೆ ಬರದಂತೆ ಕಾಳಜಿ ವಹಿಸಿ.

ಕಾಳಜಿ



ಸ್ಟೆಮ್‌ಸೆಲ್ ದಾನಿಯಾಗುವುದು ಹೀಗೆ...

ದೇಶದಲ್ಲಿ ರಕ್ತ ಕ್ಯಾನ್ಸರ್, ಥಲಸ್ಸೇಮಿಯಾದಿಂದ ಬಳಲುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಹೀಗೆ ಬಳಲುತ್ತಿರುವವರಲ್ಲಿ ಬಹುತೇಕರು ಯುವಜನರೇ ಆಗಿದ್ದಾರೆ. ಸ್ಟೆಮ್‌ಸೆಲ್ ಟ್ರಾನ್ಸ್‌ಪ್ಲಾಂಟ್‌ಗೆ ಅಗತ್ಯವಿರುವ ಶೇ 30ರಷ್ಟು ರೋಗಿಗಳಿಗೆ ಮಾತ್ರ ಒಡಹುಟ್ಟಿದವರಿಂದ ಹ್ಯೂಮನ್ ಲ್ಯುಕೋಸೈಟ್ ಪ್ರತಿಜನಕಗಳು (ಎಚ್‌ಎಲ್‌ಎ) ಪಡೆಯಲು ಸಾಧ್ಯವಾಗುತ್ತಿದೆ. ಈ ನಿಟ್ಟಿನಲ್ಲಿ ರಕ್ತದ ಕಾಂಡಕೋಶ(ಸ್ಟೆಮ್ ಸೆಲ್) ದಾನಿಗಳ ನೋಂದಣಿಗೆ ಹೆಚ್ಚಿನ ಪ್ರೋತ್ಸಾಹಿಸಬೇಕಿದೆ.

ಕ್ಯಾನ್ಸರ್ ರೋಗಿ ಬದುಕುಳಿಯಲು ರಕ್ತದ ಕಾಂಡಕೋಶ (ಸ್ಟೆಮ್ ಸೆಲ್) ಕಸಿಯು ಕೊನೆಯ ಅವಕಾಶವಾಗಿದೆ.



ನೋಂದಣಿ ಪ್ರಕ್ರಿಯೆ ಹೀಗಿದೆ..

- ಸ್ಟೆಮ್ ಸೆಲ್ ದಾನಿಯಾಗುವುದು ಸುಲಭ. 18-55 ವಯಸ್ಸಿನ ಆಸಕ್ತರು dkms-bmst.org ನಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದು. ಅಲ್ಲಿ ಸ್ವ್ಯಾಬ್ ಕಿಟ್ ನೀಡಲಾಗುತ್ತದೆ.
- ನೋಂದಣಿಯ ಅರ್ಜಿ ವಿವರ ತುಂಬಿದ ನಂತರ, ನಿಮ್ಮ ಕೆನ್ನೆಯ ಒಳಭಾಗವನ್ನು ಸ್ವ್ಯಾಬ್ ಮಾಡಿ ಅಂಗಾಂಶ ಕೋಶಗಳನ್ನು ಸಂಗ್ರಹಿಸಿ ಆ ಮಾದರಿಯನ್ನು DKMS-BMST ಕಳುಹಿಸಿಕೊಡಬಹುದು.
- DKMS ಪ್ರಯೋಗಾಲಯವು ನಿಮ್ಮ ಅಂಗಾಂಶದ ಪ್ರಕಾರವನ್ನು (ಎಚ್‌ಎಲ್‌ಎ) ವಿಶ್ಲೇಷಿಸುತ್ತದೆ. ಸೂಕ್ತ ದಾನಿಯಾಗಿದ್ದರೆ, ನೇರವಾಗಿಸಂಪರ್ಕ ಮಾಡಲಾಗುತ್ತದೆ.
- ಪೆರಿಫೆರಲ್ ಬ್ಲಡ್ ಸ್ಟೆಮ್ ಸೆಲ್ ದಾನ ಎಂಬ ವಿಧಾನವನ್ನು ಬಳಸಿಕೊಂಡು ರಕ್ತದ ಹರಿವಿನಿಂದ ಕಾಂಡಕೋಶಗಳನ್ನು ಪಡೆಯಲಾಗುತ್ತದೆ, ಇದು ರಕ್ತದಾನದಂತೆಯೇ ಇರುತ್ತದೆ. ಇದು ಅತ್ಯಂತ ಸುರಕ್ಷಿತ ವಿಧಾನವಾಗಿದೆ.
- **ಹೆಚ್ಚಿನ ವಿವರಗಳಿಗೆ:** dkms-bmst.org

ವಿದೇಶಗಳಲ್ಲಿ 'ಸರಳ ಪ್ರೇಮಕಥೆ'

ಸಿಂಪಲ್ ಸುನಿ ನಿರ್ದೇಶನದ 'ಒಂದು ಸರಳ ಪ್ರೇಮಕಥೆ' ಸಿನಿಮಾ, ಬಿಡುಗಡೆಯಾದ ವಾರದೊಳಗೇ ವಿದೇಶಗಳಲ್ಲಿ ತೆರೆಕಾಣಲು ಸಜ್ಜಾಗಿದೆ.

ವಿನಯ್ ರಾಜ್‌ಕುಮಾರ್, ಸ್ವಾತಿಷ್ಠ ಹಾಗೂ ಮಲ್ಲಿಕಾ ಸಿಂಗ್ ನಟನೆಯ ಈ ಸಿನಿಮಾ ಕಳೆದ ಶುಕ್ರವಾರ(ಫೆ.9)ತೆರೆಕಂಡಿತ್ತು. ಚಿತ್ರವನ್ನು ನೆದರ್ಲೆಂಡ್ಸ್, ಯುಕೆ, ಅಮೆರಿಕ, ದುಬೈ ಹಾಗೂ ಇನ್ನಿತರ ಪಾಶ್ಚಿಮಾತ್ಯ ದೇಶಗಳಲ್ಲಿ ಬಿಡುಗಡೆ ಮಾಡಲು ಸ್ಯಾಂಡಲ್‌ವುಡ್ ಟಾಕೀಸ್ ಕಂಪನಿ ವಿದೇಶಿ ವಿತರಣಾ ಹಕ್ಕನ್ನು ಖರೀದಿ ಮಾಡಿದೆ. ಫೆ.16ರಿಂದಲೇ ವಿದೇಶಗಳಲ್ಲಿ ಸಿನಿಮಾ ಪ್ರದರ್ಶನ ಆರಂಭವಾಗಿದೆ.

ಹುಷಾರ್ ಬೆಂಗಳೂರು

ರೇಡಿಯೊ ಸರಣಿ



ಜಾಗೃತಿ

ಅಪರಾಧ ಜಗತ್ತಿನ ಕಥೆಗಳನ್ನು ಹೇಳುವ 'ಹುಷಾರ್ ಬೆಂಗಳೂರು' ಸರಣಿ ಬಿತ್ತರಗೊಳ್ಳಲಿದೆ.

2022ರಲ್ಲಿ ಮಹಿಳೆಯರ ಮೇಲೆ ನಡೆದ ಅಪರಾಧಗಳ ದೃಷ್ಟಿಯಿಂದ ನೋಡುವುದಾದರೆ ರಾಷ್ಟ್ರೀಯ ಅಪರಾಧ ದಾಖಲೀಕರಣ ಘಟಕ (ಎನ್‌ಸಿಆರ್‌ಬಿ) ಪ್ರಕಾರ ದೇಶದ 19 ನಗರಗಳ ಪೈಕಿ ಬೆಂಗಳೂರು ಮೂರನೇ ಸ್ಥಾನದಲ್ಲಿದೆ. ದೆಹಲಿ ಮತ್ತು ಮುಂಬೈ ಮೊದಲ ಎರಡು ಸ್ಥಾನದಲ್ಲಿವೆ. ಮಹಿಳೆಯರ ಮೇಲಿನ ಅಪರಾಧ ಪ್ರಕರಣಗಳನ್ನು ಹಿಂದಿನ ವರ್ಷಕ್ಕೆ ಹೋಲಿಸಿದರೆ 2023ರಲ್ಲಿ ಶೇ 23.9ರಷ್ಟು ಪ್ರಕರಣಗಳು ಹೆಚ್ಚಾಗಿವೆ. ಹಾಗಾಗಿ ಜನರಲ್ಲಿ ಜಾಗೃತಿ ಮೂಡಿಸಲು ಈ ಹುಷಾರ್ ಬೆಂಗಳೂರು ಸರಣಿಯನ್ನು ಪೊಲೀಸ್ ಇಲಾಖೆಯು ರೇಡಿಯೊ ಸಿಟಿಯ ಸಹಯೋಗದೊಂದಿಗೆ ಆಯೋಜಿಸುತ್ತಿದೆ.

ಬೆಂಗಳೂರು ಪೊಲೀಸರು ನಿಭಾಯಿಸಿದ ಕುತೂಹಲಕಾರಿ ಮತ್ತು ರೋಮಾಂಚಕ ಪ್ರಕರಣಗಳನ್ನು 'ಹುಷಾರ್ ಬೆಂಗಳೂರು' ಕೇಳುಗರ ಮುಂದಿಡಲಿದೆ. ಪತ್ರಕರ್ತೆ ಶೀತಲ್ ಶೆಟ್ಟಿ ಇದನ್ನು ನಿರೂಪಿಸಲಿದ್ದಾರೆ. ಬೆಂಗಳೂರಿನ ಪ್ರಮುಖ ಬೀದಿಗಳಲ್ಲಿ ಸಾಗುತ್ತ, ನೈಜ ಫುಟೇಜ್, ಸಂದರ್ಶನ ಮತ್ತು ಆಳವಾದ ತನಿಖೆಗಳನ್ನು ಆಧರಿಸಿ ಬೆಂಗಳೂರನ್ನು ಕಾಡಿದ ಅಪರಾಧಗಳನ್ನು ಈ ಸರಣಿ ತಿಳಿಸಲಿದೆ.


'ನಗರದ ಅಪರಾಧ ಜಗತ್ತಿಗೆ ಕನ್ನಡಿ ಹಿಡಿಯುವ ಈ ಸರಣಿ ಪರಿಣಾಮಕಾರಿ ಎನಿಸಲಿದೆ. ಶಾಂತಿ ಮತ್ತು ಸುಭದ್ರತೆಗಾಗಿ ನಗರದ ನಾಗರಿಕರು ಮತ್ತು ಕಾನೂನು ಜಾರಿ ಸಂಸ್ಥೆಗಳನ್ನು ಇದು ಒಗ್ಗೂಡಿಸಲಿದೆ. 'ಹುಷಾರ್ ಬೆಂಗಳೂರು' ಮಾಹಿತಿಪೂರ್ಣ ಅಪರಾಧ ಸರಣಿ ಮಾತ್ರವಲ್ಲ. ಎಲ್ಲರನ್ನೂ ಒಗ್ಗೂಡಿಸುವ ಪ್ರಯತ್ನವೂ ಆಗಲಿದೆ. ಅಪರಾಧಗಳ ವಿರುದ್ಧ ಸಂಘಟಿತ ಹೋರಾಟಕ್ಕೆ ಇದು ಸಾಕ್ಷಿ ಎಂಬ ವಿಶ್ವಾಸ ನಗರ ಪೊಲೀಸ್ ಆಯುಕ್ತ ಬಿ. ದಯಾನಂದ ಅವರದ್ದು.

ಇದು ಕೇವಲ ರೇಡಿಯೋ ಸರಣಿ ಮಾತ್ರವಲ್ಲ. ತಮ್ಮ ಸುರಕ್ಷತೆಯನ್ನು ಕಾಪಾಡಿಕೊಳ್ಳಲು ಸಾರ್ವಜನಿಕರಿಗೆ ತಿಳಿ ಹೇಳುವ ಪ್ರಯತ್ನ ಎನ್ನುತ್ತಾರೆ ರೇಡಿಯೋ ಸಿಟಿ ಸಿಇಒ ಆಶಿತ್ ಕುಕಿಯನ್.

ಹುಷಾರ್ ಬೆಂಗಳೂರು ಸರಣಿ ಪ್ರತಿ ಶುಕ್ರವಾರ ರಾತ್ರಿ 8 ಗಂಟೆಗೆ ರೇಡಿಯೋ ಸಿಟಿಯಲ್ಲಿ ಪ್ರಸಾರವಾಗಲಿದೆ.

ಶಿವರಾಜ್‌ಕುಮಾರ್–ಪ್ರಭುದೇವ

'ಡೀಗ ಡಿಗರಿ'



ಶಿವರಾಜ್‌ಕುಮಾರ್ ಹಾಗೂ ಪ್ರಭುದೇವ

ಯೋಗರಾಜ್ ಭಟ್ ಆ್ಯಕ್ಷನ್ ಕಟ್ ಹೇಳಿರುವ 'ಕರಟಕ ದಮನಕ' ಬಿಡುಗಡೆಗೆ ಸಜ್ಜಾಗುತ್ತಿದ್ದು, ಚಿತ್ರದ ಎರಡನೇ ಹಾಡು 'ಡೀಗ ಡಿಗರಿ' ಅಬುದಾಬಿಯಲ್ಲಿ ಇತ್ತೀಚೆಗೆ ಬಿಡುಗಡೆಯಾಯಿತು.

ಚಿತ್ರದ ನಾಯಕರಾದ ಶಿವರಾಜ್‌ಕುಮಾರ್ ಹಾಗೂ ಪ್ರಭುದೇವ ಹಾಡಿಗೆ ವೇದಿಕೆಯಲ್ಲಿ ಹೆಜ್ಜೆ ಹಾಕಿದ್ದು ವಿಶೇಷವಾಗಿತ್ತು. ಸಿನಿಮಾ ಶಿವರಾತ್ರಿಗೆ (ಮಾರ್ಚ್ 8) ರಿಲೀಸ್ ಆಗಲಿದೆ. 'ಡೀಗ ಡಿಗರಿ' ಹಾಡನ್ನು ಯೋಗರಾಜ್ ಭಟ್ ಅವರು ಬರೆದಿದ್ದು, ರಿಯಲ್ ಸ್ಟಾರ್ ಉಪೇಂದ್ರ ಹಾಗೂ ರಾಜೇಶ್ ಕೃಷ್ಣನ್ ಹಾಡಿದ್ದಾರೆ. ವಿ.ಹರಿಕೃಷ್ಣ ಸಂಗೀತ ಸಂಯೋಜಿಸಿದ್ದಾರೆ. ಅಬುದಾಬಿಯಲ್ಲಿ ನೆಲೆಸಿರುವ ಸಹಸ್ರಾರು ಕನ್ನಡಿಗರ ಸಮ್ಮುಖದಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಶಿವರಾಜಕುಮಾರ್, ಪ್ರಭುದೇವ, ಯೋಗರಾಜ್ ಭಟ್, ಚಿತ್ರದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಹಾಗೂ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ಭಾಗವಹಿಸಿದ್ದರು.

'ಕರಟಕ ದಮನಕ' ಎಂದರೆ ಎರಡು ಕುತಂತ್ರಿ ನರಿಗಳ ಹೆಸರು. ಸಾಮಾನ್ಯವಾಗಿ ಯಾವಾಗಲೂ ಒಟ್ಟಿಗೆ ಇರುವ ಇಬ್ಬರನ್ನು ಹೆಚ್ಚು ಸಲ ನೋಡಿದಾಗ 'ಕರಟಕ ದಮನಕ' ಎನ್ನುತ್ತಾರೆ. ಇದು ಉತ್ತರ ಕರ್ನಾಟಕದಲ್ಲಿ ನಡೆಯುವ ಕಥೆ. ಈ ಚಿತ್ರ ನೋಡಿದ ಪ್ರತಿಯೊಬ್ಬ ವ್ಯಕ್ತಿಗೂ ಅವನ ಊರು, ಆ ಊರಿನಲ್ಲಿ ಎಳೆದ ತೇರು ಹಾಗೂ ಅವನು ಯಾವ ನೀರು ಕುಡಿದು ಬೆಳೆದಿದ್ದಾನೋ ಆ ನೀರು ನೆನಪಾಗುತ್ತದೆ' ಎಂದರು ಯೋಗರಾಜ್ ಭಟ್.

ಕಪೂರ್ ಕಣ್ಮಣಿ ರಾಹಾ

ಕಪೂರ್ ಖಾಂದಾನ್ ಕಣ್ಮಣಿ ರಾಹಾ ಕಪೂರ್ ಮತ್ತೊಮ್ಮೆ ಇನ್‌ಸ್ಟಾಗ್ರಾಂನಲ್ಲಿ ಎಲ್ಲರ ಗಮನಸೆಳೆದಿದ್ದಾಳೆ. ರಾಹಾ ಕಪೂರ್ ತನ್ನಜ್ಜ ರಿಷಿಕಪೂರ್ ತೋಳುಗಳ ಮೇಲೆ ಕುಳಿತಿರುವ ಫೋಟೊ ವೈರಲ್ ಆಗಿದೆ. ಈ ಫೋಟೊ ಎಡಿಟ್ ಮಾಡಿರುವ ವಿಡಿಯೊ ಅಭಿಮಾನಿಗಳಲ್ಲಿ ಪ್ರೀತಿಯಿಂದಲೇ ಹರಿದಾಡುತ್ತಿದೆ.

2022ರ ನವೆಂಬರ್‌ನಲ್ಲಿ ಜನಿಸಿರುವ ರಾಹಾ ಚಿತ್ರವನ್ನು ಇತ್ತೀಚೆಗಷ್ಟೆ ರಣಬೀರ್ ಮತ್ತು ಆಲಿಯಾ ಪೋಸ್ಟ್ ಮಾಡಿದ್ದರು. ಆಗಿನಿಂದಲೂ ರಾಹಾ ಖಾನ್ ತನ್ನಜ್ಜ ರಿಷಿ ಕಪೂರ್ ಅನ್ನು ಹೋಲುತ್ತಾಳೆ ಎಂದು ಅಭಿಮಾನಿಗಳು ಎಕ್ಸ್ ವೇದಿಕೆಯಲ್ಲಿ ಪ್ರೀತಿಯನ್ನೇ ಹರಿಬಿಟ್ಟಿದ್ದರು.


ಈ ಹಿಂದೆ ರಾಹಾ ಚಿತ್ರ ಪೋಸ್ಟ್ ಮಾಡುವ ಮೊದಲು ರಣಬೀರ್ ಕಪೂರ್ ಕಪಿಲ್ ಶರ್ಮಾ ಶೋನಲ್ಲಿ ರಾಹಾ ಯಾರನ್ನು ಹೋಲುತ್ತಾರೆ ಎಂಬ ಬಗ್ಗೆ ದಿನವೂ ಜಿಜ್ಞಾಸೆ ನಡೆಯುತ್ತದೆ ಎಂದು ಹೇಳಿದ್ದರು. ಹಣೆ ಅಪ್ಪನಂಗೆ, ಮೂಗು ಅಮ್ಮನಂತೆ, ಕಣ್ಣು ಮುತ್ತಜ್ಜನಂತೆ, ತುಟಿ ಅಜ್ಜನನ್ನು ಹೋಲುತ್ತದೆ ಎಂದೆಲ್ಲ ಚರ್ಚೆಯಾಗುತ್ತದೆ. ಸದ್ಯ ಅವಳು ನಮ್ಮನ್ನೇ ಹೋಲುತ್ತಾಳೆ ಎಂದು ಹೇಳ್ತಾರಲ್ಲ.. ಅಷ್ಟೇ ಸಾಕು ಎಂದು ಉದ್ಗರಿಸಿದ್ದರು.

ಕಾಫಿ ವಿತ್ ಕರಣ್‌ನಲ್ಲಿ ಸದ್ಯಕ್ಕೆ ನಮಗೆಲ್ಲ ಇರುವ ಪ್ರೀತಿಯ ಕೆಲಸವೆಂದರೆ ರಾಹಾಳನ್ನು ಸೋಫಾದಲ್ಲಿ ಕೂರಿಸಿ, ಅಮ್ಮ ಎಲ್ಲಿ.. ಅಪ್ಪ ಎಲ್ಲಿ, ಅಜ್ಜಿ ಎಲ್ಲಿ ಎಂಬ ಪ್ರಶ್ನೆಯನ್ನು ಕೇಳುವುದೇ ಆಗಿದೆ. ಅವಳು ಪ್ರತಿ ಸಲ ನಮ್ಮ ಕಡೆ ನೋಡಿದಾಗಲೆಲ್ಲ ಮನದೊಳೊಂದು ಪ್ರೀತಿಯ ಝರಿ ಉಕ್ಕುತ್ತದೆ ಎಂದಿದ್ದರು. ಕರೀನಾ ಕಪೂರ್ ಖಾನ್ ಜೊತೆಗೆ ಕಾಫಿ ವಿತ್ ಕರಣ್ ನಲ್ಲಿ ಕಾಣಿಸಿಕೊಂಡಿದ್ದ ಆಲಿಯಾ ತೈಮೂರ್ ಮತ್ತು ರಾಹಾಳ ಆಟಗಳ ಕುರಿತೂ ನೆನಪಿಸಿಕೊಂಡಿದ್ದರು.

ರಣಬೀರ್ ಕಪೂರ್ ರಾಹಾ ಅವರನ್ನು ಎತ್ತಿಕೊಂಡಿರುವ ಚಿತ್ರ, ನೀತು ಕಪೂರ್ ಮತ್ತು ರಿಷಿ ಕಪೂರ್ ಇರುವ ಚಿತ್ರಗಳನ್ನು ಎಡಿಟ್ ಮಾಡಿ ಈ ಚಿತ್ರವನ್ನು ಮಾಡಿರುವುದಾಗಿ ಎಡಿಟ್‌ವಿತ್ ಅನುಜ್ ಅಕೌಂಟಿನ ವ್ಯಕ್ತಿ ಹೇಳಿಕೊಂಡಿದ್ದಾನೆ. ಇದರದ್ದೊಂದು ವಿಡಿಯೊವನ್ನೂ ಅಪ್‌ಲೋಡ್ ಮಾಡಿದ್ದು, ಸುಮಾರು ಜನ ನೀತುಕಪೂರ್ ಅವರನ್ನು ಟ್ಯಾಗ್ ಮಾಡಿದ್ದಾರೆ.


ರಿಷಿ ಕಪೂರ್ ಜತೆ ರಾಹಾ ಕಪೂರ್‌ನ ಎಡಿಟೆಡ್ ಚಿತ್ರ

ಕಂಗಳ ರಕ್ಷಣೆಗೆ...



ಕಣ್ಣುಗಳಲ್ಲಿ ನೋವಿಲ್ಲದ, ಬಾವಿಲ್ಲದ (ಊತ), ಉರಿಯಲ್ಲದ, ನೀರಿಲ್ಲದ ಸಮಸ್ಯೆಗಳೂ ಇರುತ್ತವೆ. ಆಗಾಗ ತಪಾಸಣೆ ಮಾಡಿಸಿಕೊಳ್ಳುವುದರಿಂದ ಮಾತ್ರ ಪರಿಹಾರ ಸಾಧ್ಯವಿದೆ.

ಕಣ್ಣಿನ ಆರೋಗ್ಯದ ದೃಷ್ಟಿಯಿಂದ, ಚಿಕಿತ್ಸೆಗಿಂತ ಮುನ್ನೆಚ್ಚರಿಕೆಯೇ ಮುಖ್ಯ ಎಂಬ ಮಾತಿಗೆ ಅತೀವ ಮಹತ್ವವಿದೆ. ಕಣ್ಣುಗಳ ಮೇಲೆ ಔಷಧಗಳು ಮತ್ತು ರೋಗದ ಪರಿಣಾಮವನ್ನು ಪರಿಗಣಿಸಿದರೆ, ಪದೇ ಪದೇ ತಪಾಸಣೆಯೇ ಹೆಚ್ಚು ಅನುಕೂಲ.

ತುಂಬಾ ಹೊತ್ತು ಸ್ಕ್ರೀನ್ ನೋಡುವುದರಿಂದ ಕಣ್ಣಿನ ಮಾಂಸಖಂಡದ ಬಳಲಿಕೆ ಮತ್ತು ಒಣಗುವಿಕೆ ಉಂಟಾಗುತ್ತದೆ. ಕಾಲಕಾಲಕ್ಕೆ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು. ಕಂಜೆನಿಟಲ್ ಕ್ಯಾಟ್ ರ್‍ಯಾಕ್ಟ್, ಗ್ಲಾಕೋಮಾ ಮತ್ತು ರೆಟಿನಾ ಅನಾರೋಗ್ಯದ ಪತ್ತೆಗಾಗಿ ನವಜಾತ ಶಿಶುಗಳಿಗೆ ತಪಾಸಣೆ ಮಾಡಬೇಕು. ಶಾಲೆಗೆ ಹೋಗುವ ಮಕ್ಕಳು, ಯುವಕರು ಮತ್ತು ಮಧ್ಯ ವಯಸ್ಕರು ಮತ್ತು ಹಿರಿಯ ನಾಗರಿಕರು ಕೂಡಾ ಆಗಾಗ್ಗೆ ಕಣ್ಣಿನ ತಪಾಸಣೆ ಮಾಡಿಸಿಕೊಳ್ಳಬೇಕು ಎನ್ನುತ್ತಾರೆ ಅಗರವಾಲ್ ಕಣ್ಣಿನ ಆಸ್ಪತ್ರೆಯ ವೈದ್ಯೆ ಅರ್ಚನಾ ಅವರು.

ಕಣ್ಣಿನ ಮಾಂಸಖಂಡ ಬಳಲಿಕೆ ಮತ್ತು ಒಣಗುವಿಕೆ ತಡೆಯಲು ಕೆಲಸದ ನಡುವೆ ವಿರಾಮ ಮತ್ತು ಸ್ಕ್ರೀನ್ ನೋಡುವ ಸಮಯ ಕಡಿಮೆ ಮಾಡುವಂತೆ ವೈದ್ಯರು ಶಿಫಾರಸು ಮಾಡುತ್ತಾರೆ. 20-20-20 ನಿಯಮಕ್ಕೆ ಬದ್ಧವಾಗುವಂತೆ ವೃತ್ತಿಪರರಿಗೆ ಸೂಚಿಸಲಾಗುತ್ತದೆ. ಅಂದರೆ, ಪ್ರತಿ 20 ನಿಮಿಷಗಳಿಗೆ ವಿರಾಮ, 20 ಸೆಕೆಂಡುಗಳವರೆಗೆ ಕಣ್ಣು ಮುಚ್ಚುವುದು ಮತ್ತು 20 ಅಡಿ ದೂರದ ವಸ್ತುವಿನ ಮೇಲೆ ಗಮನ ಕೇಂದ್ರೀಕರಿಸುವುದೇ ಈ ನಿಯಮದ ಮಂತ್ರವಾಗಿದೆ.

ಮಕ್ಕಳು ಅತಿಯಾಗಿ ಸ್ಕ್ರೀನ್ ನೋಡುತ್ತಿದ್ದಲ್ಲಿ ವೈದ್ಯರು ಸೂಚಿಸುವ ಕನ್ನಡಕ ಧರಿಸುವುದು ಸೂಕ್ತ. ಪಾಲಕರು ಮಕ್ಕಳು ಹೊರಾಂಗಣ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವಂತೆ ನಿಗಾವಹಿಸಬೇಕು. ಕಂಪ್ಯೂಟರ್ ಮೂಲಕವೇ ಕೆಲಸ ನಿರ್ವಹಿಸುವವರು 20–20–20 ನಿಯಮವನ್ನು ತಪ್ಪದೇ ಪರಿಪಾಲಿಸಬೇಕು. ಮಧುಮೇಹ ಮತ್ತು ರಕ್ತದ ಏರೊತ್ತಡ ಇರುವವರು ಕಣ್ಣಿನ ಸಮಗ್ರ ತಪಾಸಣೆಗೆ ಒಳಗಾಗಬೇಕು. ರೆಟಿನಾ ಮತ್ತು ಆಪ್ಟಿಕ್ ನರ್ವ್ ವಿಶ್ಲೇಷಣೆಗೆ ಒತ್ತು ನೀಡಬೇಕು. ಅಲರ್ಜಿಗಳು ಆಗದಂತೆ ನಿಗಾ ವಹಿಸಬೇಕು. ಸನ್‌ಗ್ಲಾಸ್‌ಗಳನ್ನು ಧರಿಸಬೇಕು. ಉಷ್ಣ ತಾಪಮಾನದಲ್ಲಿ, ಕ್ಯಾರ್‍ಯಾಕ್ಟ್ ಮತ್ತು ಸೋಲಾರ್ ರೆಟಿನೋಪತಿ (ರಿಟಿನಾ ಸುಡುವುದು) ಕಾಣಿಸಿಕೊಳ್ಳುವುದನ್ನು ತಡೆಯುವಲ್ಲಿ ಸನ್‌ಗ್ಲಾಸ್‌ಗಳು ಮಹತ್ವದ ಪಾತ್ರ ಬೀರುತ್ತವೆ.

‘ಎಲ್ಲ ವಯಸ್ಸಿನವರಲ್ಲೂ ಆಗಾಗ್ಗೆ ಕಣ್ಣಿನ ತಪಾಸಣೆ ಮಾಡುವುದರಿಂದ ಹಲವು ಕಣ್ಣಿನ ರೋಗಗಳನ್ನು ಪತ್ತೆ ಮಾಡಬಹುದು. ಗ್ಲಾಕೋಮಾ, ಕ್ಯಾಟ್‌ರಾಕ್ಟ್ ಮತ್ತು ರೆಟಿನಾ ಅನಾರೋಗ್ಯಗಳನ್ನು ಸಾಮಾನ್ಯವಾಗಿ ಮೊದಲೇ ಪತ್ತೆ ಮಾಡಬಹುದು. ಆಗಾಗ ನಿಮ್ಮ ಕಣ್ಣುಗಳ ತಪಾಸಣೆ ಮಾಡಿಕೊಳ್ಳುವುದರಿಂದ ಕಣ್ಣಿನ ರಕ್ಷಣೆ ಮಾಡಬಹುದು. ಅಷ್ಟೇ ಅಲ್ಲ, ಆರೋಗ್ಯಕರ ಮತ್ತು ಪ್ರಕಾಶಮಾನ ಸಮಾಜವನ್ನು ರೂಪಿಸುವುದಕ್ಕೆ ನೀವು ಕೊಡುಗೆ ನೀಡಿದಂತಾಗುತ್ತದೆ. ಕಣ್ಣಿನ ಆರೋಗ್ಯಕ್ಕೆ ಆದ್ಯತೆ ನೀಡಿ, ಸ್ಪಷ್ಟ ದೃಷ್ಟಿ ಮತ್ತು ಸುಧಾರಿತ ಜೀವನ ಮಟ್ಟಕ್ಕೆ ಕಾರಣವಾಗುತ್ತದೆ ಎಂದು ಡಾ. ಅರ್ಚನಾ ಎಸ್ ತಿಳಿಸಿದ್ದಾರೆ.

ಎವಿಡೆನ್ಸ್


ಮಾನಸ ಜೋಷಿ

ಇಂಟರಾಗೇಶನ್ ರೂಮ್‌ನಲ್ಲಿ ನಡೆಯುವ ಕ್ರೈಂ ಕಂಟೆಂಟ್ ಜೊತೆಗೊಂದು ತ್ರಿಕೋನ ಪ್ರೇಮಕಥೆ ಇಟ್ಟುಕೊಂಡು ಪ್ರವೀಣ ಸಿಪಿ. ಆಕ್ಷನ್ ಕಟ್ ಹೇಳಿರುವ ಚಿತ್ರ ‘ಎವಿಡೆನ್ಸ್’. ತೆರೆಗೆ ಬರಲು ಸಿದ್ಧವಾಗಿರುವ ಈ ಚಿತ್ರದ ‘ಅಯ್ಯಯ್ಯೋ ಅರೆಮನಕೆ’ ಎಂಬ ಲಿರಿಕಲ್ ಹಾಡಿನ ಬಿಡುಗಡೆ ಕಾರ್ಯಕ್ರಮ ನಡೆಯಿತು.

ಶ್ರೀಧೃತಿ ಪ್ರೊಡಕ್ಷನ್ಸ್ ಹಾಗೂ ರೋಷಿರಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ಕೊಡ್ಲಾಡಿ ಸುರೇಂದ್ರ ಶೆಟ್ಟಿ, ಶ್ರೀನಿವಾಸ್‌ಪ್ರಭು ಕೆ. ಕೆ.ಮಾದೇಶ್ (ಕೊಡಿಹಳ್ಳಿ), ನಟರಾಜ್ ಸಿ.ಎಸ್.(ಚನ್ನಸಂದ್ರ) ಸೇರಿ ನಿರ್ಮಿಸಿರುವ ‘ಎವಿಡೆನ್ಸ್’ ಚಿತ್ರಕ್ಕೆ ಪ್ರವೀಣ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ.

ನಿರ್ದೇಶಕ ಪ್ರವೀಣ ಮಾತನಾಡಿ, ನಿರ್ಮಾಪಕರಿಲ್ಲ ಅಂದ್ರೆ ನಾನಿಲ್ಲ, ರೋಬೋ ಗಣೇಶ್, ಮಾನಸ ಜೋಷಿ ಎಲ್ಲರೂ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಸೂಸೈಡ್ ಕೇಸ್ ತನಿಖೆ ಮಾಡಲು ಬರುವ ವಿಶೇಷ ತನಿಖಾಧಿಕಾರಿಯಾಗಿ ಮಾನಸ ಜೋಷಿ ನಟಿಸಿದ್ದಾರೆ. 360 ಡಿಗ್ರಿ ಶಾಟ್ಸ್ ನಲ್ಲಿ ಕಾಣಿಸಿಕೊಂಡಿದ್ದಾರೆ. ಎವಿಡೆನ್ಸ್ ಪದದ ಸುತ್ತ ನಡೆಯುವ ಕಥೆಯಿದು ಎಂದು ಮಾಹಿತಿ ಬಿಚ್ಚಿಟ್ಟರು.

ನಿರ್ಮಾಪಕ ಸುರೇಂದ್ರ ಶೆಟ್ಟಿ ಮಾತನಾಡಿ, ಎರಡು ಪಾತ್ರ ಇಟ್ಟುಕೊಂಡು ಕಥೆ ಮಾಡಿರುವುದಾಗಿ ನಿರ್ದೇಶಕರು ಹೇಳಿದಾಗ ಕುತೂಹಲ ಎನಿಸಿ, ನಿರ್ಮಾಣ ಮಾಡಲು ಮುಂದಾಗಿದ್ದೇನೆ ಎಂದು ಹೇಳಿದರು.

ನಟ ಆಕರ್ಷ್ ಆದಿತ್ಯ, ಕಾರ್ತೀಕ್ ವರ್ಣೇಕರ್, ರೇಣು ಶಿಕಾರಿ, ಪವನ್ ಸುರೇಶ್, ಶಿವಕುಮಾರ್ ಆರಾಧ್ಯ ತಮ್ಮ ಪಾತ್ರಗಳ ಕುರಿತು ಹೇಳಿಕೊಂಡರು ಅರವಿಂದ್ ಅಚ್ಚು, ಎಂ.ಎನ್.ರವೀಂದ್ರ ರಾವ್ (ದೂರದರ್ಶನ), ಪ್ರಶಾಂತ್ ಸಿ.ಪಿ. ರಮೇಶ್ ಕೆ, ಕಿಶೋರ್‌ಬಾಬು ಮತ್ತು ನರಸಿಂಹಮೂರ್ತಿ ಚಿತ್ರದ ನಿರ್ಮಾಪಕರಾಗಿ ಕೈಜೋಡಿಸಿದ್ದಾರೆ. ಬೆಂಗಳೂರು, ಮಂಗಳೂರು, ಚಿಕ್ಕಮಗಳೂರು ಮತ್ತು ನೆಲಮಂಗಲ ಹೊರವಲಯದಲ್ಲಿ ಚಿತ್ರೀಕರಣ ನಡೆಸಲಾಗಿದೆ. ❖

ಸಿನಿ ಹನಿ

ಸೂರಾರೈ ಪೋಟ್ರು ರಿಮೇಕ್‌ನಲ್ಲಿ ಅಕ್ಷಯ್


ಅಕ್ಷಯ್ ಕುಮಾರ್

ಬಾಲಿವುಡ್ ಸೂಪರ್ ಸ್ಟಾರ್ ನಟ ಅಕ್ಷಯ್ ಕುಮಾರ್ ಅವರ ಹೊಸ ಸಿನಿಮಾಕ್ಕೆ ಶೀರ್ಷಿಕೆ ಸಿದ್ಧವಾಗಿದ್ದು ‘ಸರ್‌ಫಿರಾ’ (Sarfira) ಎನ್ನುವ ಹೊಸ ಚಿತ್ರ ಇದೇ ವರ್ಷ ಜುಲೈ 12ರಂದು ತೆರೆಗೆ ಬರಲಿದೆ. ತಮಿಳು ನಟ ಸೂರ್ಯ ನಟನೆಯ ರಾಷ್ಟ್ರಪ್ರಶಸ್ತಿ ಚಿತ್ರ ‘ಸೂರಾರೈ ಪೋಟ್ರು’ ಸಿನಿಮಾದ ರಿಮೇಕ್ ಇದಾಗಿದೆ.

ಸೂರಾರೈ ಪೋಟ್ರು ನಿರ್ದೇಶಿಸಿದ್ದ ಸುಧಾ ಕೊಂಗ್ರಾ ಅವರೇ ‘ಸರ್‌ಫಿರಾ’ಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಈ ಕುರಿತು ಟೈಟಲ್ ಟೀಸರ್ ಒಂದನ್ನು ಅವರು ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇಂದು ಹಂಚಿಕೊಂಡಿದ್ದಾರೆ. ಸರ್‌ಫಿರಾ ಚಿತ್ರದಲ್ಲಿ ಅಕ್ಷಯ್ ಕುಮಾರ್ ಜೊತೆ ಪರೇಶ್ ರಾವಲ್, ರಾಧಿಕಾ ಮದನ್ ಹಾಗೂ ಸೀಮಾ ಬಿಸ್ವಾಸ್ ಪ್ರಮುಖ ತಾರಾಗಣದಲ್ಲಿರಲಿದ್ದಾರೆ.

ಸೂರಾರೈ ಪೋಟ್ರು ಚಿತ್ರಕ್ಕೆ 68ನೇ ನ್ಯಾಷನಲ್ ಫಿಲ್ಮ್ ಅವಾರ್ಡ್‌ನಲ್ಲಿ ಅತ್ಯುತ್ತಮ ಫೀಚರ್ ಚಿತ್ರ, ಅತ್ಯುತ್ತಮ ನಟ, ಅತ್ಯುತ್ತಮ ನಟಿ ಹಾಗೂ ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿ ಬಂದಿತ್ತು.

ಈ ಸಿನಿಮಾ ಕನ್ನಡಿಗ ಹಾಗೂ ಏರ್ ಡೆಕ್ಕನ್ ಕಂಪನಿ ಸ್ಥಾಪಕ ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಅವರ ಜೀವನ ಕಥೆ ಆಧರಿಸಿದ ಚಿತ್ರವಾಗಿದೆ.

ಮಗನ ಚಿತ್ರಕ್ಕೆ ತಂದೆ ಆ್ಯಕ್ಷನ್ ಕಟ್

ಮಗನನ್ನು ಹೀರೋ ಮಾಡಲು ತಂದೆ ಬಂಡವಾಳ ಹಾಕೋದು ಸಾಮಾನ್ಯ. ಆದರೆ, ಮಗನ ಚಿತ್ರಕ್ಕಾಗಿ ತಂದೆಯೇ ನಿರ್ದೇಶನ ಮಾಡಿರುವುದು ವಿಶೇಷ.

ಅಂಥ ಚಿತ್ರವೆ ಅಗ್ನಿಲೋಕ. ಇದೇ ಮಾರ್ಚ್‌ನಲ್ಲಿ ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ಮೂಲಕ ಹಿರಿಯ ಛಾಯಾಗ್ರಾಹಕ, ನಿರ್ಮಾಪಕ, ನಿರ್ದೇಶಕ ಹಾಗೂ ನಿರ್ಮಾಪಕರ ಸಂಘದ ಪ್ರಥಮ ಅಧ್ಯಕ್ಷರೂ ಆಗಿದ್ದ ಎಚ್.ಎಂ.ಕೆ. ಮೂರ್ತಿ ಅವರ ಮೊಮ್ಮಗ ಯಶಸ್ವಾ ಪ್ರಥಮ ಬಾರಿಗೆ ನಾಯಕನಾಗಿ ಎಂಟ್ರಿಕೊಡುತ್ತಿದ್ದಾರೆ. ಈ ಚಿತ್ರಕ್ಕೆ ಯಶಸ್ವಾ ಅವರ ತಂದೆ ರಾಜೇಶ್ ಮೂರ್ತಿ ಅವರೇ ಆ್ಯಕ್ಷನ್ ಕಟ್ ಹೇಳಿದ್ದಾರೆ. ಎಮೋಷನಲ್ ಹಾಗೂ ಥ್ರಿಲ್ಲರ್ ಕಥಾಹಂದರ ಹೊಂದಿರುವ ಅಗ್ನಿಲೋಕ ಚಿತ್ರವನ್ನು ಇತ್ತೀಚೆಗಷ್ಟೇ ವೀಕ್ಷಿಸಿದ ಸೆನ್ಸಾರ್ ಮಂಡಳಿ ಯು/ಎ ಸರ್ಟಿಫಿಕೇಟ್ ನೀಡಿದೆ.

ಮಂಜುಶ್ರೀ ಈ ಚಿತ್ರದಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಬಹಳ ವರ್ಷಗಳ ನಂತರ ನೆಲ ಮಹೇಶ್, ನಾಯಕನ ತಂದೆಯಾಗಿ ನಟಿಸಿದ್ದಾರೆ. ❖

ಪ್ರಜಾವಾಣಿ ಶನಿವಾರ • ಫೆಬ್ರುವರಿ 17, 2024

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER
ಕ್ಲಾಸಿಫೈಡ್ಸ್

REAL ESTATE SELLING

Sites

Anjanapura

BDA SITE FOR SALE Anjanapura 1st Block 30x40 East facing 6th Block 30x40 West facing 10th Block 30x40 West facing Narayan Nagar 3rd Block East facing CONTACT: 9880300791

ANJANAPURA 4TH Block BDA Commercial Site For Sale 50×80 South Facing 80ft Road Contact: 9845298419

SALE BDA Anjanapura 5th Block 30x40 south Facing 80Lakh also 20x30 East facing 2nd Block 55Lakh. 9620041313/ 9945373839

BDA SITE for Sale, Residential and Commercial JP Nagara, Anjanapura Kanakapura Main Road 30x40, 40x60, 50x80, 80% bank loan, 9916592400

Arkavathi Layout

ARKHAVATHY LAYOUT 2nd Block LAKE VIEW. East Face 50x80 BDA SITE FOR SALE,CONTACT: 9945079777

Banashankari

AVAILABLE IN Bsk 6th stage, 20x30, West Facing 4th T Block, Near Kanakapura Main Road 20x30, West Facing 9th Block Near Main Road 48L Negotiable Call: 9845062822/ 8660751654

BDA SITE for Sale, Residential and Commercial BSK 6th stage BSK 5th stage, Uttarahalli Rajarajeshwarinagar, ISRO layout 30x40, 40x60, 50x80, 80% bank loan, 9916592400

BANASHANKARI 6TH STAGE- ANJANAPURA BDA- Available/ Wanted 20x30 30x40 40x60, 50x80 Sites BRINDAVAN ASSOCIATES- 9980863245

AVAILABLE/ WANTED BDA Sites. Banashankari 6th Stage, 4th Block, 50x80, 60ft Road 7th Block,40x60, :9845082299

SALE BSK 6th stage 4th H Block 30x40 west Facing 95Lakh Also 40x60 Facing 6th Block 1.72Cr Negotiable all owners site 9945373839, 9620041313

J P Nagar

J.P.NAGAR 1ST Phase 30x40, East Facing 40feet Road Price 3.50Crores Negotiable: 9845212877.

Bannerghatta Road

3600, 5220, 19,700 SQFT E/F Corner A-Khata Land, 600 mts from Bannerghatta Main Road, Hulimavu Metro station Suitable for Industrial/ Commercial/ Residential. 9916310226/ 9353128035. vernadevelopers.com

HSR Layout

"HSR 20X30 Duplex House 1.6Cr, 30x40,40x60 Houses & Residential/ Commercial sites sale. "Krishna"- 9886294610/ 7760526548"

Tumkur

TUMKUR WARD-23, 80 feet Road, Near M S Ramaiah layout,10000 sqft Site for Sale, Contact:8073160055

Kanakapura Road

50x73 Commercial SITE FOR SALE
NARAYAN NAGARA, 2nd Block, East South Corner, 80 feet Road, 40 feet Road 2 side Road, Rs. 14600/- psft. Nego. CALL : 98452 86583

KANAKAPURA ROAD Kaggalipura, BMRDA APPROVED' E' Khatha 30x40, 30x50, East Facing 3,600/- Negotiable 9916817739/ 9740150364

Jayanagar

JAYANAGAR 8TH BLOCK 80x120 Excellent Location Property For Sale Near Metro Station. R.N. RAO: 9341906338

Kumaraswamy Layout

SALE 40X60 2400 sqft BDA NORTH, 40x45 1800 sqft SOUTH kumaraswamy Layout RESIDENTIAL SITE 9008018844

Kempegowda Layout

KEMPEGOWDA LAYOUT BDA Site, 50×80 Double Road 1st block K Sector Near Peripheral Ring Road Commercial: 7899570235

KEMPEGOWDA LAYOUT, BDA SITES FOR SALE 20X30, 30X40, 40X60, 50X80 CONTACT KUMAR: 9945119449

Rajarajeshwari Nagar

RESIDENTIAL SITES FOR SALE: RR NAGAR, SAI NISARGA LAYOUT 55Ft X 30Ft. 2 nos. adjacent to each other. West facing. 'A' khata with clear titles Mob: 9900247712

SALE RESIDENTIAL Site 40X61 @ RR-Nagar, Sweet Home Layout, Uttarhalli Main Road, BBMP A-Katha. 9880886474

Sanjaynagar

SANJAYNAGAR KEB Layout BDA Approved 1050 Sft North West Corner Excellent Location Call 9341260828

Vishweshwariah Layout

BDA SITE for Sale, Residential and Commercial Nagarbhavi, Vijaynagara, Basaveshwarnagar, Sir M Vishveshwaraiah Layout, Kempegowda Layout- BDA Mysore road 30x40, 40x60, 50x80, 80% bank loan, 9916592400

30X40 VISHVESHWARAIAH Layout 2nd Block North Face 40ft Road 7500 & 40X60 Site Sale 8750 Near KLE Law College Direct Ownar: 8310003509

SMV5BL 30X40 NEAR UDUPI HOTEL SMVL4BL 2 SITES NEAR KEB CIRCLE AVAILABLE ALL BLOCKS: 9900224071

SIR.M VISVESVARAYA Layout 6th Block West Facing 40feet Road Near Oxford Collage owner Meeting: 9845117825

VISHWESWARIAH BDA 3rd Block 40x60, 40ft Road AND 5th Block 50x80 Commercial, 100ft Road: 9964971895

"VISHVESHWARAIAH LAYOUT Wanted 20x30,30x40, 40x60, 50x80 for-Immediate Settlement Genuine Transaction. "Anugraha Constructions"- 9886294610"

BDA VISHWESHWARAYA Layout, 6th Block, 20x30 W/F, 42 Lakhs Negotiable, 30x40 W/F, Good Location. 9108507222

Vidyaranyapura

SITE SALE BBMP A KATHA 40x30 SEMI COMMERCIAL SOUTH FACING THINDLU LAKE SHOW GARDEN: 8296895858

SEMI-COMMERCIAL SITE, south west corner excellent location, 2000 SFT for sale at Vidyaranyapura.Clear title.9845583070

Whitefield

2 VACANT Land For Sale 40x60 No.220/221=4800 2400+2400 Prithvi Layout 3rd cross street Whitefield Rs.14000/- Sqft Negotiable Brokers Excuse Contact 8870745895 8610331395

Nagarabhavi

BDA SITE Nagarabavi 12th Block, Near Nammura Thindi, West Facing 40 Feet Road, 30x42 Owner: 9844009086/ 9343368313

Flat

Shivajinagar

FLATS FOR Sale, Infantry Road, 2 & 3 BHK, 2000/ 2600 Sft, 3.5Cr/ 4.5Cr. 9686113614/ 9980565991.

Banashankari

FOR SALE SLV V2 Launches Luxury 3 BHK Apartment 2000 & 1750 sft for Sale @ Banashankari 2nd stage near BDA complex Brokers excuse Call: 9741868566

Kumaraswamy Layout

3 BHK Flats Sale 2250 Sft Fully Teak Wood, Italian Marbles. 2 CarPark 1.6 Cr Kumaraswamy Layout 15F Bustand: 9611144096

Kanakapura Road

3-BHK FLAT Sale 1575 Sq.Ft N/F Full Interiors 70 Lakhs Off Kanakpura Road, Konankunte Near Junior Delhi Public School: 9343722162

Mysore

FOR SALE An excellent prime residential plot of 36,300 sqft on the prestigious Lalitha Mahal Palace Main Road, Mysore, with access on two sides. Contact 94498 53696

Uttarahalli

3/4 BHK New Luxurious Flats Sale, Italian Vitrified, Cauvery, Security, CarParking. Near Vasanthaswamy Temple. 70L/90L. 6360501159 9844394444

"LUXURY 3BHK Flat 2100.Sqft ready to occupy BBMP A-Katha 2car parking 600.Sqft land share 1.60 Crore. 9845286505"

POORNAPRAGNA LAYOUT Sale 3 BHK Deluxe Flats 2250 sft 2 Carpark & 1850 sft 1 Carpark. Lift & Generator Back-up, All Amenities. 9620249988.

Mysore Road

AVAILABLE 3BHK Eighth Floor Flat Mysore Road For TWO YEARS LEASE Rs. TWENTYFOUR LAKHS: 9738223432

Basavanagudi

NR COLONY Veg Only 3 BHK Flat 2000 SqFt, North Face 1.48 CR Position April: 9379978197

Villas/Bunglows

Mysore

FOR SALE An exceptionally well designed high end residential bungalow on the main road in Vijayanagar 1st Stage, Mysore. Contact 98800 00997

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

REAL ESTATE SELLING

House

Banashankari

HOUSE SALE (G+3) 2BHK Per Floor @ Banashankari 5th Stage BDA 30x40 South Plot Beside Poornapragna Layout, Rs. 3 Crores RENUKA 9632444445/ 9632356565 Shivakumar 9845875555

SALE 20X30,30X40 Thriplex & Rented House's BSK 6th Stage Anjanapura Fully furnished Granite Flooring With Lift Call:8722777999 9449812176.

BUILDING FOR SALE, 20X40, 8 years old, South facing G+4 Floors, Shastrinagar, CALL: 9900990613, 9844128988

J P Nagar

HOUSE SALE; J.P.Nagar, 6th Phase, B.D.A site E/F, 4 Bedroom separte car shed: Contact:- 9880402575

Kumaraswamy Layout

TRIPLEX HOUSE For Sale in Kumaraswamy Layout:- 9620245557. No Brokers.

K R Puram

RENTAL BUILDING for sale Ground plus 2 floors 1BHK 15 units house 25x80 1.40 Cr. Avalahalli Call: 7406025656

Mathikere

SALE INDEPENDENT East Facing Property 2700 Sqft 3 Floor 6 Crs Broker Excuse Rao 9845085564

Commercial Building

Basaveshwaranagar

COMMERCIAL PROPERTY FOR SALE KAMALA NAGAR ROAD 96D BUS STOP BASAVESHWARA NAGAR CONTACT: 7975463324

Commercial Land

Multiple Locations

"BANASHANKARI 2ND-STAGE 2840.sft Rs.5Crore, Rental Building ₹6.90Crore, J.P.Nagar Ring-Road 2400.sft ₹8.16crore, Jayanagar 2400.sft ₹8.64Crore, Sanjaynagar 2400.sft ₹7.68crore, Genuine Buyers Call: 9845286505"

Vishweshwariah Layout

"ULLAL MAIN Road 5000 sqft Commercial, Vishveshwaraiah Layout 50x80 commercial 100 feet Road. 9845500019/ 7019314962"

Commerical

Mysore

FOR SALE Rare opportunity to own a free hold Prime Commercial property - Independent shops and commercial complex in the heart of Mysore City (CBD), close to Sayyaji Rao Road. Contact 98800 00997

Kempegowda Layout

SEMI COMMERCIAL Site for Sale, Kempegowda Layout 8th Block, Size: 163x100, West FACE, BDA, NOC, NNA, Conversion Land, Legal Documents, PRICE 4500/- Sq.Ft., PH:-9686469799

Industrial & Factory

Jigani

KIADB SITE for sale, Jigani Industrial area 25000 sqft, @ 3500/- Neg. contact: 9448388330/ 9845088566.

Yeshwanthpur

SALE INDUSTRIAL shed, 55HP, power measuring 6806 sq ft situated at Triveni road yeswentpur Bangalore.. Contact: 9448450987 Brokers Excuse..

Residential/ Commercial

Jayanagar

AVAILABLE PRIME PROPERTY for sale near Madhavan Park, 2400 sft South facing. Immediate Possession. Brokers Excuse. Contact 776011011 4

Agricultural Land

Mysore Road

"MADDUR 28 GUNTAS FENCING, WATER, BUS ROAD, 6 KMS TO KESTUR TOWN 34 LAKHS. 9845178335"

Ramanagar

5 ACRES 27 GUNTAS BEAUTIFUL COCONUT FARM LAND SALE. NEARCHENNAPATNA, BETWEEN BANGALORE-MYSORE. 9916551395

REAL ESTATE BUYING

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

Banashankari

WANTED SITES 30x40, 30x50, or Rental Building in and around Kanakapura road, Uttarahalli, Banashankari, RR nagar, Broker Excuse Call: 9448117544/ 8618562419

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout. Contact: SAPTHAGIRI. 9900268073 9448068073

Nagarabhavi

WANTED SITE 20x30, 30x40, 40x60, 50x80, Nagarabhavi, Rajajinagar Housing Co-operative Society, Vishweswaraiah, ITI, MPM. 8105688602.

Vishweshwariah Layout

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

HEAT REFLECTION Coating. Stay cool this summer! Contact us for the solution. Roof & Walls- 9845987989.

RENTAL PROPERTIES

Accommodation Available

Commercial

MYSORE ROAD, Chamarajpet, Commercial Building, Floor Wise, 3640/4040 Sqft. Ground Suitable For Showroom. Second With Full Office Setup. Contact: 9341260793.

House

RT NAGAR 3bedroom 381 1st Cross Judges Colony Near Nilagiries Stores Contact Owner 9481482822 or 9886245968

JOB OPPORTUNITIES

General

EMPLOYEE NEEDED! Business Development Office for property developer company No investment, see above 30 years experienced required. Earning Rs. 50,000/- per month Retired persons are eligible. Contact:- 9845334751.

Teachers/ Professors

TEACHER REQUIRED FOR Kannada and Maths for primary and High school class 5 to 10. Part Time /Full Time Contact 9901501185 email: kenmoreschool@gmail.com

Drivers

DRIVER REQUIRED for winger van, room will be provided if required. contact 9901501185

AMANATH CO-OPERATIVE BANK LIMITED
(A SCHEDULED BANK)
#43, Hospital Road, Shivajinagar, Bengaluru- 560 001
Email- ceo@amanath-bank.com

INVITES APPLICATION FOR THE FOLLOWING POSTS

1. CHIEF EXECUTIVE OFFICER
2. GENERAL MANAGER
3. DEPUTY GENERAL MANAGER

Eligibility

1. The Candidates shall be Graduates or Post-Graduates, with
   (a) Experience in Commercial banking/ co-operative banking with CAIIB or Diploma in Banking and Finance or
   (b) Chartered / Cost Accountant / MBA (Finance); or
   (c) Banking professionals who have retired at the level of Assistant General Manager and above with age upto 65 years.
2. Knowledge of regional language will be considered as an advantage.

Based on the Qualification, Experience and Exposure, remuneration will be offered.

Eligible Candidates can apply, to The Chairman, Amanath Co-operative Bank Ltd., Corporate Office, at #43, Hospital Road, Shivajinagar, Bengaluru- 560 001, not later than February 23, 2024.

Sd/-
General Manager

BUSINESS

Business to Business

Business

WANTED BUSINESS PARTNERS For Saree Business 10 Lakhs Investment Monthly Income 4 Lakhs: 8892501007/ 9606701007

Business Offers

Finance

WANTED BUSINESS Partners Gold Business 5, 10, 25 Lakhs Investment Monthly Income 1Lakhs WE PURCHASE GOLD Contact: 8892501007/ 9606701007

Business For Sale

BUSINESS FOR Sale Earn Upto 10L PM Manufacturer of MS Nails Capacity: 175 MTPM Run Rate Sale:10CR Price 75L Contact: 9916335356

PERSONAL

Change of Name

I, MUTHUMANI SIVASANKARI W/o Sundarajan, residing at 507, 9th Main, 3rd Cross, HAL 2nd Stage, BANGALORE-560008 havechanged my name from M.SHANKARI,Vide Affidavit dated 21st March, 2023 sworn before the notary SivakumaraM.N, Bangalore.

CHANGE OF NAME
I, **L.V VARASHREE VIMITHA** W/o R Suresh Kumar R/a #27, 8th Main, 2nd Cross, Horamavu Road, Sir MV.Nagar, Ramamurthy Nagar, Bangalore- 560016 declare that **L.V VARASHRI VIMITHA** and **L.V VARASHREE VIMITHA** both names refer to one and the same person, i.e. myself only. Vide affidavit dated 14.02.2024 before Notary Y.R. Chandrasekar, Bangalore.

CHANGE OF NAME
I, **SAGAR KHATHI,** R/at. No.189, Shyamanna Reddy Coconut, Near East Point College, Bidarahalli, Bengaluru-560049 have changed my name to **SAGAR KHATHI K** vide affidavit dated 16/02/2024 before notary A Gerard, Bengaluru, Henceforth I shall be called **SAGAR KHATHI K** only

I SUPTA RANI DEBNATH residing at No. 2/5, new No. 9/1, 1st floor Harinaja colony, 1st cross, 1st main road, near 108B Busstop, R.T.Nagar, Bangalore-32 have changed my name to SUMA BEGAM vide affidavit dated 14-08-2023 Sworn before Notary LEELA Bangalore.

CHANGE OF NAME
I, **NARAYANAPPA,** Residing at "AMMA" , 3rd C1 Cross, Ramaiah Coconut Garden, Kalkere Road, Ramamurthy Nagar, Bangalore -16, declare that in IIFL Securities Limited document my name is mentioned as **NARAYAAPPA. NARAYANAPPA** & **NARAYAAPPA** Both the names are pertaining to same person, vide affidavit dated 16-02-2024, before Notary Sumithra N, Bangalore.

JC681703W, SUB MAJ/ASH, ROSHAN LAL, Vill - Malgi, Pandoa, Sunni, Shimla, Himachal Pradesh changed name PRIYANKA to PRIYANKA VERMA, 16/02/2024, Notary K.V. Mani, Bangalore

CHANGE OF NAME
I, **RAJENDRAN** Residing at #15, 23rd Cross, Srinivagilu Main Road, Ejipura, Viveknagar Post, Bengaluru-560047, have changed my name to **P RAJENDRAN** vide affidavit dated 8.2.2024 before notary Meer Hassan, Bengaluru. Henceforth I shall be called **P RAJENDRAN** only.

I MINU Mary Shipin W/O, Shipin Paul R/o B503, Sbr Gokulam Apartments, Kannamangala Village, Bidarahalli Hobli Bangalore 560067 have changed my name to Minu Mary Joseph.

Lost

DOCUMENT LOST
I, **CHANDRAMANI H GOWDA,** Residing at No. 246, 2nd Cross, AECS Layout, Concept Pearl, Geddalahalli, Sanjaynagar, RMV Extension 2nd Stage,Benglauru-94, have lost my **Original Sale Deeds Document No./ Identification No. BLN-149227-2006-07** While in transit. If Found please Contact: **9844347373 / 9535011011**

I AISHWARYA K have lost my original 10th marks card roll no- 4045662 reg no- M615/41038/0033 dated 28/05/2016 II PUC marks card Reg no- 497024 dated 01/05/2018 B.Sc Microbiology Biochemistry Genetics marks card reg no 18LS2A1002 M.Sc Microbiology marks card reg no 21MSMB02 Bengaluru. If found please contact 9900619332

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

